# ಸಾಹಿತ್ಯ ಕದಂಬ

## ವೈಚಾರಿಕ ಲೇಖನಗಳು

ಕುಮಾರ್ ಆರ್.ಎ.





ಕರುನಾಡಿನ ಮೊಟ್ಟಮೊದಲ ರಾಜವಂಶ 'ಕದಂಬ' ಕರುನಾಡಿನ ಭಾಷೆ, ಹಿರಿಮೆ, ಗರಿಮೆ, ಕಾರ್ಯಗಳನ್ನು ಮುನ್ನುಡಿಯಾಗಿ ಕೊಟ್ಟವರು. ಅಂತೆಯೇ ಶ್ರೀ ಆರ್.ಎ.ಕುಮಾರ್‌ರವರ ಈ ಕೃತಿಯ ಹೆಸರೂ 'ಸಾಹಿತ್ಯ ಕದಂಬ'. ವೃತ್ತಿಯಲ್ಲಿ ವಾಣಿಜ್ಯ ಬೋಧಕರು (ನಿವೃತ್ತ) ಪ್ರವೃತ್ತಿಯಲ್ಲಿ ಲೇಖಕರು. ಅದು ಬರಹ, ಚಿಂತನೆ, ಲೇಖನ, ಕಥೆ, ಪ್ರವಾಸ ಕಥನ, ನೋವು, ಒಳತೋಟಿ, ಹೆಂಗಿರಬೇಕಾದದ್ದು ಹೆಂಗಾಯಿತು? ಯಾಕೆ? ಏನು? ಎಂಬುವುಗಳೆಲ್ಲ ಮೇಳೈಸಿದೆ. ಈ 'ಸಾಹಿತ್ಯ ಕದಂಬ'ವೆಂಬ 'ರಸಾಯನ'ದಲ್ಲಿ ಖಿಚಡಿಯೂ ಇದೆ. ಬರೇ ಸಿಹಿ ಇದ್ದರೆ ಸಾಕೇ, ಸಿಹಿಗಿಂತ ಉಪ್ಪು ಖಾರದ ಖಿಚಡಿಯೇ ಹೆಚ್ಚು. ನಾಡಿನ ಬಗೆಗೆ ಅಲ್ಪತಮವಾಗಿ ಚಿಂತಿಸುವ ಮನುಜನ ಸ್ವಾರ್ಥದ ಬಗೆಗೆ, ಬಡವ, ಹೆತ್ತವರು, ಮಕ್ಕಳು, ಪರಿಸರ, ಪ್ರಾಣಿ ಪ್ರೇಮ ಒಂದಾ ಎರಡಾ..?

ವೃತ್ತಿ ಬದುಕಿನಲ್ಲಿನ ಏರಿಳಿತ, ಅದರೊಟ್ಟಿಗೆ ಈಜಿ, ಇತರ ಕ್ಷೇತ್ರಗಳಿಗೂ ಧುಮುಕಿ, ತಾನೂ ಇತರರೊಡನೆ ಬಣ್ಣಹಚ್ಚಿದ್ದು, ಅನ್ನ ಕೊಟ್ಟ ಊರಿಗೆ ಹತ್ತು ಹಲವು ಕಾರ್ಯಕ್ರಮ ಮಾಡಿ 'ಋಣ' ತೀರಿಸಿದ್ದು, ಕಿರುಪರಿಚಯದ ಪಾತ್ರದಲ್ಲಿ ಎನ್ನುತ್ತಾರೆ. ಪಂಚಭಾಷಾ ಪ್ರವೀಣ 'ಕನ್ನಡ ನನ್ನ ಅನ್ನ ಭಾಷೆ' ಎಂದು ಇದಲ್ಲವಾ ಮಣ್ಣು, ನೀರಿನ ಋಣ ತೀರಿಸುವ ಒಂದಿಗೆ ಬರೆಯುವ ಆ ಕಾಯಕ!

ಯಾವುದಕ್ಕೆ ಲೇಖನಿ ಎತ್ತಿದರೂ ಅದರಲ್ಲೊಂದು ಸಂದೇಶವಿದೆ. ಅದರಲ್ಲೂ 'ಸಂವಹನ ವಿಶ್ಲೇಷಣೆ' ಎಂಬ ಲೇಖನವಂತೂ ಅಬ್ಬಾ.. ಎನಿಸುತ್ತದೆ. ಆ ಹಿರಿಯ, ವಯಸ್ಕ, ಶಿಶು ಎಂಬುದರ ಮೂಲಕ 'ಮನೋವೈಜ್ಞಾನಿಕ'ವನ್ನೂ ಛಾಪಿಸಿದ್ದಾರೆ ಒಂದರ್ಥದಲ್ಲಿ ಡಾರ್ವಿನ್ನನ 'ವಿಕಾಸವಾದ'ದಂತೆ ಸಮೀಕರಿಸಿದ್ದಾರೆ. ಬಹುಶಃ ಪಿ.ಹೆಚ್.ಡಿ.ಗೆ 'ಸಂವಹನ ವಿಶ್ಲೇಷಣೆ' ಒಳಿತಾದದ್ದು ಇದು. ಹಿಂದೆ ಹತ್ತು ಹನ್ನೆರಡು ಹೆರುತ್ತಿದ್ದರಂತೆ, ಹೆತ್ತಾಕೆಯನ್ನು ನಿಮಗಾವ ಕಂದ ಇಷ್ಟ ಎಂದರೆ ಏನೆಂದಾಳು? ಅಂತಾಗಿದೆ ನನ್ನ ರೀತಿ; ಇರುವ ಐವತ್ತು ಲೇಖನಗಳೂ ಒಳಿತಾದುವೇ.

ಹಿರಿಯ ಪ್ರೀತಿಯ ಕುಮಾರ್‌ಅವರ ಆ ಚಿಂತನಾ ಮನದಿಂದ ಇನ್ನಷ್ಟು ಕೃತಿ ಬರಲಿ, ನಿಮ್ಮಾಸೆಯಂತೆ ನಾಡು, ನಾಡಿನ ಮಂದಿ, ಅಂತೇ ಸಾಗಲಿ ಎನ್ನುತ್ತಾ ಮತ್ತೆ ಬರೆಯಿರಿ ಎಂದು ವಿನಂತಿಸುತ್ತೇನೆ.

12–12–2017

**ಕಳಲೆ ಗುರುಸ್ವಾಮಿ**
ಶಿಕ್ಷಕರು ಮತ್ತು ಸಾಹಿತಿಗಳು

# ಸಾಹಿತ್ಯ ಕದಂಬ

(ವೈಚಾರಿಕ ಲೇಖನಗಳು)

ಕುಮಾರ್ ಆರ್.ಎ

ಪ್ರಕಾಶಕರು
**ಗಾಯತ್ರಿ ಎಂಟರ್‌ಪ್ರೈಸಸ್**
285/F6, 5ನೇ ಕ್ರಾಸ್,
ಉತ್ತರಾದಿಮಠದ ರಸ್ತೆ, ಮೈಸೂರು

# SAHITHYA KADAMBA VAICHARIKA LEKANAGALU

*Written by :*

**Kumar**

1219, 2 nd cross, 2nd main.

Srirampura 2nd Stage, Mysuru-23

Ph : 9663962926

0Published by :

**Gayathri Enterprises**

285/F6, 5th West Cross,

Uttaradimutt Road, Mysore

| | | |
|---|---|---|
| Pages | : | iv + 200 = 204 |
| First Edition | : | 2017 |
| Copy Right | : | Author |
| Copies | : | 1000 |
| Price | : | Rs. 165/- |
| ಪುಟಗಳು | : | iv + 200 = 204 |
| ಮೊದಲ ಮುದ್ರಣ | : | 2017 |
| © | : | ಲೇಖಕರದ್ದು |
| ಪ್ರತಿಗಳು | : | 1000 |
| ಬೆಲೆ | : | ರೂ. 165/– |
| ಮುಖಪುಟ ವಿನ್ಯಾಸ | : | ಹೇಮಲತಾ |
| ಅಕ್ಷರ ಜೋಡಣೆ | : | ಕುಮಾರ್ |
| ಮುದ್ರಣ | : | ತಾರಾ ಪ್ರಿಂಟ್ಸ್, ಮೈಸೂರು |

# ಅರ್ಪಣೆ

ನನ್ನ ಸಾಹಿತ್ಯ ಕೃತಿಗಳು
ಬೆಳಕು ಕಾಣಲು ಕಾರಣಕರ್ತರಾದ ಸನ್ಮಿತ್ರರಿಗೆ

# ಲೇಖಕರ ಮಾತು

2017ರ ಅಂತ್ಯ ಭಾಗದಲ್ಲಿ ನನ್ನ ಎರಡನೆಯ ಗದ್ಯಕೃತಿ 'ಸಾಹಿತ್ಯಕದಂಬ' ಹೊರಬರುತ್ತಿರುವುದು ಸಂತಸದ ವಿಚಾರ. ನನ್ನ ಮೊದಲ ಗದ್ಯಕೃತಿ 'ಕಂಡಿದ್ದುಕಾಡಿದ್ದು' ಕಳೆದ ವರ್ಷ ಆಗಸ್ಟ್ ತಿಂಗಳಿನಲ್ಲಿ ಮಂಡ್ಯದ ಗಾಂಧಿ ಭವನದಲ್ಲಿ ಜನತಾ ಶಿಕ್ಷಣ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಹೆಚ್.ಡಿ. ಚೌಡಯ್ಯನವರ ಹಸ್ತ ಬಿಡುಗಡೆಗೊಂಡಿತ್ತು. 'ಸಾಹಿತ್ಯಕದಂಬ' ಒಂದು ವೈಚಾರಿಕ ಲೇಖನಗಳ ಸಂಕಲನ. ಯಾವುದೇ ಒಂದು ವಸ್ತುವಿಗೆ ಜೋತುಬೀಳದೆ ಮನಸ್ಸಿಗೆ ತೋಚಿದ ಎಲ್ಲ ವಿಚಾರಗಳನ್ನೂ ನನ್ನ ದೃಷ್ಟಿಯಿಂದ ನೋಡುವ ಪ್ರಯತ್ನ ಮಾಡಿರುತ್ತೇನೆ. ಇಲ್ಲಿನ ಕೆಲವು ಲೇಖನಗಳು 'ಬೆಳಕು' ಮಾಸಪತ್ರಿಕೆ, ಕೊಳಲು ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ವಯೋವೃದ್ಧನೆನಿಸಿಕೊಂಡರೂ ಸಾಹಿತ್ಯಕ್ಷೇತ್ರದಲ್ಲಿ ನಾನಿನ್ನೂ ಅಂಬೆಗಾಲಿಡುತ್ತಿರುವ ಶಿಶು. ನನ್ನೀ ಪ್ರಯತ್ನಕ್ಕೆ ನೀರೆರೆಯುತ್ತಿರುವವರು ಸಾಹಿತ್ಯ ದಾಸೋಹಿಗಳು. ನನ್ನ ಈ ಕೃತಿಗೆ ನನ್ನ ಮೇಲಿನ ಪ್ರೀತಿಯಿಂದ ಮುನ್ನುಡಿ ಬರೆದುಕೊಟ್ಟು ಸಹಕರಿಸಿದ ಪ್ರಖ್ಯಾತ ಚುಕ್ಕಿ ಚಿತ್ರಕಲಾವಿದ, ಸಾಹಿತಿ, ನಗೆಥೆರಪಿಸ್ಟ್, ಅಂಕಣಕಾರ, ಮಾತೃಹೃದಯಿ ಆತ್ಮೀಯ ಗೆಳೆಯ ಶ್ರೀ ಮೋಹನ್ ವೆರ್ಣೇಕರ್‌ರವರಿಗೆ ನಾನು ಚಿರಋಣಿ. ಈ ಪುಸ್ತಕವನ್ನು ಅಂದವಾಗಿ ಹಾಗೂ ಅತಿಕಡಿಮೆ ಸಮಯದಲ್ಲಿ ಮುದ್ರಿಸಿದ ತಾರಾ ಪ್ರಿಂಟರ್ಸ್ ಮಾಲೀಕರಾದ ಶ್ರೀ ಶಶಿಕುಮಾರ್‌ರವರಿಗೂ ಮತ್ತು ಪ್ರಕಾಶಿಸಿದ ಗಾಯಿತ್ರಿ ಎಂಟರ್‌ಪ್ರೈಸಸ್ ಸಂಸ್ಥೆಗೂ ನನ್ನ ಧನ್ಯವಾದಗಳು. ನನ್ನೆಲ್ಲ ಲೇಖನಗಳ ಮೊದಲ ವಿಮರ್ಶಕಿ ಆಗಿರುವ ನನ್ನ ಶ್ರೀಮತಿ ಸುಮತಿ.ಕೆ.ಎಸ್ ಅವರಿಗೂ ಸದಾಕಾಲ ನನ್ನ ಸಾಹಿತ್ಯರಚನೆಗೆ ಪ್ರೋತ್ಸಾಹ ನೀಡುತ್ತಿರುವ ನನ್ನ ಹಿತೈಷಿ ವಿಶ್ರಾಂತಕನ್ನಡ ಪ್ರಾಧ್ಯಾಪಕ ಡಾಹೆಚ್.ಎಸ್.ಮುದ್ದೇಗೌಡರವರಿಗೂ ನನ್ನ ಧನ್ಯವಾದಗಳು. ಈ ನನ್ನ ಪ್ರಯತ್ನಕ್ಕೆ ಬೆನ್ನು ತಟ್ಟಿ ಅಚ್ಚುಕಟ್ಟಾದ ಬೆನ್ನುಡಿಯನ್ನು ಕರುಣಿಸಿರುವ ಶಿಕ್ಷಕ, ಅಂಕಣಾಕಾರ, ಸಾಹಿತಿ ಶ್ರೀ ಕಳಲೆ ಗುರುಸ್ವಾಮಿಯವರಿಗೂ ನನ್ನ ಹೃದಯ ಪೂರ್ವಕ ನಮನಗಳು.

**ಕುಮಾರ್.ಆರ್.ಎ**

# ಮೆಚ್ಚು ಮಾತು....

ಶಾಂತಯುತ ನಿವೃತ್ತಿ ಬದುಕು ಬೇಕೆಂದು ಹಂಬಲಿಸಿ ಮೈಸೂರನ್ನು ಆಯ್ಕೆಮಾಡಿಕೊಂಡು ನೆಲೆನಿಂತಾಗ ಪರಿಚಿತರಿಲ್ಲದೆ ಏಕಾಂಗಿತನ ಕಾಡುತ್ತಿದ್ದ ಸಂದರ್ಭದಲ್ಲಿ ಆಪದ್ಬಾಂಧವರಾಗಿ ಪರಿಚಿತರಾದವರು ಪ್ರಿಯಮಿತ್ರ ಕುಮಾರ್ ಅವರು. ಪರಿಚಯ ಸ್ನೇಹವಾಗಿ, ಸಮಾನಮನಸ್ಕತೆಯ ಭದ್ರ ಬುನಾದಿಯಲ್ಲಿ ಆತ್ಮೀಯತೆ ಮೊಳೆತು, ಗಿಡವಾಗಿ ಬೆಳೆಯುತ್ತಿದೆ. ಮಾನಸಿಕವಾಗಿ ಕುಗ್ಗಿದಾಗ ಅವರ ಕರೆಗೆ ನನ್ನ ಮೊಬೈಲ್ ರಿಂಗಣಿಸಿ 'ಮಿತ್ರರೇ' ಎನ್ನುವ ಅವರ ಪ್ರೀತಿಯ ಉದ್ಗಾರ ಕೇಳಿದಾಗ ಮನಸ್ಸಿಗೆ ಪ್ರಫುಲ್ಲತೆಯ ಅನುಭವವಾಗುತ್ತದೆ. ಹೀಗಾಗಿ ಮೈಸೂರಿನಲ್ಲಿ ನನ್ನ ಆತ್ಮೀಯ ಸ್ನೇಹಿತರಲ್ಲಿ ಪ್ರಥಮಸ್ಥಾನ ಕುಮಾರ್‌ಗೇ ಸಲ್ಲುತ್ತದೆ. ಕುಮಾರ್ ಸರಸ ಸಂಭಾಷಣೆಯ, ಯಾವುದೇ ಹಮ್ಮುಬಿಮ್ಮಿಲ್ಲದ ಸಜ್ಜನಿಕೆಯ ವ್ಯಕ್ತಿ. ಸರಳತೆ, ನೇರ ನಡೆನುಡಿ ಮತ್ತೊಂದು ಪ್ರಧಾನ ಅಂಶ. ಅವರಿದ್ದಲ್ಲಿ ನಗು, ವಿಡಂಬನೆ, ಕಚಗುಳಿಯಿಡುವ ಮೊನಚುಮಾತಿರುತ್ತದೆ. ಆ ಮೊನಚುಮಾತಲ್ಲೂ ನಿಷ್ಕಲ್ಮಶ ಹಾಸ್ಯಲೇಪಿತ ಲಾಸ್ಯ ಅವರ ಹೆಚ್ಚುಗಾರಿಕೆ. ಹೀಗಾಗಿ ಇವರು ತಮ್ಮ ಆಪ್ತವಲಯದಲ್ಲಿ ಒಂದು ವಿಶಿಷ್ಟಸ್ಥಾನವನ್ನು ಕಾಪಾಡಿಕೊಂಡುಬಂದಿದ್ದಾರೆ.

ವೈಚಾರಿಕ ಪ್ರಜ್ಞೆ ಚಿಂತನಶೀಲ ಪ್ರವೃತ್ತಿಯು ಪ್ರತಿಯೊಬ್ಬರಲ್ಲೂ ಅಂತರ್ಗತವಾಗಿರುತ್ತದೆ. ವಯಸ್ಸು, ಮನಸ್ಸು ಮಾಗಿದಂತೆಲ್ಲ ಈ ಪ್ರಜ್ಞಾವಸ್ಥೆ ಮತ್ತಷ್ಟು ಉತ್ತೇಜಿತವಾಗುತ್ತದೆ, ಯೋಚನೆ–ಚಿಂತನಗಳ ಮಂಥನದಲ್ಲಿ ಭಾವನೆಗಳು ಮೂರ್ತರೂಪ ಪಡೆದಾಗ ಸೃಜನಶೀಲತೆಯುಳ್ಳ ವ್ಯಕ್ತಿ ಅದನ್ನು ಹೊರಹೊಮ್ಮಿಸಲು ಮಾಧ್ಯಮವೊಂದನ್ನು ಆರಿಸಿಕೊಳ್ಳುತ್ತಾನೆ. ಕವಿ, ಕಥೆಗಾರ, ಕಲಾವಿದ, ಶಿಲ್ಪಿ, ಸಂಗೀತಗಾರ– ಹೀಗೆ ವಿವಿಧ ವರ್ಗದವರು ತಮಗೆ ಯಥೋಚಿತ ಮಾರ್ಗವನ್ನು ಆಯ್ಕೆಮಾಡಿಕೊಂಡಾಗ ಆಯಾಯ ಮಾಧ್ಯಮಗಳಲ್ಲಿ 'ಸೃಷ್ಟಿ'ಕಾರ್ಯ ಮೊದಲಾಗುತ್ತದೆ. ಇದು ಇಳಿವಯಸ್ಸಿನಲ್ಲಂತೂ ಪಕ್ವತೆಯ ಸ್ವರೂಪದ ಜತೆಜತೆಗೆ ವೈವಿಧ್ಯಮಯವಾಗಿ ಹೊರಹೊಮ್ಮುವುದೊಂದು ವೈಶಿಷ್ಟ್ಯ. ಈ ಸಾಲಿಗೆ ಸೇರಿದ

ಗೆಳೆಯ ಕುಮಾರ್ ಗದ್ಯರೂಪದಲ್ಲೆ ತಮ್ಮ ಚಿಂತನೆಯ ಲಹರಿಯನ್ನು ಹರಿಬಿಟ್ಟಾಗ ಮೂಡಿದ 50 ಕಿರುಲೇಖನಗಳ ಸಂಗ್ರಹವೇ ಈ 'ಸಾಹಿತ್ಯ ಕದಂಬ'. ಈಗಾಗಲೇ ನಾಲ್ಕು ಕೃತಿಗಳಿಂದ ಸಾಹಿತ್ಯಲೋಕದಲ್ಲಿ ಇವರು ನೆಲೆಯೂರಿದ್ದು ಈಗಿವರದು ಸಾಹಿತ್ಯ ಕುರಿತಂತೆ ಮಾಗಿದ ಮನ, ಪಳಗಿದ ಕೈ.

ಈ ಸಂಗ್ರಹದಲ್ಲಿನ ಲೇಖನಗಳನ್ನು ಅವಲೋಕಿಸುತ್ತ ಹೋದಂತೆ ಇಲ್ಲಿಯ ವಿಷಯ ವೈವಿಧ್ಯತೆಗೆ ಓದುಗ ಬೆರಗಾಗದಿರುವುದಿಲ್ಲ. ಎಷ್ಟೊಂದು ವಿಷಯಗಳು, ಚಿಂತನೆಯ ತುಡಿತಗಳು, ಭಾವಲಹರಿಯಾಗಿ ಅಸ್ಖಲಿತವಾಗಿ ಹೊರಹೊಮ್ಮಿದಾಗ ಒಂದು ಕ್ಷಣವಾದರೂ ಆತ ವಿಚಲಿತನಾಗಿ ಯೋಚಿಸದಿರುವುದಿಲ್ಲ. 'ಇಲ್ಲಿಯ ಲೇಖನಗಳೆಲ್ಲವೂ ಸಾಮಾನ್ಯ ಓದುಗನನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದಂಥವು. ಇಲ್ಲಿ ವೈಚಾರಿಕತೆಯ, ಪದಲಾಲಿತ್ಯದ ವಿಜೃಂಭಣೆಯಿಲ್ಲ, ಶಬ್ದಾಡಂಬರದ ಭೋರ್ಗರೆತವಿಲ್ಲ' ಎಂದು ವಿನಮ್ರವಾಗಿ ಹೇಳುವ ಕುಮಾರ್ ವಾಸ್ತವವಾಗಿ ಗೆದ್ದಿರುವುದು ಇಲ್ಲೇ. ಹೇಳಬೇಕಾದ್ದನ್ನು ಸರಳವಾಗಿ, ನೇರವಾಗಿ, ಹೃದ್ಯವಾಗುವಂತೆ ಅಲ್ಲಲ್ಲಿ ಹಾಸ್ಯದ ಕಚಗುಳಿಯಿಡುತ್ತ, ಚಿಂತನೆಯ ಬೀಜವನ್ನೂ ಬಿತ್ತುತ್ತ ತಾವು ಮಾತ್ರ ನಿರ್ಲಿಪ್ತರಾಗಿಬಿಡುವ ಇವರ ಈ ಮನೋಭಾವವೇ ಮೆಚ್ಚುಗೆಯಾಗುವಂಥಾದ್ದು. ಕೆಲವೆಡೆ ಹೇಳಬೇಕಾಗಿದ್ದನ್ನು ಹೇಳಿ, ತೀರ್ಮಾನವನ್ನು ಓದುಗರಿಗೇ ಬಿಡುವ ಇವರ ಜಾಣತನವನ್ನೂ ಅಲ್ಲಲ್ಲಿ ಕಾಣಬಹುದು.

ಮೇಲೆ ಹೇಳಿದಂತೆ ಇಲ್ಲಿ ಲೇಖಕರು ಪ್ರಸ್ತುತಪಡಿಸಿರುವ ವಿಷಯಗಳು ವೈವಿಧ್ಯಮಯ. 'ಗೆಳೆತನ'ದ ಬಗ್ಗೆ ಹೇಳುತ್ತ 'ನಿಜವಾದ ಗೆಳೆಯ ಯಾರು?' ಪ್ರಶ್ನೆಹಾಕಿ ಉತ್ತರವನ್ನೂ ಹೇಳುತ್ತಾರೆ. ಇಂದಿನ ವಿಜ್ಞಾನಯುಗದಲ್ಲಿ ಸಂಬಂಧಗಳು ಯಾಂತ್ರಿಕವಾಗುವಾಗ ಸ್ನೇಹವೂ ಇದಕ್ಕೆ ಹೊರತಾಗದೆ 'ಫೇಸ್ ಟು ಫೇಸ್ ಆಗುವುದಕ್ಕಿಂತ ಫೇಸ್‌ಬುಕ್‌ನಲ್ಲೇ ಬಹುತೇಕ ಶುಭಾಶಯಗಳು, ಭಾವನೆಗಳು ವಿನಿಮಯವಾಗುತ್ತವೆ' ಎಂದು ಮಾರ್ಮಿಕವಾಗಿ ಹೇಳುವಾಗ ಗೆಳೆತನವೂ ಇಂದು ಕೆಲವೊಮ್ಮೆ 'ಹೃಸ್ವ'ವಾಗುತ್ತಿದೆಯೆನ್ನುವ ವಿಷಾದವನ್ನೂ ಇವರು ವ್ಯಕ್ತಪಡಿಸುತ್ತಾರೆ. 'ಇದೆಂಥ ಮೇಲ್ಪಂಕ್ತಿ?'ಯಲ್ಲಿ ಸಾಮಾಜಿಕ ಜೀವನದ ಪ್ರಮುಖ ವ್ಯಕ್ತಿಗಳು ತಮ್ಮ ಅಪರಾಧಗಳನ್ನು ರಾಜಾರೋಷವಾಗಿ ಒಪ್ಪಿಕೊಳ್ಳುವ ಬಗ್ಗೆ ಇವರ ಚಿಂತನಲಹರಿ ಹರಿಯುತ್ತದೆ. ರಾಜಕಾರಣಿಯ ಲೈಂಗಿಕ ದೌರ್ಜನ್ಯವನ್ನು ದೃಶ್ಯಮಾಧ್ಯಮಗಳು ಇಡೀದಿನ ಬಿತ್ತರಿಸುವುದನ್ನು ಖಂಡಿಸುವ ಇವರು ಇದರ ಸಾಧಕ-ಬಾಧಕಗಳ ಬಗ್ಗೆ ಭೂತಕನ್ನಡಿಯಿಟ್ಟು ಇಂಥ ಪರಿಸ್ಥಿತಿಯಿಂದ ಮುಂದಿನ ಪೀಳಿಗೆಯನ್ನು

ವಿಮುಖರಾಗಿಸಲು ಏನು ಮಾಡಬೇಕೆಂದು ಓದುಗರಿಗೇ ಪ್ರಶ್ನೆಹಾಕಿ ಬಿಟ್ಟುಬಿಡುತ್ತಾರೆ! 'ಸಾವು ತಂದ ಪರದಾಟ' ದಲ್ಲಿ ಕಟುಸತ್ಯ ಪ್ರತಿಪಾದಿಸುವ ವಿಡಂಬನೆಯೇ ಇಲ್ಲಿಯ ಹೂರಣ. ಆಸ್ತಿಯಲ್ಲಿ ಸುಲಿಗೆ, ಸಂಬಂಧಿಕರ ಬವಣೆಯ ಚಿತ್ರಣದಲ್ಲಿ ಎದ್ದುಕಾಣುವ ವಾಸ್ತವಿಕತೆಯ ವ್ಯಂಗ್ಯನೋಟ ಓದುಗನ ಮನತಟ್ಟದಿರದು. 'ಸಕಾರಾತ್ಮಕ ಯೋಚನೆ' ಮತ್ತೊಂದು ಉಪಯುಕ್ತ ಲೇಖನವಾಗಿದ್ದು ಇದರ ಬಗ್ಗೆ ವಿಶ್ಲೇಷಿಸುತ್ತಾ 'ನಮ್ಮ ಕಷ್ಟಗಳನ್ನೇ ಪ್ರಧಾನ ಎಂದುಕೊಂಡು, ಲೋಕದಲ್ಲಿ ನಮಗಿಂತ ದುಃಖಿತರಿಲ್ಲ ಎಂದುಕೊಂಡು, ಅದನ್ನೇ ಎಲ್ಲರ ಮುಂದೆ ತೋಡಿಕೊಳ್ಳುತ್ತಾಹೋದಲ್ಲಿ ಸಕಾರಾತ್ಮಕ ಆಲೋಚನೆಗಳು ಮೂಡುವುದೇ ಇಲ್ಲ' ಎಂದು ಲೇಖಕ ಹೇಳುವುದು ಮಾರ್ಮಿಕವಾಗಿದೆ, ಇಲ್ಲಿ ವಾಸ್ತವಾಂಶವೂ ಅಡಗಿದೆ. 'ಮಾತನಾಡುವ ಕಲೆ'ಯೂ ಮತ್ತೊಂದು ಉಪಯುಕ್ತ ಲೇಖನವಾಗಿದ್ದು, ಸಹಾಯಕ ಸಲಹೆ-ಸೂಚನೆಗಳನ್ನು ಒಳಗೊಂಡಿದೆ. ಮಾನವೀಯ ಮೌಲ್ಯಗಳ ನೆಲೆಗಟ್ಟಿನಲ್ಲಿ ಮೂಡಿಬಂದ 'ಮನೆಕೆಲಸದ ನಿಂಗಮ್ಮ' 'ಇರುಳು ಕಂಡ ಬಾವಿಯೊಳಗೆ ಹಗಲು ಬಿದ್ದಂತೆ!' 'ಹೀಗೂ ಒಂದು ಬದುಕು' 'ಮಾತೃಹೃದಯ' ಮೊದಲಾದ ಲೇಖನಗಳು ಬದುಕಿನ ವಿಭಿನ್ನ ಮಜಲುಗಳನ್ನು ಪರಿಚಯಿಸುತ್ತ ಓದುಗನ ಮನವನ್ನು ಸ್ಪಂದಿಸದಿರಲಾರವು. ಕುಮಾರ್ ಅವರ ವೈಚಾರಿಕತೆ ಸರಣಿಯಲ್ಲಿ ವಿಜ್ಞಾನವೂ ಇಲ್ಲದಿಲ್ಲ. 'ಇರ್ತಲೆ' ಒಂದು ದೇಹ ಎರಡು ಶಿರದ ಅವಳಿಗಳ ಬಗ್ಗೆ ಇರುವ ವಿಶ್ಲೇಷಣೆ ಕುತೂಹಲಕಾರಿಯಾದದ್ದು. ಇದರ ಸೊಗಸನ್ನು ಓದಿಯೇ ಅರಿಯಬೇಕು. 'ಸಂವಹನ ವಿಶ್ಲೇಷಣೆ' ಮಾನಸಿಕ ಚಿಕಿತ್ಸೆಗೆ ಬಳಸುವ ಒಂದು ಪೂರಕ ಚಿಕಿತ್ಸಾಕ್ರಮವಾದ TA (Transactional Analysis) ಬಗ್ಗೆ ವೈಜ್ಞಾನಿಕ ವಿವರಣೆ ಇದೆ. ಆಸಕ್ತಿಯಿಂದ ಸಂಗ್ರಹಿಸಿದ ಮಾಹಿತಿ, ಒಂದು ಉಪಯುಕ್ತ ಲೇಖನವಾಗುವ ಪರಿ ನಿಜಕ್ಕೂ ಸೊಗಸಾಗಿದೆ. 'ಸಭೆಸಮಾರಂಭಗಳ ಪೂರ್ವಸಿದ್ಧತೆ'-ನಿಜಕ್ಕೂ ಒಂದು ಅತ್ಯುಪಯುಕ್ತ ಲೇಖನ. ಯಾವುದೇ ಕಾರ್ಯಕ್ರಮವಿರಲಿ, ಅದರ ಯಶಸ್ವಿ ನಿರ್ವಹಣೆಗೆ ಇಲ್ಲಿ ಹಲವು ಮಾರ್ಗದರ್ಶಿ ಸಲಹೆ-ಸೂತ್ರಗಳಿವೆ. 'ಇವೆಲ್ಲವನ್ನು ಪಾಲಿಸಿದ್ದೇ ಆದರೆ ಯಶಸ್ಸು ಕಟ್ಟಿಟ್ಟಬುತ್ತಿ' ಎಂದು ಭರವಸೆಯನ್ನೂ ಇವರು ಕೊಡುತ್ತಾರೆ. ಇದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಇದನ್ನೇ ಒಂದು ಕಿರುಹೊತ್ತಿಗೆಯಾಗಿ ಮುದ್ರಿಸಬಹುದೇನೊ!

ಇಲ್ಲಿ ನಿರ್ದಿಷ್ಟ ರೂಪದಲ್ಲಿ, ಅನುಕ್ರಮಣಿಕೆಯಲ್ಲಿ ಲೇಖನಗಳಿಲ್ಲ. 'ನನಗನ್ನಿಸಿದ್ದನ್ನು ಬರೆಯುತ್ತ ಹೋಗಿದ್ದೇನೆ, ನೀವು ಓದುತ್ತ ಹೋಗಿ!' ಎನ್ನುವ ಮನೋಭಾವದಲ್ಲೇ ಲೇಖಕಮಿತ್ರ ಕುಮಾರ್ ಈ ಕೃತಿಯನ್ನು ಓದುಗರ ಕೈಗಿತ್ತಿದ್ದಾರೆ.

ಮೇಲೆ ತಿಳಿಸಿದಂತೆ ಕುಮಾರ್‌ಗೆ ಬರೆಯುವ ಶೈಲಿ ಸಿದ್ಧಿಸಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹೇಳುವುದನ್ನು ನೇರವಾಗಿಯೇ ಹೇಳುವ, ತಮಗೆದುರಾದ ದ್ವಂದ್ವವನ್ನು ಪ್ರಾಮಾಣಿಕವಾಗಿ ತಿಳಿಸುವ 'ನಿಮ್ಮ ಅಭಿಪ್ರಾಯವೇನು?' ಎಂದು ಓದುಗರನ್ನೂ ಪ್ರಶ್ನಿಸುವ–ಹೀಗೆ ವಿಭಿನ್ನ ಶೈಲಿಯಲ್ಲಿ ಸಾಗುವ ಈ ಲೇಖನಗಳ ಸಂಗ್ರಹ 'ಸಾಹಿತ್ಯ ಕದಂಬ'. 'ಕದಂಬ' ಎಂದರೆ ಕೆಲವು ತರಕಾರಿಗಳ ಪಾಕವಲ್ಲ, ಅದು ಸಕಲ ತರಕಾರಿಗಳ ಸಂಗಮ. ಅಂತೆಯೇ ಇದು 'ಬರೇ ಗೀಚಿದ್ದಲ್ಲ, ಓದುಗನನ್ನು ಚಿಂತನೆಗೀಡುಮಾಡುವಂತೆ ಗೀಚಿದ್ದು' ಎಂದು ಹೇಳಬಹುದೇನೋ. ಇದು ಮೆಚ್ಚುಗೆಯೂ ಹೌದು, ಇಡೀ ಕೃತಿಯ ಅಂತರ್ಯವೂ ಹೌದು. ಪ್ರಿಯಮಿತ್ರ ಕುಮಾರ್ ಹೀಗೆ ಇನ್ನಷ್ಟು ಬರೆಯುತ್ತಸಾಗಲಿ ಎಂದು ಹಾರೈಸುತ್ತೇನೆ.

***ಮೋಹನ್ ವೆರ್ಣೇಕರ್***

ಲೇಖಕ/ಚುಕ್ಕಿಚಿತ್ರ ಕಲಾವಿದ,

# ಲೇಖನ ಸೂಚಿ


| | | |
|---|---|---|
| 1 | ಪ್ರತೀಕಾರ | 11 |
| 2 | ಗೆಳೆತನ | 17 |
| 3 | ಬೋಳೆ ಮಾನವ | 21 |
| 4 | ಗೃಹಿಣಿಯ ಸ್ವಗತ | 24 |
| 5 | ಇರ್ತಲೆ | 27 |
| 6 | ಇದೆಂತಹ ಮೇಲ್ಪಂಕ್ತಿ | 30 |
| 7 | ಸಭೆ ಸಮಾರಂಭಗಳ ಪೂರ್ವತಯಾರಿ | 33 |
| 8 | ಸಾವು ತಂದ ಪರದಾಟ – 3 | 43 |
| 9 | ಸಂವಹನ ವಿಶ್ಲೇಷಣೆ | 46 |
| 10 | ಸಕಾರಾತ್ಮಕ ಆಲೋಚನೆ | 53 |
| 11 | ಮನೆಗೆಲಸದ ನಿಂಗಮ್ಮ | 57 |
| 12 | ಮಾತನಾಡುವ ಕಲೆ | 61 |
| 13 | ಇರುಳು ಕಂಡ ಬಾವಿಗೆ ಹಗಲು ಬಿದ್ದವರಂತೆ | 67 |
| 14 | ಮನದನ್ನೆಯ ಮನದಿಂಗಿತ ಈಡೇರಿಸಲು ಮುಂದಾದಾಗ | 71 |
| 15 | ಹೊಗಳುವಿಕೆ | 74 |
| 16 | ರೂಪಾಂತರ | 76 |
| 17 | ಪರಸ್ಪರ ಸಹಬಾಳ್ವೆ | 80 |
| 18 | ಹೀಗೂ ಒಂದು ಬದುಕು | 84 |
| 19 | ಬದುಕು ಎಷ್ಟೊಂದು ದುಸ್ತರ | 87 |
| 20 | ಪರಿಚಿತ ಊರಿನಲ್ಲಿನ ಒಂದು ಅಸಂಬದ್ಧ ಕತೆ | 91 |
| 21 | ಟಾಯ್ಲೆಟ್ಟುಗಳು | 94 |
| 22 | ಕಾತರ | 101 |

| | | |
|---|---|---|
| 23 | ಮಾತೃ ಹೃದಯ | 105 |
| 24 | ನೆರೆಹೊರೆ | 110 |
| 25 | ದತ್ತು | 112 |
| 26 | ಅರಮನೆ ಎಂಬ ಸಂತೆಯಲ್ಲಿ | 117 |
| 27 | ಈ ಜೀವ ನಿಮಗಾಗಿ | 120 |
| 28 | ಒಂದು ಬೆಕ್ಕಿನ ಕತೆ | 123 |
| 29 | ಮಹಾನ್ ಮೋಸಗಾರರು | 127 |
| 30 | ಸ್ವಾರ್ಥಿ ಮಾನವ | 130 |
| 31 | ಆರ್ತನಾದ | 131 |
| 32 | ಸುಖ ಆನಂದ ಅಂದರೆ ಇದೇನಾ | 136 |
| 33 | ಸೋಲಿಗರ ಕೆಲವು ಆಚರಣೆಗಳು | 140 |
| 34 | ರಾಮರಾಜ್ಯ | 142 |
| 35 | ಎಲ್ಲಿಂದಲೋ ಬಂದವರು | 144 |
| 36 | ಒಂದು ವಿಪರೀತ ಆಲೋಚನೆ | 147 |
| 37 | ಬತ್ತಿಯಿಡುವವರು ಒಳಗಿನವರೇ | 150 |
| 38 | ಬ್ಯಾಕ್ ಟು ಸ್ಕ್ವೇರ್ ಒನ್ | 153 |
| 39 | ಒಂಟಿ ಬದುಕು | 156 |
| 40 | ಕರುಣಾಮಯಿ | 160 |
| 41 | ನಾನೇನೂ ಯಾರಿಗೂ ಕಡಿಮೆಯಿಲ್ಲ | 162 |
| 42 | ಬಾಲ್ಯದ ನಂಬಿಕೆಗಳು | 165 |
| 43 | ಕ್ರೌರ್ಯ | 168 |
| 44 | ಕಣ್ಣಮುಂದೆ ಸಾವು ಕುಣಿಯುತ್ತಿರುವಾಗ | 171 |
| 45 | ವೃತ್ತಿ ಬಾಂಧವರು | 175 |
| 46 | ಬಳಗದ ನಂಟು ನಾಟಕದ ಅಂಟು | 177 |
| 47 | ಸರಸ್ವತಿ ಸಾಗರ | 184 |
| 48 | ಈಜು – ನನ್ನ ಪ್ರಥಮ ಹಾಗೂ ಅಂತಿಮ ಸಾಹಸ | 187 |
| 49 | ಸಿಂಗಪೂರಿನಲ್ಲಿ ನನ್ನ ಅನ್ವೇಷಣೆಗಳು | 189 |
| 50 | ಶ್ರೀಮತಿಯ ಮೊದಲ ವಿದೇಶ ಪ್ರಯಾಣ | 194 |

## ಲೇಖನ – 1

# ಪ್ರತೀಕಾರ

ಅದೊಂದು ಸಣ್ಣ ಪಟ್ಟಣ. ಅದರಲ್ಲೊಂದು ಅನುರೂಪ ಕ್ರಿಶ್ಚಿಯನ್ ದಂಪತಿ. ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಪ್ರೀತಿಮಾಡುತ್ತಿದ್ದವು ಆ ಜೋಡಿ. ಹೀಗಿರುವಾಗ ಯಾವುದೋ ಭೀಕರ ಕಾಯಿಲೆಗೆ ತುತ್ತಾಗಿ ಗಂಡ ತೀರಿಕೊಳ್ಳುತ್ತಾನೆ ಅಥವಾ ಸುತ್ತಮುತ್ತಲಿನವರು ಹಾಗೆಂದುಕೊಳ್ಳುತ್ತಾರೆ. ಸತ್ತುಹೋದನೆಂದು ಭಾವಿಸಿದ ಅವರ ಸಂಬಂಧಿಗಳು, ಅವನ ದೇಹವನ್ನು ಶವಪೆಟ್ಟಿಗೆಯಲ್ಲಿಟ್ಟು ತಮ್ಮ ವಂಶಸ್ಥರ ಶವಾಗಾರದ ನೆಲಮಾಳಿಗೆಯಲ್ಲಿ ಇಟ್ಟಿರುತ್ತಾರೆ.

ಹಲವಾರು ಘಂಟೆಗಳ ನಂತರ ಆತನಿಗೆ ಎಚ್ಚರವಾಗುತ್ತದೆ. ಕಣ್ಣುಬಿಟ್ಟರೆ ಸುತ್ತಲೂ ಗಾಢಾಂಧಕಾರ. ತಾನೆಲ್ಲಿರುವೆ ಎಂಬುದೇ ಆತನ ಅರಿವಿಗೆ ಬರುತ್ತಿಲ್ಲ. ಆತನಿಗೆ ಆತಂಕ, ಗಾಬರಿ, ಹೆದರಿಕೆ ಎಲ್ಲವೂ ಏಕಕಾಲಕ್ಕೆ ಉಂಟಾಗುತ್ತವೆ. ಮೈ ಕೈ ಅಲ್ಲಾಡಿಸಲೂ ಸಾಕಷ್ಟು ಸ್ಥಳಾವಕಾಶವಿರದ ಜಾಗ. ಏನುಮಾಡಲೂ ತೋಚದ ಆತ, ತನ್ನ ಈ ಸ್ಥಿತಿಗೆ ಕಾರಣವಾದ ಸನ್ನಿವೇಶಗಳನ್ನು ನೆನಪುಮಾಡಿಕೊಳ್ಳುತ್ತಾ ಹೋಗುತ್ತಾನೆ. ಆತನಿಗೆ ತನಗೆ ಯಾವುದೋ ಭೀಕರ ಕಾಯಿಲೆ ಬಂದುದು, ತಾನು ಜ್ವರದ ತಾಪದಿಂದ ಮೂರ್ಛೆಹೋದುದು ಸ್ವಲ್ಪ ಸಮಯದ ನಂತರ ನೆನಪಿಗೆ ಬರುತ್ತದೆ. ಆಗ ತಾನು ಸತ್ತಿರುವೆನೆಂದು ಬಗೆದು ತನ್ನನ್ನು ಅವರು ಶವಪೆಟ್ಟಿಗೆಯಲ್ಲಿ ಹಾಕಿರುವರೆಂಬುದನ್ನು ಊಹಿಸಿಕೊಳ್ಳುತ್ತಾನೆ.

ಇತ್ತ ಅವನ ಪತ್ನಿ, ತನ್ನ ಪತಿಯು ವಿಯೋಗದಿಂದ ಕೊರಗುವ ಬದಲಿಗೆ ತನ್ನ ಇನಿಯನೊಂದಿಗೆ ಬಲು ಸಂತೋಷದಿಂದ ನೂತನ ಬದುಕೊಂದನ್ನು ಕಟ್ಟಿಕೊಂಡಿರುತ್ತಾಳೆ. ಆಕೆಯ ಪ್ರಿಯಕರನೂ ಈತನ ಆಪ್ತಮಿತ್ರನೇ ಆಗಿರುತ್ತಾನೆ. ಮುಳುಗುತ್ತಿರುವವನಿಗೆ ಸಿಕ್ಕ ಒಂದು ಹುಲ್ಲುಕಡ್ಡಿಯೂ ಜೀವದಾನ ನೀಡಬಲ್ಲುದು ಎಂಬಂತೆ ತನ್ನ ಪತಿಯ ಸಾವಿನ ದುಃಖವನ್ನು ಪ್ರಿಯಕರನ ಆಗಮನದಿಂದ ನೀಗಿಕೊಳ್ಳುತ್ತಾಳೆ ಆಕೆ. ಹೊರಗೆ ನೋಡಿದವರಿಗೆ ಆಕೆಯೇನಾ ತನ್ನ ಪತಿಯನ್ನು ಕಳೆದುಕೊಂಡವಳು ಎಂದು ಮೂಗಿನಮೇಲೆ ಬೆರಳಿಟ್ಟುಕೊಳ್ಳುವಂತೆ ತಮ್ಮ ಸಂಸಾರ ನಡೆಸುತ್ತಿರುತ್ತಾಳೆ ಆ ಹೆಂಗಸು. ತನ್ನೆಲ್ಲ ಶಕ್ತಿ ಪ್ರಯೋಗಿಸಿ ಶವಪೆಟ್ಟಿಗೆಯ ಮೇಲಿನ ಮುಚ್ಚಳವನ್ನು ಎತ್ತಲು ಪ್ರಯತ್ನಿಸಿದ ಆ ಪತಿರಾಯನ ಪ್ರಯತ್ನಕ್ಕೆ ಯಶದೊರಕುತ್ತದೆ. ಮುಚ್ಚಳ ಕಿತ್ತುಬರುತ್ತದೆ. ಶವಪೆಟ್ಟಿಗೆಯಿಂದ ಮೆಲ್ಲಗೆ ಹೊರಬಂದ ಆತ ಸಾಕಷ್ಟು ದೊಡ್ಡದಾಗಿದ್ದ ಶವಕೊಠಡಿಯಲ್ಲಿ ಅತ್ತಿಂದಿತ್ತ ಓಡಾಡತೊಡಗುತ್ತಾ ಹೊರಬರಲು ದಾರಿ ಯಾವುದಾದರೂ ಇದೆಯಾ ಎಂದು ಹುಡುಕಾಟ ನಡೆಸುತ್ತಿರುತ್ತಾನೆ. ಅಲ್ಲೆಲ್ಲೋ ಒಂದು ಕಡೆಯಲ್ಲಿ ಕಿಂಡಿಯಿಂದ ಸಣ್ಣ ಬೆಳಕಿನ ಕಿರಣವೊಂದು ತೂರಿಬರುತ್ತಿರುತ್ತದೆ. ಭದ್ರವಾಗಿ ನಿರ್ಮಿಸಿದ್ದ ಗೋಡೆಗಳಲ್ಲಿ ಕಿಂಡಿ ಹೇಗೆ ಸಾಧ್ಯ ಎಂದು ಆಶ್ಚರ್ಯಚಕಿತನಾದ ಆತ ಆ ಕಡೆ ತನ್ನ ಹೆಜ್ಜೆಗಳನ್ನಿಡುತ್ತಾ ಹೋದಾಗ ಕಂಡದ್ದು ಅಳ್ಳಕವಾಗಿ ಜೋಡಿಸಿಟ್ಟ ಹಲವು ಇಟ್ಟಿಗೆಗಳು ! ಆ ಜಾಗದಲ್ಲಿ ಒಬ್ಬ ಮನುಷ್ಯ ತೂರಿಬರಬಹುದಾದಷ್ಟು ಅವಕಾಶವಿದ್ದು ಅಲ್ಲಿ ಇಟ್ಟಿಗೆಗಳನ್ನು ಗೋಡೆ ರೀತಿಯಲ್ಲಿ ಜೋಡಿಸಿಡಲಾಗಿರುತ್ತದೆ. ಆಶ್ಚರ್ಯದಿಂದ ಇದೇಕೆ ಈ ಸ್ಥಳದಲ್ಲಿ ಗೋಡೆಕಟ್ಟದೇ ಇಟ್ಟಿಗೆಗಳನ್ನು ಪೇರಿಸಿಟ್ಟಿರಬಹುದು ಎಂದು ಆ ಇಟ್ಟಿಗೆಗಳನ್ನು ಸರಿಸಿ ಶವಕೊಠಡಿಯಿಂದ ಹೊರಬಂದು ಬೆಳಕಿಗೆ ತನ್ನ ಮೈ ಒಡ್ಡಿಕೊಂಡು ಸೂರ್ಯಸ್ನಾನ ಮಾಡುತ್ತಾನೆ ಆತ. ಈ ಸೀಕ್ರೆಟ್ ಎಕ್ಸಿಟ್ ಏಕೆ ಮಾಡಿರಬಹುದು, ಯಾರುಮಾಡಿರಬಹುದು ಎಂಬ ಚಿಂತೆಮಾಡುತ್ತಲೇ, ಮತ್ತೆ ಒಳಪ್ರವೇಶಿಸಿದ ಆತ ಸುತ್ತಮುತ್ತಲೂ ಕಣ್ಣುಹಾಯಿಸಿದಾಗ, ಇವರ ವಂಶಸ್ಥರ ಶವಪೆಟ್ಟಿಗೆಗಳ ನಡುವೆ ಒಂದು ವಿಚಿತ್ರ ಚಿನ್ಹೆ ಗುರುತು ಮಾಡಿರುವ ಶವಪೆಟ್ಟಿಗೆ ಗೋಚರಿಸುತ್ತದೆ. ಅದು ತನ್ನ ಗತಿಸಿದ ವಂಶಸ್ಥರ ಶವಪೆಟ್ಟಿಗೆಯಂತೆ ಇರಲಿಲ್ಲವಾದುದರಿಂದ ಆತ ಆ ಶವಪೆಟ್ಟಿಗೆಯ ಮುಚ್ಚಳದ ಹಲಗೆಯನ್ನು ಸರಿಸಲು ನೋಡಿದಾಗ ಅದು ಯಾವುದೇ ಮೊಳೆಗಳಿಂದ ಭದ್ರಪಡಿಸಿರಲಿಲ್ಲವೆಂದು ತಿಳಿದುಬರುತ್ತದೆ. ಆ ಶವ-ಪೆಟ್ಟಿಗೆಯ ಬಾಯಿ ತೆರೆದುನೋಡಿದಾಗ ಆತ ತನ್ನ ಕಣ್ಣನ್ನು ತಾನೇ ನಂಬಲಸಾಧ್ಯವಾದ, ಅಗಣಿತ ಮುತ್ತು, ರತ್ನ, ವಜ್ರ ವೈಢೂರ್ಯ ನೋಟು

ನಾಣ್ಯಗಳಿಂದ ತುಂಬಿ ತುಳುಕುತ್ತಿರುತ್ತದೆ. ತುಸು ಯೋಚಿಸಿದಾಗ ಹೊಳೆಯುತ್ತದೆ ಆತನಿಗೆ ಅದರ ಅಸಲಿಯತ್ತು !

ಆ ಪ್ರದೇಶದಲ್ಲಿ ದರೋಡೆಕೃತ್ಯ ಎಸಗುತ್ತಿದ್ದ ಯಾವನೋ ಒಬ್ಬ ಕುಖ್ಯಾತ ದರೋಡೆಕೋರ, ತಾನು ಲೂಟಿಮಾಡಿದ ಸಂಪತ್ತನ್ನು ಈ ಶವಕೊಠಡಿಯಲ್ಲಿ ತಂದು ಇತರರಿಗೆ ತಿಳಿಯದಂತೆ ಮುಚ್ಚಿಡುತ್ತಿರುತ್ತಾನೆ. ಈ ಶವಕೊಠಡಿಯಲ್ಲಿ ಒಂದಾನೊಂದು ಕಾಲಕ್ಕೆ ಶವವಾಗಿಲ್ಲದ ಮತ್ತೊಬ್ಬ ಮನುಷ್ಯ ಬರುತ್ತಾನೆ ಎಂಬ ಕಲ್ಪನೆಯಾದರೂ ಆ ದರೋಡೆಕೋರನಿಗಿರಲು ಹೇಗೆ ತಾನೇ ಸಾಧ್ಯ? ಅವನ ದುರಾದೃಷ್ಟವೋ, ಈತನ ಅದೃಷ್ಟವೋ ಸತ್ತಿರದ ಈತನನ್ನು ಈತನ ಪತ್ನಿ ಹಾಗೂ ಸಂಬಂಧಿಗಳು ಶವಪೆಟ್ಟಿಗೆಯಲ್ಲಿಟ್ಟು ಈ ಶವಕೊಠಡಿಯಲ್ಲಿ ಹಾಕಿಹೋಗಿರುತ್ತಾರೆ. ತನ್ನ ಜೀವಮಾನದಲ್ಲೇ ಕಂಡಿರದಷ್ಟು ನಿಧಿಗೆ ಈತ ಈಗ ಒಡೆಯನಾಗಿರುತ್ತಾನೆ.

ಅತ್ತ ತನ್ನ ಪತ್ನಿ ತನ್ನ ಸಾವಿನ ನಂತರ ತನ್ನನ್ನು ನೆನೆನೆನೆದು ಎಷ್ಟು ದುಃಖಿಸುತ್ತಿರಬಹುದು ಎಂದು ಕುತೂಹಲಗೊಂಡ ಈತ ರಾತ್ರಿವೇಳೆಯಲ್ಲಿ ತನ್ನ ಮನೆಗೆ ಹೋಗಿ ಕಿಟಕಿಯಿಂದ ದುಃಖತಪ್ತ ಪತ್ನಿಯನ್ನು ಕಂಡು ನಂತರ ಅವಳನ್ನು ಸಂತೈಸಿ ಜರುಗಿದ ಘಟನೆಗಳನ್ನು ತಿಳಿಸಿ, ಅವಳೊಂದಿಗೆ ಮತ್ತೆ ತನ್ನ ಜೀವನ ನಡೆಸಲು ಆಲೋಚಿಸಿದ. ಈತ, ಅಂದು ರಾತ್ರಿಯವರೆಗೆ ಶವಕೊಠಡಿಯಲ್ಲೇ ತಂಗಿದ್ದು, ಕತ್ತಲಾದಮೇಲೆ ತನ್ನ ಮನೆಯತ್ತ ಹೆಜ್ಜೆಹಾಕುತ್ತಾನೆ. ತನ್ನ ಮನೆಯ ಕಾಂಪೌಂಡ್ ಗೋಡೆಹಾರಿ ತಾನು ತನ್ನ ಮಡದಿ ವಾಸಿಸುತ್ತಿದ್ದ ಕೊಠಡಿಯಲ್ಲಿ ಇಣುಕುತ್ತಾನೆ. ಶೋಕಸೂಚಕವಾದ ಕಪ್ಪು ವಸ್ತ್ರತೊಟ್ಟು, ತನ್ನ ಚಿತ್ರಪಟವನ್ನು ಎದುರಿಗಿಟ್ಟುಕೊಂಡು ದುಃಖಭರಿತಳಾಗಿ ಇರುವಳೆಂದು ತಿಳಿದಿದ್ದ ಈತನಿಗೆ ಅಲ್ಲಿನ ದೃಶ್ಯ ನೋಡಿ ಶಾಕ್ ಆಗುತ್ತದೆ. ತನ್ನ ಮಡದಿ ತನ್ನ ಆಪ್ತ ಗೆಳೆಯನೊಂದಿಗೆ ಪಲ್ಲಂಗದ ಮೇಲೆ ಸರಸವಾಡುತ್ತಿರುವ ದೃಶ್ಯ ಈತನಿಗೆ ಗೋಚರಿಸುತ್ತದೆ. ಈತನ ಮೈ ಕೋಪದಿಂದ ಉರಿದುಹೋಗಿ, ಆ ಕೂಡಲೆ ಮನೆಗೆ ನುಗ್ಗಿ ಇಬ್ಬರನ್ನೂ ಕೊಂದುಹಾಕಿಬಿಡಬೇಕೆನಿಸುತ್ತದೆ. ಆದರೆ ಅವನ ವಿವೇಕ ಅವನನ್ನು ಎಚ್ಚರಿಸುತ್ತದೆ. ತನ್ನೆಲ್ಲ ಕನಸುಗಳು ನುಚ್ಚುನೂರುಮಾಡಿದ ಈತನಿಗೆ ಏಕಕಾಲಕ್ಕೆ ತನ್ನ ಪತ್ನಿ ಮತ್ತು ತನ್ನಾಪ್ತ ಗೆಳೆಯನ ಮೇಲೆ ರೋಷ, ಪ್ರತೀಕಾರ ತೆಗೆದುಕೊಳ್ಳುವ ಛಲ ಉಂಟಾಗುತ್ತದೆ. ಪ್ರತೀಕಾರ ತೆಗೆದುಕೊಳ್ಳುವುದಂತೂ ಖಂಡಿತ. ಆದರೆ ಅದನ್ನು ಜಾಣತನದಿಂದ ತೆಗೆದುಕೊಳ್ಳಬೇಕೆಂದು ನಿರ್ಧರಿಸಿ, ತತ್‌ಕ್ಷಣಕ್ಕೆ ಯಾವುದೇ ಕ್ರಮಕೈಗೊಳ್ಳದ ಈತ ಮತ್ತೆ ಬಂದದಾರಿಯಲ್ಲೇ ತನ್ನ ಶವಕೊಠಡಿ ಸೇರಿಕೊಳ್ಳುತ್ತಾನೆ.

ಇದಾವುದರ ಅರಿವೂ ಇಲ್ಲದ ಆತನ ಪತ್ನಿ ಮತ್ತು ಆತನ ಆಪ್ತಮಿತ್ರ ಪ್ರೇಮ ಲೋಕದಲ್ಲಿ ವಿಹರಿಸುತ್ತಿರುತ್ತಾರೆ. ಹಗಲುಹೊತ್ತಿನಲ್ಲಿ ಶೋಕತಪ್ತಳಾಗಿರುವಂತೆ ಇರುವ ಆಕೆ, ಕತ್ತಲಾಗುತ್ತಿದ್ದಂತೆ ಇನಿಯನ ಆಗಮನವನ್ನು ಕಾತರದಿಂದ ನಿರೀಕ್ಷಿಸುತ್ತಿರುತ್ತಾಳೆ. ತನ್ನ ಪತಿ ಮತ್ತೆ ಜೀವಂತವಾಗಿ ಎದ್ದುಬರುವನೆಂದು ಈಕೆ ಹೇಗೆ ತಾನೆ ಊಹಿಸಿಯಾಳು ಅಲ್ಲವೇ?

ತನ್ನ ಪತ್ನಿ ಮತ್ತು ಆಪ್ತಮಿತ್ರನ ಮೇಲೆ ಪ್ರತೀಕಾರ ತೆಗೆದುಕೊಳ್ಳಲು ನಿರ್ಧರಿಸಿದ ಆತ ರಾತ್ರಿಯನ್ನು ಶವಕೊಠಡಿಯಲ್ಲೇ ಕಳೆದು ಮಾರನೇ ಬೆಳಿಗ್ಗೆ ಸಂಪತ್ತಿನಿಂದ ತುಂಬಿದ್ದ ಶವಪೆಟ್ಟಿಗೆಯಿಂದ ತನ್ನ ಜೋಬುಗಳಿಗೆ ಹಿಡಿಸುವಷ್ಟು ನಾಣ್ಯ ನೋಟುಗಳನ್ನು ತುಂಬಿಸಿಕೊಂಡು ಪೇಟೆಬೀದಿಗೆ ಬರುತ್ತಾನೆ. ಒಂದು ವಸ್ತ್ರ ಮಾರುವ ಅಂಗಡಿಯೊಳಗೆ ಹೋಗಿ ತನಗೆ ಹೊಸದಾಗಿ ಒಂದೆರಡು ಜೊತೆ ವಸ್ತ್ರಗಳನ್ನು ಖರೀದಿಸುತ್ತಾನೆ. ತನ್ನ ದೇಹದಳತೆಗೆ ಹೊಂದಿಕೆಯಾಗುತ್ತದೆಯೋ ಇಲ್ಲವೋ ತಿಳಿಯಲು ಆ ವಸ್ತ್ರಗಳ ಸಮೇತ ಅಂಗಡಿಯಲ್ಲಿನ ಉಡುಪು ಬದಲಿಸುವ ಕೊಠಡಿಗೆ ಪ್ರವೇಶಿಸುತ್ತಾನೆ. ಹಳೆ ದಿರಿಸು ಬಿಚ್ಚಿ, ಹೊಸದಿರಿಸು ತೊಟ್ಟು ನಿಲುವುಗನ್ನಡಿಯಲ್ಲಿ ತನ್ನನ್ನು ತಾನೇ ನೋಡಿಕೊಳ್ಳುತ್ತಾನೆ. ಅರೆ ಅಲ್ಲಿರುವವನು ಬೇರೆಯವನೇ ಆದ ಮತ್ತೊಬ್ಬ ವ್ಯಕ್ತಿ! ಕನ್ನಡಿಯಲ್ಲಿ ಕಂಡ ಮುಖ ಈತನ ಮುಖಕ್ಕಿಂತ ತೀರ ಭಿನ್ನವಾಗಿತ್ತು. ಮೊದಲಿಗೆ ಕಡುಕಪ್ಪಾಗಿದ್ದ ಆತನ ತಲೆಗೂದಲು ಪೂರ್ಣವಾಗಿ ಬಿಳುಪಾಗಿತ್ತು. ಕಪ್ಪು ಕಣ್ಣುಗಳು ಕಳೆಗುಂದಿರುತ್ತವೆ. ಈ ಬದಲಾವಣೆಗೆ ಕಾರಣ ಆತ ಶವಪೆಟ್ಟಿಗೆಯಲ್ಲಿ ಇದ್ದೇನೆಂಬುದು ಅರಿವಾದ ಕ್ಷಣ ಉಂಟಾದ ಆತಂಕ, ತಲ್ಲಣ, ಗಾಬರಿ ಇತ್ಯಾದಿ. ಕಣ್ಣಿಗೆ ಒಪ್ಪುವಂತ ಒಂದು ತಂಪು ಕನ್ನಡಕ ಕೊಂಡ, ತಕ್ಷಣ ಗುರುತು ಸಿಗದಿರಲೆಂಬ ಕಾರಣಕ್ಕೆ ! ಈ ಬದಲಾವಣೆಯೂ ತನ್ನ ಪ್ರತೀಕಾರಕ್ಕೆ ಅನುಕೂಲಕರವಾದುದು ಎಂಬ ತೀರ್ಮಾನಕ್ಕೆ ಬಂದವನೇ ಆತ ತನ್ನ ಶವಕೊಠಡಿಗೆ ವಾಪಸಾದ. ಶವಕೊಠಡಿಯನ್ನೇ ತನ್ನ ಆವಾಸಸ್ಥಾನ ಮಾಡಿಕೊಂಡ ಆತ ಹಗಲಿನ ಹೊತ್ತು ಪೇಟೆ ಬೀದಿಗಳಲ್ಲಿ ಓಡಾಡುತ್ತಾ ಕಾಲಕಳೆಯತೊಡಗಿದ. ಹಾಗೇ ಕೆಲದಿನಗಳ ನಂತರ ಸ್ಥಳೀಯ ಪತ್ರಿಕೆಗಳಲ್ಲಿ ಒಂದು ಜಾಹಿರಾತು ನೀಡಿದ. "ಪಟ್ಟಣಕ್ಕೆ ಪರಸ್ಥಳದಿಂದ ಒಬ್ಬ ಆಗರ್ಭ ಶ್ರೀಮಂತ ಆಗಮಿಸಿದ್ದಾನೆ. ಅವನು ಅಮೂಲ್ಯ ಹರಳುಗಳನ್ನು ಮಾರುವವನಿದ್ದಾನೆ." ಅಪೂರ್ವ ಅಮೂಲ್ಯ ಹರಳುಗಳಲ್ಲಿ ಆಸಕ್ತಿಹೊಂದಿದ್ದ ಆಕೆ ಇವನನ್ನು ಹುಡುಕಿಕೊಂಡು ಬಂದೇಬರುವಳೆಂದು ಈತನಿಗೆ ಗೊತ್ತಿತ್ತು, ಹಾಗಾಗಿ ಈ ಜಾಹಿರಾತು ನೀಡಿದ್ದು,

ಅವನ ಎಣಿಕೆಯಂತೆಯೇ ಕೆಲವು ದಿನಗಳ ನಂತರ ಆಕೆ ಅವನ ಅಂಗಡಿಗೆ ಬರತೊಡಗಿದಳು. ಹೀಗೆ ತನ್ನ ಮಡದಿಯನ್ನೇ ಹೊಸ ಗೆಳತಿ ಮಾಡಿಕೊಂಡು ಆಕೆಗೆ ಕೆಲವು ಅಮೂಲ್ಯ ಹರಳುಗಳನ್ನು ಉಡುಗೊರೆಯಾಗಿ ನೀಡಿದನು. ಹೀಗೇ ಮಾಡುತ್ತಾ ಅವಳ ಗೆಳೆಯನಿಂದ ದೂರಮಾಡಿ ತನ್ನ ಬಳಿಗೆ ಸೆಳೆದುಕೊಂಡನು.

ಇವನ ಹೆಂಡತಿಗೂ ಇವನ ಸ್ನೇಹ ಪ್ರಾರಂಭವಾದಾಗಿನಿಂದ ಏನೋ ಸಂದೇಹ. ಈತ ತನ್ನ ಗತಿಸಿದ ಪತಿಯ ಹೋಲಿಕೆ ಹೊಂದಿದ್ದವನು. ಅವನದೇ ರೂಪು, ಮೈಕಟ್ಟು, ಆದರೂ ಅವನು ಸತ್ತುಹೋಗಿದ್ದಾನೆ, ತಾನೇ ಖುದ್ದಾಗಿ ಅವನನ್ನು ಶವಪೆಟ್ಟಿಗೆಯಲ್ಲಿ ಮಲಗಿಸಿದುದನ್ನು ಕಣ್ಣಾರೆ ಕಂಡಿದ್ದಾಳೆ. ಇವನ ಗೆಳೆತನ ಹತ್ತಿರವಾದಷ್ಟೂ ಮಾಜೀ ಪ್ರಿಯಕರನಿಂದ ದೂರವಾಗತೊಡಗಿದಳು. ಏಕೆಂದರೆ ಆಕೆಗೆ ವ್ಯಕ್ತಿಗಳಿಗಿಂತ ಅವರ ಸಂಪತ್ತೇ ಅತಿಮುಖ್ಯ. ಇವನಿಗೂ ಅಷ್ಟೇ ಬೇಕಾಗಿದ್ದುದು. ಪ್ರಿಯಕರನಿಂದ ಆಕೆಯನ್ನು ದೂರೀಕರಿಸಿ ತನ್ನವಳಾಗಿ ಮಾಡಿಕೊಳ್ಳುವುದು. ಅವಳ ಪ್ರಿಯಕರನಿಗೂ ಅದೇ ರೀತಿ ಆತನಿಗೆ ಈತನ ಬಗೆಗೆ ಸಂದೇಹ ಬಂದುದುಂಟು. ಆದರೆ ಮೈಕಟ್ಟು ಅದೇ ಇದ್ದರೂ ಈತನೇ ಬೇರೆ. ಪ್ರಪಂಚದಲ್ಲಿ ಒಂದೇ ಹೋಲಿಕೆಯುಳ್ಳ ಏಳು ಮಂದಿಯಿರುತ್ತಾರಂತೆ! ಆ ನಂಬಿಕೆ ಮೇಲೆ ಈತನೇ ಬೇರೆ ಎಂಬ ತೀರ್ಮಾನಕ್ಕೆ ಬಂದಿದ್ದ ಗೆಳೆಯ. ಒಮ್ಮೆ ಮೂವರೂ ಒಂದು ಹೋಟಲಿನಲ್ಲಿ ಔತಣಕೂಟದಲ್ಲಿ ಸೇರಿದ್ದಾಗ ಯಾವುದೋ ಕ್ಷುಲ್ಲಕ ಕಾರಣಕ್ಕೆ ಜಗಳತೆಗೆದು ದೊಡ್ಡ ರಂಪ ಮಾಡಿದ. ಆತನ ಆತ್ಮಾಭಿಮಾನಕ್ಕೆ ಪೆಟ್ಟುಕೊಟ್ಟು, ಆತನನ್ನು ಆ ದಿನಗಳಲ್ಲಿ ರೂಢಿಯಲ್ಲಿದ್ದ ಶೂಟಿಂಗ್ ಪಂದ್ಯಕ್ಕೆ ಆಹ್ವಾನಕೊಟ್ಟ. ಒಪ್ಪಂದದಂತೆ ಗೊತ್ತುಪಡಿಸಿದ ದಿನದಂದು ಇಬ್ಬರೂ ಒಂದು ಬಯಲಲ್ಲಿ ಎದುರುಬದುರಾದರು. ಮಧ್ಯ ಬಿಂದುವಿನಿಂದ ವಿರುದ್ಧ ದಿಕ್ಕಿನಲ್ಲಿ ಹತ್ತು ಹೆಜ್ಜೆ ಚಲಿಸಿ ಹಿಂತಿರುಗಿ ಗುಂಡುಹಾರಿಸಬೇಕಾಗಿತ್ತು. ಹೆಜ್ಜೆ ಲೆಕ್ಕಹಾಕತೊಡಗಿದರು. ಈತ ಒಂಬತ್ತನೇ ಹೆಜ್ಜೆಗೇ ತಿರುಗಿನಿಂತುಕೊಂಡು ತನ್ನ ಕನ್ನಡಕ ತೆಗೆದ. ಹತ್ತನೇ ಹೆಜ್ಜೆ ಮುಗಿಸಿ ಇವನ ಕಡೆ ತಿರುಗಿದ ಗೆಳೆಯನಿಗೆ ತನ್ನ ಗತಿಸಿದ ಗೆಳೆಯನ ದರ್ಶನವಾಯಿತು, ಪಿಸ್ತೂಲು ಹಿಡಿದ ಕೈ ನಿಶ್ಚಲವಾಯಿತು. ಒಡನೆ ಈತ ತನ್ನ ಪಿಸ್ತೂಲು ತೆಗೆದುಕೊಂಡು ಗೆಳೆಯನತ್ತ ಮೂರು ಸುತ್ತು ಗುಂಡು ಹಾರಿಸಿದ. ಅವನ ಕೋಟಿಗೆ ಅವನ ಗೆಳತಿ ಸಿಕ್ಕಿಸಿದ್ದ ಶ್ವೇತ ಗುಲಾಬಿ ರಕ್ತವರ್ಣಕ್ಕೆ ತಿರುಗಿ ಗೆಳೆಯ ಸ್ಥಳದಲ್ಲೇ ಶವವಾದ.

ಅಲ್ಲೇ ನಿಂತಿದ್ದ ಪತ್ನಿ ಪ್ರಿಯಕರನ ಸಾವಿನಿಂದ ವಿಚಲಿತಳಾಗದ ಆಕೆ ತನ್ನ ಹೊಸ ಗೆಳೆಯನ ಬಳಿ ಸಾಗಿ ಆತನನ್ನು ಕರೆದೊಯ್ಯಲಿಕ್ಕೆ ಮುಂದಾದಳು.

ರಾತ್ರಿ ಮನೆಗೆ ಆಹ್ವಾನಿಸಿದಳು. ಈತ ಹೂಂಗುಟ್ಟಿ ತೆರಳಿದ. ಅಂದು ರಾತ್ರಿ ಅವರಿಬ್ಬರೂ ಸೇರಿದಾಗ ಈತ ತನ್ನ ಗತಜೀವನವನ್ನು ಅವಳ ಮುಂದೆ ಬಿಚ್ಚಿಡುತ್ತ ಬಂದ. ಕೊನೆಗೆ ತಾನೇ ಅವಳ ನಿಜವಾದ ಪತಿ ಎಂಬುದನ್ನು ಮನದಟ್ಟುಮಾಡಿ ಅವಳ ವ್ಯಭಿಚಾರಗಳನ್ನು ಒಂದೊಂದಾಗಿ ವಿವರಿಸತೊಡಗಿದ. ಕೊನೆಗೆ ಆಕೆಯನ್ನೂ ಗುಂಡುಹಾರಿಸಿಕೊಂದ. ಅಲ್ಲಿಗೆ ಕಥೆ ಮುಕ್ತಾಯ.

ಹಿಂದೆ ಯಾವಾಗಲಾದರೂ ಓದಿದ ಯಾವುದಾದರೂ ಕಾದಂಬರಿ, ಹಿಂದೆ ಯಾವಾಗಲಾದರೂ ನೋಡಿದ ಚಲನಚಿತ್ರ ನೆನಪಿಗೆ ಬರಬಹುದು. ಪ್ರಯತ್ನಿಸಿನೋಡಿ.

13-4-2017

* * * * *

# ಲೇಖನ – 2

## ಗೆಳೆತನ

A friend in need is a friend indeed ಇದು ಹಳೇ ನಾಣ್ಣುಡಿ. ಇದೀಗ ತಾನೇ ಸ್ನೇಹ ದಿನಾಚರಣೆ ಮುಕ್ತಾಯವಾಗಿದೆ. ಸ್ನೇಹ ಅಂದರೆ ಗೆಳೆತನ. ಆದುದರಿಂದ ಈ ಗೆಳೆತನದ ಬಗೆಗೆ ನನ್ನ ಆಲೋಚನಾ ಲಹರಿ ಹರಿದ ಪರಿಯೇ ಈ ಲೇಖನ. ಗೆಳೆತನ ಪ್ರಾರಂಭವಾಗುವುದು ಯಾವಾಗ, ಯಾರೊಂದಿಗೆ ಅನ್ನುವುದರ ಮೇಲೆ ಆ ಗೆಳೆತನ ಖಾಯಂ ಆಗಿ ನಿಲ್ಲಲಿರುವುದೋ, ಅಥವಾ ತಾತ್ಕಾಲಿಕವೋ ಅನ್ನುವ ನಿರ್ಧಾರವಾಗುತ್ತದೆ. ಕೆಲವರು ಕೆಲವು ಹಿಡನ್ ಅಜೆಂಡಾ ಇಟ್ಟುಕೊಂಡು ಗೆಳೆತನ ಬಯಸುತ್ತಾರೆ. ಅವರ ಉದ್ದೇಶ ಗೊತ್ತಾದಕೂಡಲೇ ಅವರ ಗೆಳೆತನಕ್ಕೆ ಇತಿಶ್ರೀ ಆಗಿಬಿಡುತ್ತದೆ.

ಗೆಳೆತನ ಪ್ರಾರಂಭವಾಗುವುದು ಅಕ್ಕಪಕ್ಕದ ಮನೆಯಲ್ಲಿ ವಾಸಮಾಡುವ ಒಂದೇ ವಯಸ್ಸಿನವರ ನಡುವೆ ಅಥವಾ ಶಾಲಾ ಸಹಪಾಠಿಗಳ ನಡುವೆ ಇರಬಹುದು ಅಥವಾ ಸಹೋದ್ಯೋಗಿಗಳ ನಡುವೆ ಇರಬಹುದು. ಸಹೋದ್ಯೋಗಿಗಳ ನಡುವಿನ ಗೆಳೆತನಕ್ಕೆ ವಯೋಮಿತಿ ಇರುವುದಿಲ್ಲ. ವಿಷ್ಣುವರ್ಧನನ ಒಂದು ಸಿನಿಮಾದಲ್ಲಿ ಮೊಮ್ಮೊಗನನ್ನೇ ಗೆಳೆಯನಾಗಿ ಮಾಡಿಕೊಂಡುದು ನಿಮಗೂ ತಿಳಿದಿರಬಹುದು. ನನಗೇ ನನಗಿಂತ 20ಕ್ಕೂ ಹೆಚ್ಚು ವಯಸ್ಸಿನ ಗೆಳೆಯ ಇದ್ದಾನೆ. ಒಂದು ಸಂಸ್ಥೆ ಅಥವಾ ಸಾಮಾಜಿಕ ಉದ್ದೇಶದಿಂದ ಸ್ಥಾಪಿತವಾದ ಸಮೂಹಕ್ಕೆ ಸೇರಿದವರ ನಡುವೆ ಗೆಳೆತನ ಏರ್ಪಡಬಹುದು. ಗೆಳೆತನಕ್ಕೆ ಸಾಮಾಜಿಕ

ಚಟುವಟಿಕೆಗಳೂ ಕಾರಣವಾಗುತ್ತಿವೆ. ಅದು ಗೆಳೆತನಕ್ಕಷ್ಟೇ ಸೀಮಿತವಾಗಿರದೆ ವೈಯುಕ್ತಿಕ ಸಂಬಂಧಗಳಿಗೂ ವಿಸ್ತರಿಸಬಹುದು.

ಬಾಲ್ಯದ ಗೆಳೆತನ ಜೀವನಪರ್ಯಂತ ಉಳಿಯುವಂತಹುದು. ಗೆಳೆಯರು ನಾನಾ ಕಾರಣಗಳಿಂದ ದೂರದೂರುಗಳಿಗೋ, ದೂರದೇಶಕ್ಕೋ ಹೋದರೂ ಸಹ ಅವರ ಗೆಳೆತನಕ್ಕೆ ಯಾವುದೇ ಭಂಗಬರಲಾರದು. ಹಲವಾರು ವರ್ಷಗಳ ನಂತರ ಭೇಟಿಯಾದರೂ ಸಹಾ ಮೊದಲ ಭೇಟಿಯಲ್ಲಿ ಕಂಡಿದ್ದ ಆತ್ಮೀಯತೆ, ಸಲುಗೆ ಮುಂದುವರೆದಿರುತ್ತದೆ.

ಗೆಳೆಯ ಗೆಳತಿ ಗೆಳೆತನ ಸಾಮಾನ್ಯವಾಗಿ ಪ್ರಾಥಮಿಕ ಶಾಲೆಯಿಂದ ಹಿಡಿದು ಅವರು ಪ್ರೌಢಾವಸ್ಥೆಗೆ ಬರುವವರೆಗೆ ಯಾವುದೇ ಭೇದವಿಲ್ಲದೇ ಮುಂದುವರೆಯುತ್ತದೆ. ಒಮ್ಮೆ ಹೆಣ್ಣುಮಕ್ಕಳು ಋತುಮತಿಯರಾದರೆಂದರೆ ಗಂಡುಮಕ್ಕಳ ಜೊತೆಗಿನ ಗೆಳೆತನಕ್ಕೆ ಹಿರಿಯರೇ ತಡೆ ಒಡ್ಡಲಾರಂಭಿಸುತ್ತಾರೆ. ಅವರಿಗೆ ಯಾವುದೇ ಅಚಾತುರ್ಯ ನಡೆಯಬಾರದೆಂಬ ಆತಂಕ. ಹಿಂದೆಲ್ಲ ಹೆಣ್ಣುಮಕ್ಕಳು ಋತುಮತಿಯರಾದಕೂಡಲೆ ಅವರಿಗೆ ಮದುವೆ ಮಾಡಿಬಿಡುತ್ತಿದ್ದರು. ಇಂದು ಪರಿಸ್ಥಿತಿ ಬದಲಾಗಿದೆ. ವಯಸ್ಕ ಗಂಡುಮಕ್ಕಳು ಹೆಣ್ಣುಮಕ್ಕಳೂ ಕೂಡಿಯೇ ಸಿನಿಮಾಗಳಿಗೆ, ಕ್ಯಾಂಟೀನುಗಳಿಗೆ, ಚಾರಣಕ್ಕೆ, ವಿದ್ಯಾಭ್ಯಾಸಕ್ಕೆ ಹೋಗುವುದು ಸಾಮಾನ್ಯ ಸಂಗತಿ ಆಗಿಬಿಟ್ಟಿದೆ. ನಮ್ಮಂತ ಹಿಂದಿನ ಕಾಲದ ಹಿರಿಯರಿಗೆ ಇವು ಪಥ್ಯವಲ್ಲದಿದ್ದರೂ ಅನಿವಾರ್ಯವಾಗಿ ಸಹಿಸಿಕೊಂಡು ಹೋಗಬೇಕಿದೆ. ಈ ಜನರೇಶನ್ ಗ್ಯಾಪ್ ಎನ್ನುವುದು ಎಲ್ಲ ಕಾಲದಲ್ಲೂ ಕಂಡುಬರುವಂತಹುದು. ಪ್ರಖ್ಯಾತ ಹಿಂದಿ ಚಲನಚಿತ್ರ ನಟ ರಾಜಕಪೂರ್ 'ಕಲ್ ಆಜ್ ಔರ್ ಕಲ್' ಎನ್ನುವ ಚಲನಚಿತ್ರದಲ್ಲಿ ಈ ಜನರೇಶನ್ ಗ್ಯಾಪ್ ಬಗೆಗೆ ಬಹಳ ಚೆನ್ನಾಗಿ ನಟಿಸಿದ್ದಾನೆ. ಒಂದು ಕಡೆ ಅಪ್ಪನ ಸಂಪ್ರದಾಯ ಕಡೆಗಣಿಸುವಂತಿಲ್ಲ ಮತ್ತೊಂದೆಡೆ ಮಗನ ಆಧುನಿಕತೆಗೆ ಒಗ್ಗಿಕೊಳ್ಳಲು ಆಗುವುದಿಲ್ಲ. ಇಂತಹ ಪ್ರಸಂಗ ಅಪ್ಪ ಅಮ್ಮನನ್ನು ದೂರೀಕರಿಸಿ ಬದುಕು ಸಾಗಿಸುತ್ತಿರುವವರನ್ನು ಹೊರತುಪಡಿಸಿ, ಅಪ್ಪ ಅಮ್ಮಂದಿರ ಜೊತೆಗೆ ವಾಸಿಸುತ್ತಿರುವವರೆಲ್ಲರ ಜೀವನದಲ್ಲೂ ಕಾಮನ್.

ಎದುರು ಸಿಕ್ಕಾಗ ಹಾಯ್ ಬಾಯ್ ಎನ್ನುವ ಗೆಳೆಯರು ಬಹಳ ಮಂದಿ ಸಿಗಬಹುದು. ಆದರೆ ಆಪತ್ಕಾಲಕ್ಕೆ ಆಗುವ ಗೆಳೆಯರು ಬಲು ಅಪರೂಪ. ನಿಜವಾದ ಗೆಳೆಯ ಅಂದರೆ ನ್ಯಾಯಾನ್ಯಾಯಗಳ ಗೊಡವೆಗೆ ಹೋಗದೆ ತನ್ನ ಗೆಳೆಯನ ಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಾನೆ. ಕೆಲವರು ಧನಸಹಾಯ ಮಾಡಬಹುದು. ಮತ್ತೆ ಕೆಲ ಗೆಳೆಯರು ಸಾಂತ್ವನದ ನುಡಿಗಳನ್ನು, ಬುದ್ಧಿಮಾತನ್ನೂ

ಹೇಳಬಹುದು. ಕೆಲವು ಗೆಳೆಯರು ಒಂದೂ ಮಾತನ್ನಾಡದೇ ಹಲವಾರು ಘಂಟೆಗಳು ಸುಮ್ಮನೇ ಮೌನವಾಗಿ ಕುಳಿತು ಕಾಲಕಳೆಯಬಹುದು. ಕೆಲವೊಮ್ಮೆ ನಿಮಗನ್ನಿಸಿರಬಹುದು ಯಾಕಾದರೂ ಈ ವ್ಯಕ್ತಿ ಬಂದನೋ ಎಂದು. ಅವರ ಸಾಮೀಪ್ಯವೇ ನಮಗೆ ಅಸಹನೀಯವಾಗಿರುತ್ತದೆ.

ಸಾಮಾಜಿಕ ಜಾಲತಾಣಗಳ ಗೆಳೆತನ ಮೋಸದಾಯಕವಾದುದೂ ಆಗಿರಬಹುದು ಎಂಬುದಕ್ಕೆ ಇಲ್ಲಿದೆ ಒಂದು ತಾಜಾ ಉದಾಹರಣೆ. ಜಾಲತಾಣಮೂಲಕ ಗೆಳೆತನ ಆದ ಒಬ್ಬ ಮಹಿಳೆಗೆ ಕೆಲದಿನಗಳ ನಂತರ ಆ ಅದೃಶ್ಯ ಗೆಳೆಯನಿಂದ ಜನುಮದಿನದ ಉಡುಗೊರೆ ಕಳುಹಿಸಿರುವುದಾಗಿ ಸಂದೇಶ ಬಂದಿತು. ಈ ಮಹಿಳೆಗೆ ಎಲ್ಲಿಲ್ಲದ ಸಂಭ್ರಮ. ಗೆಳೆತನ ಎಂದರೆ ಹೀಗಿರಬೇಕು ಎಂದು ಇತರ ಗೆಳತಿಯರೊಂದಿಗೆ ಕೊಚ್ಚಿಕೊಂಡಿದ್ದೂ ಕೊಂಡಿದ್ದ, ಇಂದು ಬರಬಹುದು ನಾಳೆ ಬರಬಹುದು ಎಂದು ಕಾದಿದ್ದ ಮಹಿಳೆಗೆ ಕೆಲದಿನಗಳ ನಂತರ ನಿಮಗೆ ಬಂದಿರುವ ಉಡುಗೊರೆ ತುಂಬ ಭಾರವಾದುದಾಗಿದೆ, ಅಂತರ ರಾಷ್ಟ್ರೀಯ ಕಾನೂನಿನ ಪ್ರಕಾರ ಅದರ ಅಂಚೆವೆಚ್ಚಕ್ಕೆ 25,000 ರೂ. ಖರ್ಚಾಗುತ್ತದೆ. ಈ ಕೂಡಲೆ ತಿಳಿಸಿರುವ ಬ್ಯಾಂಕ್ ಖಾತೆಗೆ ಹಣ ಜಮಾಮಾಡುವುದು ಎಂಬ ಸಂದೇಶ ರವಾನೆಯಾಯಿತು. ತುಂಬಾ ಬೆಲೆಬಾಳುವ ಉಡುಗೊರೆಯೇ ಇರಬೇಕು ಆದುದರಿಂದ 25,000 ರೂ. ಕಟ್ಟಿಬಿಡೋಣ ಎಂದು ಹಣವನ್ನು ಬ್ಯಾಂಕ್ ಖಾತೆಗೆ ಕಟ್ಟಿದ್ದೂ ಆಯಿತು. ಇದಾದ ಒಂದು ವಾರದ ನಂತರ ಮತ್ತೊಂದು ಸಂದೇಶ ಬಂದಿತು. ಅಂತರರಾಷ್ಟ್ರೀಯ ವಿನಿಮಯ ಕಾನೂನು ಅಡಿಯಲ್ಲಿ ಉಡುಗೊರೆಯ ಮೌಲ್ಯ ಮಿತಿಗಿಂತ ಹೆಚ್ಚಾಗಿರುವುದರಿಂದ ಅದಕ್ಕಾಗಿ ಹೆಚ್ಚುವರಿ ಶುಲ್ಕ ಪಾವತಿಸಬೇಕಾದುದು ಕಡ್ಡಾಯ. ಉಡುಗೊರೆ ನಿಮ್ಮ ಹೆಸರಿಗೆ ಬರುತ್ತಿರುವುದರಿಂದ ಬ್ಯಾಂಕಿನ ಖಾತೆಗೆ ಮತ್ತೆ 50,000 ರೂ. ಪಾವತಿಸಿ ಎಂಬ ಸಂದೇಶಕ್ಕೆ ಅನುಗುಣವಾಗಿ ಆ ಮೊತ್ತವನ್ನೂ ಪಾವತಿಸಿದರು ಮಹಿಳೆ. ಮತ್ತೆ ಮೂರುದಿನಗಳ ನಂತರ ಮತ್ಯಾವುದೋ ಕಾರಣ ಹೇಳಿ 125,000 ರೂ. ಪಾವತಿಸಲು ಸಂದೇಶ ಬಂದಾಗ ಶುರುವಾಯಿತು ಸಣ್ಣ ಅನುಮಾನ! ಗೆಳೆಯ ವಕೀಲರ ಬಳಿ ತೆರಳಿ ಆಗಿರುವ ಸಂಗತಿ ತಿಳಿಸಿದಾಗ ಆತ ಇದು ಫೋಖಾ ಕೇಸು, ಇನ್ನೊಂದು ಪೈಸೆಯನ್ನೂ ಕೊಡಬೇಡಿ, ಮೊದಲು ಪೋಲೀಸರಲ್ಲಿ ದೂರುದಾಖಲಿಸಿ ಎಂಬ ಸಲಹೆ ಬಂತು. ಆ ಜಾಲತಾಣದ ಗೆಳೆಯನನ್ನು ಸಂಪರ್ಕಿಸಲು ಮಾಡಿದ ಎಲ್ಲ ಪ್ರಯತ್ನಗಳೂ ವಿಫಲವಾಗಿದ್ದವು. ಆದುದರಿಂದ ಮಿತ್ರರೇ ಜಾಲತಾಣದ ಜಾಲದಲ್ಲಿ ಸಿಲುಕುವ ಮೊದಲು ಆಲೋಚಿಸಿ.

ಇಂದಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಗೆಳೆಯರ ನಡುವಿನ ಸಂಪರ್ಕ, ಸಂವಹನ ಬಲು ಸುಲಭ. ದಿನ ಬೆಳಗಾದರೆ, ರಾತ್ರಿ ಮಲಗುವ ಮುನ್ನ ಗುಡ್ ಮಾರ್ನಿಂಗುಗಳು, ಗುಡ್ ನೈಟುಗಳು ಸಾಮಾನ್ಯ. ಆದರೆ ಅದರ ಹಿಂದೆ ನಿಜವಾದ ಕಾಳಜಿ ಎಷ್ಟರಮಟ್ಟಿಗಿರುತ್ತದೆ ಎನ್ನುವುದು ಪ್ರಶ್ನಾರ್ಹ ವಿಚಾರ. ಜನ್ಮದಿನವಾಗಲೀ, ಪರೀಕ್ಷೆಗಳಲ್ಲಿ ತೇರ್ಗಡೆ ಆದಾಗಲಾಗಲೀ, ಶುಭಸಮಾರಂಭಗಳಲ್ಲಿ ಒಂದು ಎಸ್‌ಎಂಎಸ್ ಒಗೆದುಬಿಟ್ಟರೆ ಮುಗಿದುಹೋಯಿತು ಅವರ ಕಾಳಜಿ. ಫೇಸ್ ಟು ಫೇಸ್ ಆಗುವುದಕ್ಕಂತ ಫೇಸ್ ಬುಕ್‌ನಲ್ಲೇ ಬಹುತೇಕ ಶುಭಾಶಯಗಳು ವಿನಿಮಯ ಆಗಿಬಿಡುತ್ತಿವೆ ಈ ಕಾಲದಲ್ಲಿ. ಅದರಲ್ಲೂ ಆ ಮೆಸೇಜುಗಳೂ ಪೂರ್ಣ ವಾಕ್ಯಗಳೂ ಆಗಿರುವುದಿಲ್ಲ. 'ಹೆಚ್ ಬಿ ಡಿ' ಇದು ಹ್ಯಾಪಿ ಬರ್ತ್‌ಡೇ ಎನ್ನುವುದನ್ನು ಬರೆಯುವ ರೀತಿ. 'ಜಿಎಂ' 'ಜಿಎನ್' ಇವು ಗುಡ್‌ಮಾರ್ನಿಂಗ್ ಗುಡ್ ನೈಟ್‌ಗಳ ಹ್ರಸ್ವರೂಪಗಳು. 'ಆರ್ ಐ ಪಿ' ಇದು ಶೋಕ ಸಂದೇಶ. ಇದರ ವಿಸ್ತರಣೆ 'ರೆಸ್ಟ್ ಇನ್ ಪೀಸ್' ಅಗಲಿದ ಆತ್ಮಕ್ಕೆ ಶಾಂತಿಸಿಗಲಿ ಎಂಬುದು. ಈ ಆರ್.ಐ.ಪಿ ಇನ್ನೊಂದು ವಿಸ್ತಾರ 'ರಿಪ್ಲೈ ಇಫ್ ಯು ಪ್ಲೀಸ್' ಎಂದೂ ಉಂಟು. 'ದ' ಎಂಬ ಪದಕ್ಕೆ 'ಡಿ' ಎಂಬ ಅಕ್ಷರ ಪ್ರಯೋಗಿಸಲ್ಪಡುತ್ತಿದೆ. ಒಂದು ವಾಕ್ಯವನ್ನೂ ಪೂರ್ಣವಾಗಿ ಬರೆಯದೇ ಮೂರು ನಾಲ್ಕು ಅಕ್ಷರಗಳಲ್ಲೇ ಸಂದೇಶ ಕಳಿಸುವವರ ಮನಸ್ಥಿತಿ ಹೇಗಿರುತ್ತದೆ ಎಂಬ ಬಗ್ಗೆ ನಿಮ್ಮ ಪ್ರತಿಕ್ರಿಯೆ ಹೇಗಿರುತ್ತದೆ?

10-8-2016

* * * * *

## ಲೇಖನ – 3

# ಬೋಳೇ ಮಾನವ

ಹುಡುಕಿದರೆ ಸಿಗಬಹುದಾದ ಎಲ್ಲೋ ಕೆಲವರು ಅಂತಹವರಿರುತ್ತಾರೆ. ಸತ್ಯ ಹರಿಶ್ಚಂದ್ರನ ವಂಶಜರು ! ಇಂತಹವರರಿಗೆ ಸುಳ್ಳು ಹೇಳುವುದೆಂದರೆ ಗಂಟಲಲ್ಲಿ ಏನೋ ಸಿಕ್ಕಿಹಾಕಿಕೊಂಡಂತೆ. ಎಲ್ಲ ಕಡೆಯೂ ಸತ್ಯ ಹೇಳಲು ಹೋಗಿ ಪೇಚಿಗೆ ಸಿಕ್ಕಿಹಾಕಿಕೊಳ್ಳುವುದೂ ಉಂಟು, 'ತಾನೂ ತಿನ್ನೊಲ್ಲ, ತಿನ್ನೋದಕ್ಕೂ ಬಿಡೊಲ್ಲ' ಅಂತ ಇತರರಿಂದ ಶಪಿಸಿಕೊಂಡುದೂ ಉಂಟು. ನಿಜ ತಿಂದವನು ಜೀರ್ಣಿಸಿಕೊಳ್ಳಲೂಬೇಕು, ಆ ಸಾಮರ್ಥ್ಯ ಇಲ್ಲದವನು ತಿನ್ನೋಕೆ ಹೋಗಬಾರದು. ಎಲ್ಲಿ ತಿನ್ನುವುದೇ ಕೆಲಸವೋ ಅಂತಹ ವಾತಾವರಣದಲ್ಲಿ ಕಾಲಿಡಬಾರದು.

ನಮ್ಮ ತಿಪ್ಪಣ್ಣನೂ ಅಂತಹ ಜಾತಿಗೆ ಸೇರಿದವನೇ. ವಿದ್ಯಾರ್ಥಿ ದೆಸೆಯಲ್ಲಿಯೇ ಗುರುಗಳು 'ಯಾಕೋ ತಿಪ್ಪ ಹೋಂವರ್ಕಿನಲ್ಲಿ ಇಷ್ಟೊಂದು ತಪ್ಪಿದೆ' ಎಂದಾಗ ಆತ, 'ಗುರುಗಳೇ ಈ ಹೋಂವರ್ಕ್ ಮಾಡಿದ್ದು ನನ್ನ ಅಪ್ಪ ಮತ್ತು ಅಮ್ಮ ಎನ್ನಬೇಕೇ! ವ್ಯಾಪಾರಮಾಡುವಾಗ ಅಕಸ್ಮಾತ್ ಕಣ್ತಪ್ಪಿನಿಂದ ಹೆಚ್ಚು ಹಣ ವಾಪಸ್ಸುಮಾಡಿದ್ದ ಸಂದರ್ಭದಲ್ಲೂ, ನಿಯತ್ತಾಗಿ ಹೆಚ್ಚುವರಿ ಹಣ ವಾಪಸ್ಸುಮಾಡಿದ್ದ ಪ್ರಸಂಗಗಳೂ ಇಲ್ಲದಿಲ್ಲ. ಆ ರೀತಿ ಬೆಳೆದ ತಿಪ್ಪಣ್ಣ ಪದವಿ ಮುಗಿಸಿ ಉನ್ನತ ವ್ಯಾಸಂಗಕ್ಕೆ ಹೋದಾಗಲೂ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಾಗ, ತನ್ನ ಇತರ ಸಹಪಾಠಿಗಳು,

ಅಧ್ಯಾಪಕರ ಬಳಿಹೋಗಿ ಕಡಿಮೆಬಿದ್ದಿದ್ದ ಅಂಕವನ್ನು ಹೆಚ್ಚಿಸಿಕೊಂಡರೂ, ತಾನು ಮಾತ್ರ ಅಂಗಲಾಚಿ ಅಂಕವನ್ನು ಹೆಚ್ಚಿಸಿಕೊಳ್ಳಲಿಲ್ಲ.

ಇಂತಹ ತಿಪ್ಪಣ್ಣನಿಗೆ ಯಾವುದೋ ಕಾಲೇಜಿನಲ್ಲಿ ಅಧ್ಯಾಪಕ ಹುದ್ದೆ ದೊರಕಿಯೇ ಬಿಟ್ಟಿತು, ಅದೂ ಅವನನ್ನ ಹುಡುಕಿಕೊಂಡು ಬಂದು ಸಿಕ್ಕಿದ ಹುದ್ದೆ ಅದು. ತನಗೆ ವಹಿಸಿದ ಎಲ್ಲ ಕೆಲಸಗಳನ್ನೂ ನಿಸ್ಪೃಹವಾಗಿ ನಿರ್ವಹಿಸುತ್ತಿದ್ದ ನಮ್ಮ ತಿಪ್ಪೇಶ. ಒಮ್ಮೆ ಪರೀಕ್ಷಾ ಕೊಠಡಿಯ ಮೇಲ್ವಿಚಾರಣೆ ಕೆಲಸ ಇವನ ಪಾಲಿಗೆಬಿದ್ದಿತ್ತು. ಆ ಮೂರು ಘಂಟೆಗಳ ಕೆಲಸ ಎಂತಹವರಿಗೂ ಜೀವ ಕೈಯಲ್ಲಿ ಇಟ್ಟುಕೊಂಡು ನಿರ್ವಹಿಸಬೇಕಾದ ಕೆಲಸ. ಈ ಕೆಲಸವನ್ನು ಆರಾಮಾಗಿ ನಿಭಾಯಿಸುವವರೂ ಇರುತ್ತಾರೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಅದೆಂದರೆ ನಕಲು ಮಾಡುವವರು ಮಾಡಿಕೊಳ್ಳಲುಬಿಟ್ಟು ಆರಾಮವಾಗಿ ಕುರ್ಚಿಯ ಮೇಲೆ ಕುಳಿತೋ, ಅಕ್ಕಪಕ್ಕದ ಕೊಠಡಿಯವರೊಡನೆ ಹರಟೆಹೊಡೆಯುತ್ತಲೋ ಮೂರು ಘಂಟೆ ಕಳೆಯುವುದು! ನಿಯತ್ತಾಗಿ ಈ ಕೆಲಸ ನಿರ್ವಹಿಸುವವರು ಮೂರು ಘಂಟೆ ಕಳೆಯುವುದರಲ್ಲಿ ಮಂಡಿನೋವು ಬಂದು ಸುಸ್ತಾಗಿಬಿಡುತ್ತಾರೆ. ಅಂತಹುದರಲ್ಲಿ ದಿನದ ಎರಡೂ ಹೊತ್ತು ಇಂತಹ ಕೆಲಸ ನಿರ್ವಹಿಸುವವರ ಪರಿಸ್ಥಿತಿ ಹೇಗಿರಬೇಡ?

ಸಾಮಾನ್ಯವಾಗಿ ಖಾಸಗೀ ಕಾಲೇಜುಗಳಲ್ಲಿ ಎರಡು ತರಹದ ಅಧ್ಯಾಪಕರುಗಳಿರುತ್ತಾರೆ.ಮೊದಲನೆಯ ವರ್ಗ ಪೂರ್ಣ ಸರ್ಕಾರೀ ಸಂಬಳಪಡೆಯುತ್ತಾ ವಾರಕ್ಕೆ ಹದಿನಾರು ಘಂಟೆ ಬೋಧನಾಕಾರ್ಯ ನಿರ್ವಹಿಸುವ ಮಂದಿ.ಮತ್ತೊಂದು ವರ್ಗ ನಿವೃತ್ತರಾದ ಬೋಧಕರ ಸ್ಥಾನದಲ್ಲಿ ಮತ್ತು ಅನುದಾನರಹಿತಕಾರ್ಯಭಾರ ನಿರ್ವಹಿಸುತ್ತಾ ಅವರ ಸಂಬಳದ ಕಾಲುಭಾಗಕ್ಕಿಂತ ಕಡಿಮೆ ಸಂಬಳಕ್ಕೆ ಅವರಷ್ಟೇ ದುಡಿಮೆ ಮಾಡುವವರು. ಪಾಪ ಈ ಮಂದಿಯ ಕಡಿಮೆ ಸಂಬಳವನ್ನೇ ಬಂಡವಾಳಮಾಡಿಕೊಂಡ ಮೊದಲ ವರ್ಗದ ಅಧ್ಯಾಪಕರು ತಮ್ಮ ಪಾಲಿನ ಪರೀಕ್ಷಾ ಉಸ್ತುವಾರಿ ಕೆಲಸವನ್ನೂ ಇವರಿಗೆ ವಹಿಸಿ, ವಿಶ್ವವಿದ್ಯಾನಿಲಯ ನೀಡುವ ಸಂಭಾವನೆಜೊತೆಗೆ ತಮ್ಮ ಕಡೆಯಿಂದಲೂ ಅಷ್ಟೇ ಸಂಭಾವನೆ ನೀಡಿದುಡಿಯಲು ಹಚ್ಚುತ್ತಾರೆ. ಇದೂ ಒಂದು ರೀತಿಯ ಶೋಷಣೆಯೇ ಸರಿ. ಸಂಭಾವನೆಗಾಗಿ ದುಡಿಯುವ ಈ ಮಂದಿ ಪದವಿ ವಿದ್ಯಾರ್ಥಿಗಳನ್ನು ಎಷ್ಟರಮಟ್ಟಿಗೆ ನಿಭಾಯಿಸಬಲ್ಲರು ಎಂಬುದು ಪ್ರಶ್ನಾರ್ಹ ಸಂಗತಿ.

ಒಮ್ಮೆ ಬೆಳಗಿನ ಪರೀಕ್ಷಾ ಕೆಲಸ ನಿರ್ವಹಿಸಿದ ತಿಪ್ಪಣ್ಣನಿಗೆ ಮಧ್ಯಾಹ್ನವೂ ಮತ್ತೆ ಕಾರ್ಯನಿರ್ವಹಿಸಲು ಕರೆಬಂತು. ಪ್ರಾಂಶುಪಾಲರ ಕೊಠಡಿಗೆ ಹೋದವನೇ ತನಗೆ ಮಧ್ಯಾಹ್ನದ ಪರೀಕ್ಷಾಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ ಎಂದನು. ಇದ್ಯಾಕೆ ಮಿಕ್ಕ ಅಧ್ಯಾಪಕರು ಎರಡು ಹೊತ್ತೇನು ಮೂರುಹೊತ್ತು ಮಾಡು ಎಂದರೂ ಮಾಡಲು ತಯಾರಿರುವಾಗ ನೀವು ನಿರಾಕರಿಸುತ್ತಿರುವುದು ನನಗೆ ಆಶ್ಚರ್ಯ ತರುತ್ತಿದೆ ಎಂದರು ಪ್ರಾಂಶುಪಾಲರು. ಅದಕ್ಕೆ ನಮ್ಮ ತಿಪ್ಪಣ್ಣ 'ಸಾರ್ ನಾನು ಪ್ರಾಮಾಣಿಕವಾಗಿ ಮೂರು ಘಂಟೆಗಳಲ್ಲಿ ಒಂದು ನಿಮಿಷ ಕೂಡಾ ಎಲ್ಲೂ ಕೂರದೆ ಮೇಲುಸ್ತುವಾರಿ ಕೆಲಸ ನಿರ್ವಹಿಸುತ್ತೇನೆ' ಎಂದುಬಿಟ್ಟ. ಅದಕ್ಕೆ ಆಶ್ಚರ್ಯಚಕಿತರಾದ ಪ್ರಾಂಶುಪಾಲರು 'ಅಂದರೆ ನಿಮ್ಮ ಮಾತಿನ ಪ್ರಕಾರ ನೀವೊಬ್ಬರೇ ಸತ್ಯ ಹರಿಶ್ಚಂದ್ರರು, ಉಳಿದವರೆಲ್ಲರೂ ಅಪ್ರಾಮಾಣಿಕರು ಎಂಬರ್ಥವೇ' ಎಂದು ಮರುಸವಾಲೆಸೆದರು. 'ಅದೇನೋ ನನಗೊತ್ತಿಲ್ಲ, ಅದು ನಿಮಗೇ ತಿಳಿಯಬೇಕು' ಎಂದು ಕೊಠಡಿಯಿಂದ ಹೊರನಡೆದನು.
ಮತ್ತೊಮ್ಮೆ ಈ ಸತ್ಯಹರಿಶ್ಚಂದ್ರನ ಸತ್ಯಸಂಧತೆ ಈತನಿಗೆ ಆ ಹರಿಶ್ಚಂದ್ರನಿಗೆ ಕೊಟ್ಟಂತಹ ಕಷ್ಟವನ್ನೇ ತಂದೊಡ್ಡಿದ ಪ್ರಸಂಗ ನೆನಪಿಗೆ ಬರುತ್ತಿದೆ.

ಎಲ್ಲ ಇಲಾಖೆಗಳಲ್ಲೂ ಸತ್ಯಸಂಧರ ಸುತ್ತಲೂ ಭ್ರಷ್ಟರು ತುಂಬಿಕೊಂಡಿರುವುದು ಸರ್ವೇಸಾಮಾನ್ಯ. ಆದರ್ಶ ಸಂಸ್ಥೆಯಾಗಿ ತನ್ನ ಕಾಲೇಜನ್ನು ರೂಪಿಸುವ ಕನಸುಗಳೊಡನೆ ನಮ್ಮ ತಿಪ್ಪಣ್ಣನೂ ಆ ಕಾಲೇಜಿನ ಪ್ರಾಂಶುಪಾಲನ ಹುದ್ದೆ ಅಲಂಕರಿಸಿದ್ದ. ಅದು ಯಾವಾಗಲೂ ಹಾಗೇ. ದೂರದ ಬೆಟ್ಟ ನುಣ್ಣಗೆ ಎನ್ನುವಂತೆ, ಕಾಲೇಜಿನ ಪ್ರಾಂಶುಪಾಲನಾದರೆ ಏನೆಲ್ಲ ಸುಧಾರಣೆಗಳನ್ನು ಮಾಡಬಹುದು ಎಂಬ ಕನಸಿನಲ್ಲೇ ತೇಲಾಡತೊಡಗಿದ್ದ ತಿಪ್ಪೇಶನಿಗೆ ವಾಸ್ತವದ ಅರಿವಾಗುವುದು ತೀರ ತಡವಾಗಲಿಲ್ಲ. ತನ್ನ ಕನಸುಗಳೆಲ್ಲ ನನಸಾಗದೇ ಕನಸಾಗಿಯೇ ಉಳಿದುಬಿಟ್ಟವು. ತನ್ನ ಯೋಜನೆಗಳಿಗೆ ಆಡಳಿತಮಂಡಳಿಯ ನೆರವಾಗಲೀ, ನಿಯಮಗಳ ಪಾಲನೆಗೆ ಸಹೋದ್ಯೋಗಿಗಳ ಸಹಕಾರವಾಗಲೀ ಸಿಗಲೇ ಇಲ್ಲ. ಹಿಂದಿನವರಂತೆ ಹೇಗೋ ಗೊಂದಲಗಳಿಗೆ ಸಿಕ್ಕಿಹಾಕಿಕೊಳ್ಳದೇ, ತನ್ನ ಸೇವಾವಧಿ ಪೂರ್ಣಗೊಳಿಸಿ ನಿವೃತ್ತನಾದರೆ ಸಾಕಪ್ಪಾ ಎನಿಸತೊಡಗಿತ್ತು. ಆದರೂ ದುರ್ವಿಧಿ ಬಿಡಬೇಕಲ್ಲ, ಏನಾದರೂ ಸಂಕಷ್ಟದಲ್ಲಿ ತಿಪ್ಪೇಶನನ್ನು ಸಿಲುಕಿಸಲು ಹವಣಿಸುತ್ತಿತ್ತು ಎನಿಸುತ್ತದೆ. ನಮ್ಮ ತಿಪ್ಪೇಶನ ಸಂದರ್ಭದಲ್ಲೂ ಹೀಗೇ ಆಯಿತು. ಪರೀಕ್ಷೆಯೊಂದರಲ್ಲಿ ಪರೀಕ್ಷಾ ವಿಭಾಗದ ಗುಮಾಸ್ತರು ತಮ್ಮ ಕಡೆಯವರಿಗೆ ಅನುಕೂಲಮಾಡಿಕೊಡಲು ಪೈಪೋಟಿಗೆ ಬಿದ್ದವರಂತೆ ಅಕ್ರಮಗಳನ್ನು ಎಸಗಿ

ಅಂತಿಮ ಫಲಿತಾಂಶ ಪಟ್ಟಿಗೆ ಅದೇ ತಾನೇ ಪ್ರಾಂಶುಪಾಲನ ಹುದ್ದೆ ಅಲಂಕರಿಸಿದ್ದ ತಿಪ್ಪಣ್ಣನ ಸಹಿ ಪಡೆದುಬಿಟ್ಟಿದ್ದರು. ಅದು ಹೇಗೋ ಆಡಳಿತ ಮಂಡಳಿಯ ಗಮನಕ್ಕೆ ಬಂದು ತಿಪ್ಪಣ್ಣನ ಮೇಲೇ ತನಿಖೆ ನಡೆಸಲಾಯಿತು. ಈ ಅಕ್ರಮದಲ್ಲಿ ತಿಪ್ಪಣ್ಣನ ಪಾತ್ರದ ಬಗೆಗೆ ಹೇಳಿಕೆ ನೀಡುವಂತೆ ಒತ್ತಾಯಿಸಲಾಯಿತು. ಆಗ ನಮ್ಮ ತಿಪ್ಪೇಶಿ ಕೊಟ್ಟ ಹೇಳಿಕೆ ಏನು ಗೊತ್ತೇ?' ಫಲಿತಾಂಶ ಪಟ್ಟಿಯನ್ನು ಕೂಲಂಕಷವಾಗಿ ಪರಿಶೀಲಿಸದೇ ಪಟ್ಟಿಗೆ ಸಹಿಮಾಡಿ ತಪ್ಪುಮಾಡಿರುತ್ತೇನೆ'. ಮುಗಿಯಿತು ತನಿಖೆ, ಅಪರಾಧ ಒಪ್ಪಿಕೊಂಡಂತಾಯಿತಲ್ಲ! ಇನ್ನು ಶಿಕ್ಷೆ ಪ್ರಕಟಿಸುವುದೊಂದೇ ಬಾಕಿ. ಕೂಡಲೇ ಆಡಳಿತ ಮಂಡಳಿಯಿಂದ ಹೊರಟಿತು ಫರ್ಮಾನ್! ಕೆಲವರ ಸಲಹೆ 'ತಿಪ್ಪಣ್ಣನನ್ನು ಕೆಲಸದಿಂದ ವಜಾಮಾಡಿ' ಅಂದರೆ ಮತ್ತೆ ಕೆಲವರದು 'ಇಲಾಖೆಗೆ ತಿಳಿಸಿ ಅವನ ಪದೋನ್ನತಿಯನ್ನು ಕಡಿತಗೊಳಿಸಿ' ಮತ್ತೆ ಕೆಲವರದು 'ಹಾಕಿ ತಿಪ್ಪಣ್ಣನಿಗೆ ದಂಡ'! ಅಂತಿಮವಾಗಿ ಮಾಡದ ತನ್ನ ತಪ್ಪಿಗೆ 'ಮೊಸರು ತಿಂದ ಕೋತಿ, ಒರಸಿತು ಕೈಯನ್ನು ಮೇಕೆಯ ಮೂತಿಗೆ'ಎನ್ನುವಂತೆ ತಿಪ್ಪಣ್ಣ ಹರಕೆಯ ಕುರಿಯಾದ ತನ್ನ ತಪ್ಪೊಪ್ಪಿಗೆ ಹೇಳಿಕೆಯಿಂದ.

3-9-2016

* * * * *

## ಲೇಖನ – 4

# ಗೃಹಿಣಿಯ ಸ್ವಗತ

ನಿಮಗೇನಪ್ಪ, ಹೊರಗೆ ದುಡಿಯುವವರು ನೀವು. ಒಂದು ನೌಕರಿಹಿಡಿದು ತಿಂಗಳು ತುಂಬಿಸಿದರೆ ಎಣಿಸುತ್ತೀರಿ ಕೈತುಂಬ ಝಣಝಣ ಹಣ. ಆ ತಿಂಗಳಲ್ಲಿ ಎಷ್ಟು ಕೆಲಸ ಮಾಡಿದಿರಿ, ಅದರಿಂದ ಸಮಾಜಕ್ಕೆ ಎಷ್ಟು ಉಪಕಾರವಾಯಿತು ಎನ್ನುವುದನ್ನು ಯಾರಾದರೂ ಪ್ರಶ್ನಿಸುತ್ತಾರಾ? ಅದೇ ನಾವು ಹೆಂಗಸರು ಬೆಳಗ್ಗೆ ಎದ್ದಾಗಲಿಂದ ಸಂಜೆ ಮಲಗುವವರೆಗೂ ಏನಾದರೂ ಕೆಲಸ ಮಾಡುತ್ತಲೇ ಇರುತ್ತೇವೆ. ಮಕ್ಕಳಿಗೆ ಶಾಲೆಗೆ ರೆಡಿಮಾಡುವುದು, ಗಂಡನಿಗೆ ಕಛೇರಿಗೆ ಹೋಗುವ ವೇಳೆಗೆ ತಿಂಡಿ ರೆಡಿಮಾಡಿಕೊಡುವುದು, ಅತ್ತೆ ಮಾವಂದಿರಿದ್ದರೆ ಅವರ ಶುಶ್ರೂಷೆ ಮಾಡುವುದು, ಇತ್ಯಾದಿ. ಇನ್ನು ಮಧ್ಯಾಹ್ನದ ಊಟ, ಸಾಯಂಕಾಲದ ತಿಂಡಿ, ಮಕ್ಕಳನ್ನು ಶಾಲೆಯಿಂದ ಕರೆತರುವುದು, ಅವರ ಮುಖ ಕೈಕಾಲು ತೊಳೆಸುವುದು ಹೀಗೆ ದಿನಪೂರ್ತಿ ಕೆಲಸವಿರುತ್ತದೆ ನಮಗೆ. ಇವೆಲ್ಲವುಗಳ ನಡುವೆ ಪುರುಸೊತ್ತು ಮಾಡಿಕೊಂಡು ನಮ್ಮ ತಿಂಡಿ, ಊಟ ಪೂರೈಸಿಕೊಳ್ಳಬೇಕು. ಇವೆಲ್ಲವುಗಳ ಜೊತೆಗೆ ನಾವೇ ಹೊರಗೆ ದುಡಿಯಬೇಕೆಂದರೆ ಅದು ಇನ್ನೂ ಕಷ್ಟಕರ. ನಾವು ಕಛೇರಿಗೆ ಹೋಗುವ ಮುನ್ನವೇ ಮೇಲಿನ ಎಲ್ಲ ಕೆಲಸಗಳನ್ನೂ ಮಾಡಿಮುಗಿಸಿ, ಸಮಯಕ್ಕೆ ಸರಿಯಾಗಿ ಕಛೇರಿ ತಲುಪಬೇಕು. ಇಲ್ಲದಿದ್ದಲ್ಲಿ ಬಾಸ್‌ನಿಂದ ಬೈಸಿಕೊಳ್ಳಬೇಕಾದೀತು.

ಈ ಕಷ್ಟಕೋಟಲೆಗಳು ನಿಮಗಿವೆಯೇ. ಆದರೂ ಕೆಲ ಮಾಡರನ್ ಮಹಿಳಾ ಮಣಿಗಳು ಕೈಗೊಬ್ಬರು, ಕಾಲಿಗೊಬ್ಬರು

ಕೆಲಸಗಾರರನ್ನಿಟ್ಟುಕೊಂಡು ತಾವು ಮಾತ್ರ ಶೋಕಿಗಾಗಿ ಕೆಲಸಕ್ಕೆ ಹೋಗಿಬರುವುದೂ ಉಂಟು. ಇದರಿಂದ ಎರಡು ಕೆಟ್ಟ ಪರಿಣಾಮಗಳು ಉಂಟಾಗುತ್ತವೆ. ಮೊದಲನೆಯದು ಒಬ್ಬ ಅತೀ ಅವಶ್ಯಕತೆ ಇರುವ ವ್ಯಕ್ತಿಯನ್ನು ಉದ್ಯೋಗವಂಚಿತನನ್ನಾಗಿಸುವುದು; ಎರಡನೆಯದು ದೇಹ ಶ್ರಮ ಕಡಿಮೆಯಾಗುವುದರಿಂದ ದೇಹತೂಕ ಹೆಚ್ಚಿಸಿಕೊಳ್ಳುವುದು. ಕೊನೆಗೆ ಮಂಡಿನೋವು ಬಂದು ಮೈ ಕರಗಿಸಲು ಪಾರ್ಕುಗಳಲ್ಲಿ ಬೆಳಿಗ್ಗೆ, ಸಂಜೆ ಏದುಸಿರು ಬಿಡುತ್ತಾ ವಾಕಿಂಗ್ ಮಾಡುವುದು, ಇಲ್ಲವೇ ಸರ್ಜರಿಮಾಡಿಸಿಕೊಂಡು ಬೊಜ್ಜು ತೆಗೆಸುವುದು, ಮಂಡಿ ಚಿಪ್ಪು ಬದಲಾಯಿಸಿಕೊಳ್ಳುವುದು ಮುಂತಾದವು. ಅದರ ಬದಲಿಗೆ ಮನೆಯಲ್ಲಿನ ದೈನಂದಿನ ಕೆಲಸಗಳನ್ನು ತಾವೇ ಮಾಡಿಕೊಂಡಿದ್ದರೆ, ಈ ಪ್ರಸಂಗಗಳು ಎದುರಾಗುತ್ತಲೇ ಇರುತ್ತಿರಲಿಲ್ಲ ಅಲ್ಲವೇ!

ನಮ್ಮ ಅತ್ತೆ ಅಜ್ಜಿಯವರ ಕಾಲದಲ್ಲಿ ಹೆಂಗಸರು ಎಂದರೆ ಮಕ್ಕಳನ್ನು ಹೆರುವವರು ಮತ್ತು ಅಡುಗೆ ಬೇಯಿಸುವವರು. ಅವರ ಜೀವನವೇ ಅಡುಗೆಮನೆಗೆ ಸೀಮಿತ. ಬೆಳಿಗ್ಗೆ ಹಚ್ಚಿದ ಒಲೆ ಸಂಜೆ ಆದರೂ ಆರುತ್ತಿರಲಿಲ್ಲ. ಇನ್ನು ವಿಧವೆಯರಾದರಂತೂ ಅವರ ಕೆಲಸವೇ (ಬಂದವರಿಗೆ) ಅಡುಗೆ ಬೇಯಿಸುವುದು. ಕೊನೆಗೆ ಉಳಿದ ಚೂರುಪಾರು ತಿಂದು, ಅದೂ ಉಳಿದಿರದಿದ್ದಲ್ಲಿ ಹೊಟ್ಟೆತುಂಬ ನೀರು ಕುಡಿದು ಉಪವಾಸ ಮಲಗುವುದು. ಯಾರಾದರೂ ಹೊರಗಿನವರೋ, ಮನೆಯ ಯಜಮಾನರೋ ಮಾತನಾಡಿಸಲು ಬಂದರೆ ತಲೆ ಬಗ್ಗಿಸಿಕೊಂಡು ಮನೆಯ ಒಳಗಿನಿಂದಲೇ ಉತ್ತರ ನೀಡುವುದು. ಈಗೇನೋ ಅಂತಹ ಪರಿಸ್ಥಿತಿ ಇಲ್ಲ ಬಿಡಿ. ಎಲ್ಲ ಕ್ಷೇತ್ರದಲ್ಲೂ ತಾನೇನೂ ಗಂಡಸಿಗೆ ಕಡಿಮೆಯಿಲ್ಲ ಎಂಬಂತೆ ಹೆಂಗಸರು ದುಡಿಯತೊಡಗಿದ್ದಾರೆ. ಈ ಮೊದಲು ಹೆಂಗಸರು ಕಲ್ಪಿಸಿಕೊಳ್ಳಲೂ ಆಗದಿದ್ದ ರೈಲು ಓಡಿಸುವುದು, ವಿಮಾನ ಹಾರಿಸುವುದು, ವಾಹನಗಳ ದುರಸ್ಥಿಕಾರ್ಯ, ಟೈರುಗಳನ್ನು ಬದಲಾಯಿಸುವುದು, ಟ್ರಾಕ್ಟರ್ ಚಲಾಯಿಸುವುದು ಮತ್ತು ಇತ್ತೀಚೆಗೆ ಯುದ್ಧವಿಮಾನ ಚಲಾವಣೆ ಹೀಗೆ ಕಷ್ಟಕರ ಕೆಲಸಗಳನ್ನೂ ಮಾಡುತ್ತಿದ್ದಾರೆ.

ಕಾಲ ನಿಧಾನವಾಗಿ ಬದಲಾಗುತ್ತಿದೆ.

* * * * *

## ಲೇಖನ – 5

# ಇರ್ತಲೆ

ನನ್ನದೇನೂ ತಪ್ಪಿಲ್ಲದಿದ್ದರೂ ನನ್ನ ಜನ್ಮವಾದುದೇ ವಿಚಿತ್ರ ರೀತಿಯಲ್ಲಿ. ನನ್ನಮ್ಮ ನನ್ನನ್ನು ಬಸಿರಲ್ಲಿ ಹೊತ್ತು ವೈದ್ಯಮಹಾಶಯರ ಬಳಿಹೋಗಿ ಸ್ಕ್ಯಾನಿಂಗ್ ಮಾಡಿಸಿದಾಗ ಏನನ್ನು ನೋಡಿ ಹೇಳಿದರೋ ನಿಮಗೆ ಅವಳಿಜವಳಿ ಆಗುತ್ತದೆ ಎಂದು. ಹಾಗೆ ಆ ವೈದ್ಯೆ ಹೇಳಿದಾಗ ನನ್ನಮ್ಮನಿಗೆ ಆದ ಸಂತೋಷಕ್ಕೆ ಪಾರವೇ ಇರಲಿಲ್ಲ. ತನ್ನ ಕಂದಮ್ಮಗಳಿಗೆ ಆರೈಕೆಮಾಡುವ ಸಲುವಾಗಿ ಅತಿ ಪೌಷ್ಟಿಕ ಆಹಾರ ತೆಗೆದುಕೊಳ್ಳತೊಡಗಿದಳು. ನವಮಾಸತುಂಬಿ ತಾಯಿಯ ಬಸಿರಿಂದ ಹೊರಬಂದಾಗ ಎಲ್ಲರಿಗೂ ಸಖೇದಾಶ್ಚರ್ಯ! ನಾವು ಅವಳಿಜವಳಿಗಳೇನೋ ಸರಿ ಆದರೆ ನಾವು ಒಂದು ರೀತಿಯ ಸಯಾಮಿ ಅವಳಿಗಳು! ಒಂದು ದೇಹ ಎರಡು ಶಿರದ ಅವಳಿಗಳು, ಮಿಕ್ಕ ಅಂಗಗಳೆಲ್ಲ ಇತರರಂತೆಯೇ ಎರಡು ಕೈ, ಎರಡು ಕಾಲು, ಒಂದೇ ಹೃದಯ ಮುಂತಾದವು. ಎರಡು ಶಿರ ಎಂದಮೇಲೆ ಎರಡು ಮಿದುಳು, ಎರಡು ಬಾಯಿ, ನಾಲ್ಕು ಕಿವಿಗಳು. ಒಂದು ರೀತಿಯಲ್ಲಿ ಹೇಳುವುದಾದಲ್ಲಿ ಮಿನಿ–ರಾವಣನಂತೆ. ಮೊದಮೊದಲಿಗೆ ಮುಜುಗರವಾದರೂ ಅಪ್ಪ ಅಮ್ಮ ನನಗೆ/ ನಮಗೆ ಯಾವುದೇ ರೀತಿ ಬೇಸರಿಸದೆ ಅತಿ ಪ್ರೀತಿಯಿಂದ ಆರೈಕೆ ಮಾಡಿ ಬೆಳೆಸಿದರು. ದೇಹ ಒಂದೇ ಇದ್ದುದರಿಂದ ಯಾರೇ ಹಾಲು ಕುಡಿದರೂ, ಆಹಾರ ತಿಂದರೂ ಅದು ಸೇರುತ್ತಿದ್ದುದು ಒಂದೇ ಉದರಕ್ಕೆ. ಒಮ್ಮೆ ಸಹೋದರಿ ಹಾಲು ಕುಡಿದರೆ,

ಮತ್ತೊಮ್ಮೆ ನಾನು ಹಾಲು ಹೀರುತ್ತಿದ್ದೆ. ನಮಗೆ(?) ತಾಯಿ ಇಟ್ಟ ಹೆಸರು "ಇರ್ತಲೆ". ಕರೆಬಂದಾಗಲೆಲ್ಲ ಇಬ್ಬರೂ ಓಗೊಡುತ್ತಿದ್ದೆವು. ಮೊದಲ 5 ವರ್ಷಗಳಾಗುವವರೆಗೆ ನಮಗೆ ಯಾವುದೇ ರೀತಿ ತೊಂದರೆ ಆಗಲಿಲ್ಲ. ಸುತ್ತಮುತ್ತಲಿನ ಮಕ್ಕಳೂ ಸಹಾ ಯಾವುದೇ ಬೇಧಭಾವ ತೋರದೇ ನಮ್ಮೊಡನೆ ಪ್ರೀತಿಯಿಂದ ಬೆರೆಯತೊಡಗಿದರು. ಸಮಸ್ಯೆಯೆಂಬುದು ಪ್ರಾರಂಭವಾದುದೇ ನಾವು ಶಾಲೆಗೆ ಸೇರುವ ಸಂದರ್ಭದಲ್ಲಿ. ನಮ್ಮನ್ನು ಏಕ ವ್ಯಕ್ತಿ ಎಂದು ಪರಿಗಣಿಸಬೇಕೋ, ಇಬ್ಬರು ಎಂದು ಪರಿಗಣಿಸಬೇಕೋ ಎಂಬ ದ್ವಂದ್ವ ಶುರು ಆಗಿದ್ದೇ ಅಲ್ಲಿಂದ. ಯಾವುದೇ ವ್ಯಕ್ತಿಯ ವ್ಯಕ್ತಿತ್ವ ಗುರುತಿಸಲ್ಪಡುವುದೇ ಆ ವ್ಯಕ್ತಿಯ ಮುಖದಿಂದ. ಇಲ್ಲಿದ್ದುದು ಎರಡು ಮುಖ, ಅಂದರೆ ಎರಡು ಮಿದುಳುಗಳು, ಎರಡು ಬಾಯಿ, ನಾಲ್ಕು ಕಣ್ಣುಗಳು, ನಾಲ್ಕು ಕಿವಿಗಳು. ಎರಡು ಮಿದುಳುಗಳೂ ಒಂದೇ ರೀತಿ ಯೋಚಿಸಬೇಕಾಗಿಲ್ಲ ಅಲ್ಲವೇ? ಇಬ್ಬರ ಬುದ್ಧಿ ಮತ್ತೆಯೂ ಒಂದೇ ಮಟ್ಟದ್ದೂ ಆಗಿರಬೇಕಿಲ್ಲವಲ್ಲವೇ? ಒಬ್ಬರು ಇನ್ನೊಬ್ಬರಿಗಿಂತ ಹೆಚ್ಚು ಬುದ್ಧಿವಂತರಾಗಿದ್ದರೆ ಏನು ಮಾಡಬೇಕು? ಫಲಿತಾಂಶ ನೀಡುವಾಗ ಇಬ್ಬರನ್ನೂ ಪರಿಗಣಿಸಬೇಕೋ ಒಬ್ಬರನ್ನೋ. ಆಲೋಚನೆ ಇಬ್ಬರದಾದರೂ ಬರೆಯುವವರು ಒಬ್ಬರೇ ಆಗಿರುತ್ತಾರಲ್ಲವೇ? ಇಬ್ಬರಿಗೂ ಎಲ್ಲ ಕಾಲದಲ್ಲಿಯೂ ಏಕರೀತಿಯ ಭಾವನೆ ಇರಲೇಬೇಕೆಂಬ ನಿಯಮವೇನೂ ಇಲ್ಲವಲ್ಲ. ಒಬ್ಬರಿಗೆ ಆಹಾರವಾಗಿದ್ದು ಮತ್ತೊಬ್ಬರಿಗೆ ವಿಷವಾಗಬಹುದಲ್ಲವೇ? ಒಬ್ಬರಿಗೆ ಮಾಂಸಾಹಾರ ರುಚಿಸಿದರೆ ಮತ್ತೊಬ್ಬರಿಗೆ ಸಸ್ಯಾಹಾರ ಇಷ್ಟವಾಗಬಹುದು. ಈ ಸಮಸ್ಯೆಗಳಿಗೆ ಏನು ಪರಿಹಾರ? ನಮ್ಮನ್ನು ಒಂದೇ ಹೆಸರಿನಿಂದ ಕರೆಯಬಹುದೇ? ಒಂದೇ ಹೆಸರಿನಿಂದ ಕರೆದರೆ ಯಾರು ಪ್ರತಿಕ್ರಿಯಿಸಬೇಕು? ಒಟ್ಟಿನಲ್ಲಿ ನಾವು ಸಮಸ್ಯೆಗಳ ಮಹಾಪೂರ! ಈಗ ನಮಗೆ 18 ವರ್ಷಗಳಾಗಿದೆ. ನಾವು(?) ಬೆಳೆದು ಪ್ರೌಢಾವಸ್ಥೆ ತಲುಪಿದ್ದೇವೆ. ಸಮಾಜವೂ ನಮ್ಮನ್ನು ಯಾವರೀತಿ ಇದ್ದೇವೆಯೋ ಹಾಗೇ ಒಪ್ಪಿಕೊಳ್ಳತೊಡಗಿದೆ. ನಮ್ಮ ತಂದೆತಾಯಿಗಳು ನಮಗೆ ಸೂಕ್ತ ವರನನ್ನು ನೋಡಿ ವಿವಾಹಮಾಡಿಕೊಡುವ ಚಿಂತನೆಯಲ್ಲಿ ತೊಡಗಿದ್ದಾರೆ. ಅವರಾರಿಗೂ ಇಲ್ಲದ ಸಮಸ್ಯೆ ನಮ್ಮಿಬ್ಬರಿಗೆ ತಲೆದೋರಿದೆ. ನನ್ನ ವಿಚಾರ ಒಂದಾದರೆ ನನ್ನ ಜವಳಿಯ ಆಲೋಚನೆಗಳೇ ಬೇರೆಯಾಗಿವೆ. ನನಗೆ ಶಾಂತ, ಸೌಮ್ಯ, ಮೆದುಮಾತಿನ ಸ್ವರೂಪದ ವ್ಯಕ್ತಿ ಇಷ್ಟವಾದರೆ ಅವಳಿಗೆ ತುಂಬಾ ವಾಚಾಳಿ, ಗಢಸು ವ್ಯಕ್ತಿತ್ವದ ಪುರುಷನ ಬಗೆಗೆ ಹೆಚ್ಚು ಆಸಕ್ತಿ. ನಾನು ಭಾರತೀಯ ಸಂಗೀತ ನೃತ್ಯ ಇಷ್ಟಪಟ್ಟರೆ, ಅವಳಿಗೆ ಪಾಶ್ಚಾತ್ಯ ಸಂಗೀತ ನೃತ್ಯದಲ್ಲಿ ಹೆಚ್ಚು ಆಸಕ್ತಿ. ನನಗೆ ಪುಸ್ತಕ ಓದುವುದರಲ್ಲಿ ಆಸಕ್ತಿಯಿದ್ದಲ್ಲಿ ಅವಳಿಗೆ ಸಂಗೀತ ಕೇಳುವುದರಲ್ಲಿ ಆಸಕ್ತಿ. ನನಗೆ ಮನೆಯಲ್ಲಿರುವುದು

ಹೆಚ್ಚು ಪ್ರಿಯವಾದರೆ ಅವಳಿಗೆ ಹೊರಗೆ ತಿರುಗಾಡುವುದು ಹೆಚ್ಚು ಇಷ್ಟ. ಇಬ್ಬರೂ ಒಬ್ಬನನ್ನೇ ಮದುವೆ ಆಗಬೇಕು. ಒಬ್ಬಳಿಗೆ ಗಂಡನ ಜೊತೆ ಕಾಲಕಳೆಯಬೇಕೆಂಬ ಬಯಕೆಬಂದಾಗ ಮತ್ತೊಬ್ಬಳಿಗೂ ಅದೇ ಬಯಕೆ ಇರಬೇಕೆಂದೇನಿಲ್ಲ ಅಲ್ಲವೇ? ಈ ರೀತಿ ನಮ್ಮಿಬ್ಬರಲ್ಲೂ ನೂರಾರು ವೈರುಧ್ಯಗಳು ಇದ್ದರೂ, ಅವನ್ನು ಅನುಭವಿಸಲು ಇರುವುದು ನಮ್ಮದೊಂದೇ ದೇಹ. ಒಬ್ಬಳ ಮಿದುಳಿಗೆ ಹಿತವಾಗಿಸಲು ಹೊರಟರೆ ಮತ್ತೊಬ್ಬಳ ಮಿದುಳಿಗೆ ಅಪ್ರಿಯವಾಗುತ್ತದೆ. ಇದಕ್ಕೆ ಪರಿಹಾರವೇನು? ಈ ಸಮಸ್ಯೆಗಳಿಗೆ ಒಂದು ಅಂತ್ಯ ಹಾಡಬೇಕೆಂದರೆ ಅದು ಸಾಧ್ಯವಾಗುವುದು ಒಬ್ಬರ ಜೀವನ ಅಂತ್ಯಗೊಳಿಸುವುದರಲ್ಲಿ. ಇದು ಮಾಡದೇ ಇತರ ಸಾಧ್ಯತೆಗಳೇನಾದರೂ ಇವೆಯೇ?

ಸಧ್ಯಕ್ಕಂತೂ ವೈದ್ಯಲೋಕದಲ್ಲಿ ಇಬ್ಬರನ್ನೂ ಉಳಿಸುವ ಉಪಾಯ ಗೋಚರಿಸಿಲ್ಲ. ಪ್ರಯೋಗಗಳಂತೂ ನಡೆಯುತ್ತಿವೆ. ಸತ್ತವರ ರುಂಡ ಮುಂಡಗಳನ್ನು ಬೇರ್ಪಡಿಸಿ ಆ ಮುಂಡವನ್ನು ನಮ್ಮಂತಹವರ ರುಂಡವೊಂದಕ್ಕೆ ಸೇರ್ಪಡೆಗೊಳಿಸಿದರೆ ಇಬ್ಬರಿಗೂ ಒಂದು ಅಸ್ತಿತ್ವ ಉಂಟಾಗಬಹುದು. ಸ್ಟೆಂ ಸೆಲ್ಸ್ ತಂತ್ರಗಾರಿಕೆ ಮುಖಾಂತರ ದೇಹದಲ್ಲಿ ನಶಿಸಿಹೋದ ಅಂಗಗಳನ್ನು ಪುನಃ ಬೆಳೆಸಬಹುದಾದ ಸಾಧ್ಯತೆಯೂ ಇದೆಯಂತೆ. ಈ ತಂತ್ರಜ್ಞಾನ ಅಭಿವೃದ್ಧಿ ಹೊಂದಬಹುದೆಂಬ ಆಶಯದೊಡನೆ ಕೆಲವು ಹಿರಿಯರ ರುಂಡವನ್ನು ಅವರು ನಿಧನರಾದನಂತರ ಅವರ ಮುಂಡದಿಂದ ಬೇರ್ಪಡಿಸಿ, ಸಂರಕ್ಷಿಸಿ ಇಟ್ಟಿರುವರೆಂದು ಸುದ್ದಿ.ಈ ಸ್ಟೆಂ ಸೆಲ್ ಟೆಕ್ನಾಲಜಿ ಮುಖಾಂತರ ಅವರ ರುಂಡಕ್ಕೆ ಇಡೀ ಶರೀರ ಬೆಳೆಯಲು ಸಹಕಾರಿಯಾಗುವಂತೆ ಮಾಡಿ ಒಬ್ಬ ಸಂಪೂರ್ಣ ಮನುಷ್ಯನನ್ನೇ ರೂಪುಗೊಳಿಸಬಹುದೆಂಬ ಕಲ್ಪನೆ ವಿಜ್ಞಾನಿಗಳಲ್ಲಿದೆಯಂತೆ. ಈಗಲೂ ಸಹಾ ನಾವು ಆಲೂಗಡ್ಡೆ, ಕಬ್ಬು ಮುಂತಾದ ಕೆಲವು ತರಕಾರಿಗಳ ಮೊಳಕೆ ಬಂದ ಒಂದು ಭಾಗವನ್ನು ಕತ್ತರಿಸಿ ಅದನ್ನು ಭೂಮಿಯಲ್ಲಿ ನೆಟ್ಟರೆ, ಕೆಲಕಾಲನಂತರ ಅದು ಒಂದು ಇಡೀ ಗಿಡವಾಗಿ ರೂಪುಗೊಂಡು ಫಲನೀಡುವ ಸಾಧ್ಯತೆ ಇದೆಯಲ್ಲವೇ? ಹಾಗೆಯೇ ಚಿಕ್ಕಮಕ್ಕಳ ದೇಹದ ಯಾವುದೋ ಒಂದು ಭಾಗ ಉದಾ: ಕೈಬೆರಳು, ಕಾಲು ಬೆರಳು, ಆಕಸ್ಮಿಕವಾಗಿ ತುಂಡಾದರೆ ಅದು ತಂತಾನೇ ಮತ್ತೆ ರೂಪುಗೊಳ್ಳುವ ಸಾಧ್ಯತೆ ಇದೆಯಲ್ಲವೇ? ಈ ಒಂದು ಭಾಗ ಬೆಳೆಯಬಹುದಾದಲ್ಲಿ ಇಡೀ ಶರೀರ ಬೆಳೆಸುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ ಅಲ್ಲವೇ? ಅದು ನನಸಾಗುವವರೆಗೂ ಕಾಯಬೇಕು ನಮ್ಮಂತಹವರು. ನೀವೇನಂತೀರಿ?

16-2-2017 (ಬೆಳಕು ಜೂನ್ 2017)

* * * * *

## ಲೇಖನ – 6

# ಇದೆಂತಹ ಮೇಲ್ಪಂಕ್ತಿ

ಒಂದು ಕಾಲವಿತ್ತು, ಜನರು ಸಮಾಜಕ್ಕೆ ಹೆದರಿ ಬದುಕುತ್ತಿದ್ದರು. ಯಾವುದೇ ಕಾರಣಕ್ಕೆ ಸಮಾಜದಿಂದ ದೂಷಿತವಾಗಬಾರದು ಎಂಬ ರೀತಿ ಬದುಕು ನಡೆಸುತ್ತಿದ್ದರು. ಈಗ ನೋಡಿ ಸಾವಿರಾರು ಜನರೆದುರಿಗೆ, ಲಕ್ಷಾಂತರ ಮಂದಿ ಕುಳಿತು ಟೀವೀ ಮೂಲಕ ವೀಕ್ಷಿಸುತ್ತಿದ್ದರೂ ಎದೆ ಸೆಟೆಸಿಕೊಂಡು ಹೇಳತೊಡಗಿದ್ದಾರೆ ನಾಯಕ ನಟರು, ರಾಜಕೀಯ ನಾಯಕರು "ನಾನು ಎರಡು ಮದುವೆಯಾಗಿದ್ದೇನೆ, ನನ್ನ ಮೊದಲ ಹೆಂಡತಿಯಿಂದ ನನಗೆ ಎರಡು ಮಕ್ಕಳಾಗಿದ್ದಾರೆ, ನನ್ನ ಎರಡನೆಯ ಹೆಂಡತಿಯಿಂದ ನನಗೆ ಇನ್ನೆರಡು ಮಕ್ಕಳಾಗಿವೆ" ಎಂದು.

ಒಬ್ಬ ಸರ್ಕಾರಿ ನೌಕರನಾದರೆ ಅವನಿಗೆ ಕಾನೂನಿನ ಪ್ರಕಾರ ಒಂದು ಮದುವೆಯಾಗಬಹುದು. ಅವನು ಮತ್ತೊಂದು ಮದುವೆ ಆಗಬೇಕೆಂದರೆ ಮೊದಲ ಪತ್ನಿ ತೀರಿಕೊಂಡ ನಂತರ ಅಥವಾ ಮೊದಲ ಪತ್ನಿಯಿಂದ ಕಾನೂನಿನ ಪ್ರಕಾರ ವಿಚ್ಛೇದನ ಪಡೆದ ನಂತರವಷ್ಟೇ.ಇಬ್ಬರು ಪತ್ನಿಯರನ್ನು ಏಕಕಾಲಕ್ಕೆ ಹೊಂದುವುದು ಕಾನೂನು ಪ್ರಕಾರ ಅಪರಾಧ. ಆ ರೀತಿ ಇಬ್ಬರನ್ನು ಹೊಂದಿರುವುದನ್ನು ಪ್ರಶ್ನಿಸುವುದು ಸಾಧ್ಯವಾಗುವುದು ಆ ಇಬ್ಬರು ಪತ್ನಿಯರಲ್ಲಿ ಒಬ್ಬರಾಗಿದ್ದರೆ ಮಾತ್ರ ಅದು ಸಾಧ್ಯ. ಅವರನ್ನು ಹೊರತುಪಡಿಸಿ ಮೂರನೇ ವ್ಯಕ್ತಿ ಈ ರೀತಿ ಪ್ರಶ್ನಿಸಲಾಗುವುದಿಲ್ಲ ಎನ್ನುತ್ತದೆಯಂತೆ ಕಾನೂನು. ಈ ಗೊಂದಲದ ನಿಯಮದ

ಕಾನೂನಿನ ನೆರವನ್ನು ಪಡೆದೇ ಇಂತಹ ವ್ಯಕ್ತಿಗಳು ಇನ್ನೂ ಗಣ್ಯ ವ್ಯಕ್ತಿಗಳಾಗಿ ಮೆರೆಯುತ್ತಿರುವುದು ನಮ್ಮ ದೌರ್ಭಾಗ್ಯ.

ಇದು ವೈವಾಹಿಕ ಜೀವನಕ್ಕಷ್ಟೇ ಸೀಮಿತವಲ್ಲ. ಅದು ಕಾನೂನು ಉಲ್ಲಂಘಿಸುವ ಹಲವಾರು ಸಂಗತಿಗಳಿರಬಹುದು. ಲಂಚ ಪಡೆಯುವುದು, ಆದಾಯಕ್ಕೂ ಮೀರಿದ ಆಸ್ತಿ ಸಂಪಾದನೆ, ಅತ್ಯಾಚಾರದ ಆರೋಪ ಮುಂತಾದ ಹಲವಾರು ಪ್ರಕರಣಗಳಲ್ಲಿ ಸಮಾಜಕ್ಕೆ ಕೇರ್ ಮಾಡದೇ, ಇವು ಬರೀ ಆರೋಪಗಳಷ್ಟೇ, ಆರೋಪಗಳು ಸಾಬೀತಾದನಂತರವಷ್ಟೇ ನಾವು ಅಪರಾಧಿಗಳು ಎಂದು ನುಣುಚಿಕೊಳ್ಳುತ್ತಾರೆ. ಹಾಗೆ ಒಂದು ನ್ಯಾಯಾಲಯದಿಂದ ಅಪರಾಧಿ ಎಂದು ತೀರ್ಪು ಬಂದನಂತರವೂ, ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಅಡ್ಡದಾರಿಗಳನ್ನು ಹುಡುಕುತ್ತಿರುತ್ತಾರೆ. ತೀರ್ಪುಗಳನ್ನು ಪುನರ್ ಪರಿಶೀಲಿಸಲು ಅರ್ಜಿ ಹಾಕುವುದು, ಮೇಲಿನ ನ್ಯಾಯಾಲಯಕ್ಕೆ ಅರ್ಜಿ ಗುಜರಾಯಿಸಿ ಕೆಳಗಿನ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸುವುದು, ನ್ಯಾಯಾಧೀಶರ ಬದಲಾವಣೆಗೆ ಒತ್ತಾಯ ತರುವುದು, ಹೆಚ್ಚಿನ ನ್ಯಾಯಧೀಶರಿರುವ ಪೀಠಕ್ಕೆ ವರ್ಗಾವಣೆ ಬಯಸುವುದು, ಇತ್ಯಾದಿ ಪ್ರಯತ್ನಗಳು. ಒಟ್ಟಿನಲ್ಲಿ ಶಿಕ್ಷೆ ಜಾರಿಯಾಗುವುದನ್ನು ಮುಂದೂಡುವುದು ಅವರ ಮುಖ್ಯ ಉದ್ದೇಶ. ಮರಣದಂಡನೆಗೆ ಗುರಿಯಾದ ವ್ಯಕ್ತಿಯೂ ಅಂತಿಮ ಪ್ರಯತ್ನವಾಗಿ ರಾಷ್ಟ್ರಪತಿಯವರಲ್ಲಿ ಕ್ಷಮಾದಾನ ಅರ್ಜಿ ಸಲ್ಲಿಸುತ್ತಾನೆ. ರಾಷ್ಟ್ರಪತಿಯವರ ಕಛೇರಿಯಲ್ಲಿ ಅನಗತ್ಯ ವಿಳಂಬವಾದರೆ ಅದನ್ನೇ ಪ್ರಶ್ನಿಸಿ ಶಿಕ್ಷೆ ರದ್ದತಿಗೆ ಪ್ರಯತ್ನಿಸುತ್ತಾನೆ. ಹೀಗೆ ಕಾನೂನನ್ನು ತನ್ನ ಅನುಕೂಲಕ್ಕೆ ತಿರುಚಿಕೊಳ್ಳಲು ಅನುಗಾಲವೂ ಪ್ರಯತ್ನ ನಡೆಸುತ್ತಿರುತ್ತಾನೆ.

ಈ ಮೇಲಿನ ಉದಾಹರಣೆಗಳು ಉತ್ತಮವಾದುದಲ್ಲವಾದರೂ ಮುಂದಿನ ಪೀಳಿಗೆಗೆ ಯಾವ ರೀತಿಯ ಮೇಲ್ಪಂಕ್ತಿಗಳನ್ನು ಹಾಕಿಕೊಡುತ್ತದೆ? ನಾಳೆ ನಮ್ಮ ಮಕ್ಕಳು ಇಂತಹ ಉದಾಹರಣೆಗಳನ್ನು ಮುಂದಿಟ್ಟುಕೊಂಡು ಅವರ ದಾರಿಯಲ್ಲೇ ನಡೆದರೆ ನಾವು ಎಂತಹ ಸಮಾಜ ನಿರ್ಮಿಸುತ್ತಿದ್ದೇವೆ ಎಂಬ ಬಗೆಗೆ ಊಹಿಸುವುದಕ್ಕೂ ಭಯವಾಗುತ್ತದೆ. ಮಾಧ್ಯಮಗಳು ಇಂತಹ ನೀತಿ ನಿಯಮಗಳನ್ನು ಉಲ್ಲಂಘಿಸಿದ ಪ್ರಕರಣಗಳಿಗೆ ರಂಜನೀಯ ಪ್ರಚಾರ ನೀಡಿ ದಿನವಿಡೀ ವೀಕ್ಷಕರ ಮುಂದಿಡುತ್ತವೆ. ಇತ್ತೀಚೆಗೆ ಹಿರಿಯ ರಾಜಕಾರಣಿಯೊಬ್ಬ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ದೃಶ್ಯವನ್ನು ಇಡೀ ದಿನವೇಕೆ, ವಾರಗಟ್ಟಲೇ ತೋರಿಸಿದರೂ ಆ ರಾಜಕಾರಣಿಗೆ ಶಿಕ್ಷೆಯಾಗಲಿಲ್ಲ. ಅಪರಾಧ ಮಾಡುವವರಿಗೆ ಕಾನೂನಿನ ಭಯ ಹೋಗಿಬಿಟ್ಟಲ್ಲಿ ಅದು ಯುವಜನರಿಗೆ

ಯಾವ ರೀತಿಯ ಮುನ್ಸೂಚನೆ ನೀಡುತ್ತದೆ. ಅವರ ಕೃತ್ಯ ಎಷ್ಟು ಮಟ್ಟಿಗೆ ಸಮರ್ಥನೀಯ?.ಇಂತಹ ಪರಿಸ್ಥಿತಿಯನ್ನು ಸುಧಾರಿಸುವುದು ನಮ್ಮ ಕೈಲಿದೆಯೇ, ಇದ್ದರೆ ಈ ಸಮಸ್ಯೆಗಳಿಗೆಲ್ಲ ಯಾವ ರೀತಿಯ ಪರಿಹಾರ?

ಹಿಂದೆಲ್ಲಾ ಜನ ಪೋಲೀಸರನ್ನು ಕಂಡರೆ ಹೆದರುತ್ತಿದ್ದರು. ಪೋಲೀಸ್ ಸ್ಟೇಷನ್ನಿಗೆ ಹೋಗಲು ಹಿಂಜರಿಯುತ್ತಿದ್ದರು. ಯಾವುದಾದರೂ ಅಪವಾದದ ಮೇಲೆ ಪೋಲೀಸ್ ಸ್ಟೇಷನ್ನಿಗೆ ಹೋಗಬೇಕಾಗಿ ಬಂದರೆ ಸಮಾಜಕ್ಕೆ ಮುಖ ತೋರಿಸಲೂ ನಾಚಿಕೊಳ್ಳುತ್ತಿದ್ದರು. ಇಂದಿನ ಪರಿಸ್ಥಿತಿಯೇ ಬೇರೆ. ಅಪರಾಧಿಗಳು ಯಾವುದೇ ನಾಚಿಕೆಯಿಲ್ಲದೇ, ಭಯವಿಲ್ಲದೇ ಪೋಲೀಸ್ ಸ್ಟೇಷನ್ನಿಗೆ ಹೋಗಿಬರುತ್ತಾರೆ. ಅಕಸ್ಮಾತ್ ಜೈಲಿಗೆ ಹೋಗಬೇಕಾಗಿಬಂದರೂ ಯಾವುದೇ ಹಿಂಜರಿಕೆಯಿಲ್ಲದೇ, ಅಲ್ಲಿ ಹೊರಗಿಗಿಂತ ಒಳ್ಳೆಯ ವಾತಾವರಣ ಇರುತ್ತದೆ, ವಾರಕ್ಕೊಮ್ಮೆ ಮಾಂಸದೂಟ/ ಸಿಹಿ ಸಿಗುತ್ತದೆ. ಒಂದಾರು ತಿಂಗಳು ಹೇಗೊ ಕಳೆದು ಬೇಲ್‌ಮೇಲೆ ಹೊರಬರಬಹುದು ಎನ್ನುವ ಹುಂಬತನ; ಹಲವು ವರ್ಷಗಳು ಸಭ್ಯರಂತೆ ನಡೆದುಕೊಂಡುಬಿಟ್ಟರೆ ಸನ್ನಡತೆ ಆಧಾರದ ಮೇರೆ ಬಿಡುಗಡೆ ಹೀಗೆ ಅವರ ಯೋಚನಾ ಲಹರಿಯೇ ವಿಭಿನ್ನವಾಗಿರುತ್ತದೆ. ಇಂತಹ ಆಲೋಚನಾ ಲಹರಿಯಿಂದ ಮುಂದಿನ ಪೀಳಿಗೆಯನ್ನು ವಿಮುಖಗೊಳಿಸಿ, ಸಜ್ಜನರಾಗಿ ಬಾಳಲು ಕಲಿಸಲು ಏನು ಮಾಡಬೇಕು, ಬಲ್ಲವರೇ ಹೇಳಬೇಕು.

26–3–2017

* * * * *

## ಲೇಖನ – 7

# ಸಭೆ ಸಮಾರಂಭಗಳ ಪೂರ್ವ ಸಿದ್ಧತೆ

'ಅಯ್ಯೋ ಎಲ್ಲ ತಂದೆ ಅಂದ್ಕೊಂಡೆ, ಕರ್ಪೂರಾನೇ ತರ್ಲಿಲ್ಲಾರೀ' 'ಬೆಂಕಿಪೊಟ್ಟಣ ಎಲ್ಲೇ ದೀಪ ಹತ್ಸೋಕೆ ಬೆಂಕಿಪೊಟ್ಣ ತರೋದಲ್ವಾ' 'ಎಲ್ಲಾ ನಾನೇ ಮಾಡ್ಕೊಂಡು ಸಾಯ್ಬೇಕು' "ಹಣ್ಣಿನ ಬುಟ್ಟಿಗಳನ್ನು, ಹಾರಗಳನ್ನು ಇನ್ನೂ ತಂದೇಕೊಟ್ಟಿಲ್ಲ ಆ ಸಾಬಿ, ಒಟ್ನಲ್ಲಿ ನಮ್ ಮಾನಾ ಕಳ್ಯೋಕೇ ಇರೋವ್ರು ನೀವುಗಳು" ಈ ರೀತಿಯ ಕೂಗಾಟಗಳು ಬೈದಾಟಗಳು ಸಾಮಾನ್ಯವಾಗಿ ಕೇಳಿ ಬರೋದು ಸಭೆ, ಸಮಾರಂಭಗಳ ಉದ್ಘಾಟನಾ ಸಂದರ್ಭಗಳಲ್ಲಿ. ಅಯ್ಯೋ ಬಿಡ್ರಿ, ಸಮಾರಂಭ ಹೇಗೋ ನಡೆದುಹೋಗುತ್ತದೆ ಅನ್ನೋ ಮನೋಭಾವ ಬೇಡ.ಯಾವುದೇ ಸಭೆ ಸಮಾರಂಭ ನಡೆಸುವ ಹಿಂದಿನ ದಿನವಾದರೂ ಕುಳಿತುಕೊಂಡು ನಾಳಿನ ಸಭೆ, ಸಮಾರಂಭ ಹೇಗೆ ನಡೆಯಬೇಕು ಎಂಬುದರ ಕಲ್ಪನೆ ಮಾಡಿಕೊಂಡರೆ, ಅಲ್ಲಿನ ಅವಶ್ಯಕತೆಗಳೇನು? ಏನೇನು ಪದಾರ್ಥಗಳನ್ನು ಹೊಂದಿಸಿಟ್ಟುಕೊಳ್ಳಬೇಕು? ಯಾರು ಯಾರು ಯಾವ ಯಾವ ಕರ್ತವ್ಯಗಳನ್ನು ನಿರ್ವಹಿಸಬೇಕು? ಎಂಬುದು ಸ್ಪಷ್ಟವಾಗುತ್ತಾಹೋಗುತ್ತದೆ. ಆದರೆ ಶೇ.90 ಮಂದಿ ಇವುಗಳ ಕಡೆಗೆ ತಮ್ಮ ಗಮನ ಕೊಡುವುದೇ ಇಲ್ಲ. ಕೊನೆಯ ಗಳಿಗೆಯ ವರೆವಿಗೂ ಹೇಗೋ ನಡೆದು ಹೋಗುತ್ತದೆ ಎಂಬ ಉಡಾಫೆಯಲ್ಲೇ ಕಳೆದುಬಿಡುತ್ತಾರೆ. ಸಮಾರಂಭದ ಆ ಕ್ಷಣ ಹತ್ತಿರವಾಗುತ್ತಿದ್ದಂತೆ ಏನೋ ಅವಸರ, ಎಲ್ಲರ ಮೇಲೂ ರೇಗಾಟ, ಕಣ್ಣಮುಂದೆ ಇರುವ ವಸ್ತುಗಳೇ ಕಣ್ಣಿಗೆ ಅಗೋಚರ, ಕೊನೆಗೆ ಮೈಯೆಲ್ಲಾ

ಬೆವರು, ಗಾಬರಿ ವಿನಾಕಾರಣ ಕ್ಷಮಾಯಾಚನೆ ಮುಂತಾದ ಅನವಶ್ಯಕ ಕಾರ್ಯಗಳು.

ಯಾವುದೇ ಸಭೆ, ಸಮಾರಂಭಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಕೆಲವು ಸರಳ ನಿಯಮಗಳನ್ನು ಮನದಲ್ಲಿಟ್ಟುಕೊಂಡು ಮುನ್ನಡೆದರೆ, ಸಮಾರಂಭ ಯಶಸ್ವಿಯಾಗುವುದರಲ್ಲಿ ಅನುಮಾನವೇ ಇರಬೇಕಾಗಿಲ್ಲ. ಎಲ್ಲಕ್ಕೂ ಮೊದಲು ತೆಗೆದುಕೊಳ್ಳುವ ನಿರ್ಧಾರಗಳು ಸ್ಪಷ್ಟವಾಗಿರಬೇಕು. ಪದೇ ಪದೇ ನಿರ್ಧಾರಗಳನ್ನು ಬದಲಾಯಿಸುತ್ತಾ ಹೋಗುವುದು ಒಳ್ಳೆಯ ರೀತಿಯಲ್ಲ. ಸಮಾರಂಭಕ್ಕೆ ಸಿದ್ಧತೆ ಸಮಾರಂಭದ ದಿನಾಂಕ ಗೊತ್ತುಪಡಿಸಿದ ಕ್ಷಣದಿಂದಲೇ ಪ್ರಾರಂಭವಾಗಬೇಕು. ಸಣ್ಣ ಸಣ್ಣ ವಿಚಾರಗಳನ್ನೂ ಅಲಕ್ಷಿಸಬಾರದು. ಬ್ಯಾನರ್ ಕಟ್ಟುವುದಾದರೆ ಅದಕ್ಕೆ ದಾರ/ಹಗ್ಗ, ವೇದಿಕೆಯಲ್ಲಿ ಬ್ಯಾನರ್ ತಗುಲಿಸಬೇಕಾದರೆ ಸೇಫ್ಟಿಪಿನ್ನು ಹೀಗೆ ಅತಿ ಸಣ್ಣವಸ್ತು ಮರೆತರೂ, ನೂರಾರು ರೂ. ಖರ್ಚುಮಾಡಿಕೊಂಡು ಹೋದರೂ ಸಮಯಕ್ಕೆ ಸಿಗದೇ ಹೋಗಬಹುದಾದ ಹತ್ತಿಪ್ಪತ್ತು ಪೈಸೆ ಪದಾರ್ಥಗಳೂ ನಮ್ಮನ್ನು ಪೇಚಿಗೆ ಸಿಲುಕಿಸಬಹುದು. ಸಮಾರಂಭದ ಗಾತ್ರ, ವೈಭವ ಹೆಚ್ಚಾದಷ್ಟೂ ಸಮಾರಂಭದ ಸಿದ್ಧತೆ ಹೆಚ್ಚಾಗಿರುತ್ತದೆ ಮತ್ತು ಅದಕ್ಕೆ ಹೆಚ್ಚು ಕಾಲದ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ.

ಸಭೆ ಸಮಾರಂಭಗಳ ಮೊತ್ತಮೊದಲ ಸಿದ್ಧತೆ ಶುರುವಾಗುವುದು ಅದರ ದಿನಾಂಕ ನಿಗದಿಗೊಳಿಸುವ ಬಗೆಗೆ. ನೀವು ಪಂಚಾಂಗದಲ್ಲಿ ನಂಬಿಕೆ ಇಟ್ಟವರಾದಲ್ಲಿ, ತಿಥಿ, ಪಕ್ಷ, ಮಾಸ, ರಾಹುಕಾಲ, ಯಮಗಂಡಕಾಲ, ಶುಭಾಶುಭ ಶಕುನ ಮುಂತಾದುವುಗಳ ಬಗೆಗೆ ಗಮನಹರಿಸಿ, ಜೋಯಿಸರು ನಿಗದಿಪಡಿಸಿದ ದಿನಾಂಕದಂದೇ ಸಮಾರಂಭ ಇಟ್ಟುಕೊಳ್ಳಿ, ಪಂಚಾಂಗ ಬೇಡ, ಕ್ಯಾಲೆಂಡರೇ ಸಾಕು ಎನ್ನುವವರು ರಜಾ ದಿನ ಇಡಬೇಕೇ, ಕೆಲಸದ ದಿನವಾದರೂ ಸರಿಯೇ ಎಂಬುದರ ಮೇಲೆ ದಿನಾಂಕ ಗೊತ್ತುಪಡಿಸಿಕೊಳ್ಳಿ. ನಿಮ್ಮ ಅನುಕೂಲವೋ, ಅತಿಥಿ ಅಭ್ಯಾಗತರ ಸೌಕರ್ಯವೋ ಎನ್ನುವುದರ ಮೇಲೆ ಆ ದಿನಾಂಕ ನಿಗದಿಗೊಳ್ಳಬೇಕಾಗುತ್ತದೆ. ಆ ದಿನಾಂಕ ಹಿಂದಿನ ಹಾಗೂ ಮುಂದಿನ ದಿನ ಯಾವುದಾದರೂ ಹಬ್ಬ ಹರಿದಿನಗಳೋ, ಸಾರ್ವತ್ರಿಕ ರಜಾದಿನಗಳೋ ಇದ್ದಲ್ಲಿ ಅದು ನಿಮ್ಮ ಸಮಾರಂಭದ ದಿನ ಭಾಗವಹಿಸುವ ಆಸಕ್ತರ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆ ಎನ್ನುವುದನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಕೆಲಸದ ದಿನಾಂಕವಾದರೆ ಭಾಗವಹಿಸುವವರ ಸಂಖ್ಯೆ ಕಡಿಮೆಯಾಗಿರುತ್ತದೆ.

ದಿನಾಂಕ ಗೊತ್ತುಪಡಿಸಿದ ನಂತರ ಪೂರ್ವಸಿದ್ಧತಾ ಕಾರ್ಯದ ಪ್ರಾರಂಭ. ಅತಿಥಿಗಳು ತಾವೇ ತಮ್ಮ ವಾಹನದಲ್ಲಿಯೇ ಬರುತ್ತಾರೋ, ಸಾರ್ವತ್ರಿಕ ಸಾರಿಗೆ ಬಳಸುತ್ತಾರೋ ಅಥವಾ ನಾವೇ ಅವರನ್ನು ಕರೆತರಬೇಕಾಗುತ್ತದೆಯೋ ಎನ್ನುವ ಬಗೆಗೆ ಖಚಿತ ಮಾಹಿತಿ ಪಡೆದುಕೊಳ್ಳಿ. ಸಮಾರಂಭದಂದೇ ಬರುತ್ತಾರೋ, ಅದರ ಹಿಂದಿನ ದಿನವೇ ಬರುತ್ತಾರೆಯೋ ಎನ್ನುವುದೂ ನಿರ್ಧಾರವಾಗಬೇಕು. ಹಿಂದಿನ ದಿನವೇ ಬರುವ ಅತಿಥಿಗಳಿಗಾಗಿ ಊಟ, ವಸತಿ ಒದಗಿಸಬೇಕಾಗುತ್ತದೆ. ಅತಿಥಿಗಳ ಪಾತ್ರ ಏನು, ಅವರಿಗೆ ಯಾವ ರೀತಿಯ ಗೌರವಾರ್ಪಣೆ ಮಾಡಬೇಕು, ಯಾವಾಗ ಮಾಡಬೇಕು ಎನ್ನುವ ಬಗೆಗೆ ಖಚಿತ ನಿರ್ಧಾರ ಆಗಿರಬೇಕು. ಗೌರವಾರ್ಪಣೆಗೆ ಬೇಕಾದ ವಸ್ತುಗಳನ್ನು ಒಂದೆರಡು ದಿನಗಳ ಮೊದಲೇ ಹೊಂದಿಸಿಟ್ಟುಕೊಳ್ಳಬೇಕು. ಜೊತೆಗೆ ಪರಸ್ಥಳಗಳಿಂದ ಅತಿಥಿಗಳನ್ನು ಗೊತ್ತುಪಡಿಸಿದ್ದ ಪಕ್ಷದಲ್ಲಿ ಅವರಿಗೆ ಪ್ರಯಾಣ ಭತ್ಯ ಅಥವಾ ಗೌರವಧನ ನೀಡುವುದು ಸತ್ಸಂಪ್ರದಾಯ.

ಈ ದಿನಗಳಲ್ಲಂತೂ ಮದುವೆ ಛತ್ರ ಖಾಲಿಯಿರುವ ದಿನಾಂಕವನ್ನು ಆಧರಿಸಿಯೇ ಮದುವೆ ದಿನಾಂಕವೂ ನಿಗದಿಯಾಗಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅಂತಹುದರಲ್ಲಿ ಸಮಾರಂಭದ ಸ್ಥಳನಿಗದಿ ಅತಿ ಜರೂರಾಗಿ ಆಗಬೇಕಾಗಿರುತ್ತದೆ. ಆಗಮಿಸಬಹುದಾದ ಜನರನ್ನು ಆಧರಿಸಿ ಪಾರ್ಟಿ ಹಾಲೋ, ಸಭಾಂಗಣವೋ, ಮೈದಾನವೋ ಎನ್ನುವುದು ನಿರ್ಧಾರವಾಗಬೇಕು. ಸ್ಥಳ ದೊಡ್ಡದಾದಷ್ಟೂ ಅದಕ್ಕೆ ಹೊಂದಿಸಬೇಕಾದ ಧ್ವನಿವರ್ಧಕ, ದೀಪವ್ಯವಸ್ಥೆ ಹೆಚ್ಚಾಗಿರಬೇಕು. ಸಮಾರಂಭದ ಸ್ಥಳಕ್ಕೆ ಸಾರಿಗೆ ವ್ಯವಸ್ಥೆ ಹೇಗೆ? ಸಾರ್ವಜನಿಕ ಸಾರಿಗೆ ಅನುಕೂಲ ಇದೆಯೋ ಇಲ್ಲವೋ, ಖಾಸಗೀ ವಾಹನಗಳಲ್ಲಿ ಬಂದರೆ ಅವುಗಳ ನಿಲುಗಡೆವ್ಯವಸ್ಥೆ ಮಾಡಬೇಕಾಗುತ್ತದೆ. ನಗರದ ಇತರೆ ಸಾರಿಗೆಗೆ ಅನಾನುಕೂಲ ಆಗದಂತಹ ರೀತಿಯಲ್ಲಿ ನಿಲುಗಡೆ ಆಗಬೇಕು. ಇಲ್ಲದಿದ್ದಲ್ಲಿ ಪೋಲೀಸರ ಕಿರಿಕಿರಿ ತಪ್ಪಿದ್ದಲ್ಲ.

ಸಮಾರಂಭದ ಹಿಂದಿನ ದಿನವೇ ವೇದಿಕೆ ಸಿದ್ಧಗೊಳಿಸಿಕೊಳ್ಳಬೇಕು. ಕಟ್ಟಬೇಕಾದ ಬ್ಯಾನರ್, ಜೋಡಿಸಿಡಬೇಕಾದ ಕುರ್ಚಿ, ಟೇಬಲ್, ಧ್ವನಿವರ್ಧಕ ಸೆಟ್ಟು, ದೀಪಾಲಂಕಾರ, ಉದ್ಘಾಟನೆಗೆ ಬೇಕಾದ ಸಾಮಗ್ರಿಗಳು ಹೀಗೆ ಎಲ್ಲ ಸಿದ್ಧತೆ ಹಿಂದಿನ ರಾತ್ರಿಯೇ ಆಗಿರಬೇಕು. ಧ್ವನಿವರ್ಧಕ ವ್ಯವಸ್ಥೆ, ದೀಪಾಲಂಕಾರ ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ಮನದಟ್ಟು ಮಾಡಿಕೊಂಡಿರಿ. ವಿದ್ಯುತ್ ಕೈಕೊಟ್ಟಲ್ಲಿ ಅನಾನುಕೂಲವಾಗಬಾರದೆಂದಿದ್ದಲ್ಲಿ

ಪರ್ಯಾಯ ಬ್ಯಾಟರಿ ವ್ಯವಸ್ಥೆ ಹೊಂದಿಸಿಟ್ಟುಕೊಂಡಿರಬೇಕು. ಹೀಗೆ ಹಿಂದಿನ ಸಾಯಂಕಾಲ ಅಥವಾ ರಾತ್ರಿ ಸಿದ್ಧತೆ ಮಾಡುವುದರಿಂದ ಯಾವುದಾದರೂ ವಸ್ತುಗಳನ್ನು ಮರೆತಿದ್ದರೂ ಅವುಗಳನ್ನು ಯಾವುದೇ ಆತಂಕವಿಲ್ಲದೇ ಹೊಂದಿಸಿಕೊಳ್ಳಲು ಸಾಧ್ಯವಾಗುತ್ತದೆ.

ದಿನಾಂಕ ಗೊತ್ತುಪಡಿಸಿ, ಅತಿಥಿಗಳ ಪಟ್ಟಿ ಸಿದ್ಧಗೊಳ್ಳುತ್ತಿದ್ದಂತೆಯೇ ಆಹ್ವಾನ ಪತ್ರಿಕೆ ಸಿದ್ಧತೆ ಪ್ರಾರಂಭವಾಗಬೇಕು. ಆಹ್ವಾನಪತ್ರಿಕೆ ಯಾವ ರೀತಿ ಇರಬೇಕು, ಎಷ್ಟು ವರ್ಣಗಳನ್ನು ಬಳಸಬೇಕು, ಅಕ್ಷರಗಳು ಯಾವ ರೀತಿ ಜೋಡಣೆ-ಯಾಗಬೇಕು, ಯಾವಯಾವ ಸ್ಥಳಗಳಿಗೆ ಯಾವ ರೀತಿ (ಅಂಚೆಮೂಲಕ/ವೈಯುಕ್ತಿಕವಾಗಿ ಇತ್ಯಾದಿ) ಕಳುಹಿಸಿಕೊಡಬೇಕು ಎಂಬುದರ ಮೇಲೆ ಆಹ್ವಾನ ಪತ್ರಿಕೆ ಎಷ್ಟು ದಿನಗಳ ಮುಂಚೆ ನಿಮ್ಮ ಕೈ ಸೇರಬೇಕು ಎನ್ನುವುದು ನಿರ್ಧಾರ ಆಗಬೇಕು. ಸಮಾರಂಭದಲ್ಲಿನ ಅತಿಥಿಗಳಿಗೆ, ವಿಶೇಷ ಆಹ್ವಾನಿತರಿಗೆ, ಪತ್ರಕರ್ತರಿಗೆ ವಿಶೇಷ ಆಸನ ವ್ಯವಸ್ಥೆ ಮಾಡಬೇಕೇ ಬೇಡವೇ, ಅಥವಾ ಮುಂದಿನ ಕೆಲಸಾಲುಗಳನ್ನು ಅವರುಗಳಿಗಾಗೇ ಕಾದಿರಿಸಬೇಕೇ ಬೇಡವೇ ಎನ್ನುವುದೂ ನಿರ್ಧಾರವಾಗಬೇಕಾಗುತ್ತದೆ.

ಆಹ್ವಾನ ಪತ್ರಿಕೆಯ ಜೊತೆಜೊತೆಗೇ ಸಿದ್ಧವಾಗಬೇಕಾದ ಮತ್ತೊಂದು ಮುದ್ರಿತ ವಸ್ತು ಬ್ಯಾಡ್ಜ್. ಪದಾಧಿಕಾರಿಗಳಿಗೆ, ಮುಖ್ಯ ಅತಿಥಿಗಳಿಗೆ, ಸಭಾಧ್ಯಕ್ಷರಿಗೆ ಹೀಗೆ ಬೇರೆಬೇರೆ ರೀತಿಯ ಬ್ಯಾಡ್ಜ್‌ಗಳ ಅಗತ್ಯವಿದ್ದರೆ ಅವುಗಳನ್ನೂ ಮುದ್ರಿಸಿಟ್ಟು ಕೊಳ್ಳಬೇಕಾಗುತ್ತದೆ. ನೋಡಿದ ತಕ್ಷಣಕ್ಕೆ ಬೇರೆ ಬೇರೆ ಸ್ತರದ ವ್ಯಕ್ತಿಗಳ ಬ್ಯಾಡ್ಜ್ ಗುರುತಿಸುವಂತಿರಬೇಕು. ಮುಖ್ಯ ಅತಿಥಿಗಳಿಗೆ ಸ್ಥಳ ನಿಗದಿಗೊಳಿಸಿದ್ದ ಪಕ್ಷದಲ್ಲಿ ಅವರ ಹೆಸರನ್ನೊಳಗೊಂಡ ನಾಮಫಲಕಗಳನ್ನು ಸಿದ್ಧಪಡಿಸಿಟ್ಟುಕೊಂಡು ಯಾರು ಎಲ್ಲಿ ಕುಳಿತುಕೊಳ್ಳಬೇಕಾಗಿದೆಯೋ ಆ ಸ್ಥಳದಲ್ಲಿ ಸರಿಯಾಗಿ ಇಟ್ಟಿರಬೇಕು.

ಸಮಾರಂಭದ ಹಿಂದಿನ ಸಂಜೆ ಕಡ್ಡಾಯವಾಗಿ ಪದಾಧಿಕಾರಿಗಳ ಸಭೆ ಕರೆಯಬೇಕಾಗುತ್ತದೆ. ಎಲ್ಲ ಸಿದ್ಧತೆಗಳನ್ನೂ ಪರಾಮರ್ಶಿಸಿ, ಏನಾದರೂ ಕೊರತೆಗಳು ಕಂಡುಬಂದರೆ ಅದನ್ನು ಸರಿಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಒಬ್ಬನೇ ವ್ಯಕ್ತಿ ಎಲ್ಲ ಸಿದ್ಧತೆಗಳನ್ನು ಮಾಡಹೊರಟಾಗ ಏನಾದರೂ ಎಡವಟ್ಟುಗಳು ಆಗಬಹುದಾದುದರಿಂದ, ಹಲವರನ್ನು ಒಟ್ಟುಗೂಡಿಸಿಕೊಂಡು ಚರ್ಚೆನಡೆಸಿ ಇತರರ ಸಲಹೆಗಳನ್ನು ಪರಿಗಣಿಸಿ ಸಮಾರಂಭವನ್ನು ಯಶಸ್ವಿಗೊಳಿಸಲು ಪ್ರಯತ್ನಿಸಬೇಕು.

ಸಮಾರಂಭದ ವಿಚಾರ ಸಾರ್ವಜನಿಕವಾಗಿದ್ದಲ್ಲಿ ಸಮಾರಂಭದ ಎರಡು ದಿನಗಳ ಮುಂಚೆ ಸುದ್ದಿಗೋಷ್ಠಿ ಏರ್ಪಡಿಸಿ ಮಾಧ್ಯಮಗಳಿಗೆ ಲಿಖಿತ ಮಾಹಿತಿ ನೀಡಬೇಕು. ಸಮಾರಂಭ ಮುಗಿದ ನಂತರವೂ ಚಿತ್ರಸಹಿತ ವರದಿ ಮಾಧ್ಯಮಗಳಿಗೆ ತಲುಪಿಸುವ ವ್ಯವಸ್ಥೆ ಆಗಬೇಕು. ಸಾಧ್ಯವಾದರೆ ಒಬ್ಬರಿಗೆ ಈ ಪ್ರಚಾರದ ಹೊಣೆಗಾರಿಕೆಯನ್ನು ವಹಿಸಿಬಿಡುವುದು ಒಳ್ಳೆಯದು.

ಮಾರನೇ ದಿನದ ಸಮಾರಂಭದಲ್ಲಿ ಯಾರಿಂದ ಪ್ರಾರ್ಥನೆ, ಯಾರು ಸ್ವಾಗತ ಮತ್ತು ಪರಿಚಯ ಮಾಡಿಕೊಡಬೇಕು, ವಂದನಾರ್ಪಣೆ ಯಾರು ಮಾಡುವುದು, ಅತಿಥಿಗಳನ್ನು ಗೌರವಿಸಬೇಕಾದ ಸಂದರ್ಭದಲ್ಲಿ ಗೌರವಿಸುವ ವಸ್ತುಗಳನ್ನು ತಂದು ಗೌರವಿಸುವ ವ್ಯಕ್ತಿಗಳಿಗೆ ತಲುಪಿಸುವ ಕೆಲಸವನ್ನು ಕೆಲವರಿಗೆ ನಿರ್ದಿಷ್ಟವಾಗಿ ವಹಿಸಬೇಕು. ಇಲ್ಲಿ ದೊಡ್ಡವರು, ಚಿಕ್ಕವರು, ಅವರು ಈ ಕೆಲಸ ಮಾಡುವರೋ ಇಲ್ಲವೋ ಎಂಬೆಲ್ಲ ಸಂದಿಗ್ಧಗಳಿಗೆ ಅವಕಾಶ ಇರಬಾರದು. ಕೆಲವು ಸಂಸ್ಥೆಗಳಲ್ಲಿ ವೇದಿಕೆಗೆ ಮಾತ್ರ ಭೂಷಣರು/ಸಭಾಸದರು ಇರುತ್ತಾರೆ. ಅಂತಹವರನ್ನು ದೂರವಿಟ್ಟು, ನಮ್ಮೊಂದಿಗೆ ದುಡಿಯುವ ಯುವ ಪಡೆಯೊಂದನ್ನು ಜೊತೆಗಿಟ್ಟುಕೊಂಡಿದ್ದರೆ ಒಳ್ಳೆಯದು.

ಸಮಾರಂಭ ಪ್ರಾರಂಭಿಸುವ ಮುನ್ನ ಅತಿಥಿಗಳನ್ನು ವೇದಿಕೆಗೆ ಆಹ್ವಾನಿಸಬೇಕು. ಅತಿಥಿಗಳನ್ನು ಗೌರವಯುತವಾಗಿ ವೇದಿಕೆಗೆ ಕರೆತರುವವರು ಯಾರು ಎಂಬುದನ್ನು ಮೊದಲೇ ನಿರ್ಧರಿಸಿ, ಅವರುಗಳಿಗೆ ಅತಿಥಿಗಳ ಪರಿಚಯ ಮಾಡಿಸಿಟ್ಟಿರಬೇಕು. ಯಾರ ಹೆಸರೋ ಹೇಳಿದಾಗ ಮತ್ಯಾರನ್ನೋ ಕರೆತರುವ ಆಭಾಸ ಆಗಕೂಡದಲ್ಲವೇ? ಆದುದರಿಂದ ಕರೆತರುವವರು ಅತಿಥಿಗಳ ಪರಿಚಯ ಮೊದಲೇ ಹೊಂದಿರಬೇಕು. ಅತಿಥಿಗಳನ್ನು ವೇದಿಕೆಗೆ ಕರೆತರುವಾಗ ಅವರಿಗೆ ಪುಷ್ಪ ನೀಡಬೇಕೋ, ಅವರು ವೇದಿಕೆಯನ್ನು ಅಲಂಕರಿಸಿದಾಗ ಅವರಿಗೆ ಪುಷ್ಪ ನೀಡಬೇಕೇ ಅಥವಾ ಅವರನ್ನು ಸ್ವಾಗತಿಸಿದಾಗ ಅವರಿಗೆ ಪುಷ್ಪ ನೀಡಬೇಕೆ ಮೊದಲೇ ನಿರ್ಧಾರವಾಗಿರಬೇಕು.

ಉದ್ಘಾಟನಾ ಕ್ಷಣ: ಉದ್ಘಾಟನೆ ಸಮಾರಂಭದ ಮುಖ್ಯ ಘಟ್ಟ. ಕೆಲವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆ ಮಾಡಿಸಿದರೆ, ಮತ್ತೆ ಕೆಲವರು ಯಾವುದಾದರೂ ವಾದ್ಯ ಬಾರಿಸುವುದರ ಮೂಲಕ ಉದ್ಘಾಟನೆ ನೆರವೇರಿಸಬಹುದು. ಇನ್ನೂ ಕೆಲವು ಉದ್ಘಾಟನೆಗಳು ಸಸಿ ನೆಡುವುದರಿಂದ, ಪಾರಿವಾಳ ಹಾರಿಸುವುದರೊಡನೆ ನಡೆಯಬಹುದು. ಅದೇನೇ ಇರಲಿ ದೀಪ ಬೆಳಗಿಸಿ ಉದ್ಘಾಟನೆ ಮಾಡುವುದು ಸರ್ವೇಸಾಮಾನ್ಯ ಪದ್ಧತಿ. ಈ ರೀತಿಯ

ಉದ್ಘಾಟನೆ ನೀವು ಹಮ್ಮಿ ಕೊಂಡಿದ್ದರೆ ಹಿಂದಿನ ದಿನವೇ ದೀಪ, ಎಣ್ಣೆ, ಬತ್ತಿ, ಕರ್ಪೂರ, ಬೆಂಕಿಕಡ್ಡಿ, ಮೇಣದ ಬತ್ತಿ ಹೊಂದಿಸಿಕೊಳ್ಳುವುದು ಮರೆಯಬೇಡಿ.

ವೇದಿಕೆಯಲ್ಲಿ ಎಷ್ಟು ಮಂದಿ ಅತಿಥಿಗಳು ಕುಳಿತುಕೊಳ್ಳುವರೋ ಅಷ್ಟು ಆಹ್ವಾನಪತ್ರಿಕೆ ಪ್ರತಿಗಳನ್ನು ಇಟ್ಟಿರಬೇಕು. ಇದರಿಂದ ಯಾರು ಯಾವಾಗ ಮಾತನಾಡಬೇಕು, ಅವರ ಪಾತ್ರವೇನು ಎಂಬ ಬಗೆಗೆ ಸ್ಪಷ್ಟ ಮಾಹಿತಿ ಸಿಗುತ್ತದೆ. ಆಹ್ವಾನಪತ್ರಿಕೆಯ ಜೊತೆಗೆ ಒಂದು ಸಣ್ಣ ನೋಟ್‌ಪ್ಯಾಡ್ ಅಥವಾ ಪೇಪರ್ ಜೊತೆಗೆ ಒಂದು ಪೆನ್ ಇಟ್ಟಿದ್ದರೆ ಅತಿಥಿಗಳು ಏನಾದರೂ ಗುರುತು ಹಾಕಿಕೊಳ್ಳಲು ಅನುಕೂಲವಾಗುತ್ತದೆ. ಮಾತನಾಡುವ ಮುನ್ನ ಕೆಲವರಿಗೆ ನೀರು ಕುಡಿಯುವುದು ಸಾಮಾನ್ಯ; ಅದೇ ರೀತಿ ಮಾತನಾಡುವಾಗ ಮಧ್ಯೆ ನೀರು ಕುಡಿಯಬೇಕೆನಿಸಬಹುದು. ಆದುದರಿಂದ ಸಮಾರಂಭ ಪ್ರಾರಂಭವಾಗವ ಮುನ್ನ ಅತಿಥಿಗಳ ಸಂಖ್ಯೆಗೆ ಅನುಗುಣವಾಗಿ ನೀರಿನ ಬಾಟಲ್‌ಗಳನ್ನು ಸಾರ್ವಜನಿಕವಾಗಿ ಕಾಣದಂತೆ ಇಟ್ಟಿರುವುದು ಒಳ್ಳೆಯದು.

ಸಮಾರಂಭ ಯಾರದಾದರೂ ನೆನಪಿನಲ್ಲಿ ನಡೆಸುತ್ತಿದ್ದರೆ ಅಂತಹ ವ್ಯಕ್ತಿಗಳ ಫೋಟೋ, ಅದನ್ನಿಡಲು ಸ್ಟೂಲು/ಟೇಬಲ್, ಗಂಧದ ಕಡ್ಡಿ, ಅದನ್ನು ಸಿಕ್ಕಿಸಿಡಲು ಸ್ಟ್ಯಾಂಡ್, ಟೇಬಲ್ ಕ್ಲಾತ್ ಮುಂತಾದವುಗಳನ್ನು ಹೊಂದಿಸಿಕೊಳ್ಳಿ.

ಮುಖ್ಯವಾದ ಮತ್ತೊಂದು ಕಾರ್ಯಕ್ರಮ ಪಟ್ಟಿ, ಅದರ ಹಲವು ಪ್ರತಿಗಳನ್ನು ಮಾಡಿಸಿ ಒಂದನ್ನು ಸಭಾಧ್ಯಕ್ಷರ ಮುಂದೆ ಮತ್ತೊಂದನ್ನು ನಿರೂಪಕರ ಕೈಲಿ ನೀಡಬೇಕು.

ಅತಿಥಿಗಳ ಪರಿಚಯ ಮಾಡುವವರು, ನಿರೂಪಕರು, ಸ್ವಾಗತ ಹಾಗೂ ವಂದನಾರ್ಪಣೆ ಮಾಡುವವರು ತಮ್ಮ ಪಾಲಿನ ಜವಾಬ್ದಾರಿಯನ್ನು ಶ್ರದ್ಧೆಯಿಂದ ತಪ್ಪಿಲ್ಲದೆ ನಿರ್ವಹಿಸಲು ಮೊದಲೊಮ್ಮೆ ವಿಷಯವನ್ನು ಬರೆದಿಟ್ಟುಕೊಂಡು ಓದಿ ಅಭ್ಯಾಸಮಾಡಿಕೊಂಡಿದ್ದರೆ, ಯಾವುದೇ ಆಭಾಸ ಆಗುವುದಿಲ್ಲ.

ಗೌರವಾರ್ಪಣೆ ಸ್ಮರಣಿಕೆಗಳನ್ನು ಕೊಡುವ ಸಂದರ್ಭಗಳಿದ್ದಲ್ಲಿ ಅವುಗಳನ್ನು ಸರಿಯಾದ ಕ್ರಮದಲ್ಲಿ ಹೊಂದಿಸಿಟ್ಟುಕೊಳ್ಳುವುದು ಒಳ್ಳೆಯದು. ಶಾಲುಹೊದಿಸಬೇಕಾದರೆ ಅದನ್ನು ತ್ರಿಕೋನಾಕಾರದಲ್ಲಿ ಮಡಿಸಿಟ್ಟುಕೊಂಡಿದ್ದರೆ ಹೊದಿಸಲು ಸುಲಭವಾಗುತ್ತದೆ. ಕೊನೆಗೆ ಈ ವಸ್ತುಗಳನ್ನು ಅತಿಥಿಗಳಿಗೆ ತಲುಪಿಸಲು ಅವು ಹಿಡಿಸುವಷ್ಟು ದೊಡ್ಡ ಚೀಲಗಳನ್ನು ಹೊಂದಿಸಿಟ್ಟುಕೊಳ್ಳಿ.

ಸಮಾರಂಭದಲ್ಲಿ ಊಟ ತಿಂಡಿ ವ್ಯವಸ್ಥೆ ಮಾಡಬೇಕಾದಲ್ಲಿ ಅದರ ಸಿದ್ಧತೆ: ಸಾಕಷ್ಟು ಮುಂಚೆಯೇ ಬರಬಹುದಾದ ಜನರ ಲೆಕ್ಕ ಹಿಡಿದು ಮೆನು ನಿರ್ಧರಿಸಿ ಅಡುಗೆಯವರಿಗೆ ಆರ್ಡರ್ ನೀಡಿ. ಬಡಿಸುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅವರೇ ನೋಡಿಕೊಳ್ಳುವುದಾದರೆ ತೊಂದರೆಯಿಲ್ಲ. ನೀವೇ ನಿರ್ವಹಿಸಬೇಕಾದಲ್ಲಿ ಊಟ/ತಿಂಡಿ ಬಡಿಸಲು ತಟ್ಟೆ, ನೀರಿನ ಲೋಟ, ಕಾಫಿ ಕಪ್ಪು, ಸ್ಪೂನುಗಳು, ತಿಂದ ತಟ್ಟೆ/ಲೋಟ ಹಾಕಲು ವೇಸ್ಟ್ ಬ್ಯಾಗುಗಳು, ನಂತರದ ಕ್ಲೀನಿಂಗ್ ವ್ಯವಸ್ಥೆ ಇವುಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ.

ಅಕಸ್ಮಾತ್ ಊಹಿಸಿದಷ್ಟು ಮಂದಿ ಬರದೇ ಹೋದಲ್ಲಿ, ಉಳಿದ ಊಟ, ತಿಂಡಿಗಳನ್ನು ವೇಸ್ಟ್ ಮಾಡುವುದಕ್ಕೆ ಬದಲಾಗಿ ಹಸಿದವರಿಗೆ ವಿತರಿಸುವ ವ್ಯಕ್ತಿ, ಸಂಸ್ಥೆಗಳವರಿಗೆ ಕರೆಮಾಡಿದರೆ ಅವರೇ ಬಂದು ತೆಗೆದುಕೊಂಡುಹೋಗುತ್ತಾರೆ. ಕೇಂದ್ರ ಸರ್ಕಾರವೂ ಈ ನಿಟ್ಟಿನಲ್ಲಿ ಕಾರ್ಯತತ್ಪರವಾಗಿ ಒಂದು ದೂರವಾಣಿ ಸಂಖ್ಯೆ 1098 ನೀಡಿದೆ.

ಸಮಯಪಾಲನೆ: ಯಾವುದೇ ಸಭೆ, ಸಮಾರಂಭವಾಗಲೀ ನಿಗದಿತ ಸಮಯಕ್ಕೆ ಸರಿಯಾಗಿ ಪ್ರಾರಂಭಗೊಳ್ಳುವಂತೆ ನೋಡಿಕೊಳ್ಳಬೇಕು. ಸಭೆಯಲ್ಲಿ ಪಾಲ್ಗೊಳ್ಳುವವರು ಅತಿಥಿಗಳಾಗಿರಬಹುದು, ಸಭಿಕರಾಗಿರಬಹುದು ಹಲವಾರು ಕಾಯಿಲೆಗಳಿಂದ ಬಳಲುತ್ತಿರುವವರು ಇರಬಹುದು. ಅದರಲ್ಲೂ ಸಕ್ಕರೆ ಕಾಯಿಲೆ, ರಕ್ತದೊತ್ತಡ ಇಂದು ಶೇ.90 ಮಂದಿಗಿರುತ್ತದೆ. ಅಂತಹುದರಲ್ಲಿ ಸಮಾರಂಭವನ್ನು ಬೆಳಗ್ಗೆ ತಡವಾಗಿ ಪ್ರಾರಂಭಿಸಿ, ಊಟದ ವೇಳೆಯಾದರೂ ಮುಕ್ತಾಯ ಗೊಳಿಸದೇ ಇದ್ದಲ್ಲಿ, ಅಂತಹವರಿಗೆ ಬಹಳ ಅನಾನುಕೂಲವಾಗುತ್ತದೆ. ಈ ಅಂಶವನ್ನು ಗಮನದಲ್ಲಿರಿಸಿಕೊಂಡು ಬೆಳಗಿನ ಸಮಾರಂಭವಾದಲ್ಲಿ ಮಧ್ಯಾಹ್ನ 1–30 ರ ಒಳಗೆ, ಸಂಜೆ ಸಮಾರಂಭವಾದಲ್ಲಿ ರಾತ್ರಿ 8–30 ರ ಒಳಗೆ ಮುಗಿಯುವಂತೆ ನೋಡಿಕೊಳ್ಳುವುದು ಅತ್ಯವಶ್ಯಕ. ಸಮಾರಂಭ ಮುಕ್ತಾಯ ಮಧ್ಯಾಹ್ನ 1–30 ಕ್ಕೆ ಅಥವಾ ರಾತ್ರಿ 8–30 ಕ್ಕೆ ಮುಗಿಯುವ ಸಾಧ್ಯತೆಯಿಲ್ಲದಿದ್ದಲ್ಲಿ ಭೋಜನ ವ್ಯವಸ್ಥೆ ಮಾಡಬೇಕಾಗುತ್ತದೆ.

ಮಾತನಾಡುವವರಿಗೂ ಸಮಯ ನಿಗದಿಗೊಳಿಸುವುದು ಸೂಕ್ತ. ಮುಖ್ಯ ಭಾಷಣಕಾರರಾದರೆ ಅವರಿಗೆ 30 ನಿಮಿಷ, ಉಳಿದವರಿಗೆ 15 ನಿಮಿಷ ಸಮಯ ನಿಗದಿಗೊಳಿಸುವುದು ಸೂಕ್ತ ಎನಿಸುತ್ತದೆ. ಮಾತನಾಡುವವರ ಸಂಖ್ಯೆ ಹೆಚ್ಚಾದರೆ ಈ ಸಮಯದ ನಿಗದಿಯನ್ನು ಕಡಿಮೆಮಾಡಿಕೊಳ್ಳಬಹುದು. ಒಟ್ಟಾರೆ ಇಡೀ ಸಮಾರಂಭದ ಅವಧಿ ಎರಡೂವರೆ ಘಂಟೆಗಳಿಗಿಂತ ಹೆಚ್ಚಿರಬಾರದು.ವೇಳೆ

ಹೆಚ್ಚಾಗುತ್ತಾ ಹೋದಂತೆ, ಸಭಿಕರ ಸಂಖ್ಯೆ ಇಳಿಮುಖವಾಗುತ್ತಾ ಹೋಗಿ, ಅಧ್ಯಕ್ಷ ಭಾಷಣದ ವೇಳೆಗೆ ಹತ್ತೋ ಇಪ್ಪತ್ತೋ ಮಂದಿ ಇದ್ದು, ವಂದನಾರ್ಪಣೆಗೆ ಅವರೂ ಇಲ್ಲವಾಗುವ ಪರಿಸ್ಥಿತಿ ಉಂಟಾಗಬಹುದು. ಆದುದರಿಂದ ಸಮಯದ ಶಿಸ್ತು ಸಭೆ, ಸಮಾರಂಭಗಳಲ್ಲಿ ಅತಿಮುಖ್ಯ.

ಪುಸ್ತಕ ಬಿಡುಗಡೆ ಸಮಾರಂಭದ ಭಾಗವಾಗಿದ್ದಲ್ಲಿ ಮುಂದಿನ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದು ಉತ್ತಮ. ಬಿಡುಗಡೆಗೊಳಿಸಬೇಕಾದ ಪುಸ್ತಕಗಳನ್ನು ಸುಲಭವಾಗಿ ಬಿಡಿಸುವಂತೆ ಕಟ್ಟಿರಬೇಕು. ವೇದಿಕೆಯಲ್ಲಿ ಎಷ್ಟು ಮಂದಿ ಇರುತ್ತಾರೋ ಅಷ್ಟು ಅಥವಾ ಅದಕ್ಕಿಂತ 2 ಹೆಚ್ಚು ಪ್ರತಿಗಳು ಕಟ್ಟಿನಲ್ಲಿ ಇರುವಂತೆ ನೋಡಿಕೊಳ್ಳಬೇಕು. ಒಂದಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಬಿಡುಗಡೆಗೊಳಿಸುವಾಗ ಕಟ್ಟುಗಳ ಮೇಲೆ ಆಯಾ ಕಟ್ಟಿನಲ್ಲಿರುವ ಪುಸ್ತಕಗಳ ಹೆಸರುಗಳನ್ನು ನಮೂದಿಸಿರಬೇಕು. ಪುಸ್ತಕಗಳ ಮಾರಾಟ ಇಟ್ಟುಕೊಂಡಿದ್ದಲ್ಲಿ ಅಧ್ಯಕ್ಷ ಭಾಷಣಕ್ಕೆ ಮುನ್ನ ಪುಸ್ತಕಗಳ ಮಾರಾಟ ವ್ಯವಸ್ಥೆಗೆ ಕೌಂಟರ್‌ಗಳನ್ನು ನಿರ್ಮಿಸಿರಬೇಕು.

ಫೋಟೋಗ್ರಾಫರಿಗೆ ತೆಗೆದ ಎಲ್ಲ ಚಿತ್ರಗಳ ಪ್ರತಿಮಾಡಿಕೊಡುವ ಬದಲಾಗಿ ಸ್ಟ್ಯಾಂಪ್ ಸೈಜಿನ ಪೋಸ್ಟ್ ಕಾರ್ಡ್ ಪ್ರಿಂಟುಗಳನ್ನಾಗಲೀ ಅಥವಾ ಒಂದು ಸಾಫ್ಟ್ ಕಾಪಿಯನ್ನಾಗಲೀ ನೀಡಲು ತಿಳಿಸುವುದರಿಂದ ಖರ್ಚು ಉಳಿತಾಯವಾದೀತು. ನಮಗೆ ಬೇಕೆನಿಸಿದ ಚಿತ್ರಗಳನ್ನು ನಂತರದಲ್ಲಿ ದೊಡ್ಡ ಸೈಜಿಗೆ ಪ್ರಿಂಟ್ ಹಾಕಿಸಿಕೊಳ್ಳಬಹುದು.

ಯಾವುದೇ ಸಮಾರಂಭ ನಡೆಸಲು ಮಾಡಿಕೊಳ್ಳಬೇಕಾದ ಒಂದು ಚೆಕ್ ಲಿಸ್ಟ್ ಸಿದ್ಧಮಾಡಿಟ್ಟುಕೊಳ್ಳಿ. ಅದರಲ್ಲಿ ಈ ಮೇಲೆ ಹೇಳಿದ ಮತ್ತೂ ನಿಮಗೆ ಹೊಳೆದ ವಿಚಾರಗಳನ್ನು ಗುರುತುಹಾಕಿಕೊಳ್ಳಿ. ಪ್ರಿಯಾರಿಟಿ ಪ್ರಕಾರ ಪೂರೈಸಿದ ಐಟಂಗಳನ್ನು ರೈಟ್ ಮಾರ್ಕ್ ಹಾಕುತ್ತಾ ಹೋಗಿ. ಹೀಗೆ ಮಾಡುವುದರಿಂದ ನಿಮ್ಮ ಸಮಾರಂಭ ಯಶಸ್ವಿಯಾಗುವುದರಲ್ಲಿ ಯಾವುದೇ ಅನುಮಾನ ಇರುವುದಿಲ್ಲ.

**ಚೆಕ್‌ಲಿಸ್ಟ್:**

1. ಸಮಾರಂಭದ ದಿನಾಂಕ ಗೊತ್ತುಪಡಿಸುವುದು
2. ಅತಿಥಿಗಳ ಗೊತ್ತುಪಡಿಸುವಿಕೆ
3. ಸಮಾರಂಭದ ಸ್ಥಳ ನಿಗಧಿ

4. ಆಹ್ವಾನ ಪತ್ರಿಕೆ ಬ್ಯಾಡ್ಜ್/ ಪ್ರಮಾಣ ಪತ್ರ/ ಸನ್ಮಾನ ಪತ್ರ ಮುಂತಾದವುಗಳ ಮುದ್ರಣ

5. ಅತಿಥಿಗಳ ನಾಮಫಲಕ/ ಕಾರ್ಯಕ್ರಮ ಪಟ್ಟಿ/ ಅತಿಥಿಗಳ ಪರಿಚಯ ಪತ್ರ ಸಿದ್ಧಗೊಳಿಸುವುದು./ಅತಿಥಿಗಳ ಗೌರವಧನ, ಪ್ರಯಾಣ ಭತ್ಯೆ

6. ಅಡುಗೆಯವರಿಗೆ ಆರ್ಡರ್ ನೀಡುವುದು

7. ಹಾರ/ಹಣ್ಣಿನ ಬುಟ್ಟಿ/ಸ್ಮರಣಿಕೆ/ಶಾಲು / ಅವು ಹಿಡಿಸುವ ದೊಡ್ಡ ಬ್ಯಾಗುಗಳನ್ನು ಹೊಂದಿಸಿಕೊಳ್ಳುವುದು

8. ಬ್ಯಾನರ್/ಫ್ಲೆಕ್ಸ್‌ಗಳು

9. ಅವುಗಳನ್ನು ಕಟ್ಟಲು ಹಗ್ಗ/ ದಾರ/ ಸೇಫ್ಟಿ ಪಿನ್ನುಗಳು

10 ನೋಟ್ ಪ್ಯಾಡುಗಳು ಪೆನ್ನುಗಳು

11. ದೀಪದಕಂಬ, ಎಣ್ಣೆ, ಬತ್ತಿ, ಕರ್ಪೂರ, ಊದಿನ ಕಡ್ಡಿ, ಊದಿನ ಕಡ್ಡಿ ಸಿಕ್ಕಿಸಲು ಸ್ಟ್ಯಾಂಡ್

12. ಫೋಟೊ/ವಿಡಿಯೋ/ಆಡಿಯೋ ರೆಕಾರ್ಡಿಂಗ್ ವ್ಯವಸ್ಥೆ

13. ಕಾರ್ಯಕ್ರಮ ಚಿತ್ರೀಕರಣ ಆಗಬೇಕಾದಲ್ಲಿ ಛಾಯಾಚಿತ್ರಗಾರರು/ವಿಡಿಯೋ ಗ್ರಾಫರ್‌ಗಳನ್ನು ಗೊತ್ತುಪಡಿಸುವುದು

14. ಊಟ/ತಿಂಡಿ ವಿತರಣೆಗಾಗಿ ತಟ್ಟೆ, ಲೋಟ, ಸ್ಪೂನ್‌ಗಳು, ಕಸ ಹಾಕಲು ಬ್ಯಾಗುಗಳು

15. ಅತಿಥಿಗಳಿಗೆ ಪ್ರಯಾಣದರ/ಗೌರವಧನ

16. ಪ್ರಚಾರ ವ್ಯವಸ್ಥೆ

17. ಸ್ವಾಗತ, ಪರಿಚಯ, ವಂದನಾರ್ಪಣೆ ಮಾಡುವವರು, ಗೌರವಾರ್ಪಣೆ ಸಾಮಗ್ರಿಗಳನ್ನು ಸಿದ್ಧಪಡಿಸಿ ಆಯಾ ಸಮಯದಲ್ಲಿ ಅದನ್ನು ತಂದು ಅತಿಥಿಗಳಿಗೆ ನೀಡುವವರು ಯಾರು ಎಂಬ ಬಗೆಗೆ ಮೊದಲೇ ನಿರ್ಧಾರವಾಗಿರಬೇಕು.

21-3-2017 (ಸವಿಗನ್ನಡ ವಿಶೇಷ ಸಂಚಿಕೆ 2017)

* * * * *

## ಲೇಖನ – 8

# ಸಾವು ತಂದ ಪರದಾಟ –3

ಇತ್ತೀಚೆಗೆ ಒಂದು ಸಾವು ಬದುಕಿನ ಆಟ ನಡೆಯಿತು. ಇದ್ದಕ್ಕಿದ್ದಂತೆ ಜಾರಿಬಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ಸೇರಿಸಲಾಯಿತು. ಸೇರಿಸಿದ ಸಂಬಂಧೀಕರಿಗೆ ಪರಿಣಿತ ವೈದ್ಯಕೀಯ ತಪಾಸಣೆ ನಡೆಸಿದ ವೈದ್ಯ ತಂಡ ನಾನಾ ಪರೀಕ್ಷೆಗಳನ್ನು ಮಾಡಿಸಿ ವರದಿ ತರುವಂತೆ ತಿಳಿಸಿ ವರದಿಗಾಗಿ ಕಾದುಕುಳಿತಿತ್ತು. ವರದಿ ಪರಿಶೀಲಿಸಿದ ವೈದ್ಯತಂಡ ಆ ವ್ಯಕ್ತಿಗೆ ಮಿದುಳಿನಲ್ಲಿ ತೀವ್ರತರವಾದ ರಕ್ತಸ್ರಾವ ಆಗಿರುವುದಾಗಿಯೂ, ಅದಕ್ಕಾಗಿ ಕೂಡಲೇ ಆಪರೇಶನ್ ನಡೆಸಬೇಕಾಗಿ ಇರುವುದಾಗಿಯೂ, ಅದಕ್ಕೂ ಮೊದಲು ಐ.ಸಿ.ಯೂನಲ್ಲಿ ಚಿಕಿತ್ಸೆ ಮುಂದುವರೆಸುವುದಾಗಿಯೂ ತಿಳಿಸಿತು. ದೇಹ ಜಡವಾಗಿಬಿದ್ದಿತ್ತು. ಆದರೂ ಒಳಗೆ ಸುಧಾರಣೆಯಾಗುತ್ತಿದೆ ಎಂಬ ಉವಾಚ. ಮೂಗಿಗೆ ಬಾಯಿಗೆ ನಳಿಕೆಗಳು ಸಿಗಿಸಲ್ಪಟ್ಟವು. ಕೃತಕ ಉಸಿರಾಟಕ್ಕೆ ಆಮ್ಲಜನಕ, ದೇಹದೊಳಕ್ಕೆ ಗ್ಲೂಕೋಸ್ ನೀರು! ವ್ಯಕ್ತಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಕುಟುಂಬದವರು ನಂಬಿದ್ದರು. ಬರೀ ದೂರದರ್ಶನ ಮಾತ್ರ, ಗಾಜಿನ ಕಿಟಕಿಯ ಮೂಲಕ ನೋಟ ಅಷ್ಟೇ. ಆಯಿತು ಮೂರು ದಿನ, ಆರು ದಿನ, ಮತ್ತೂ ಮುಂದುವರೆಯಿತು ಚಿಕಿತ್ಸೆ. ಕೈ ಬಿಡುತ್ತಿತ್ತು ಹಣ ಲಕ್ಷಗಳಲ್ಲಿ. ಮೈ ನಲ್ಲಿ ಯಾವುದೇ ಚಲನೆ ಕಾಣುತ್ತಿರಲಿಲ್ಲ, ಆದರೂ ಯಾರೂ ಕಾಣದ ಹೊತ್ತಿನಲ್ಲಿ ಚಲನೆ ಆಗುತ್ತಿರುತ್ತದೆ ಎಂದು ಆಸ್ಪತ್ರೆ ಮೂಲಗಳ ಹೇಳಿಕೆ. ಪ್ರಖ್ಯಾತ ರಾಜಕಾರಣಿಯೊಬ್ಬರ ಪ್ರಕರಣ ನೆನಪಿಗೆ ಬರುತ್ತಿದೆ.

ಇಂದು ಸಾಮಾನ್ಯ ವಾರ್ಡಿಗೆ ಹಾಕುತ್ತಾರೆ, ನಾಳೆ ಬೆಳಿಗ್ಗೆ ಡಿಸ್ಚಾರ್ಜ್ ಆಗುತ್ತಾರೆ ಎಂದೇ ನಂಬಿ ನರಳುತ್ತಿದ್ದ ಮನೆಮಂದಿ. ಅವರು ಬದುಕಿರುವರೋ ಇಲ್ಲವೋ ಎಂಬ ಆತಂಕ ಮತ್ತೊಂದೆಡೆ, ಆದರೆ ಆಡಬಹುದೇ ಬಾಯಿಂದ! ಅನುಮಾನವಿದ್ದರೂ ಅದು ನಿಷಿದ್ಧ. ಉಳಿಯಬಹುದು ಎಂಬ ನಂಬಿಕೆ ಮಸಿ ಆಗತೊಡಗಿತ್ತು. ಸಾವನ್ನೇ ಕಾಯುವ ಪರಿಸ್ಥಿತಿ, ಅಂತಹ ಪರಿಸ್ಥಿತಿ ಯಾವ ಶತ್ರುಗಳಿಗೂ ಬ್ಯಾಡ. ಬಂಧುಬಳಗದವರಿಗೆಲ್ಲಾ ಬಂದು ನೋಡಿಕೊಂಡು ಹೋಗಲು ಆಮಂತ್ರಣಹೋಯಿತು. ಮಕ್ಕಳು ವಿದೇಶದಿಂದ ಬರಬೇಕು, ಬಂಧು ಮಿತ್ರರಲ್ಲಿ ಕೆಲವರು ದೂರ ರಾಜ್ಯಗಳಲ್ಲಿ ನೆಲೆಸಿದ್ದವರು. ಅವರ ಸಂದಿಗ್ಧವೇ ಬೇರೆ. ಹೋಗಿ ನೋಡುವುದರಲ್ಲಿ ಏನು ಅರ್ಥ? ಯಾವುದಾದರೂ ಒಂದು ನಿರ್ಧಾರ ಆಗಿಬಿಟ್ಟಿದ್ದರೆ ಒಳ್ಳೆಯದಿತ್ತು. ಅಷ್ಟೆಲ್ಲ ಖರ್ಚುಮಾಡಿಕೊಂಡು ಹೋಗಿ ನೋಡಿದ ನಂತರವೂ ಸಾವು ಬರದಿದ್ದರೆ, ನಂತರ ಮತ್ತೊಮ್ಮೆ ಸಾವು ಆದಮೇಲೆ ಮತ್ತೆ ಅಷ್ಟೇ ಖರ್ಚುಮಾಡಿಕೊಂಡು ಬರಬೇಕಾಗುತ್ತದಲ್ಲ, ಅದು ಜಿಜ್ಞಾಸೆ. ಎರಡು ಖರ್ಚುಗಳಲ್ಲಿ ಒಂದನ್ನಾದರೂ ಉಳಿಸಿಕೊಳ್ಳುವ ಆಲೋಚನೆ. ಕಟುವಾದರೂ ಸತ್ಯ ಅಲ್ಲವೇ? ಮೊದಲೇ ಹೋಗಿದ್ದವರು, ಸಾವು ಕಾಯುತ್ತಾ ಅಲ್ಲೇ ಉಳಿದರು, ಎಂತಹ ಸಂಕಟ ಸಮಯವಿದ್ದರೂ ಹಸಿವು ನೀರಡಿಕೆ ಸುಮ್ಮನಿರುವುದಿಲ್ಲವಲ್ಲಾ? ಮನೆಯಲ್ಲಿದ್ದವರಿಗೆ ಹೊತ್ತುಹೊತ್ತಿಗೆ ಹೊಂದಿಸಬೇಕಲ್ಲವೇ? ಅದೂ ದಿನನಿತ್ಯ ಬರೀ ತಿಳಿಸಾರು ಅನ್ನ ರುಚಿಸುವುದೇ? ಏನಾದರೂ ಒಂದೋ ಎರಡೋ ವೆರೈಟಿ ಇರಬೇಕಲ್ಲವೇ? ಆ ಖರ್ಚಿನ ಜೊತೆಗೆ ಈ ಖರ್ಚು ಬೇರೆ. ಬಾಯಿಬಿಟ್ಟು ಹೇಳದಿದ್ದರೂ ಮನದೊಳಗೇ ಅನ್ನಿಸಬಹುದು "ಎಂದಿಗೆ ಇವೆಲ್ಲದಕ್ಕೂ ಒಂದು ಕೊನೆ, ಅದು ಆದಷ್ಟು ಬೇಗನೆ ಬಂದರೆ ಒಳಿತು".

ಕೊನೆಗೂ ಹೊರಬಿದ್ದಿತು ಆಸ್ಪತ್ರೆ ವೈದ್ಯರ ಘೋಷಣೆ: "ಎಲ್ಲವೂ ಮುಗಿಯಿತು, ನಿನ್ನೆ ಮಧ್ಯರಾತ್ರಿ ಅವರು ಇನ್ನಿಲ್ಲವಾದರು". ಮನೆಮಂದಿಗೆ ಸಂಬಂಧೀಕರಿಗೆ ಅಳಲು ಕಣ್ಣೀರೂ ಬತ್ತಿಹೋಗಿತ್ತು. ಹೊರಗಿನವರ ಸಂತೃಪ್ತಿಗಾಗಿ ಆದರೂ ಒಂದಷ್ಟು ಅಳಬೇಕು. ಕೆಲವು ರಾಜ್ಯಗಳಲ್ಲಿ, ಪಂಗಡಗಳಲ್ಲಿ ಸತ್ತಾಗ ಅಳಲಿಕ್ಕಾಗಿಯೇ ಜನರನ್ನು ಹಣಕೊಟ್ಟು ಕರೆಸುತ್ತಾರೆಯಂತೆ! ಅವರಿಗೆ ಅದೇ ಉದ್ಯೋಗ, ಅನ್ನನೀಡುವ ಕಾಯಕ. ಅವರು ಬೇಡುವ ಎಲ್ಲ ಮಾಹಿತಿಗಳನ್ನೂ ಅವರಿಗೆ ಮುಂಚಿತವಾಗಿ ಒದಗಿಸಿದರೆ, ಅವರು ಸತ್ತ ವ್ಯಕ್ತಿ, ಇನ್ನು ಮುಂದೆ ಅದು ಹೆಣ. "ಹೆಣ"ದ ಗುಣಗಾನಮಾಡಿ ರಾಗವಾಗಿ ಅತ್ತು, ಸಂಭಾವನೆಪಡೆದು ಹೋಗುತ್ತಾರೆ. ಇಂತಹ ಸನ್ನಿವೇಶ ದುಃಖಕರವಾದುದಾದರೂ, ಅದನ್ನು ನಗೆಚಟಾಕಿಯಾಗಿ ಮಾಡಿದ್ದಾರೆ ಹಾಸ್ಯಭಾಷಣಕಾರರು!

ಒಂದೇ ದಿನ ಎರಡು ಮೂರು ಮಂದಿ ಮೃತರಾದರೆ, ಅಳುವ ಮಂದಿಗೆ, ಅದರ ಮುಖಂಡನಿಗೆ ಕರೆಹೋಗುತ್ತದೆ. ಆಯಾ ಕುಟುಂಬಗಳಿಂದ ಅಳುವಾಗ ಆಡಬೇಕಾದ ಮಾಹಿತಿ ರವಾನೆಯಾಗುತ್ತದೆ. ಅವುಗಳನ್ನೆಲ್ಲ ಒಂದೊಂದು ಚೀಟಿಯಲ್ಲಿ ಬರೆದಿಟ್ಟುಕೊಂಡು ಆಯಾ ಮನೆಗಳಲ್ಲಿ ಆಯಾ ಚೀಟಿಗಳಲ್ಲಿ ಇರುವುದನ್ನೇ ಹೇಳಬೇಕಾಗುತ್ತದೆ. ಚೀಟಿ ಅದಲುಬದಲಾದರೆ ಸಂಕಟದ ಸಮಯದಲ್ಲೂ ವಿನೋದ, ವಿನಾಕಾರಣ ಮನೆಮಂದಿಯ ಮನದಲ್ಲಿ ಅನುಮಾನಗಳ ಮಹಾಪೂರ!

ವ್ಯಕ್ತಿಯನ್ನು ಮೃತನಾಗಿದ್ದಾನೆಂದು ಘೋಷಣೆಯಾದ ಕ್ಷಣದಿಂದ ಆತ ತನ್ನ ಪದವಿ, ಹೆಸರು, ಹುದ್ದೆ, ಗೌರವ ಎಲ್ಲವನ್ನೂ ಕಳೆದುಕೊಂಡು ಬರೀ 'ಹೆಣ' ಆಗಿಬಿಡುತ್ತದೆ. ಮನೆಯವರಿಗೆ ಅದು ಇನ್ನೂ ಮನುಷ್ಯ. ಅದನ್ನು ಜೋಪಾನವಾಗಿ ಕೆಳಗೆಬೀಳದಂತೆ ಬಿಗಿಯಾಗಿ ಹಗ್ಗದಿಂದ ಕಟ್ಟಿ, ತಲೆಗೆ ಒಂದು ತಲೆದಿಂಬು ಇಟ್ಟು, ದೇಹಕ್ಕೆ ಯಾವುದೇ ರೀತಿಯಲ್ಲಿ ಮಳೆ, ಬಿಸಿಲು ತಟ್ಟದಂತೆ ರಕ್ಷಣೆಕೊಟ್ಟು ಆಸ್ಪತ್ರೆಯಿಂದ ಮನೆಗೆ, ಮನೆಯಿಂದ ಸ್ಮಶಾನಕ್ಕೆ ಸಾಗಿಸಲು ಪ್ರಯತ್ನಿಸುತ್ತಾರೆ. ಆದರೆ ಆಸ್ಪತ್ರೆಯವರಿಗೆ ಅದು ಬರೀ 'ಹೆಣ'. ಅದಕ್ಕೆ ಯಾವುದೇ ಸಂವೇದನೆ ಇರುವುದಿಲ್ಲ. ಹಾಗಾಗಿ ಅವರಿಗೆ ಅದರ ನೋವುಗಳ ಬಗೆಗೆ ಯಾವುದೇ ಅನುಕಂಪ ಇರುವುದಿಲ್ಲ. ಹೆಣವನ್ನು ಸಂಸ್ಕಾರವಿಧಿಯ ನಂತರ ಮೂಟೆ ಎಸೆದಂತೆ ವ್ಯಾನಿನ ಮೇಲಕ್ಕೆ ಎಸೆದುಬಿಟ್ಟಾಗ ಮನೆಯವರಿಗೆ ಆಗುವ ಸಂಕಟ ಎಷ್ಟೆಂದು ಊಹಿಸಲಿಕ್ಕೂ ಕಷ್ಟ. ನಮಗೆ ಹೊಸದಾದರೂ ಅವರಿಗೆ ಇದು ಮಾಮೂಲು.

ಸಾವು ದೃಢೀಕರಣಗೊಂಡ ನಂತರ ಸತ್ತ ಗಳಿಗೆ ಪಂಚಾಂಗದ ಪ್ರಕಾರ ನಿರ್ಧಾರ! ಸಮಯ ದಾಖಲೆ ಖಚಿತವಾಗಿಲ್ಲದಿದ್ದಲ್ಲಿ ಅದು ನವಮಿಯೋ ದಶಮಿಯೋ , ಒಳ್ಳೆಯ ನಕ್ಷತ್ರವೋ ಕೆಟ್ಟ ನಕ್ಷತ್ರವೋ ಜಿಜ್ಞಾಸೆ ಪ್ರಾರಂಭ! ಅದು ಯಾವುದೇ ತಿಥಿಯಾಗಲೀ, ನಕ್ಷತ್ರವಾಗಲೀ ಪೌರೋಹತ್ಯವಹಿಸಿದವರ ನಿರ್ಧಾರವೇ ಅಂತಿಮ. ಅವರೇ ಹೇಳುವಂತೆ ಭಾರತದಲ್ಲಿ ನಿಧನರಾದರೆ ಒಂದು ಲೆಕ್ಕಾಚಾರ ಆದರೆ, ವಿದೇಶದಲ್ಲಿ ನಿಧನರಾಗಿದ್ದರೆ ಅದರ ಲೆಕ್ಕಾಚಾರವೇ ಬೇರೆ, ಏಕೆಂದರೆ ಭಾರತದ ಇಂದು, ಒಂದು ದೇಶದಲ್ಲಿ ನಿನ್ನೆ, ಮತ್ತೊಂದರಲ್ಲಿ ನಾಳೆ! ಹೀಗಾದಲ್ಲಿ ಯಾವುದು ಸರಿ? ಮತ್ತೆ ಜಿಜ್ಞಾಸೆ! ಸತ್ತ ದಿನಾಂಕ ಮುಖ್ಯವೋ, ಸಂಸ್ಕಾರ ಮಾಡಿದ ದಿನಾಂಕ ಮುಖ್ಯವೋ? ಕೆಲವೊಮ್ಮೆ ಸತ್ತ ವ್ಯಕ್ತಿಯ ಶವವನ್ನು ಶೀತಲಗೃಹದಲ್ಲಿ ಎರಡುಮೂರು ದಿವಸಗಳು ಇಟ್ಟು ನಂತರ ಸಂಸ್ಕಾರ ಮಾಡುವ

ಸಾಧ್ಯತೆಗಳೂ ಇರುತ್ತವೆ. ಆಗ ಹೇಗೆ ಈ ಲೆಕ್ಕಾಚಾರ! ಎಲ್ಲವೂ ಗೊಂದಲಮಯ. ಸಾವಿನ ದಿನ ಖಚಿತವಾಗಿ ನಿರ್ಧಾರವಾದನಂತರವಷ್ಟೇ, ಅಸ್ಥಿ ಸಂಚಯ, ಐದನೇ ದಿನ, ಏಳನೇ ದಿನ, ಒಂಬತ್ತನೇ ದಿನ, ಹತ್ತು, ಹನ್ನೆರಡು ದಿನದ ಕರ್ಮ.ತಿಥಿ ಬದಲಾದಲ್ಲಿ ಈ ದಿನಗಳ ದಿನಾಂಕಗಳೂ ಬದಲು! ದಿನಗಳು ಬದಲಾಗಬಹುದು. ಕ್ರಿಯಾಕರ್ಮ ಬದಲಾಗಿರಬಹುದು, ಅಂತಿಮವಾಗಿ ಹಾಜರಾದವರಿಗೆಲ್ಲಾ ವಿಧವಿಧ ಭಕ್ಷ್ಯಭೋಜನ. ಎಲ್ಲ ಕ್ರಿಯೆಗಳು ಮುಗಿದಮೇಲಷ್ಟೇ ಅಲ್ಲವೇ ಈ ಪೇಟ್ ಪೂಜೆ! ಮೂರಾಗಬಹುದು ನಾಲ್ಕಾಗಬಹುದು ಊಟದ ವೇಳೆ. ತಡವಾದಷ್ಟು ಅಸಮಾಧಾನ ಸಂಕಟ, ತಳಮಳ! ಕೊನೆಗೂ ಎಲೆಹಾಕಿದಾಗ ಏನೋ ಒಂದು ತೃಪ್ತಿಯ ಸಮಾಧಾನ. ದೇಹ ಹಸಿವನ್ನು ತಡೆಯುವಷ್ಟು ತಡೆಯುತ್ತದೆ. ನಂತರ ಅದು ಹಸಿವನ್ನೇ ಇಂಗಿಸಿಬಿಡುತ್ತದೆ. ಹಾಗಾಗಿ ಕಣ್ಣಮುಂದೆ ಭಕ್ಷ್ಯವಿದ್ದರೂ ತಿನ್ನಲು ಹಸಿವೇ ಇರುವುದಿಲ್ಲ. ಇಂತಹ ದಿನಗಳಲ್ಲಿ ಮಾಡಿದ ಅಡುಗೆ ಬಂದವರಿಗಷ್ಟೇ ಮೀಸಲು, ಉಳಿದುದನ್ನು ಬೇರೆಯವರಿಗೆ ಹಂಚುವಂತಿಲ್ಲ, ತೊಟ್ಟಿಗೆ ಚೆಲ್ಲಬೇಕು! ಒಂದೆಡೆ ಎರಡು ಹೊತ್ತು ತಿನ್ನಲು ಗತಿಕಾಣದೇ ಒದ್ದಾಡುತ್ತಿರುವವರು ಇರುವ ದೇಶದಲ್ಲಿ, ಬಚ್ಚಲಿಗೆ ನೈವೇದ್ಯ ಇಂತಹ ಮನೆಗಳಲ್ಲಿ! ಇದಿ ನ್ಯಾಯವಾ ಓ ರಾಮಚಂದ್ರ!

19–4–2017

* * * * *

## ಲೇಖನ – 9

# ಸಂವಹನ ವಿಶ್ಲೇಷಣೆ

ಮೂಲಭೂತವಾಗಿ ಪ್ರತಿ ವ್ಯಕ್ತಿಯೂ ಎಷ್ಟೇ ವಯಸ್ಸಿನವನಾಗಿದ್ದರೂ, ಪ್ರತಿಕ್ಷಣದಲ್ಲೂ ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸುತ್ತಿರುತ್ತಾನೆ. ಒಂದು ಕ್ಷಣ ಅವನು ಮುಗ್ಧ ಮಗುವಿನಂತಾಡಿದರೆ, ಮತ್ತೊಂದು ಕ್ಷಣದಲ್ಲಿ ಅಧಿಕಾರಯುತ–ವಾಗಿ ದರ್ಪತೋರುವ ಹಿರಿಯನಂತೆ; ಇವೆರಡಲ್ಲದೇ ಮತ್ತೂ ಒಂದು ಎಲ್ಲರೂ ಬಯಸುವ ಪ್ರತಿ ಸಂದರ್ಭಕ್ಕೆ ಸಮಯೋಚಿತವಾಗಿ ತುಲನಾತ್ಮಕವಾಗಿ ತರ್ಕಬದ್ಧ ತೀರ್ಮಾನಗಳನ್ನು ತೆಗೆದುಕೊಳ್ಳುವ ವ್ಯಕ್ತಿಯ ಪಾತ್ರ. ಈ ಮೂರು ಸ್ಥಿತಿಗಳನ್ನು, ನಾವು 'ಹಿರಿಯ', 'ವಯಸ್ಕ'(ವಿವೇಕ) ಮತ್ತು 'ಶಿಶು' ಎಂದು ಕರೆಯಬಹುದು. ಇಂಗ್ಲೀಷಿನಲ್ಲಿ ಇದನ್ನೇ Parent, Adult, Child ಅಥವಾ PAC concept ಎಂದು ಕರೆಯುತ್ತಾರೆ. ಮಾತು ಅರ್ಥಪೂರ್ಣವಾಗಬೇಕಾದಲ್ಲಿ ಅದರ ಸಂಚಾರ ಏಕಮುಖವಾಗಿರಬೇಕು. ಒಂದು ವ್ಯಕ್ತಿ ಮಾತನಾಡುತ್ತಿರಬೇಕಾದರೆ ಎದುರು ವ್ಯಕ್ತಿ/ವ್ಯಕ್ತಿಗಳು ಬರೀ ಕೇಳುಗರಾಗಿರಬೇಕು. ಎದುರು ವ್ಯಕ್ತಿ ಮಾತನಾಡುವಾಗ ಈ ವ್ಯಕ್ತಿ ಕೇಳುಗನಾಗಿ ಇರಬೇಕು. ಏಕಕಾಲಕ್ಕೆ ಎಲ್ಲರೂ ಮಾತನಾಡಲು ಪ್ರಾರಂಭಿಸಿದಲ್ಲಿ ಮಾತು ಗೊಂದಲಮಯವಾಗಿ ಯಾರಿಗೂ ಯಾವುದೂ ಕೇಳದಾಗುತ್ತದೆ. ನೀವು ರಾಜಕಾರಣಿಗಳ ಚರ್ಚೆ, ಮದುವೆಮನೆಗಳಲ್ಲಿ ಮಾತುಕತೆಗಳನ್ನು ಕೇಳಿರುತ್ತೀರಿ. ಅವು ಮಾತುಗಳಲ್ಲ ಬರೀ ಗಲಾಟೆಗಳು, ಗದ್ದಲ ಎನಿಸುತ್ತವೆ. ಒಬ್ಬರು ಹೇಳಿದ್ದು ಮತ್ತೊಬ್ಬರಿಗೆ ಕೇಳಿಸುವುದಿಲ್ಲ, ಅರ್ಥವಾಗುವುದಿಲ್ಲ.




ವ್ಯಕ್ತಿ ಮೇಲಿನ ಮೂರು ಸ್ಥಿತಿಗಳನ್ನು ಮೊದಲಿಗೆ ನಾವು ವಿಶ್ಲೇಷಿಸಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತೆ 'ಹಿರಿಯ' ಎಂದರೆ ಯಜಮಾನ, ತಂದೆ, ಉದ್ಯೋಗದಾತ, ಅಣ್ಣ, ಅಮ್ಮ, ಅಕ್ಕ ಹೀಗೆಲ್ಲ ನೆನಪಿಸಿಕೊಳ್ಳಬಹುದು. 'ಹಿರಿಯ' ನ ಲಕ್ಷಣ ಅಂದರೆ ಅಧಿಕಾರ ಚಲಾವಣೆ, ತಾನು ತಪ್ಪು ಮಾಡುವುದಿಲ್ಲ ಎಂಬ ಭಾವ. ಎಲ್ಲರೂ ತಾನು ಹೇಳಿದುದನ್ನು ಕೇಳಬೇಕು ಎಂಬ ಧೋರಣೆ. ತನ್ನನ್ನು ವಿರೋಧಿಸುವವರನ್ನು ದಂಡಿಸಬೇಕೆಂಬ ಛಲ 'ಹಿರಿಯನಿಗೆ'. ನಾನು ಹೇಳಹೊರಟಿರುವುದನ್ನು ಕೊಂಚ ಸೀರಿಯಸ್ಸಾಗಿ ಆಲೋಚಿಸಿ. ನಾನು ಹೇಳಹೊರಟಿರುವುದು ವ್ಯಕ್ತಿ – ವ್ಯಕ್ತಿಗಳ ನಡುವಿನ ಸಂಭಾಷಣೆ, ಸಂವಹನ ನಡವಳಿಕೆ ಇವುಗಳ ಬಗೆಗೆ. ಮಾತುಕತೆ ಹಿರಿಯ – ಶಿಶುವಿನ ನಡುವೆಯೇ ನಡೆದರೆ ಅದು ಪೂರಕ, ಇಲ್ಲದಿದ್ದಲ್ಲಿ ಅದು ಮಾರಕ.

'ಶಿಶು'ವಿನ ವರ್ತನೆಯನ್ನು ವಿಶ್ಲೇಷಣೆ ಮಾಡೋಣ. ಪುಟ್ಟ ಮಕ್ಕಳು ಯಾವುದೇ ಸಂದರ್ಭದಲ್ಲೂ ಕೊಡುವ ಪ್ರತಿಕ್ರಿಯೆ ಎರಡು ತರಹ ಇರುತ್ತದೆ. ಒಂದೋ ಅಳುವುದು ಇಲ್ಲವೇ ನಗುವುದು. ಈ ಪ್ರತಿಕ್ರಿಯೆ ಬಿಟ್ಟರೆ ಅದಕ್ಕೆ ಮೂರನೆಯ ಪ್ರತಿಕ್ರಿಯೆ ಗೊತ್ತಿರುವುದಿಲ್ಲ. ತನಗೆ ಹಾಲು ಬೇಕು, ಆಟದ ಸಾಮಾನು ಬೇಕು ಎಂದಾಗ ಅದಕ್ಕೆ ಗೊತ್ತಿರುವ ಪ್ರತಿಕ್ರಿಯೆ ಅಳುವುದು. ಕೇಳಿದಾಗ ಕೇಳಿದ್ದು ಸಿಕ್ಕರೆ ಸಂತೋಷ, ನಗು. ಅಳು ಕೂಡ ಅಸಹಾಯಕತೆಯ ಮತ್ತೊಂದು ರೂಪ. ಇಂತಹ ಸನ್ನಿವೇಶ ದೊಡ್ಡವರ ಜೀವನದಲ್ಲೂ ಆಗಾಗ ಬರುತ್ತಿರುತ್ತದೆ. ಮತ್ತೊಬ್ಬರು ಅವರ ತಪ್ಪುಗಳನ್ನು ಎತ್ತಿತೋರಿದಾಗ ಅಸಹಾಯಕತೆಯಿಂದ ತಲೆ ತಗ್ಗಿಸಿನಿಲ್ಲುವುದು 'ಶಿಶು'ವಿನ ಲಕ್ಷಣ. ಅಪರಾಧ ಭಾವ ವ್ಯಕ್ತಪಡಿಸುವುದೂ ಕೂಡ 'ಶಿಶು'ವಿನ ಲಕ್ಷಣ. ಇದನ್ನು ಬಿಡಿ ಒಬ್ಬರು ಮಾತಾಡಿದಾಗ ಮತ್ತೊಬ್ಬರು ಅದನ್ನು ಪ್ರಶ್ನಿಸದೇ ಕೇಳಿದರೆ ಅದೂ ಸಹಾ 'ಶಿಶು' ಲಕ್ಷಣ. ಶಿಶುವಿನ ಮನದಲ್ಲಿ ಸದಾಕಾಲ ಮೂಡುವ ಅಭಿಪ್ರಾಯ ಅಂದರೆ 'ನನಗೆ ಏನೂ ಗೊತ್ತಿಲ್ಲ' ಮತ್ತು 'ಹಿರಿಯ' ಹೇಳಿದುದನ್ನು ಕೇಳಬೇಕು ಎನ್ನುವುದೊಂದೇ. ಆಡಿದಮಾತು ಅರ್ಥಪೂರ್ಣವಾಗಿ ಪೂರಕವಾಗಿರಬೇಕೆಂದರೆ ಅದು ಎಂದಿಗೂ 'ಹಿರಿಯ – ಶಿಶು'ವಿನ ಏಕಮುಖಿ ಸಂಭಾಷಣೆಯೇ ಆಗಿರಬೇಕು.

ಮನೆಯಲ್ಲಿ ತಾಯಿ ಹಾಲು ಕಾಯಿಸುತ್ತಿರುತ್ತಾಳೆ. ಅದೇ ಸಮಯಕ್ಕೆ ಆಕೆಯ ಪತಿ ತನ್ನ ಪರ್ಸನ್ನೋ ಬೆಲ್ಟನ್ನೋ ತಂದುಕೊಡಲು ಆಕೆಗೆ 'ಆದೇಶ' ನೀಡುತ್ತಾನೆ. ಆಕೆಯ 'ಶಿಶು' ಒಲೆಯ ಮೇಲೆ ಹಾಲಿಟ್ಟಿರುವುದನ್ನು ಮರೆತು ಆಜ್ಞಾಪಾಲನೆಗಾಗಿ ಹೋಗುತ್ತದೆ. ಆಜ್ಞೆ ಪಾಲಿಸಿ ವಾಪಸಾಗುವವೇಳೆಗೆ ಒಲೆಯ ಮೇಲಿಟ್ಟ ಹಾಲು ಉಕ್ಕಿ ಒಲೆ, ನೆಲದಮೇಲೆಲ್ಲಾ ಚೆಲ್ಲಿಹೋಗಿರುತ್ತದೆ. ಆಗ ಆಕೆ ಪೇಚಾಡುವ ಪರಿಯೇ ಮತ್ತೆ 'ಶಿಶು'ವಿನ ಪ್ರತಿಕ್ರಿಯೆ ಎನಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿ ಕಾರು ಕಲಿಯಲು ಬಯಲಿಗೆ ಹೋಗಿ ಚಲಾಯಿಸುತ್ತಿರುವಾಗ ದಿಢೀರೆಂದು ನುಗ್ಗುವ ಮಗುವನ್ನು ತಪ್ಪಿಸಲು ಹೋಗಿ ಮರಕ್ಕೆ ಡಿಕ್ಕಿಹೊಡೆಯುತ್ತಾನೆ. ಅದು ಸ್ವಯಂಕೃತ ಅಪರಾಧ ಎನಿಸುತ್ತದೆ. ಆಗ ಆತ ಮಾಡಿಕೊಳ್ಳುವ ಬೇಜಾರು, ಪಡುವ ವ್ಯಥೆ 'ಶಿಶು' ಪ್ರತಿಕ್ರಿಯೆ ಎನಿಸುತ್ತದೆ.

ಪೂರಕ ಸಂಭಾಷಣೆ:

ಇಬ್ಬರು ವ್ಯಕ್ತಿಗಳು ಪರಸ್ಪರ ಮಾತಿನಲ್ಲಿ ತೊಡಗಿದಾಗ ಒಬ್ಬರ 'ಹಿರಿಯ' ಒಂದು ಸಮಯದಲ್ಲಿ ಮತ್ತೊಬ್ಬನಲ್ಲಿರುವ 'ಶಿಶು'ವಿನೊಂದಿಗೆ ಸಂಭಾಷಿಸಿದಲ್ಲಿ ಆ ಸಂಭಾಷಣೆ ಪೂರಕ. ಈ ಸಂಬಂಧವನ್ನು ಒಂದು ಸರಳ ಚಿತ್ರದ ಮೂಲಕ ಹೀಗೆ ತೋರಿಸಬಹುದು.




ವ್ಯಕ್ತಿ 1 ವ್ಯಕ್ತಿ 2 ವ್ಯಕ್ತಿ 1 ವ್ಯಕ್ತಿ 2

ಮಗು: ನನಗೆ ಆಟದ ಸಾಮಾನು ಬೇಕು' ಎಂದಾಗ ವ್ಯಕ್ತಿ 2 ರ 'ಹಿರಿಯ' 'ಆಗಲಿ, ಸಂಜೆ ಆಫೀಸಿನಿಂದ ಬರುವಾಗ ನಿನಗೆ ಬೇಕಾದ ಆಟದ ಸಾಮಾನು ತಂದುಕೊಡುತ್ತೇನೆ' ಎಂದೋ ಸಧ್ಯಕ್ಕೆ ನನ್ನ ಬಳಿ ಸಮಯವಿಲ್ಲ, ಮುಂದಿನ ತಿಂಗಳು ತಂದುಕೊಡುತ್ತೇನೆ' ಎಂದೋ ಹೇಳಿದರೆ ಅದು ಅರ್ಥಪೂರ್ಣ ಸಂಭಾಷಣೆ ಎನಿಸಿಕೊಳ್ಳುತ್ತದೆ. ಇದೇ ರೀತಿಯ ಏಕಮುಖಿ ವ್ಯವಹಾರವನ್ನು ನಾವೂ ಸಾಮೂಹಿಕ ಸಂದರ್ಭಗಳಲ್ಲೂ ಕಾಣಬಹುದು. ಉದಾ: ತರಗತಿಗಳಲ್ಲಿ ಅಧ್ಯಾಪಕರ ಬೋಧನೆಯನ್ನು ವಿದ್ಯಾರ್ಥಿಗಳು ತದೇಕಚಿತ್ತದಿಂದ ಆಲಿಸುವುದು; ಧರ್ಮಗುರುವಿನ ಬೋಧನೆಯನ್ನು ಭಕ್ತಜನರು ಆಲಿಸುವುದು; ಭಾಷಣಕಾರರ

ಮಾಡಿಗಳನ್ನು ಸಭಿಕರು ಕೇಳುವುದು, ಸಂಗೀತ ಗಾಯನದಲ್ಲಿನ ಕೇಳುಗರು ಇತ್ಯಾದಿ. ಸಾಮಾನ್ಯವಾಗಿ ಮೊದಲೆಲ್ಲಾ ಮದುವೆಯಾದವರಲ್ಲಿ ಗಂಡ ಹೇಳಿದುದನ್ನು ಮರು ಪ್ರಶ್ನಿಸದೆ ಹೆಂಡತಿಯಾದವಳು ಕೇಳಬೇಕು, ತಂದೆಯಾದವನು ಹೇಳಿದ ಮಾತನ್ನು ಮಕ್ಕಳು ಕೇಳಬೇಕು, ಗುರುವಾದವನು ಹೇಳಿದುದನ್ನು ಶಿಷ್ಯರು ಕೇಳಬೇಕು, ವೈದ್ಯ ಹೇಳಿದುದನ್ನು ರೋಗಿಗಳು ಕೇಳಬೇಕು ಹೀಗೆ ಅಲಿಖಿತವಾದರೂ ರೂಢಿಗತವಾಗಿ ಬಂದ ಸಂಪ್ರದಾಯಗಳಿದ್ದವು.

ಇದಕ್ಕೆ ಅಪವಾದಗಳೂ ಇದ್ದುದಿವೆ. ಗಂಡ ನಿರುದ್ಯೋಗಿಯಾಗಿ ಹೆಂಡತಿ ಉದ್ಯೋಗಿ ಆಗಿದ್ದ ಪಕ್ಷದಲ್ಲಿ, ಗಂಡನಿಗಿಂತ ಹೆಂಡತಿಗೆ ಉನ್ನತ ಉದ್ಯೋಗ, ಹೆಚ್ಚಿನ ಸಂಬಳ ಬರುತ್ತಿದ್ದ ಸಂದರ್ಭಗಳಲ್ಲಿ, ತಂದೆತಾಯಿಯರು ವೃದ್ಧರಾಗಿ ಮಕ್ಕಳು ದುಡಿಯಲು ಪ್ರಾರಂಭಿಸಿರುವ ಸಂದರ್ಭಗಳಲ್ಲಿ, ಹೀಗೆ ನಾನಾ ಸಂದರ್ಭಗಳಲ್ಲಿ ಮೊದಲು ಹೇಳಿದ ನಿಯಮಗಳನ್ನು ಹೀಗೆ ಅರ್ಥೈಸಬಹುದು. ಎರಡನೆಯ ವರ್ಗದ ವ್ಯಕ್ತಿಗಳ ಒಳಗಿನ 'ಹಿರಿಯ' ಮೊದಲ ವರ್ಗದ ವ್ಯಕ್ತಿಗಳ 'ಶಿಶು'ವಿನೊಂದಿಗೆ ವ್ಯವಹಾರ ನಡೆಸುತ್ತಿರುತ್ತಾರೆ. ಯಾವುದೇ ಕಾರಣಕ್ಕೂ ವ್ಯಕ್ತಿಗಳ ವಯಸ್ಸು ಇಲ್ಲಿ ಪರಿಗಣನೆಗೆ ಬರುವುದಿಲ್ಲ. ಯಾರ ಮಾತನ್ನು ಯಾರು ಕೇಳುತ್ತಿದ್ದಾರೆ ಎಂಬುದಷ್ಟೇ ಇಲ್ಲಿ ಪ್ರಮುಖವಾಗುತ್ತದೆ.ಹೇಳಿದುದನ್ನು ಕೇಳಬೇಕು ಎನ್ನುವುದೊಂದೇ. ಆಡಿದಮಾತು ಅರ್ಥಪೂರ್ಣವಾಗಿ ಪೂರಕವಾಗಿರಬೇಕೆಂದರೆ ಅದು ಎಂದಿಗೂ 'ಹಿರಿಯ – ಶಿಶು'ವಿನ ಏಕಮುಖ ಸಂಭಾಷಣೆಯೇ ಆಗಿರಬೇಕು. ಇಬ್ಬರು ವ್ಯಕ್ತಿಗಳು ಪರಸ್ಪರ ಮಾತಿನಲ್ಲಿ ತೊಡಗಿದಾಗ ಒಬ್ಬರ 'ಹಿರಿಯ' ಒಂದು ಸಮಯದಲ್ಲಿ ಮತ್ತೊಬ್ಬನಲ್ಲಿರುವ 'ಶಿಶು'ವಿನೊಂದಿಗೆ ಸಂಭಾಷಿಸಿದಲ್ಲಿ ಆ ಸಂಭಾಷಣೆ ಪೂರಕ. ಈ ಸಂಬಂಧವನ್ನು ಒಂದು ಸರಳ ಚಿತ್ರದ ಮೂಲಕ ಹಿಂದಿನ ಪುಟದಲ್ಲಿ ತೋರಿಸಲಾಗಿದೆ.

**ಕ್ರಾಸ್ ಟ್ರಾನ್ಸಾಕ್ಷನ್‌ಗಳು:** ಒಬ್ಬ ವ್ಯಕ್ತಿಯ 'ಶಿಶು' ಮತ್ತೊಬ್ಬ ವ್ಯಕ್ತಿಯ 'ಹಿರಿಯ' ನೊಂದಿಗೆ ಸಂಭಾಷಿಸುವ ಸಮಯದಲ್ಲೇ ಆ ಮತ್ತೊಬ್ಬ ವ್ಯಕ್ತಿಯ 'ಶಿಶು' ಸಹಾ ಮೊದಲಿನವನ 'ಹಿರಿಯ'ನೊಡನೆ ಸಂಭಾಷಿಸಲು ಯತ್ನಿಸಿದರೆ ಅದು 'ಅಡ್ಡ ವ್ಯವಹಾರ' (ಕ್ರಾಸ್ ಟ್ರಾನ್ಸಾಕ್ಷನ್) ಎನಿಸಿಕೊಳ್ಳುತ್ತದೆ. ಇದೇ ರೀತಿ ಒಬ್ಬ 'ಹಿರಿಯ' ಮತ್ತೊಬ್ಬ 'ಹಿರಿಯ'ನೊಡನೆ ಮಾತನಾಡುವಾಗ ಅವರಿಬ್ಬರ 'ಶಿಶು'ಗಳೂ ನೇರ ಸಂಭಾಷಣೆಯಲ್ಲಿ ಏಕಕಾಲಕ್ಕೆ ತೊಡಗಿದರೂ ಅದೇ ಸಮಸ್ಯೆ ಉದ್ಭವಿಸುತ್ತದೆ. ಈ ಸಂದರ್ಭಗಳನ್ನು ಮುಂದೆ ಕಾಣಿಸಿದ ಚಿತ್ರದಿಂದ ಸ್ಪಷ್ಟಪಡಿಸಬಹುದು.




ಈ ರೀತಿ ಮಾತನಾಡತೊಡಗಿದಾಗ ಗೊಂದಲಗಳು ಉಂಟಾಗತೊಡಗುತ್ತವೆ. ನಮ್ಮೊಳಗಿನ ಟೇಪ್ ರೆಕಾರ್ಡರ್ ಏನು ರೆಕಾರ್ಡ್ ಮಾಡಿಕೊಳ್ಳುವುದು ಅಥವಾ ಬಿಡುವುದು ಎನ್ನುವ ಸಂಧಿಗ್ಧಕ್ಕೊಳಗಾಗಿ ತನ್ನ ರೆಕಾರ್ಡಿಂಗ್ ಕೆಲಸವನ್ನೇ ನಿಲ್ಲಿಸಿ ಬಿಡುತ್ತದೆ.

ಒಂದು ವ್ಯಕ್ತಿಯ 'ಹಿರಿಯ' ಮತ್ತೊಬ್ಬ ವ್ಯಕ್ತಿಯ 'ಶಿಶು'ವಿನೊಂದಿಗೆ ಸಂಭಾಷಿಸುತ್ತಿರುವಾಗಲೇ ಎರಡನೇ ವ್ಯಕ್ತಿಯ 'ಹಿರಿಯ'ನೂ ಮೊದಲ ವ್ಯಕ್ತಿಯ 'ಶಿಶು'ವಿನೊಂದಿಗೆ ಸಂಭಾಷಿಸತೊಡಗಿದರೆ ಅಲ್ಲಿ ತಾಕಲಾಟ ಗೊಂದಲ ಪ್ರಾರಂಭವಾಗುತ್ತದೆ. ಇಲ್ಲಿನ ಧೋರಣೆ ನಾನು ಏಕೆ ಮತ್ತೊಬ್ಬನ ಮಾತನ್ನು ಕೇಳಬೇಕು? ಎಂಬುದಾಗಿರುತ್ತದೆ. ಇದನ್ನು 'ಈಗೋ' 'ಅಹಂ' ಎಂದೂ ಅರ್ಥೈಸಬಹುದು. ಆ ಸಂದರ್ಭ ವಾಗ್ವಾದ ಪ್ರಾರಂಭ ಆಗುತ್ತದೆ.

ಉದಾ: ವ್ಯಕ್ತಿ 1 ; ನಾನು ಹೇಳೋದು ನೀನು ಕೇಳಬೇಕು.

ವ್ಯಕ್ತಿ 2: ಅದ್ಯಾಕೆ, ನೀನೇ ನಾನು ಹೇಳೋದು ಕೇಳು.

ಮೇಲಿನ ಸಂಭಾಷಣೆ ಮೊದಲ ವ್ಯಕ್ತಿಯ 'ಹಿರಿಯ'ನಿಂದ ಎರಡನೆ ವ್ಯಕ್ತಿಯ 'ಶಿಶು'ವನ್ನು ಕುರಿತುದಾಗಿದೆ. ಆದರೆ ಎರಡನೆಯ ವ್ಯಕ್ತಿಯ 'ಶಿಶು'ವು ಅದನ್ನು ಸ್ವೀಕರಿಸುವ ಮುನ್ನವೇ ಅವನಲ್ಲಿನ 'ಹಿರಿಯ' ಮೊದಲನೆಯವನ 'ಶಿಶು'ವನ್ನು ಸಂಬೋಧಿಸಲು ಪ್ರಯತ್ನಿಸುತ್ತಿದ್ದಾನೆ. ಇದೇ ಗೊಂದಲಕ್ಕೆ ಮೂಲಕಾರಣ.

ಇಂತಹ ವ್ಯವಹಾರಗಳನ್ನು 'ಕ್ರಾಸ್ ಟ್ರಾನ್ಸಾಕ್ಷನ್' ಎನ್ನುತ್ತೇವೆ.

**ಯಶಸ್ವೀ ಸಂವಹನ:**

ಸಂಬಂಧಗಳು ಸೌಹಾರ್ದಯುತವಾಗಿರಬೇಕೆಂದು ಬಯಸುವವರು ಮೇಲಿನ ರೀತಿಯ ಸಂಭಾಷಣೆಗಳನ್ನು ಮಾಡಬಾರದು.

ಯಾವಾಗ ವ್ಯಕ್ತಿಗಳು ಮತ್ತೊಬ್ಬರು ಹೇಳಿದುದನ್ನು ಪ್ರಶ್ನಿಸಿ, ವಿಶ್ಲೇಷಿಸಿ, ವಿಮರ್ಶಿಸಿ ತೀರ್ಮಾನ ಮಾಡತೊಡಗುತ್ತಾರೆಯೋ ಆಗ ಸಂಭಾಷಣೆ ಇಬ್ಬರು




'ವಯಸ್ಕ'ರ ನಡುವೆ ನಡೆಯುತ್ತದೆ ಎಂದು ಹೇಳಬಹುದು. ಆ ರೀತಿಯ ಸಂಭಾಷಣೆಗಳು ಆರೋಗ್ಯಕರವಾಗಿಯೂ, ತರ್ಕಬದ್ಧವಾಗಿಯೂ ಇರುತ್ತವೆ. ಉದಾ: ತಂದೆಯಾದವನು ಮನೆಗೆ ಪದಾರ್ಥಗಳನ್ನು ತರಲು ಹೊರಟಾಗ ತಾಯಿ ಆದವಳು ಯಾವ ವಸ್ತುವನ್ನು ಎಷ್ಟು ಪ್ರಮಾಣದಲ್ಲಿ ತರಬೇಕು ಎಂದು ನಿರ್ಧರಿಸಿ ತಿಳಿಸುವುದು 'ವಯಸ್ಕ' ಲಕ್ಷಣ. ಏಕೆಂದರೆ ಯಾವ ವಸ್ತು ಎಷ್ಟು ಪ್ರಮಾಣದಲ್ಲಿ ಮನೆಯಲ್ಲಿ ದಾಸ್ತಾನಿನಲ್ಲಿದೆ ಎಂಬುದು ಆಕೆಗೆ ತಿಳಿದಿರುತ್ತದೆ. ಅಂತೆಯೇ ಹುಡುಗ ಒಬ್ಬ ಒಂದು ನೋಟ್ ಬುಕ್ಕನ್ನೋ, ಪೆನ್ನನ್ನೋ ಕೊಳ್ಳಲು ಹೋದಾಗ ಅವನು ಇಂತಹ ಬ್ರಾಂಡ್ ನೋಟ್ ಬುಕ್/ಪೆನ್ ಕೊಡಿ ಎಂದು ಕೇಳಿದಾಗ ಅದೂ ಸಹಾ 'ವಯಸ್ಕ' ವ್ಯವಹಾರ ಎನ್ನಿಸಿಕೊಳ್ಳುತ್ತದೆ. ಹೊಸದಾಗಿ ಮದುವೆಯಾದ ಪ್ರೇಮಿಗಳು ಯಾವ ಸ್ಥಳಕ್ಕೆ ಮಧುಚಂದ್ರಕ್ಕೆ ಹೋಗಬೇಕೆಂಬುದನ್ನು ಪರಸ್ಪರ ಚರ್ಚಿಸಿ ತೀರ್ಮಾನಿಸಿದರೆ ಅವರ ನಡುವೆ ನಡೆದ ವ್ಯವಹಾರ 'ವಯಸ್ಕ' ವ್ಯವಹಾರ ಎನಿಸಿಕೊಳ್ಳುತ್ತದೆ. ಚಿಕ್ಕ ಮಕ್ಕಳಿಬ್ಬರು ಆಟವಾಡಬೇಕೆಂದು ಬಯಸಿದಾಗ ಯಾವ ಆಟ ಆಡಬೇಕೆಂದು ಒಮ್ಮತದಿಂದಲೋ ಬಹುಮತ ಮೂಲಕ ತೀರ್ಮಾನಿಸಿದಾಗ ಅದೂ 'ವಯಸ್ಕ' ಸಂವಹನ ಎನಿಸಿಕೊಳ್ಳುತ್ತದೆ.

ಇದೇ ವ್ಯವಹಾರಗಳು ಬೇರೇ ರೀತಿಯಲ್ಲಿ ನಡೆದುದೇ ಆದಲ್ಲಿ ಅದು 'ವಯಸ್ಕ'ವ್ಯವಹಾರ ಎನ್ನಿಸಿಕೊಳ್ಳದೇ ಇರಬಹುದು. ಉದಾ:ಮನೆಯ ಯಜಮಾನ ಮನೆಯಾಕೆ ಸಲಹೆ ತೆಗೆದುಕೊಳ್ಳದೇ ತನ್ನ ಮನಸ್ಸಿಗೆ ಬಂದಂತೆ ವಸ್ತುಗಳನ್ನು ಕೊಂಡು ತಂದರೆ ಅದು 'ಹಿರಿಯ'ನ ನಡವಳಿಕೆ ಎನಿಸಿಕೊಳ್ಳುತ್ತದೆ. ಹೊಸದಾಗಿ ಮದುವೆ ಆದ ಜೋಡಿಗಳ ಮಧುಚಂದ್ರ ಸ್ಥಳದ ಆಯ್ಕೆ ಮದುಮಗನೋ ಮತ್ತೊಬ್ಬರೋ ನಿರ್ಧರಿಸಿದರೆ, ಅವರದು 'ಹಿರಿಯ'ರ ನಡವಳಿಕೆಯಾಗುತ್ತದೆ. ಅದೇ ಸಮಯದಲ್ಲಿ ಯಾವುದೇ ತಕರಾರಿಲ್ಲದೇ ಆ ಮದುಮಕ್ಕಳು ಇವರ ತೀರ್ಮಾನವನ್ನು ಒಪ್ಪಿಕೊಂಡಲ್ಲಿ ಆ ಮದುಮಕ್ಕಳದು 'ಶಿಶು'ವಿನ ನಡವಳಿಕೆ ಎನಿಸಿಕೊಳ್ಳುತ್ತದೆ.

ಕ್ಷಣಕ್ಷಣಕ್ಕೂ ಒಬ್ಬನೇ ವ್ಯಕ್ತಿಯಲ್ಲಿನ ನಡವಳಿಕೆಗಳು 'ಶಿಶು' 'ವಯಸ್ಕ' 'ಹಿರಿಯ' ಎಂಬ ವಿವಿಧ ರೂಪಗಳನ್ನು ಪಡೆಯುತ್ತಾ ಸಾಗುತ್ತದೆ. ಇತರರ ತೀರ್ಮಾನಗಳನ್ನು ಮರುಪ್ರಶ್ನಿಸದೇ ಒಪ್ಪಿಕೊಳ್ಳುವವ, ಯಾವುದಾದರೂ ಬಯಕೆಗಳನ್ನು ಹಂಡಿಹಿಡಿದಾದರೂ, ಜಗಳವಾಡಿಯಾದರೂ ಈಡೇರಿಸಿಕೊಳ್ಳುವ ಪ್ರಯತ್ನಮಾಡಿದರೆ ಅವನ 'ಶಿಶು' ಮುಖ್ಯ ಭೂಮಿಕೆ ನಿರ್ವಹಿಸುತ್ತಿರುತ್ತದೆ ಎನ್ನಬಹುದು. ಎಲ್ಲ ವಿಚಾರಗಳನ್ನೂ, ಅದರ ಎಲ್ಲ ಮುಖಗಳನ್ನೂ, ಪರಾಮರ್ಶಿಸಿ ಒಳಿತು ಕೆಡಕುಗಳ ವಿಶ್ಲೇಷಣೆಮಾಡಿ ತೀರ್ಮಾನಿಸಿದಲ್ಲಿ ಅದು 'ವಯಸ್ಕ' ವ್ಯವಹಾರ ಎನಿಸಿಕೊಳ್ಳುತ್ತದೆ. ಎಲ್ಲ ವಿಚಾರಗಳಲ್ಲೂ ತನ್ನದೇ ಅಂತಿಮ ತೀರ್ಮಾನ ಎಂಬ ಧೋರಣೆ ಹೊಂದಿರುವ ವ್ಯಕ್ತಿಯಲ್ಲಿ 'ಹಿರಿಯ' ಪ್ರಧಾನವಾಗಿ ರಾರಾಜಿಸುತ್ತಿರುತ್ತಾನೆ.

ಈ ಸಂವಹನದ ವಿಚಾರವನ್ನು ಬೃಹತ್ ಗ್ರಂಥಗಳ ಮಟ್ಟಕ್ಕೂ ಬೆಳೆಸಬಹುದು. ಆದರೆ ನಮ್ಮಲ್ಲಿನ ವೈಶಿಷ್ಟ್ಯಗಳನ್ನು ಬಹಳ ಸರಳವಾಗಿ ಪರಿಚಯಿಸುವ ಪ್ರಯತ್ನ, ಪ್ರಯೋಗ ನನ್ನದು. ಈ ಸೂಕ್ಷ್ಮ ವಿಚಾರಗಳನ್ನು ಅರಿತು ತಮ್ಮ ಧೋರಣೆಗಳನ್ನು ಬದಲಾಯಿಸಿಕೊಂಡಲ್ಲಿ ನಾವೆಲ್ಲರೂ ಆರೋಗ್ಯಕರ ಸಮಾಜ ನಿರ್ಮಾಣಮಾಡಲು ಸಾಧ್ಯವಾಗಬಹುದೇನೋ ಎಂಬುದೇ ನನ್ನ ಈ ಕಿರುಲೇಖನದ ಉದ್ದೇಶ.

30–5–2017

* * * * *

## ಲೇಖನ – 10

# ಸಕಾರಾತ್ಮಕ ಆಲೋಚನೆ

ಮನ ಮರ್ಕಟ ಎಂಬುದು ಹಳೆಯ ಮಾತು. ಮನುಷ್ಯನ ಮನಸ್ಸು ಎಂಬುದು ಮಂಗನಿದ್ದಂತೆ, ಕ್ಷಣಕ್ಷಣಕ್ಕೂ ಎಲ್ಲಿಂದೆಲ್ಲಿಗೋ ನಮ್ಮ ಆಲೋಚನೆಗಳು ಜಿಗಿಯುತ್ತಿರುತ್ತವೆ. ಒಂದು ಕ್ಷಣ ಇಲ್ಲಿದ್ದರೆ ಮತ್ತೊಂದು ಕ್ಷಣಕ್ಕೆ ದೆಹಲಿಗೋ, ಅಮೇರಿಕೆಗೋ, ಚಂದ್ರಲೋಕಕ್ಕೋ ಜಿಗಿದಿರುತ್ತದೆ. ಮತ್ತೊಂದು ವಿಷಯ ಎಂದರೆ ಆಲೋಚನೆಗಳು ಸಾಮಾನ್ಯವಾಗಿ ಸುಲಭವಾಗಿ ನಕಾರಾತ್ಮಕವಾಗಲು ಬಯಸುತ್ತದೆ. ಅದನ್ನು ಪ್ರಯತ್ನಪೂರ್ವಕವಾಗಿ ಸಕಾರಾತ್ಮಕ ಆಗಿಸುವುದು ಎಲ್ಲರ ಆದ್ಯ ಕರ್ತವ್ಯವಾಗಬೇಕು. ಉದಾ: "ಯಾವ ಆಹಾರ ನಾಲಿಗೆಗೆ ರುಚಿಯಾಗಿರುತ್ತದೆಯೋ ಅದು ದೇಹದ ಆರೋಗ್ಯಕ್ಕೆ ಹಾನಿಕಾರಕ; ದೇಹಕ್ಕೆ ಹಿತವಾದುದು ನಾಲಿಗೆಗೆ ಕಹಿ" ಎಂಬುದು ವೈದ್ಯಕೀಯ ಅಭಿಪ್ರಾಯ. ಆದರೂ ನಮ್ಮ ನಾಲಿಗೆ, ಮನಸ್ಸು ಅಂತಹ ರುಚಿಯಾದ ಆಹಾರ, ಸಾಮಾನ್ಯವಾಗಿ ಜಂಕ್ ಫುಡ್ ಎನ್ನುವಂತಹುದು ಅದನ್ನೇ ಬಯಸುತ್ತದೆ. ನಾವು ಎಷ್ಟೇ ಗಟ್ಟಿಮನಸ್ಸಿನವರಾದರೂ ಅಂತಹ ಆಹಾರದ ಆಸೆಗೆ ಬಲಿಬಿದ್ದುಬಿಡುತ್ತೇವೆ. ಅಂತೆಯೇ ನಮ್ಮ ಮನಸ್ಸಿನ ಆಲೋಚನೆಗಳೂ ಸಹಾ ಹೆಚ್ಚುಹೆಚ್ಚು ಕೆಟ್ಟದರ ಕಡೆಗೆ ವಾಲುತ್ತಿರುತ್ತವೆ. ನಮ್ಮ ಚಲನಚಿತ್ರಗಳು, ಟೀವೀ ಧಾರಾವಾಹಿಗಳೂ ಸಹಾ ಇಂತಹ ದೃಶ್ಯಗಳನ್ನೇ ತೋರಿಸುತ್ತಿರುವುದರಿಂದ ನಮ್ಮ ಆಲೋಚನೆಗಳೂ ಆ ದಿಕ್ಕಿನಲ್ಲಿಯೇ ಮೂಡುತ್ತಿರುತ್ತವೆ. ಆಜಾದಿ ಬಚಾವೋ ಚಳುವಳಿಯ ರೂವಾರಿ ರಾಜೀವ್ ದೀಕ್ಷಿತ್ ಸುಮಾರು

ಮೂವತ್ತು ವರ್ಷಗಳ ಹಿಂದೆಯೇ ಹೇಳಿದ ಮಾತು ಇಂದಿಗೂ ನನ್ನ ಕಿವಿಗಳಲ್ಲಿ ಅನುರಣಿಸುತ್ತಿರುತ್ತದೆ. 'ಇಂದಿನ ಟೀವೀಗಳಲ್ಲಿ, ಚಲನಚಿತ್ರಗಳಲ್ಲಿ ಮೂಡಿಬರುತ್ತಿರುವ ಹಿಂಸೆ, ಕ್ರೌರ್ಯ ದೃಶ್ಯಗಳು ಚಿಕ್ಕಮಗುವಿನ ಮನದ ಮೇಲೆ ಎಂತಹ ಗಾಢ ಪರಿಣಾಮ ಬೀರುತ್ತವೆ ಎಂದರೆ, ಆ ಇಂದಿನ ಮಗು ಬೆಳೆದು ಹದಿನೆಂಟು ವರ್ಷದವನಾಗುವ ವೇಳೆಗೆ ಅವನ ಎದುರೇ ಎಂತಹ ಘನಘೋರ ಹಿಂಸಾಕೃತ್ಯ ಜರುಗಿದರೂ, ಅವು ಅವನ ಮನಸ್ಸಿನ ಮೇಲೆ ಯಾವುದೇ ರೀತಿಯ ಪರಿಣಾಮ ಬೀರುವುದಿಲ್ಲ, ಅವನ ಅಂತಃಕರಣ ತುಡಿಯುವುದಿಲ್ಲ". ಇಂದು ಜನ ತಮ್ಮ ಕಣ್ಣಮುಂದೆ ನಡೆಯುವ ಕೊಲೆ, ಅತ್ಯಾಚಾರ, ಅಪಘಾತ ದೃಶ್ಯಗಳ ವಿಡಿಯೋ ತೆಗೆಯುವುದರಲ್ಲಿ ನಿರತರಾಗಿರುತ್ತಾರೆಯೇ ವಿನಹ ಕಣ್ಣ ಮುಂದೆ ನೋವು ಅನುಭವಿಸುತ್ತಿರುವವರ ನೆರವಿಗೆ ಧಾವಿಸುತ್ತಿಲ್ಲ.

ನಕಾರಾತ್ಮಕ ಆಲೋಚನೆಗಳನ್ನು ಸಕಾರಾತ್ಮಕಗೊಳಿಸುವುದು ಹೇಗೆ?

ಮೊತ್ತಮೊದಲಿಗೆ ಯಾವುದೇ ಸಂದರ್ಭಗಳಲ್ಲೂ ಆ ಘಟನೆಗಳನ್ನು ನಾವು ಹೇಗೆ ಸ್ವೀಕರಿಸುತ್ತಿದ್ದೇವೆ ಎನ್ನುವುದಕ್ಕಿಂತ ಘಟನೆಗೆ ಒಳಗಾದವರು ಹೇಗೆ ಆಲೋಚಿಸುತ್ತಿರುತ್ತಾರೆ ಎಂಬ ಬಗೆಗೆ ನಮ್ಮ ಗಮನ ಕೇಂದ್ರೀಕರಿಸಬೇಕು. ಆಂಗ್ಲಭಾಷೆಯಲ್ಲಿ ಹೇಳುವಂತೆ stepping into others shoes. ಚಪ್ಪಲಿ ಧರಿಸಿದವನಿಗೆ ಮಾತ್ರ ಅದು ಎಲ್ಲಿ ಕಚ್ಚುತ್ತಿದೆ/ಚುಚ್ಚುತ್ತಿದೆ ಎಂಬುದರ ಅರಿವು ಚೆನ್ನಾಗಿ ಆಗುತ್ತದೆ ಅಲ್ಲವೇ? ಆದುದರಿಂದ ನಮ್ಮ ಮನಸ್ಸನ್ನು ವಿಶಾಲವಾಗಿ ತೆರೆದಿಟ್ಟುಕೊಂಡು ಆಲೋಚಿಸಿದರೆ ಮಾತ್ರ ನಮ್ಮ ಆಲೋಚನೆಯನ್ನು ಸಕಾರಾತ್ಮಕಗೊಳಿಸಬಹುದು.

ಇತರರ ಬಗೆಗೆ ಅನುಕಂಪ ಹೊಂದುವುದು. ಈ ವಿಚಾರವನ್ನು ಒಂದು ಉದಾಹರಣೆಯೊಂದಿಗೆ ಗಮನಿಸಬಹುದು. ಒಂದು ಸಂತೋಷಕೂಟದಲ್ಲಿ ಭಾಗವಹಿಸಿದವರೆಲ್ಲರೂ ಸೇವಿಸಬೇಕೆಂಬ ಷರತ್ತಿನಮೇಲೆ ಒಂದು ಬುಟ್ಟಿ ಬಾಳೇಹಣ್ಣನ್ನು ಇಟ್ಟಿರುತ್ತಾರೆ ಎಂದುಕೊಳ್ಳಿ. ಎಷ್ಟು ಮಂದಿ ಆ ಕೂಟದಲ್ಲಿದ್ದಾರೋ ಅಷ್ಟೇ ಸಂಖ್ಯೆಯ ಹಣ್ಣುಗಳು ಆ ಬುಟ್ಟಿಯಲ್ಲಿವೆ ಎಂದೂ ಅಂದುಕೊಳ್ಳಿ. ಪ್ರತಿಯೊಬ್ಬರೂ ಒಂದೊಂದು ಹಣ್ಣನ್ನು ತೆಗೆದುಕೊಂಡು ಅದು ಸ್ವಲ್ಪ ಕೆಟ್ಟಿದ್ದರೂ ಅದನ್ನು ಮತ್ತೆ ಒಳಕ್ಕೆ ಹಾಕಿ, ಚೆನ್ನಾಗಿರುವ ಹಣ್ಣುಗಳನ್ನೇ ಆಯ್ಕೆಮಾಡಿಕೊಂಡು ತಿಂದರೆ, ಕೊನೆಕೊನೆಗೆ ಬರುವವರಿಗೆ ಸಿಗುವುದು ಅರ್ಧ ಕೆಟ್ಟ, ಕೊಳೆತ, ತಿನ್ನಲು ಅಯೋಗ್ಯವಾದ ಹಣ್ಣುಗಳೇ! ಅವರು ಹಣ್ಣು ತಿನ್ನುವ ಕ್ರಿಯೆಯಿಂದ ವಂಚಿತರಾಗುವುದು ಏಕೆಂದರೆ ಮೊದಲು ಹಣ್ಣನ್ನು ಆಯ್ಕೆಮಾಡಿಕೊಂಡವರು

ಪ್ರತಿಹಣ್ಣಿನ್ನೂ ಮುಟ್ಟಿ ಅಮುಕಿನೋಡುವುದರಿಂದ ಆ ಹಣ್ಣುಗಳು ತಿನ್ನಲಾರದ ಸ್ಥಿತಿಗೆ ತಲುಪಿರುತ್ತವೆ. ಮತ್ತು ಅವರ ಆಲೋಚನೆ ತಮಗೆ ಒಳ್ಳೆಯ ಹಣ್ಣು ಸಿಗಬೇಕೆನ್ನುವುದು ಇರುವುದರಿಂದಲೇ ಅಲ್ಲವೇ? ಅದೇ ಅವರು ಕೊನೆಯ ವ್ಯಕ್ತಿಗೂ ಒಳ್ಳೆಯ ಹಣ್ಣು ಸಿಕ್ಕುವಂತಾಗಬೇಕು ಎನ್ನುವವರಾಗಿದ್ದಲ್ಲಿ, ಮೊದಲು ಸಿಕ್ಕ ಹಣ್ಣನ್ನೇ ಆಯ್ಕೆಮಾಡಿಕೊಂಡು ತಿಂದು ಉಳಿದ ಹಣ್ಣುಗಳನ್ನು ತಾಜಾವಾಗೇ ಬಿಡಬಹುದಿತ್ತಲ್ಲವೇ! ಈ ಎರಡನೇ ರೀತಿಯಲ್ಲಿ ಯೋಚಿಸತೊಡಗಿದರೆ ಅದೇ ಸಕಾರಾತ್ಮಕ ಆಲೋಚನೆ ಎನಿಸಿಕೊಳ್ಳುತ್ತದೆ.

ನಾವು ನಮ್ಮ ಕಷ್ಟಗಳನ್ನೇ ಪ್ರಧಾನ ಎಂದುಕೊಂಡು, ಲೋಕದಲ್ಲಿ ನಮಗಿಂತ ದುಃಖಿತರಿಲ್ಲ ಎಂದುಕೊಂಡು ಅದನ್ನೇ ಎಲ್ಲರ ಮುಂದೆ ತೋಡಿಕೊಳ್ಳುತ್ತಾಹೋದಲ್ಲಿ ಸಕಾರಾತ್ಮಕ ಆಲೋಚನೆಗಳು ಮೂಡುವುದೇ ಇಲ್ಲ. ಕೇಳಿಲ್ಲವೇ ನಗುವವರೊಡನೆ ಇಡೀ ಲೋಕವೇ ನಗುತ್ತದೆ, ಅಳುವವರೊಡನೆ ಯಾರೂ ಭಾಗಿಗಳಾಗಬಯಸುವುದಿಲ್ಲ.

ಒಂದು ವೃಕ್ಷ ಬಿಡುವ ಫಲವೆಷ್ಟು? ಒಂದು ಹೂ ಗಿಡ ಪ್ರತಿದಿನ ಅರಳಿಸುವ ಹೂಗಳು ಎಷ್ಟು? ಅದರಲ್ಲಿ ಒಂದಂಶವನ್ನೂ ಅವು ತಮಗಾಗಿ ಬಳಸಿಕೊಳ್ಳುತವೆಯೇ? ಎಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾಹೋದಲ್ಲಿ ಸಕಾರಾತ್ಮಕ ಆಲೋಚನೆಗೆ ಅರ್ಥ ಹೊಳೆಯುತ್ತದೆ. ನಾವು ಬದುಕಬೇಕಾಗಿರುವುದೇ ಇತರರಿಗಾಗಿ ಎನ್ನುವ ಸಾರ್ವಕಾಲಿಕ ಸತ್ಯವನ್ನು ಅರಿತರೇ ತಂತಾನೇ ಸಕಾರಾತ್ಮಕ ಆಲೋಚನೆ ಮೂಡುತ್ತದೆ. ಆದರೆ ನಾವು ಮಾಡುತ್ತಿರುವುದೇನು? ನಮಗಾಗಿ ಹಸು ಹಾಲನ್ನು ನೀಡುತ್ತದೆ, ಕೋಳಿ ಮೊಟ್ಟೆಗಳನ್ನು ನಮಗಾಗೇ ಮೀಸಲಿಟ್ಟಿದೆ, ಕೆಲ ಜೀವಿಗಳಿರುವುದೇ ನಮ್ಮ ಆಹಾರಕ್ಕಾಗಿ ಎನ್ನುವ ಸ್ವಾರ್ಥ ಆಲೋಚನೆಗಳಿಂದ. ಎಲ್ಲವನ್ನೂ ಎಲ್ಲರನ್ನೂ ನಮ್ಮ ಒಳಿತಿಗಾಗಿ ಬಳಕೆಮಾಡಿಕೊಳ್ಳುವಲ್ಲಿ ತೊಡಗಿರುವ ನಮ್ಮ ಆಲೋಚನಾ ಲಹರಿಯನ್ನು ನಾವು ಮೊದಲಿಗೆ ಬದಲಿಸಿಕೊಳ್ಳಬೇಕಾಗಿದೆ. ಮರಣಾನಂತರ ಒಂದು ತುಂಡು ಬಟ್ಟೆಯನ್ನೂ ತೆಗೆದುಕೊಂಡುಹೋಗಲಾರದ ನಾವು ಇರುವಾಗ ಎಲ್ಲವೂ ನನ್ನದೇ ಎನ್ನುವ ಧೋರಣೆಹೊಂದುವುದನ್ನು ಮೊದಲಿಗೆ ಬಿಡಬೇಕು.

ಉದಾಹರಣೆಗೆ ನಮಗೆ ಸಿಗುವವಳೇ 'ತಾಯಿ'. ತನಗೇ ಇಲ್ಲದಿದ್ದರೂ ಮೊದಲು ತನ್ನ ಮಕ್ಕಳಿಗೆ, ಯಜಮಾನನಿಗೆ ತನ್ನಲ್ಲಿರುವುದನ್ನು ನೀಡಿ, ಅವರೇನಾದರೂ ಉಳಿಸಿದಲ್ಲಿ ಅದನ್ನು ತಿಂದು ಹೊಟ್ಟೆತುಂಬ ನೀರುಕುಡಿದು ತನ್ನ ಹಸಿವನ್ನು ಮರೆಮಾಚಿಕೊಳ್ಳುವ ಅವಳ ಗುಣ ಸಕಾರಾತ್ಮಕ ಅಲ್ಲದೇ

ಮತ್ತೇನು? ಲೋಕದಲ್ಲಿ ತಾಯಿಗಿಂತ ಸಕಾರಾತ್ಮಕ ಆಲೋಚನೆ ಉಳ್ಳವರು ಮತ್ಯಾರೂ ಇಲ್ಲವೇ ಇಲ್ಲವೆಂದೆನ್ನಬಹುದು. ಸಕಾರಾತ್ಮಕ ಆಲೋಚನೆ ಮೂಡಿಸಿಕೊಳ್ಳಬಯಸುವವರು ಬೇರೇನೂ ಮಾಡಬೇಕಾಗಿಲ್ಲ 'ಮಾತೃ ಹೃದಯ' ಬೆಳೆಸಿಕೊಂಡರೆ ಅಷ್ಟೇ ಸಾಕೆನ್ನಿಸುತ್ತದೆ. ನೀವೇನನ್ನುತ್ತೀರಿ?

30–5–2017

* * * * *

## ಲೇಖನ – 11

# ಮನೆಗೆಲಸದ ನಿಂಗಮ್ಮ

ಅಮ್ಮಾವ್ರೇ ಒಂದ್ಯೆನೂರು ರೂಪಾಯಿ ಕೊಡಿ, ತಿಂಗಳಿಗೆ ಒಂದು ನೂರು ರೂಪಾಯಿ ಸಂಬಳ್ದಾಗೆ ಇಡ್ಕೊಳ್ಳಿ,

ಅದ್ಯಾಕೆ ನಿಂಗಮ್ಮ ಏನಾಯ್ತು?

ಆ ಬ್ಯಾವರ್ಸಿ ನನ್ ಮಗಳ್ಗೆ ಕುಡಿದ್ವಂದು ಒಡ್ದಾನಂತೆ, ಅವನ ಇಡ್ಕೊಂಡು ಎಣ ಎತ್ತಿಬತ್ತೀನಿ. ಅಂಗೇ ಒಂದ್ವಾರ ರಜಾ ಕೊಡಿ.

ಈ ನಿಂಗಮ್ಮನಿಗೆ ಇಬ್ಬರು ಹೆಣ್ಣು ಮಕ್ಕಳು. ಮೂಲತಃ ತಮಿಳವಳಾದ ನಿಂಗಮ್ಮ ಸುಮಾರು ಚಿಕ್ಕ ಮಗುವಾಗಿದ್ದಾಗಲೇ ನಮ್ಮ ನಾಡಿಗೆ ಬಂದು ನೆಲೆಸಿದ್ದಾಳೆ. ಹೆಚ್ಚಿನ ಓದು ಬರಹವಿಲ್ಲದ ಇವಳು ಅದು ಹೇಗೋ 'ನಿಗಮ್ಮ' ಅಂತ ಸಹಿಮಾಡುವುದನ್ನು ಕಲಿತಿದ್ದಾಳೆ, ಆದರೂ ಸಾಮಾನ್ಯವಾಗಿ ಹೆಬ್ಬೆಟ್ಟು ಹಾಕಲು ಮುಂದಾಗುತ್ತಾಳೆ. ಲೆಕ್ಕಾಚಾರ ಹಾಕುವುದು ತನಗೆ ತಿಳಿಯದೆಂದು ಡೋಂಗಿಬಿಡುವ ಇವಳು ತನ್ನ ಸಂಬಳವನ್ನು ಎಷ್ಟು ಚೆನ್ನಾಗಿ ಲೆಕ್ಕ ಹಾಕುತ್ತಾಳೆಂದರೆ ನನ್ನವಳಿಗೇ ತಡಬಡಾಯಿಸುವಷ್ಟು ಚೆನ್ನಾಗಿ!

ಕೆಲಸದಲ್ಲಿ ಯಾರೂ ಬೆರಳು ಮಡಚಲಾರದಂತೆ ಇರುವ ಇವಳು ಸಾಮಾನ್ಯವಾಗಿ ರಜೆ ತೆಗೆದುಕೊಳ್ಳುವುದಿಲ್ಲ. ಆದರೂ ಇವಳ ಒಂದು ತೊಂದರೆ ಎಂದರೆ ವರ್ಷದಲ್ಲಿ ಒಂದೆರಡು ಸಲ ತನ್ನ ಮಕ್ಕಳನ್ನು ನೋಡಿಬರಲು ಒಂದೊಂದು ಸಲವೂ ಹತ್ತತ್ತು ದಿನ ರಜೆ ಹಾಕಿ ತಮಿಳುನಾಡಿಗೆ ಹೋಗಿಬಿಡುವುದು.

ಬಾಯಲ್ಲಿ ಹೇಳುವುದು ಮೂರ್‍ನಾಲ್ಕು ದಿನ ಎಂದಾದರೂ ಅದು ಮುಟ್ಟುವುದು ಹತ್ತು ದಿನಗಳ ನಂತರವೇ.

ಪ್ರತಿದಿನವೂ ಅವಳ ಆಗಮನವಾಯಿತೆಂದಾಗ ತೆರೆಯುವ ಅವಳ ಬಾಯಿ ಮುಚ್ಚುವುದು ಕೆಲಸಗಳೆಲ್ಲಾ ಮುಗಿಸಿದನಂತರವಷ್ಟೇ. ಹೆಚ್ಚು ಸಲ ಅವಳ ಸಂಭಾಷಣೆ ಪ್ರತಿನಿತ್ಯವೂ ಒಂದೇ ವಿಷಯದ ಸುತ್ತ ಸುತ್ತುತ್ತಿರುತ್ತದೆ. ಪ್ರತಿನಿತ್ಯವೂ ಮಾತನಾಡಲು ಎಲ್ಲಿಂದ ವಿಷಯ ಸಂಗ್ರಹಿಸುತ್ತಾಳೋ ಆ ಪರಮಾತ್ಮನೇ ಬಲ್ಲ. ಅವಳ ಜೊತೆಜೊತೆಗೇ ಮನೆಗೆಲಸ ಪ್ರಾರಂಭಿಸಿದ ಅವಳ ಗೆಳತಿಯರು ಸ್ವಂತ ಮನೆ. ಮನೆ ತುಂಬ ಎಲೆಕ್ಟ್ರಾನಿಕ್ ಉಪಕರಣಗಳಾದ ಫ್ರಿಜ್ಜು, ಕಬ್ಬಿಣದ ಬೀರುಗಳು. ವಾಷಿಂಗ್ ಮೆಷೀನು, ಕೆಲವರ ಮನೆಗಳಲ್ಲಿ ಏ.ಸಿ ಹೀಗೆ ಯಾವ ಶ್ರೀಮಂತರಿಗೂ ಕಡಿಮೆಯಿಲ್ಲದಂತೆ ಬಾಳ್ವೆ ನಡೆಸುತ್ತಿದ್ದಾರೆ. ಆದರೆ ನಮ್ಮ ನಿಂಗಮ್ಮ ಮಾತ್ರ ಇಂದಿಗೂ ಸಾಲದಲ್ಲಿ ಮುಳುಗಿದ್ದಾಳೆ. ಇದಕ್ಕೆ ಕಾರಣ ಉಳಿದವರಲ್ಲಿ ಹೆಚ್ಚಿನವರು ತಮ್ಮ ಗಂಡಂದಿರಿಂದ ದೂರಾಗಿದ್ದರೆ, ಈ ನಿಂಗಮ್ಮ ತನ್ನ ಗಂಡನೊಡನೆ ವಾಸವಾಗಿದ್ದಾಳೆ. ಈಗೀಗ ಅವಳ ಗಂಡನೂ ದುಡಿಯುತ್ತಿದ್ದಾನೆ. ಅವಳ ಈ ದಯನೀಯ ಪರಿಸ್ಥಿತಿಗೆ ಕಾರಣವೂ ಅವಳ ಗಂಡನೇ! ಮೊದಲೆಲ್ಲ ದುಡಿದ ಹಣವನ್ನೆಲ್ಲ ಗಡಂಗಿಗೆ, ಇತರೇ ಹೆಣ್ಣುಗಳ ಮೇಲ್ ಸುರಿದು, ಮನೆಯ ಕಡೆಗೆ ಗಮನವನ್ನೇ ಹರಿಸದ ಈ ಗಂಡನ ಮೇಲೆ ಆಕೆಗೆ ಎಷ್ಟು ಬೇಸರ ಬಂದಿರಬೇಡ. ಆದರೂ ಪತಿವ್ರತೆಯಂತೆ ಆತ ಕುಡಿದು ಎಲ್ಲೋ ರಸ್ತೆಯಲ್ಲೋ, ಚರಂಡಿಯಲ್ಲೋ ಬಿದ್ದಿದ್ದು ಅವರಿವರಿಂದ ತಿಳಿದುಬಂದಕೂಡಲೇ ಅಲ್ಲಿಗೆ ಹೋಗಿ ತನ್ನ ಗಂಡನನ್ನು ಆಟೋದಲ್ಲಿ ಎತ್ತಿಕೂಡಿಸಿಕೊಂಡು ಮನೆಗೆ ತಂದು ಉಪಚರಿಸಿದ ಸಾಧ್ವಿ ಈಕೆ. ಇತರರ ಕಾಮುಕ ಕಣ್ಣುಗಳಿಗೆ ಆಹಾರವಾಗದಂತೆ ಸೀರೆ ಉಟ್ಟುಕೊಂಡು, ಮನೆಗಳಲ್ಲಿ ಹೆಂಗಸರು ಊರಿಗೋ ಮತ್ತೆಲ್ಲಿಗೋ ಹೋಗಿರುವುದು ತಿಳಿದಾಗ ಆ ಮನೆಗಳಿಗೆ ಕೆಲಸಕ್ಕೇ ಹೋಗದೇ ಚಕ್ಕರ್ ಹಾಕಿದವಳು ಈ ನಿಂಗಮ್ಮ. ಹೀಗೊಮ್ಮೆ ಗಂಡ ಕುಡಿದು ಬಿದ್ದು ಮೂಳೆಮುರಿದುಕೊಂಡಿದ್ದಾಗ ಚಿಕ್ಕ ಮಗುವಿಗೆ ಮಾಡುವಂತೆ ಅವನ ಎಲ್ಲ ರೀತಿಯ ಆರೈಕೆಗಳನ್ನೂ ಮಾಡಿದವಳು ನಿಂಗಮ್ಮ. ಅವನಿಗೆ ಶುಶ್ರೂಷೆ ಮಾಡಿಸಲು ಹಣದ ಮುಗ್ಗಟ್ಟು ಎದುರಾದಾಗ ಮೀಟರ್ ಬಡ್ಡಿ ಮೇಲೆ ಸಾಲ ಪಡೆದು ಪಡೆದ ಸಾಲದ ಮೊತ್ತಕ್ಕಿಂತ ಮೂರ್‍ನಾಲ್ಕು ಪಟ್ಟು ಬಡ್ಡಿ ಕಟ್ಟುತ್ತಿದ್ದಳು ನಮ್ಮ ನಿಂಗಮ್ಮ. ಇದರಿಂದಾಗೇ ಎಷ್ಟು ಮನೆಗೆಲಸಗಳನ್ನು ಮಾಡಿ ಸಂಪಾದನೆ ಮಾಡಿದರೂ ಸಾಲಮುಕ್ತಳಾಗದೇ ಒದ್ದಾಡುತ್ತಿದ್ದವಳು ಅವಳು.

ಈಗ ಪರಿಸ್ಥಿತಿ ಬದಲಾಗಿದೆ! ನೀವೇನೆಂದು ಕೊಂಡಿರಿ? ಇತರರಂತೆ ಸ್ವಂತ ಮನೆ, ಫ್ಯಾನು, ಫ್ರಿಜ್ಜು ಎಲ್ಲ ಹೊಂದಿ ಆರಾಮಾವಾಗಿದ್ದಾಳೆ ಅಂತಾನಾ! ಊಹೂಂ, ಪರಿಸ್ಥಿತಿ ಉಲ್ಟಾ ಆಗಿದೆ. ಅವಳಿಗೆ ಅದೇನೋ ರೋಗ ಬಡಿದುಕೊಂಡು ಮನೆಗೆಲಸ ಮಾಡಲು ಆಗುತ್ತಿಲ್ಲ. ಆದರೆ ಅವಳ ಗಂಡ ತನ್ನ ಹಿಂದಿನ ಜೀವನಕ್ಕೆ ತಿಲಾಂಜಲಿ ನೀಡಿ, ಕುಡಿಯುವುದನ್ನು ಬಿಟ್ಟು ಸನ್ಯಾಸಿ ಆಗಿಬಿಟ್ಟಿದ್ದಾನೆ, ಆದರೆ ಹೆಂಡತಿಯನ್ನು ಬಿಟ್ಟುಬಿಟ್ಟಿದ್ದಾನೆ ಅಂತ ಅಪಾರ್ಥ ಮಾಡಿಕೊಳ್ಳಬೇಡಿ. ಕುಡಿತಬಿಟ್ಟು ಮನೆಯಾಕೆಯನ್ನು ಮನೆಯಲ್ಲೇ 'ರಾಣಿ'ಯಂತೆ ಸಾಕುತ್ತಿದ್ದಾನೆ. ತಾನು ಮೊದಲು ದುಡಿಯುತ್ತಿದ್ದುದಕ್ಕಿಂತ ಹೆಚ್ಚಿನ ದುಡಿಮೆಮಾಡತೊಡಗಿದ್ದಾನೆ. ಹಿಂದೆ ಆತ ಮೂಳೆಮುರಿದುಕೊಂಡು ಇವನಿಗೆ ಮಾಡಿದ ಶುಶ್ರೂಷೆಗೆ ಪ್ರತಿಯಾಗಿ ಈತ ತನ್ನ ಮಡದಿಯನ್ನು ಸಾಕುವ ಪಣತೊಟ್ಟಿದ್ದಾನೆ. ಈಕೆ ಇನ್ನೂ ತೀರಿಸಲಾಗದ ಸಾಲವನ್ನು ಕಂತುಗಳಲ್ಲಿ ತೀರಿಸಲು ಮುಂದಾಗಿದ್ದಾನೆ.

ಈ ಕೆಲಸಗಾರರನ್ನು ಕೆಲವು ತಿಂಗಳಕಾಲ ಮುಂದುವರೆಸಿ ಸ್ವಲ್ಪ ಸಲುಗೆಕೊಟ್ಟರೆ, ಕೇಳತೊಡಗುತ್ತಾರೆ ಸಾಲ! ಒಮ್ಮೆ ಸಾಲ ಕೊಟ್ಟೆವೆಂದರೆ ಅದು ತೀರುವುದೇ ಇಲ್ಲ. ಕೆಲವು ಕಂತುಗಳನ್ನು ಕಟ್ಟಿದನಂತರ ಮತ್ತೆ ಅಡಿಷನಲ್ ಸಾಲ ಬೇಡುತ್ತಾರೆ, ಆದರೆ ಕಂತು ಮಾತ್ರ ಮೊದಲಿನದೇ ಆಗಿರುತ್ತದೆ. ಹೀಗೆ ಅವರು ಸಾಲ ತೀರಿಸುವ ತನಕ ಅವರನ್ನು ನಾವು ಕೆಲಸದಿಂದ ಬಿಡಿಸಲು ಸಾಧ್ಯವೇ ಆಗುವುದಿಲ್ಲ. ಆದರೆ ಅವರೇ ಕೆಲಸ ಬಿಟ್ಟು ಹೋಗಿಬಿಟ್ಟಲ್ಲಿ ಆ ಸಾಲ ಪೂಜಾರಿ ಸಾಲದಂತಾಗುತ್ತದೆ. ಕೊಟ್ಟರುಂಟು ಇಲ್ಲದಿದ್ದಲ್ಲಿ ಇಲ್ಲ. ಪಡೆದ ಸಾಲ ಅವರಿಗೆ ಸೆಕ್ಯೂರಿಟಿ, ನಮಗೆ ಇನ್‌ಸೆಕ್ಯೂರಿಟಿ! ಹೇಗಿದೆ ಈ ಪರಿಸ್ಥಿತಿ? ಹಾಗಾಗಿ ಕೆಲಸಗಾರರಿಗೆ ಸಾಲ ನೀಡುವ ಮೊದಲಿಗೆ ಸಾವಿರ ಸಲ ಯೋಚಿಸಬೇಕು. ಏನಂತೀರಿ?

ಕೆಲಸ ಬಿಟ್ಟಿದ್ದರೂ ನಿಂಗಮ್ಮ ನಮ್ಮನ್ನು ಮರೆತಿಲ್ಲ, ನಾವೊಬ್ಬರೇ ಏನು ಹಿಂದೆ ಕೆಲಸಮಾಡುತ್ತಿದ್ದ ಯಾವ ಮನೆಯವರನ್ನೂ ಮರೆತಿಲ್ಲ. ಯಾವಾಗಲಾದರೂ ಒಮ್ಮೆ ಹುಡುಕಿಕೊಂಡು ಬಂದು ಅದೂ ಇದೂ ಮಾತಾಡಿಸುತ್ತಾ ಸ್ವಲ್ಪ ಹೊತ್ತು ಕಾಲಕಳೆಯುತ್ತಾಳೆ, ತನ್ನ ಕಷ್ಟಗಳನ್ನು ನಮ್ಮೊಂದಿಗೆ ಹೇಳಿಕೊಳ್ಳುತ್ತಾಳೆ, ನಮ್ಮಲ್ಲಿನ ಅಂತಃಕರಣವನ್ನು ಕೆದಕುತ್ತಾಳೆ. ನಾವೂ ಅವಳ ಕಷ್ಟವನ್ನು ಸ್ವಲ್ಪಮಟ್ಟಿಗಾದರೂ ಕಡಿಮೆಮಾಡಲು ಅಷ್ಟೋ ಇಷ್ಟೋ ಸಹಾಯ ಮಾಡಿ ಕಳುಹಿಸುತ್ತೇವೆ. ಅವಳು ಬಂದುದೂ ನಮ್ಮ ಮೇಲಿನ ಮಮತೆಯಿಂದಲ್ಲ, ನಮ್ಮಿಂದ ಆಗಬಹುದಾದ ಸಹಾಯಾಪೇಕ್ಷೆಯಿಂದಲೇ ಎನ್ನುವುದು ಅವಳಿಗೂ

ಗೊತ್ತು, ನಮಗೂ ಗೊತ್ತು. ಆದರೂ ಏನು ಮಾಡುವುದು. ಇತರರ ಕಷ್ಟ ಕೇಳಿದಮೇಲೂ ಸುಮ್ಮನೆ ಬರಿಗೈಯಲ್ಲಿ ಕಳುಹಿಸುವುದು ಮಾನವತೆಯಲ್ಲವಲ್ಲಾ! ಅವರೂ ಸಹಾ ಅವರಿಗಿಂತ ಉತ್ತಮ ಸ್ಥಿತಿಯಲ್ಲಿರುವ ನಮ್ಮ ಬಳಿಗೆ ಬರದೇ ಅವರಿಗಿಂತ ನಿಕೃಷ್ಟ ಸ್ಥಿತಿಯಲ್ಲಿರುವವರ ಬಳಿ ತಮ್ಮ ಗೋಳುತೋಡಿಕೊಂಡರೆ ವೃಥಾ ಕಾಲಕ್ಷೇಪ ಅಲ್ಲವೇ, ಅದು ಅವರಿಗೆ ಬೇಕೂ ಇಲ್ಲ.

ಈಗೀಗ ಮನೆಗೆಲಸಕ್ಕೆ ಜನ ಸಿಗುವುದೇ ದುಸ್ತರ. ಸಿಕ್ಕರೂ ಅವರು ಕೇಳಿದಷ್ಟು ಪಗಾರ ಕೊಡಬೇಕು, ಅವರು ಮಾಡಿದಷ್ಟು ಕೆಲಸ ಮಾಡಿಸಿಕೊಳ್ಳಬೇಕು. ಮೈ ಬಗ್ಗಿ ಗುಡಿಸಿ ಒರಸುವುದು ಕಾಣುವುದೇ ಇಲ್ಲ, ಅದಕ್ಕಾಗೇ ಉದ್ದವಾದ ಬಾಂಬೇ ಪೊರಕೆ, ಒರಸಲು ಮಾಪ್ ಒದಗಿಸಬೇಕು. ಬಟ್ಟೆ ಒಗೆಯಲು ಕಷ್ಟ ಎನಿಸಿದರೆ ವಾಶಿಂಗ್ ಮೆಷೀನು ಕೊಳ್ಳಲು ಪುಕಸಟ್ಟೆ ಸಲಹೆ ಅವರೇ ನೀಡುತ್ತಾರೆ. ತಿಂಗಳಿಗೆ ಕನಿಷ್ಟ ಎರಡು ದಿನ ರಜೆ, ಮತ್ತೆ ಕೆಲವು ಸಂದರ್ಭಗಳಲ್ಲಿ ವಿಶೇಷ ರಜೆ, ಆದರೆ ಈ ರಜಾಕಾಲದಲ್ಲೂ ಸಂಬಳಸಹಿತ ರಜೆ ನೀಡಬೇಕು. ಅವರು ಬರದೇ ಇದ್ದ ದಿನದ ಕೆಲಸ ಮನೆಯವರೇ ಮಾಡಿಕೊಂಡಿರಬೇಕು, ಅದನ್ನು ಮಾರನೇ ದಿನ ಇವರು ಬರುವವರೆಗೆ ಇಟ್ಟಿರಬಾರದು. ಮುಂತಾದ ನಿಯಮಗಳಿಗೆ ಬದ್ಧರಾಗಿ ಇರಬೇಕಾದುದು ಮನೆಯವರ ಹೊಣೆಗಾರಿಕೆ. ಈಗ ಸರ್ಕಾರ ಬೇರೇ ಅವರಿಗೆ ಕನಿಷ್ಠ 9000 ರೂ ವೇತನ ನಿಗಧಿ ಮಾಡಲು ಹೊರಟಿದೆ.

ಮನೆಯವರೂ ಸಹಾ ಈ ನಿಬಂಧನೆಗಳಿಗೆ ತಲೆ ಅಲ್ಲಾಡಿಸಲೇಬೇಕಾಗುತ್ತದೆ, ಅನಿವಾರ್ಯವಾಗಿ. ಕೆಲಸದವರೇ ಸಿಗುತ್ತಿಲ್ಲವಾದುದರಿಂದ. ಅವರು ಪಟ್ಟುಕೊಳ್ಳಬೇಕಾದ ಒಂದು ಸಮಾಧಾನ ಎಂದರೆ ಬರದೇ ಇದ್ದ ನಾಲ್ಕಾರು ದಿನ ನಾವೇ ಕೆಲಸಮಾಡಿಕೊಂಡರೂ ಉಳಿದ ಇಪ್ಪತ್ತೈದು ಇಪ್ಪತ್ತಾರು ದಿವಸಗಳಾದರೂ ನೆಮ್ಮದಿಯಿಂದ ಇರಬಹುದಲ್ಲವಾ ಎಂಬುದರಿಂದಲ್ಲವೇ? ನಿಮಗೂ ಇಂತಹ ಅನುಭವ ಆಗಿರಬಹುದಲ್ಲವೇ?

* * * * *

## ಲೇಖನ – 12

# ಮಾತನಾಡುವ ಕಲೆ

ಎಲ್ಲರೂ ಮಾತನಾಡುತ್ತಾರೆ, ಪ್ರಾಣಿಗಳೂ ಸಹಾ ಮಾತನಾಡುತ್ತವೆ. ನಮಗೆ ಅವುಗಳ ಭಾಷೆ ಅರ್ಥವಾಗಲಾರದು, ಆದರೆ ಅವು ನಮ್ಮ ಭಾಷೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತವೆ. ಇತ್ತೀಚೆಗೆ ಪ್ರಾಣಿಗಳ ಭಾಷೆಗಳನ್ನು ಅರ್ಥಮಾಡಿಕೊಳ್ಳುವ ಪ್ರತ್ಯೇಕ ಸಂಶೋಧನೆಯೇ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ. ಇದೇನೂ ಹೊಸತಲ್ಲ ಬಿಡಿ. ನಾವು ಕಾಡುಜನರೆಂದು ಕರೆಯುವ ಅರಣ್ಯವಾಸಿಗಳು ಎಷ್ಟೋ ಪ್ರಾಣಿಪಕ್ಷಿಗಳ ಧ್ವನಿಯನ್ನು ಅನುಕರಿಸಿ ಅವುಗಳನ್ನು ಬೇಟೆಯಾಡುವುದನ್ನು ನೋಡಿಲ್ಲವೇ? ಹಾಗೇ ನಾವುಗಳು ನಮ್ಮ ಮನೆಯ ಅಥವಾ ಬೀದಿ ನಾಯಿ, ಹಸು, ಬೆಕ್ಕು ಮುಂತಾದುವನ್ನು ಕರೆಯುವುದಿಲ್ಲವೇ? ಹೀಗೆ ಮಾತು ಒಬ್ಬರ ಭಾವನೆಗಳನ್ನು ಮತ್ತೊಬ್ಬರೊಡನೆ ಹಂಚಿಕೊಳ್ಳಲು ಇರುವ ಮಾಧ್ಯಮವಷ್ಟೇ. ಇಷ್ಟೇ ಆಗಿದ್ದರೆ ಸಮಸ್ಯೆಯೇ ಇರುತ್ತಿರಲಿಲ್ಲ.

ಪ್ರಾಣಿಗಳಿಗಿರುವುದು ಒಂದೇ ಭಾಷೆ, ಎಲ್ಲ ಪ್ರಾಣಿಗಳಿಗಿರುವುದು ಒಂದೇ ರೀತಿಯ ಭಾವನೆ. ಅದರಲ್ಲಿ ಯಾವುದೇ ಕೃತಕತೆ ಇರುವುದಿಲ್ಲ. ಆದರೆ ಮನುಷ್ಯನಿಗೆ ನೂರಾರು ಭಾಷೆಗಳು. ಸಾವಿರಾರು ಭಾವನೆಗಳು, ಮೇಲೊಂದು ಗೋಚರವಾದರೆ ಒಳಗಿರುವುದೇ ಬೇರೊಂದು! ಒಂದೇ ಭಾಷೆಯಲ್ಲೂ ಹತ್ತಾರು ಪ್ರಭೇಧಗಳು. ಕನ್ನಡ ಒಂದು ಭಾಷೆ, ಆದರೆ ಅದರಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಹಳೇ ಮೈಸೂರು, ಗ್ರಾಮೀಣ

ಕನ್ನಡ ಹೀಗೆ ಹತ್ತಾರು ವೈವಿಧ್ಯಗಳು. ಇವುಗಳೇ ಅಲ್ಲದೆ ತಮಿಳರ ಕನ್ನಡ, ಮಲೆಯಾಳಿಗಳ ಕನ್ನಡ, ತೆಲುಗರ ಕನ್ನಡ, ಮರಾಠಿಗರ ಕನ್ನಡ, ಕಿರಿಸ್ತಾನರ ಕನ್ನಡ ಇವೂ ಚಾಲ್ತಿಯಲ್ಲಿವೆ. ಅಂತೆಯೇ ಇತರ ಭಾಷೆಗಳಲ್ಲಿಯೂ ಉಪ ವಿಭಾಗಗಳನ್ನು ಕಾಣಬಹುದಾಗಿದೆ. ಎಲ್ಲರೂ ಮಾತನಾಡುತ್ತಾರೆ, ಆದರೆ ಒಮ್ಮೆಲೇ ಎಲ್ಲರೂ ಮಾತನಾಡತೊಡಗಿದರೆ, ಆಡಿದ ಮಾತು ಅರ್ಥವಾಗುವುದೇ ಇಲ್ಲ. ಒಬ್ಬರು ಮಾತನಾಡುವಾಗ ಇತರರು ಕೇಳಿಸಿಕೊಳ್ಳುವ ವ್ಯವಧಾನವನ್ನು ಬೆಳೆಸಿಕೊಂಡಲ್ಲಿ ಮಾತ್ರ ಆಡಿದ ಮಾತು ಅರ್ಥಪೂರ್ಣವಾಗಿರುತ್ತದೆ.

ಮಾತಿನ ಬಗೆಗೆ ಇರುವ ಮಾತುಗಳನ್ನೊಮ್ಮೆ ನೆನಪಿಸಿಕೊಳ್ಳಿ. ಮಾತೇ ಮುತ್ತು, ಮಾತೇ ಮೃತ್ಯು; ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು; ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ; ದೇವ ನಮಗೆ ಒಂದು ಬಾಯಿಕೊಟ್ಟು ಎರಡು ಕಿವಿಗಳನ್ನು ಕೊಟ್ಟಿರುವುದೇ ಕಡಿಮೆ ಮಾತನಾಡಿ, ಹೆಚ್ಚು ಹೆಚ್ಚು ಕೇಳಿ ಎಂದು. ಮಾತಿನ ಮಹತ್ವವನ್ನು ಅರಿಯಬೇಕೆಂಬ ಮನುಜರು ಸರಿಯಾದ ಸಮಯದಲ್ಲಿ, ಸರಿಯಾದ ರೀತಿಯಲ್ಲಿ ಮಾತನಾಡುವುದನ್ನು ಅಭ್ಯಾಸಪೂರ್ವಕವಾಗಿ ಕಲಿಯಬೇಕು. ಹೇಗೆ ಮಾತನಾಡಬೇಕು ಎಂಬುದನ್ನು ಕಲಿಸಲು ವಿಶಿಷ್ಟವಾದ ಶಾಲೆಗಳೇ ಅಸ್ತಿತ್ವಕ್ಕೆ ಬಂದಿವೆ.

ಅದೇನೇ ಇರಲಿ ಅಕ್ಷರ ಬರೆಯಲು ಓದಲು ಬರದಿರುವವರೂ ಮಾತನಾಡಬಲ್ಲರು, ಮೂಕರನ್ನು ಹೊರತುಪಡಿಸಿ! ಅಂತಹವರಿಗೆ ಅವರದೇ ಆದ ಮೂಕ/ ಸಂಜ್ಞಾ ಭಾಷೆಯಿರುತ್ತದೆ. ಮಾತನಾಡುವುದು ಒಂದು ಕಲೆಯ ಸ್ಥಾನ ಪಡೆದುದು ಯಾವಾಗಿನಿಂದ, ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟದ ಕೆಲಸ. ಇಂದಿನ ದಿನಗಳಲ್ಲಿ ಭಾಷೆ ಕಲಿಸುವುದು ಒಂದು ವಿಚಾರವಾದರೆ, ಮಾತನಾಡುವುದು ಹೇಗೆ ಎಂಬುದನ್ನು ಕಲಿಸಲು ಹಲವಾರು ಸಂಸ್ಥೆಗಳು ತಲೆಯೆತ್ತಿವೆ. ಇರುವುದನ್ನು ಇದ್ದ ಹಾಗೆ ಹೇಳುವುದು ಸುಲಭ, ಆದರೆ ಇರುವುದನ್ನು ಅಲಂಕಾರಿಕವಾಗಿ ಇರದುದನ್ನು ಸೇರಿಸಿ ಹೇಳಬೇಕೆಂದರೆ ಅದು ಎಲ್ಲರಿಗೂ ಸಾಧ್ಯವಾಗದೇ ಇರಬಹುದು. ಅಂದರೆ ಭಾಷೆಯ ಉದ್ದೇಶ ಎದುರಿಗಿರುವವರಿಗೆ ಆಪ್ಯಾಯಮಾನ ಆಗುವಂತೆ ಆಕರ್ಷಕವಾಗಿರುವಂತೆ ಮಾತನಾಡುವುದು ಎಂದಾಯಿತು. ವಿಷಯ ತಿಳಿಸುವುದಷ್ಟೇ ಮಾತಿನ ಉದ್ದೇಶವಾಗಿರಬಾರದು, ಅದನ್ನು ಮನಮುಟ್ಟುವಂತೆ, ಮರುಳುಮಾಡುವಂತೆ ಹೇಳುವುದು ಒಂದು ಕಲೆ. ಅದನ್ನು ಸಿದ್ಧಿಸಿಕೊಳ್ಳಲೋಸುಗ ಇಂತಹ ಮಾತನಾಡುವ ಕಲೆ ಕಲಿಸುವ ಶಾಲೆಗಳಿಗೆ

ಸೇರಬೇಕು. ಈ ಕಲೆ ಮುಖ್ಯವಾಗಿ ಬೇಕಾಗುವುದು ಮಾರಾಟಗಾರರಿಗೆ! ತಮ್ಮಲ್ಲಿರುವ ಸರಕುಗಳನ್ನು, ಅವುಗಳಲ್ಲಿರುವ ಇಲ್ಲದಿರುವ ಗುಣಲಕ್ಷಣಗಳನ್ನು ಸೇರಿಸಿ, ಅದೇ ಸಮಯದಲ್ಲಿ ಅವುಗಳಲ್ಲಿನ ಹುಳುಕುಗಳ ಗುಟ್ಟು ಬಿಟ್ಟುಕೊಡದೇ ಅವುಗಳನ್ನು ಗ್ರಾಹಕನ ಕೈ ಸೇರಿಸುವ ಕಲೆ ಹೇಳಿಕೊಡುವ ಸಂಸ್ಥೆಗಳು! "ವ್ಯಾಪಾರಂ ದ್ರೋಹಚಿಂತನಂ" ಇದೇ ಅವುಗಳ ಧ್ಯೇಯ ವಾಕ್ಯವಲ್ಲವೇ? ಆದರೂ ಇಂದು ಈ ಮಾತನಾಡುವ ಕಲೆ/ಭಾಷಣ ಕಲೆ ಎಲ್ಲಿಲ್ಲದ ಪ್ರಾಮುಖ್ಯತೆ ಪಡೆದುಕೊಂಡಿರುವುದೇಕೆ? ಇದರ ಬಗೆಗೆ ಚಿಂತನೆ ನಡೆಸೋಣ. ಎಷ್ಟೋ ಕಲೆಗಳು ನಮ್ಮ ಸಂಸ್ಕೃತಿಯಲ್ಲೇ ಅಡಗಿದ್ದರೂ ಅವುಗಳು ವಿದೇಶದಿಂದ ಆಮದಾಗಿದ್ದರೆ ಮಾತ್ರ ಅವುಗಳಿಗೆ ಹೆಚ್ಚು ಬೆಲೆ. ಈ ನಿಟ್ಟಿನಲ್ಲಿ ವಿದೇಶೀಯ ಡೇಲ್ ಕಾರ್ನೆಗಿ ಎನ್ನುವವ ಸಿದ್ಧಪಡಿಸಿದ ಮಾತನಾಡುವ ಕಲೆ ಹೆಚ್ಚು ಪ್ರಚಾರ ಪಡೆದಿದೆ. ಓದುತ್ತಾ ಹೋದಂತೆ 'ಅರೇ ಇಷ್ಟೇನಾ, ಇದರಲ್ಲಿ ಹೊಸದೇನಿದೆ' ಎನಿಸದಿರದು. ಮಾತನಾಡುವುದು ಎಂದರೆ ಈ ಸಂದರ್ಭದಲ್ಲಿ ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಭಾಷಣ ಮಾಡುವುದು ಎಂಬ ಅರ್ಥದಲ್ಲೇ ತೆಗೆದುಕೊಳ್ಳಬೇಕು. ಈ ರೀತಿ ಮಾತನಾಡುವಾಗ ಹುಂಬತನದಲ್ಲಿ ವೇದಿಕೆಯನ್ನೇರಿ ಬಾಯಿಗೆ ಬಂದದ್ದು ಮಾತನಾಡಿ ನಗೆಪಾಟಲಿಗೆ ಈಡಾಗುವುದು ಎಂದರ್ಥವಲ್ಲ. ಅದಕ್ಕಾಗಿ ಕೆಲವು ಕನಿಷ್ಠ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. "Plan to fail, but don't fail to plan" ಎಂಬುದು ಒಂದು ನಾಣ್ನುಡಿ. ಅಂತೆಯೇ ಈ ಭಾಷಣ ಕಲೆಯನ್ನು ರೂಢಿಸಿಕೊಳ್ಳಲು ಕೆಲವು ಸಿದ್ಧತೆಗಳು ಅತ್ಯಾವಶ್ಯಕ. ಅವುಗಳು ಏನೆಂಬುದನ್ನು ಮುಂದೆ ನೋಡೋಣ.

**ಎಲ್ಲಕ್ಕಿಂತ ಮುಖ್ಯವಾದುದು ಮಾನಸಿಕ ಸಿದ್ಧತೆ:**

ಸಾಮಾನ್ಯವಾಗಿ ನೀವು ಗಮನಿಸಿರಬಹುದು, ನಾವುಗಳು ಹಲವರು ಸ್ನೇಹಿತರು, ಬಂಧುಗಳು ಒಂದೆಡೆ ಸೇರಿಕುಳಿತಾಗ ಮಾತನಾಡಲು ಇಂತಹ ವಿಷಯವೇ ಬೇಕೆಂದಿಲ್ಲ. ಆಡು ಮೇಯುವ ಹಾಗೆ ಪ್ರಪಂಚದ ಎಲ್ಲ ವಿಷಯಗಳ ಬಗೆಗೂ ಅದು ಹರಿಯುತ್ತಿರುತ್ತದೆ. ಇದನ್ನೇ 'ಹರಟೆ' ಎಂದು ಕರೆಯುವುದು. ಅದರಲ್ಲಿ ವಸ್ತು ನಿಷ್ಠತೆ ಇರಬೇಕೆಂದಿಲ್ಲ. ಒಂದು ರೀತಿಯಲ್ಲಿ 'ಅಂತ್ಯಾಕ್ಷರಿ' ಆಟದ ಹಾಗೆ. ಒಬ್ಬರು ಹೇಳಿದುದರಲ್ಲಿನ ಒಂದು ಎಳೆಯನ್ನು ಇಟ್ಟುಕೊಂಡು ಮಾತನ್ನು ಮುಂದುವರೆಸುವುದಷ್ಟೇ ಇದರ ಉದ್ದೇಶ.

ಆದರೆ ಭಾಷಣ ಒಂದು ಪೂರ್ವ ನಿಗದಿತ ವಸ್ತುವನ್ನು ಮನಸ್ಸಿನಲ್ಲಿಟ್ಟುಕೊಂಡು ಅದರ ಸುತ್ತಲೇ ಹೆಣೆದ ಮಾತುಗಾರಿಕೆ ಅದು. ಅಂತಹ ಭಾಷಣಕ್ಕೆ ಸಿದ್ಧತೆ

ಮಾಡಿಕೊಳ್ಳುವುದು ಎಂದರೆ ಪ್ರಯತ್ನಪೂರ್ವಕ ಅಭ್ಯಾಸ. ನಮ್ಮ ಮನದಲ್ಲಿ ಮೊದಲು ಮೂಡಬೇಕಾದ ವಿಚಾರ ಎಂದರೆ ನಮ್ಮನ್ನು ಭಾಷಣಕಾರರಾಗಿ ಕರೆದಿರುವುದೇ ನಾವು ಸಭಿಕರ ಮನಸ್ಸಿಗೆ ಮುದನೀಡುವಂತಹ ಅವರಿಗೆ ತಿಳಿಯದಂತಹ ಯಾವುದೋ ಮಹತ್ತರ ವಿಚಾರ ತಿಳಿಸುವವರೆಂಬ ಕಾರಣದಿಂದ. ಅವರಲ್ಲಿ ಆ ಕುತೂಹಲ ಆಕರ್ಷಣೆ ಮೂಡಿಸಬೇಕಾದುದು ಭಾಷಣಕಾರನ ಮುಖ್ಯ ಕೆಲಸ. ಇದು ಆಗಬೇಕಾದರೆ ನಾವು ಯಾವ ಸಮಾರಂಭದಲ್ಲಿ ಎಂತಹ ಸಭಿಕರನ್ನು ಎದುರಿಸಲಿದ್ದೇವೆ ಎಂಬ ಅರಿವು ಆ ಭಾಷಣಕಾರನಿಗೆ ಇರಬೇಕು. ಸಮಾರಂಭದ ಬಗೆಗೆ ಮೊದಲ ವಿಚಾರ ತಲುಪಿದ ತಕ್ಷಣದಿಂದಲೇ ನಮ್ಮ ಸಿದ್ಧತೆ ಪ್ರಾರಂಭವಾಗಬೇಕಾಗುತ್ತದೆ. ಯಾವ ವಿಷಯದ ಬಗೆಗೆ ಭಾಷಣ ಮಾಡಬೇಕಾಗಿದೆಯೋ ಅದರ ಬಗೆಗೆ ಮನನ ಮಾಡಬೇಕಾಗುತ್ತದೆ. ಅಂಕಿ ಅಂಶಗಳು, ಆ ವಿಷಯದ ಬಗೆಗೆ ಇತರರು ಮಾಡಿರುವ ಭಾಷಣಗಳ ಟಿಪ್ಪಣಿಗಳು. ಅಂತರಜಾಲದಲ್ಲಿ ದೊರೆಯಬಹುದಾದ ಮಾಹಿತಿಗಳು, ವೃತ್ತಪತ್ರಿಕೆ, ವಾರ ಪತ್ರಿಕೆ, ಮಾಸಪತ್ರಿಕೆ, ವಿಶೇಷ ಸಂಚಿಕೆಗಳಲ್ಲಿನ ಮಾಹಿತಿಗಳು ಎಲ್ಲವನ್ನೂ ಕಲೆಹಾಕುತ್ತಾ ಹೋಗಿ. ಅದು ಪುಸ್ತಕ ರೂಪದಲ್ಲಿರಬಹುದು, ಸುದ್ದಿಯ ತುಣುಕಾಗಿರಬಹುದು, ಮತ್ತ್ಯಾರಾದರೂ ಪೇಪರಿನಲ್ಲಿ ಗುರುತು ಹಾಕಿಕೊಟ್ಟ ಟಿಪ್ಪಣಿಗಳಾಗಿರಬಹುದು ಎಲ್ಲವನ್ನೂ ಒಂದು ಕವರಿನಲ್ಲಿ ತುಂಬಿಡುತ್ತಾ ಹೋಗಿ. ಭಾಷಣ ಮಾಡುವ ದಿನಾಂಕ ಇನ್ನು ಎರಡು ಮೂರು ದಿನಗಳಿರುವಾಗ ಆ ಕವರಿನಲ್ಲಿರುವ ಮಾಹಿತಿಗಳನ್ನು ವಿಂಗಡಿಸಿ, ಅವುಗಳನ್ನು ಹೊಸದಾಗಿ ನೋಟ್ ಮಾಡಿಕೊಳ್ಳುತ್ತಾ ಹೋಗಿ. ಒಂದು ರೀತಿಯಲ್ಲಿ ಇದು ಪರೀಕ್ಷೆಗೆ ಸಿದ್ಧಮಾಡಿಕೊಂಡ ಹಾಗೆ. ನಂತರದ ಹಂತ ಕನ್ನಡಿಯ ಮುಂದೆ ನಿಂತು ಬರೆದುಕೊಂಡ ಕಿರು ಟಿಪ್ಪಣಿಗಳನ್ನು ವಿಸ್ತರಿಸುತ್ತಾ ಹೋಗುವುದು. ನಮ್ಮ ಮುಖಚರ್ಯೆಯಲ್ಲಾಗುವ ಬದಲಾವಣೆಗಳನ್ನು ಗಮನಿಸುವುದು. ಒಂದು ರೀತಿಯಲ್ಲಿ ಇದು ಸಿನಿಮಾ ನಟ ನಟಿಯರು ಅಳುವುದು, ನಗುವುದು, ಸಂಭಾಷಣೆ ಮಾಡುವಾಗ ಆಗುವ ಅಸಹ್ಯಕರ ಚಲನೆಗಳನ್ನು ತಿದ್ದಿಕೊಳ್ಳುವ ಹಾಗೆ! ಸಭಿಕರು ಭಾಷಣಕಾರನ ಮುಖ ನೋಡುತ್ತಿರುವುದರಿಂದ ಅದು ಸಹ್ಯವಾಗಿರಬೇಕಾದುದು ಅತ್ಯಗತ್ಯ. ಸಂಗೀತಗಾರರ/ಹಾಡುಗಾರರ ಮುಖ ನೋಡಬಾರದು ಎಂಬುದೂ ಇದೇ ಕಾರಣಕ್ಕೆ. ಕೆಲವು ಆಲಾಪಗಳನ್ನು ಮಾಡುವಾಗ ಕೆಟ್ಟದಾಗಿ ಮುಖ ಮಾಡುವ ಸಂದರ್ಭಗಳೂ ಬರುತ್ತವೆ. ಆದಷ್ಟೂ ಮಟ್ಟಿಗೆ ಇಂತಹ ಅಸಹ್ಯ ಮುಖಗಳನ್ನು ತಪ್ಪಿಸಬೇಕಾಗುತ್ತದೆ. ದೊಡ್ಡ ದೊಡ್ಡ ಭಾಷಣಕಾರರು ಅಂತಿಮವಾಗಿ ಭಾಷಣ ಮಾಡುವ ಮೊದಲು ಈ ರೀತಿಯ ಸಿದ್ಧತೆ ಮಾಡಿಕೊಂಡಿರುತ್ತಾರೆ ಎಂಬ ವಿಚಾರ ತಮಗೆ ತಿಳಿದಿರಬಹುದು.

ನಂತರದ ಹಂತ ಅಂದರೆ ವಿಚಾರದ ಪುನರ್‌ಮನನ. ನೀವು ಯಾವುದೇ ಇತರ ಕೆಲಸಗಳನ್ನು ಮಾಡುತ್ತಿರುವಾಗಲೂ, ಭಾಷಣದ ವಿಚಾರ ಮನದಲ್ಲಿ ಸುಳಿಯುತ್ತಿರಬೇಕು. ವಿಷಯ ಪ್ರಸ್ತುತಿ ಯಾವ ರೀತಿಯಲ್ಲಿ ಇದ್ದರೆ ಅದು ಆಕರ್ಷಕವಾಗಿರುತ್ತದೆ; ಯಾವ ವಿಚಾರದ ನಂತರ ಯಾವ ವಿಚಾರ ಮಂಡನೆ ಮಾಡಬೇಕು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ವೇದಿಕೆಯಲ್ಲಿ ಮಾತನಾಡುವಾಗಲೂ ಒಂದು ಪುಟ್ಟ ಟಿಪ್ಪಣಿ ಮುಂದಿಟ್ಟುಕೊಳ್ಳುವುದು ಒಳ್ಳೆಯದು.

**ಮಾತನಾಡುವಾಗಲಿನ ಮ್ಯಾನರಿಸಂಗಳು/ಅಂಗ ಚೇಷ್ಟೆಗಳು:**

ಕೆಲವರು ಮಾತನಾಡುವಾಗ ಕೆಲವು ರೀತಿಯ ಅಂಗಚೇಷ್ಟೆಗಳನ್ನು ಅಭ್ಯಾಸಮಾಡಿಕೊಂಡು ಬಿಟ್ಟಿರುತ್ತಾರೆ. ಇದು ಕೇಳುಗರ ಮನವನ್ನು ವಿಚಾರದಿಂದ ವಿಮುಖರನ್ನಾಗಿಸಬಹುದು. ಅಂಗಿಯ ಬಟನ್ನನ್ನು ತಿರುಚುತ್ತಾ ಇರುವುದು, ತಲೆಯನ್ನು ವಿಚಿತ್ರವಾಗಿ ಅಲ್ಲಾಡಿಸುತ್ತಾ ಮಾತನಾಡುವುದು, ಮಾತು ಮಾತಿಗೆ 'ಯು ಸೀ' 'ಯು ಸೀ' ಎನ್ನುತ್ತಿರುವುದು, ಆಗಾಗ್ಗೆ ತಲೆ ಕೆರೆದುಕೊಳ್ಳುತ್ತಿರುವುದು, ಹೀಗೆ ಇನ್ನೂ ಹತ್ತಾರು ಚೇಷ್ಟೆಗಳನ್ನು ಮಾಡುವುದು ಒಳ್ಳೆಯ ಭಾಷಣಕಾರನ ಲಕ್ಷಣಗಳಲ್ಲ. ಭಾಷಣಕಾರನ ಗಮನ ಸಭಿಕರ ಮೇಲೆ ನೆಟ್ಟಿರಬೇಕು. ಅವರನ್ನೇ ಉದ್ದೇಶಿಸಿ ಮಾತನಾಡುತ್ತಿರುವುದರಿಂದ ಅವನ ನೋಟ ಅವರೆಲ್ಲರ ಮೇಲಿರಬೇಕು ಕೆಲವರು ಹೆದರಿಕೆಯ ಕಾರಣದಿಂದಲೋ ಮತ್ಯಾವ ಕಾರಣಕ್ಕೋ ಸಭಿಕರನ್ನು ನೇರವಾಗಿ ದೃಷ್ಟಿಸದೇ, ತಾರಸಿಯನ್ನೋ, ಮುಂದಿನ ಒಂದೆರಡು ಸಾಲುಗಳಲ್ಲಿರುವವರನ್ನೋ ಅಥವಾ ಸಭಾಂಗಣದ ಮಧ್ಯದಲ್ಲಿನ ಖಾಲೀ ಜಾಗವನ್ನೋ ನೋಡುತ್ತಾ ಮಾತನಾಡುವ ಅಭ್ಯಾಸ ಮಾಡಿಕೊಂಡಿರುತ್ತಾರೆ. ಇದರಿಂದ ಸಭಿಕರ, ಕೇಳುಗರ ಆಸಕ್ತಿ ಕುಂಠಿತವಾಗುವ ಸಾಧ್ಯತೆಯಿರುತ್ತದೆ. ಇವುಗಳ ಜೊತೆಗೆ ಸಭಿಕರ ತಾಳ್ಮೆಯ ಮಿತಿಯನ್ನು ಅರಿತು ಭಾಷಣಕಾರ ತನ್ನ ಭಾಷಣದ ಅವಧಿಯನ್ನು ನಿರ್ಧರಿಸಬೇಕಾಗುತ್ತದೆ. ಸಾಮಾನ್ಯವಾಗಿ ಸಮಾರಂಭದ ಆರಂಭದಲ್ಲಿರುವಷ್ಟು ತಾಳ್ಮೆ ಆಸಕ್ತಿ ಸಮಯ ಕಳೆದಂತೆ ಕಡಿಮೆ ಆಗುತ್ತಾ ಹೋಗುತ್ತದೆ. ಅಧ್ಯಕ್ಷ ಭಾಷಣ, ವಂದನಾರ್ಪಣೆ ವೇಳೆಗೆ ಬೆರಳೆಣಿಕೆಯಷ್ಟು ಮಂದಿ ಹಾಜರಿರುವ ಸಾಧ್ಯತೆಯೂ ಇರುತ್ತದೆ.

ಊಟದ ವೇಳೆಯಾಗಿದ್ದರಂತೂ ಮುಖ್ಯ ಅತಿಥಿಗಳ ಭಾಷಣ ಮುಗಿಯುತ್ತಿದ್ದಂತೆಯೇ ಊಟದ ಕ್ಯೂಗೆ ಹೋಗಿನಿಂತಿರುವ ದೃಶ್ಯಗಳೂ ಸಾಮಾನ್ಯ. ಹೀಗಾಗಿ ಯಾವುದೇ ಸಭೆ ಸಮಾರಂಭ ಹೆಚ್ಚೆಂದರೆ ಎರಡೂವರೆ ಘಂಟೆಗಿಂತ ಹೆಚ್ಚಾಗಿರಬಾರದು. ಬೆಳಿಗ್ಗೆ ಹತ್ತು ಘಂಟೆಗೆ ಸಮಾರಂಭ ಪ್ರಾರಂಭಿಸಿದರೆ ಅದು

ಮಧ್ಯಾಹ್ನ ಒಂದೂವರೆ ಒಳಗೆ ಮುಕ್ತಾಯವಾಗುವಂತೆ ನೋಡಿಕೊಳ್ಳಬೇಕು; ಹಾಗೆಯೇ ಸಂಜೆ 6 ಘಂಟೆಗೆ ಪ್ರಾರಂಭವಾದ ಸಮಾರಂಭ ರಾತ್ರಿ ಎಂಟೂವರೆ ಒಳಗೆ ಮುಕ್ತಾಯವಾಗಬೇಕು. ಅನಿವಾರ್ಯವಾಗಿ ಸಭೆ ಅವಧಿ ಇದಕ್ಕಿಂತ ಹೆಚ್ಚಿಗೆ ಇರಬೇಕಾದ ಸಂದರ್ಭಗಳಲ್ಲಿ ನಿಗದಿತ ಸಮಯಕ್ಕೆ ಊಟ ವ್ಯವಸ್ಥೆಯಾಗಬೇಕು.

ಪ್ರಖ್ಯಾತ ಭಾಷಣಕಾರರು ಹೇಳಿರುವಂತೆ, 'ಯಾವಾಗ ಕೇಳುಗ ತನ್ನ ಗಮನವನ್ನು ನಿಮ್ಮಿಂದ ವಾಚಿನ ಕಡೆಗೆ ಅಥವಾ ಹೊರಗೆ ಬದಲಾಯಿಸುತ್ತಾನೋ, ಆ ಕ್ಷಣದಲ್ಲೇ ನೀವು ಭಾಷಣವನ್ನು ಮುಕ್ತಾಯಗೊಳಿಸುವುದು ಒಳ್ಳೆಯ ಭಾಷಣಕಾರನ ಲಕ್ಷಣ'. ಇದನ್ನು ಪ್ರತಿಯೊಬ್ಬ ಭಾಷಣಕಾರನೂ ಗಮನದಲ್ಲಿ ಇಟ್ಟುಕೊಳ್ಳಬೇಕು.

30–3–2017

* * * * *

## ಲೇಖನ – 13

# ಇರುಳು ಕಂಡ ಬಾವಿಯೊಳಗೆ ಹಗಲು ಬಿದ್ದರಂತೆ!

ಏಕೆ ವಿಚಿತ್ರ ಎಂದುಕೊಳ್ಳುತ್ತಿದ್ದೀರಾ? ಇದು ಹಾಗೇ, ಕೆಲವರಿರುತ್ತಾರೆ, ಹೋಗಿಹೋಗಿ ಹಳ್ಳಕ್ಕೆ ಬೀಳುತ್ತಲೇ ಇರುತ್ತಾರೆ. ಅಲ್ಲಾ ಒಂದು ಸಲ ಆದರೆ ಪರ್ವಾಗಿಲ್ಲ, ಪದೇ ಪದೇ ಬೇಸ್ತು ಬೀಳುವುದು ಅಂದರೆ, ಅದು ಅವರ ಅಜ್ಞಾನವೋ, ಪೆದ್ದತನವೋ ಹೇಳಲಿಕ್ಕೇ ಆಗುವುದಿಲ್ಲ, ವಯಸ್ಸಾಗುತ್ತದೆ ಎಲ್ಲರಿಗೂ, ಆದರೆ ವಯಸ್ಸು ಆದಂತೆ ವಿವೇಕವೂ ಬೆಳೆಯಬೇಕಲ್ಲವೇ? ನಮ್ಮ ಸಂಪರ್ಕಕ್ಕೆ ಬರುವವರ ಮುಖ, ನಡವಳಿಕೆ ನೋಡುತ್ತಲೇ ಅವರ ಉದ್ದೇಶ ಎಂತಹುದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಎಲ್ಲರನ್ನೂ ಮೇಲುನೋಟಕ್ಕೇ ನಂಬಬಾರದು. ಯಾವುದೇ ಕೆಲಸಕ್ಕೆ ಯಾರನ್ನೇ ಸೇರಿಸಿಕೊಳ್ಳುವ ಮುಂಚೆ ಅವರ ಪೂರ್ವಾಪರ ಅರಿಯುವುದರ ಜೊತೆಗೆ ಅವರನ್ನು ಖಾಯಂ ಮಾಡುವುದಕ್ಕೆ ಮುಂಚೆ ಒಂದು ಮೂರು ತಿಂಗಳೋ ಆರು ತಿಂಗಳೋ ಪ್ರೊಬೇಶನರಿ ಎಂದು ಮಾಡಿಸಿ, ನಮಗೆ ಇವರು ಕೆಲಸಕ್ಕೆ ಸರಿಹೋಗುತ್ತಾರೆ ಎನಿಸಿದನಂತರವಷ್ಟೇ ಖಾಯಂಮಾಡುತ್ತಾರೆ. ಅಂತಹುದರಲ್ಲಿ ಹಿಂದೆಮುಂದೆ ಯೋಚನೆಮಾಡದೇ ದಿಢೀರ್ ತೀರ್ಮಾನಗಳಿಂದ ಲಾಭವಾಗುವುದಕ್ಕಿಂತ ನಷ್ಟ ಅನುಭವಿಸುವುದೇ ಹೆಚ್ಚು.

ನಮ್ಮ ಕಾಳಿಂಗನೂ ಈ ಎರಡನೇ ವರ್ಗಕ್ಕೆ ಸೇರಿದವನು. ಅವನಿಗೆ ತುಂಬ ನೆಂಟರಿದ್ದರು. ಎಲ್ಲರೂ ಇವನ ಆತ್ಮೀಯರೇ,

ಅವಕಾಶ ಸಿಕ್ಕಾಗಲೆಲ್ಲಾ ಇವನನ್ನು ಮುತ್ತುತ್ತಿದ್ದರು, ಬೆಲ್ಲಕ್ಕೆ ಇರುವೆ ಮುತ್ತಿದಂತೆ! ಸಹಾಯ ಮಾಡಬಹುದು. ನಮ್ಮ ಅರ್ಹತೆ ಆಧರಿಸಿ. ಮೊದಲ ಸಲ ಯಾವುದೇ ಚುಚ್ಚುಮದ್ದು ನೀಡುವಾಗ ವೈದ್ಯರು 'ಟೆಸ್ಟ್ ಡೋಸ್' ಎಂದು ನೀಡುತ್ತಾರೆ. ಯಾವುದೇ ದುಷ್ಪರಿಣಾಮ ಆಗುವುದಿಲ್ಲ ಎಂದು ಖಾತ್ರಿಪಡಿಸಿಕೊಂಡನಂತರವಷ್ಟೇ ಫುಲ್ ಡೋಸ್ ನೀಡುತ್ತಾರೆ. ಅದೇ ರೀತಿ ಸಹಾಯ ಬಯಸಿಬಂದವರಿಗೆ ಅಲ್ಪ ಪ್ರಮಾಣದ ಸಹಾಯನೀಡಬೇಕು. ಆ ಸಹಾಯ ಅಪಾತ್ರದಾನ ಎನ್ನಿಸಿಕೊಂಡಲ್ಲಿ, ಮುಂದೆ ಅಂತಹವರಿಗೆ ಸಹಾಯ ಮಾಡಲು ಹೋಗಬಾರದು. ಯಾರಿಗಾದರೂ ಯಾವ ರೀತಿಯ ಸಹಾಯವನ್ನಾದರೂ ಮಾಡಬಹುದು. ಆದರೆ ಆ ಸಹಾಯ ನಮಗೇ ಉರುಳಾಗಬಾರದು. ಆ ಎಚ್ಚರಿಕೆ ನಮಗಿರಬೇಕು. ಅದರಲ್ಲೂ ಯಾರಾದರೂ ಹಣಕಾಸು ಸಂಸ್ಥೆಗಳಿಂದ ಸಾಲಪಡೆದು ನಮ್ಮನ್ನು ಆ ಸಾಲಕ್ಕೆ ಜಾಮೀನಾಗಬಯಸಿದರೆ, ಒಂದಲ್ಲ, ನೂರು ಸಲ ಯೋಚಿಸಬೇಕಾಗುತ್ತದೆ. ಜಾಮೀನು ಹಾಕಿದ ದಿನದಿಂದಲೇ ಸಾಲ ತೀರಿಸಲಾಗದಿದ್ದಲ್ಲಿ, ನಾವೇ ಆ ಸಾಲ ತೀರಿಸಬೇಕಾಗುತ್ತದೆ ಎಂದು ಅದಕ್ಕೆ ಪೂರ್ಣಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ನಮಗೆ ತೀರ ಆಪ್ತರಾದವರಿಗೆ, ಸಾಲ ತೆಗೆದುಕೊಂಡವರಿಗೆ ಸಾಲ ತೀರಿಸುವ ಸಾಮರ್ಥ್ಯ ಇದೆಯೆಂದು ಖಾತ್ರಿ ಪಡಿಸಿಕೊಂಡ ನಂತರವಷ್ಟೇ ಜಾಮೀನು ಪತ್ರಕ್ಕೆ ಸಹಿ ಹಾಕಬೇಕಾಗುತ್ತದೆ. ಅದು ಬಿಟ್ಟು ಬಂದು ಕೇಳಿದವರಿಗೆಲ್ಲಾ ಕೆಲವು ರಾಜಕಾರಣಿಗಳು ಪ್ರಮಾಣಪತ್ರ ಕೊಟ್ಟಂತೆ ಜಾಮೀನು ಪತ್ರಗಳಿಗೆ ಸಹಿ ಹಾಕುತ್ತಾ ಹೋದರೆ, ನಮ್ಮ ಕೈಗೆ ಚೊಂಬೇ ಗತಿ! ನಮ್ಮ ಕಾಳಿಂಗ ಸಹಾ ಹೀಗೇ ಹತ್ತಿರದ ಸಂಬಂಧ ಹೇಳಿಕೊಂಡು ಬಂದವರೊಬ್ಬರಿಗೆ ಅವರು ಪಡೆದ ಸಾಲಕ್ಕೆ ಜಾಮೀನು ನೀಡಿದ ಘಟನೆ ನೆನಪಿಗೆ ಬರುತ್ತಿದೆ. ಸಾಲ ಪಡೆಯುವಾಗ ಬೆಕ್ಕಿನಂತೆ ಬಂದಿದ್ದವರು ನಂತರದ ಅವಧಿಯಲ್ಲಿ ಸಾಲದ ಕಂತು ಸರಿಯಾಗಿ ಕಟ್ಟದೇ, ನಾನಾ ನೆಪ ಹೇಳಿಕೊಂಡು ಕೈಗೆ ಸಿಗದೇ ತಪ್ಪಿಸಿಕೊಂಡು ಓಡಾಡತೊಡಗಿದ್ದರು. ಹಣಕಾಸು ಸಂಸ್ಥೆಯವರು ಆ ಸಾಲಗಾರನನ್ನು ಪತ್ತೆಮಾಡುವಲ್ಲಿ ಕಷ್ಟಕರ ಎನಿಸತೊಡಗಿದಾಗ, ಸುಲಭವಾಗಿ ಜಾಮೀನುದಾರನನ್ನು ಆ ಸಾಲ ತೀರಿಸಲು ಒತ್ತಾಯಿಸತೊಡಗಿದರು. ವಿಧಿಯಿಲ್ಲದೇ ಆ ಸಾಲಗಾರನನ್ನು ಮನದಲ್ಲಿಯೇ ಶಪಿಸುತ್ತಾ ತಾನೇ ಸಾಲತೀರಿಸುತ್ತಾನೆ. ಈ ಘಟನೆಯಿಂದ ಪಾಠ ಕಲಿಯಬೇಕಾಗಿತ್ತಲ್ಲವೇ? ಊಹೂಂ, ಈ ರೀತಿಯ ಮಂದಿಯ ಮುಖಲಕ್ಷಣವೇ ಅಂತಹುದು ಎಂದು ಕಾಣುತ್ತದೆ.

ಮತ್ತೊಮ್ಮೆ ಸಹೋದ್ಯೋಗಿಯಾಗಿ ಹೊಸದಾಗಿ ಕೆಲಸಕ್ಕೆ ಸೇರಿದ್ದ ವ್ಯಕ್ತಿ ಕೆಲವು ಕಾಲದ ನಂತರ ವಾಣಿಜ್ಯ ಸಂಸ್ಥೆಯೊಂದರಲ್ಲಿ ಸಾಲಪಡೆಯಲು ಹೋದ ಸಮಯದಲ್ಲೇ ತನ್ನ ವೇತನ ಪಡೆಯಲು ಈ ವ್ಯಕ್ತಿಯೂ ಅಲ್ಲಿಗೆ ಹೋಗಿದ್ದ. ಸಹೋದ್ಯೋಗಿ ಬ್ಯಾಂಕಿನಲ್ಲಿ ಸಾಲ ಪಡೆಯುವ ಅರ್ಜಿಗೆ ಜಾಮೀನುದಾರನಾಗಲು ಯಾರನ್ನಾದರೂ ಹುಡುಕುತ್ತಿದ್ದಾಗ ಈ ವ್ಯಕ್ತಿಯೇ ಕಣ್ಣಿಗೆ ಬೀಳಬೇಕೇ! ಸಾರ್ ಈ ಅರ್ಜಿಗೆ ಒಂದು ವಿಟ್ನೆಸ್ ಹಾಕಿಬಿಡಿ. ಮೂರು ತಿಂಗಳಲ್ಲಿ ಸಾಲ ಕ್ಲಿಯರ್ ಮಾಡಿಬಿಡುತ್ತೇನೆ ಎಂದ ಅವನ ಹೇಳಿಕೆ ನಂಬಿ ಈತ ಸಹಿಹಾಕಿಕೊಟ್ಟುಬಿಟ್ಟಿದ್ದು ಇದೆ. ಅದೇನು ಇವನ ದುರಾದೃಷ್ಟವೋ ಏನೋ ಆ ಸಾಲಗಾರ ಅವನು ಹೇಳಿದ ಮೂರು ತಿಂಗಳಲ್ಲಿ ಈ ಸಂಸ್ಥೆಯನ್ನೇ ತೊರೆದು ಮತ್ಯಾವುದೋ ಊರಿನ ಸರ್ಕಾರಿ ಕಾಲೇಜಿಗೆ ಕೆಲಸಕ್ಕೆ ಸೇರಿಬಿಟ್ಟ! ಅವನನ್ನು ಸಂಪರ್ಕಿಸಲು ಮಾಡಿದ ಪ್ರಯತ್ನ ವ್ಯರ್ಥ ಪ್ರಯತ್ನವಾಗಿತ್ತು. ಕೊನೆಗೆ ವಿಧಿಯಿಲ್ಲದೇ ಈತ ಆ ವ್ಯಕ್ತಿಯ ಸಾಲವನ್ನು ಹಲವು ಕಂತಿನಲ್ಲಿ ತೀರಿಸಲು ಒಪ್ಪದಿದ್ದಲ್ಲಿ ತನ್ನ ಮನೆಯನ್ನೇ ಕಳೆದುಕೊಳ್ಳಬೇಕಾಗುತ್ತಿತ್ತು. ತಮಾಷೆಗಾಗಿ ಆಡುವ ಒಂದು ಹೇಳಿಕೆ ನೀವು ಕೇಳಿರಬಹುದು; 'ಬೇಕಾದರೆ ಮಣ್ಣು ತಿಂದುಬಿಡಿ ಎಂದರೂ ತಿಂದುಬಿಡಬಹುದು, ಆದರೆ ಈ ಜಾಮೀನು ನೀಡಲು ಮುಂದಾಗಬಾರದು'.

ಈ ಮೊದಲು ಪ್ರಸ್ತಾಪಿಸಲಾದ 'ನೆಂಟ' ತನ್ನ ಸಾಲವನ್ನು ತೀರಿಸಲಾಗಿದೆ ಎಂಬ ವಿಚಾರ ತಿಳಿದುಬಂದನಂತರ ದಿಢೀರ್ ಪ್ರತ್ಯಕ್ಷವಾಗಿ 'ಅಯ್ಯೋ ಅನ್ಯಾಯವಾಗಿ ನಿಮಗೆ ತೊಂದರೆಕೊಟ್ಟುಬಿಟ್ಟೆ, ನಿಮ್ಮ ಈ ಉಪಕಾರವನ್ನು ಎಂದೂ ಮರೆಯುವುದಿಲ್ಲ, ನೀವು ತೀರಿಸಿರುವ ಆ ಮೊತ್ತವನ್ನು ನಾನು ನಿಮಗೆ ಕಂತುಗಳಲ್ಲಿ ತೀರಿಸುತ್ತೇನೆ. ಇಗೋ ಅದರ ಮೊದಲ ಕಂತು ಎಂದು ಸಾಲದ ಮೊತ್ತದ ಹತ್ತನೇ ಒಂದು ಭಾಗವನ್ನು ನಗದಾಗಿ ಕೈಲಿಟ್ಟಾಗ, ಈ ವ್ಯಕ್ತಿಯ ಬಗೆಗೆ ತಾನು ತಪ್ಪು ತಿಳಿದುಕೊಂಡುಬಿಟ್ಟೆನಲ್ಲಾ ಎಂದು ಪೇಚಾಡುತ್ತಾ, ಬಂದ ದಂಪತಿಗಳಿಗೆ ಭರ್ಜರಿ ಆತಿಥ್ಯ ನೀಡಿ ಸಾಗಹಾಕಿದರು.

ಇದಾದ ಕೆಲವು ದಿನಗಳ ನಂತರ ಇವರ ಸಂಬಂಧೀಕರ ಮನೆಯೊಂದರಲ್ಲಿ ಮದುವೆ ಸಮಾರಂಭ ನಡೆಯುವುದಿತ್ತು. ನಮ್ಮ ಕಾಳಿಂಗನನ್ನು ಹುಡುಕಿಬಂದ ಅದೇ ದಂಪತಿ ಇವರ ಮನೆಗೆ ವಕ್ಕರಿಸಿದರು. ಅದರಲ್ಲೂ ಅತಿಥಿಗಳಲ್ಲಿ ಪತ್ನಿ ಕಾಳಿಂಗನ ಪತ್ನಿಯೊಡನೆ ಅದೂ ಇದೂ ಮಾತನಾಡುತ್ತಾ, ಮುಂಬರುವ ಮದುವೆ ವಿಚಾರ ತೆಗೆದು, ಆ ಮದುವೆಗೆ ತಾವೂ ಹೋಗಲಿಚ್ಛಿಸುವುದಾಗಿಯೂ, ಆದರೆ ತಮ್ಮ ವಿವಿಧ ಕಷ್ಟ ಸಮಯದಲ್ಲಿ, ಇದ್ದಬದ್ದ ಒಡವೆಗಳನ್ನೆಲ್ಲ

ಮಾರಬೇಕಾಗಿಬಂದುದು, ಈಗ ಬರಿಗೈನಲ್ಲಿ ಆ ಸಮಾರಂಭದಲ್ಲಿ ಭಾಗವಹಿಸಲು ಆಗುತ್ತಿರುವ ಮುಜುಗರವನ್ನು ಹೇಳುತ್ತಾ ಕಣ್ಣೀರುಹಾಕತೊಡಗಿದಳು. ತಮಗೆ ಆ ಸಮಾರಂಭದಲ್ಲಿ ಭಾಗವಹಿಸಲು ಒಂದು ಜೊತೆ ಬಂಗಾರದ ಬಳೆಗಳನ್ನಾದರೂ ನೀಡಿದರೆ, ಸಮಾರಂಭ ಮುಗಿದ ಮಾರನೇ ಬೆಳಗ್ಗೆಯೇ ಅದನ್ನು ಜೋಪಾನವಾಗಿ ಹಿಂದಿರುಗಿಸುವುದಾಗಿ ಹೇಳಿದಳು. ಇವರ ಇಂದಿನ ಸ್ಥಿತಿಯನ್ನು ಕಂಡು ಮನಕರಗಿದ ನಮ್ಮ ಕಾಳಿಂಗನ ಪತ್ನಿ, ಈ ಹಿಂದಿನ ಕಹಿ ಅನುಭವವನ್ನು ಮರೆತು, ತನ್ನ ಬಳಿ ಇದ್ದ ಒಂದು ಜೊತೆ ಬಂಗಾರದ ಬಳೆಗಳನ್ನೇ ಕೊಟ್ಟುಕಳುಹಿಸಿದರು. ಸಮಾರಂಭದಲ್ಲಿ ಸಡಗರದಿಂದ ಎಲ್ಲರೂ ಭಾಗವಹಿಸಿದರು. ಸಮಾರಂಭ ಮುಗಿಸಿಕೊಂಡು ಬಂದನಂತರ, ತಮ್ಮ ಬಳಿ ತಂದುಕೊಡುವರೆಂದು ಇವರು ಕಾದಿದ್ದೇ ಕಾದಿದ್ದು, ಆದರೆ ಆ ವಾಪಸುಮಾಡುವ ದಿನ ಬರಲೇ ಇಲ್ಲ. ಮತ್ತೆ ಅವರನ್ನು ಪತ್ತೆಹಚ್ಚುವ ಇವರ ಪ್ರಯತ್ನ ಇಂದಿಗೂ ಮುಂದುವರಿದೇ ಇದೆ, ಆದರೆ ಫಲಮಾತ್ರ ಕಂಡುಬಂದಿಲ್ಲ. ಇದಕ್ಕೇ ಅಲ್ಲವೇ ನಾನು ಮೊದಲು ಹೇಳಿದುದು "ಇರುಳು ಕಂಡ ಬಾವಿಗೆ ಹಗಲು ಬಿದ್ದವರು" ಎಂದು. ನೀವಾದರೂ ಹುಷಾರಾಗಿರಿ!

11-7-2017

* * * * *

## ಲೇಖನ – 14

# ಮನದನ್ನೆಯ ಮನದಿಂಗಿತ ಈಡೇರಿಸಲು ಮುಂದಾದಾಗ

ಅದೇನ್ರೀ ನಿಮಗೆ ಹೊರಕ್ಕೆ ಹೋಗೋಣ ಅಂದ್ರೆ ಇರೋದು ಅದೊಂದೇ ಜಾಗಾನಾ? ಬೇರೇವ್ರೆಲ್ಲಾ ಸಿನಿಮಾ, ಪಾರ್ಕು, ಹೋಟೆಲು ಅಂತ ಹೇಳ್ತಾಯಿದ್ರೆ, ನೀವು ಮಾತ್ರಾ 'ಝೂ'ಗೆ ಹೋಗೋಣ ಅಂತೀರಲ್ರೀ! ಅಂತಹುದು ಏನಿದೆ ಆ ಝೂನಲ್ಲಿ! ರಮ್ಯ ತನ್ನ ಗಂಡನ ಸೋಟೆತಿವಿಯುತ್ತಾ ಕೇಳಿದ ಮಾತಿದು.

ಆನಂದ ರಮ್ಯ ಹೊಸದಾಗಿ ಮದುವೆಯಾಗಿದ್ದ ಜೋಡಿ. ಸಂಜೆಯಾಯಿತಂದ್ರೆ, ರಜಾದಿನಗಳಲ್ಲಿ ಎಲ್ಲಾದರೂ ಹೋಗಿಬರುವ ಮನಸ್ಸು, ಹುಮ್ಮಸ್ಸು ಹೊಸ ಹೆಂಡತಿಯದು. ಈತನದೋ ವಾರಪೂರ್ತಿ ಕೆಲಸಮಾಡಿ ರಜಾಬಂದರೆ ದಿನ ಪೂರ್ತಾ ಮನೇಲಿ ರೆಸ್ಟ್ ತಗೊಂಡು ಮತ್ತೆ ಮುಂದಿನ ವಾರದ ಕಾಯಕಕ್ಕೆ ಸಿದ್ಧನಾಗಬೇಕೆಂಬ ಆಲೋಚನೆ. ಆದರೂ ಹೆಂಡತಿಯ ಹೊರಹೋಗುವ ಆಸೆಯನ್ನು ತೀರಿಸಲೋಸುಗ ಆತ ಆಕೆಯನ್ನು ಇಡೀ ಏಷ್ಯಾದಲ್ಲೇ ಪ್ರಖ್ಯಾತಿಪಡೆದಿರುವ ಮೃಗಾಲಯಕ್ಕೆ ಕರೆದುಕೊಂಡುಹೋಗಲು ನಿರ್ಧರಿಸಿದುದಕ್ಕೆ ಆಕೆಯ ಪ್ರತಿಕ್ರಿಯೆ ಮೇಲಿನದು. ಈ ಹಿಂದೆಯೂ ಒಂದೋ ಎರಡೋ ಸಲ ಅವರು ಮೃಗಾಲಯಕ್ಕೆ ಹೋಗಿಬಂದುದಿತ್ತು. ಪದೇ ಪದೇ ಅದೇ ಸ್ಥಳಕ್ಕೆ ಹೋಗೋಣವೆಂದಾಗ ಆಕೆಗೆ ಬೇಸರವಾದುದರಲ್ಲಿ ಆಶ್ಚರ್ಯಪಡಬೇಕಾದುದು ಏನೂ ಇಲ್ಲ!

ಆನಂದನಿಗೆ ಝೂನಲ್ಲಿ ತಿರುಗಾಡಬೇಕೆಂಬುದೇನೂ ಇಲ್ಲ. ಹೋಗಿ ಎಲ್ಲೋ ಒಂದು ಮರದ ಕೆಳಗೆ ಕುಳಿತು ಹೋಗಿಬರುವವರನ್ನು ನೋಡುತ್ತಾ ಒಂದೆರಡು ಘಂಟೆಗಳ ಕಾಲಕಳೆದು ನಂತರ ಹತ್ತಿರದ ಯಾವುದೋ ಹೋಟಲಿನಲ್ಲಿ ಊಟಮುಗಿಸಿ, ಮನೆಗೆ ವಾಪಸಾಗುವುದೇ ಅವನ ಯೋಜನೆ, ಯೋಚನೆ. ಅದಕ್ಕೆ ಹೆಂಡತಿಯ ಒಪ್ಪಿಗೆ ಪಡೆಯಲು ಅವನು ಪಡದಿದ್ದ ಪ್ರಯತ್ನ, ಉಪಯೋಗಿಸದ ಟೆಕ್ನಿಕ್ಕುಗಳಿಲ್ಲ. "ನೋಡು ರಮ್ಮು ಎಲ್ಲಿ ಹೋದರೂ ಈ ಊರಿನಲ್ಲಿ ಗೌಜು ಗದ್ದಲ, ನೆಮ್ಮದಿಯಾಗಿ ನಿರಾಳವಾಗಿ ಉಸಿರಾಡುತ್ತಾ ಆರಾಮವಾಗಿ ಕಾಲುಚಾಚಿ ರೆಸ್ಟ್ ತೆಗೆದುಕೊಳ್ಳಬಯಸಿದವರಿಗೆ ಈ ಝೂಗಿಂತ ಉತ್ತಮ ತಾಣ ಮತ್ತೊಂದಿಲ್ಲ. ಎಲ್ಲರೂ ಅಲ್ಲಲ್ಲಿರುವ ಪ್ರಾಣಿಪಕ್ಷಿಗಳನ್ನು ನೋಡಿಕೊಂಡು ತಿರುಗಾಡುತ್ತಿರಲಿ. ನಾವು ಅವರ ವೇಷಭೂಷಣಗಳನ್ನು, ಚರ್ಯೆಗಳನ್ನು ಗಮನಿಸುತ್ತಾ ಸ್ವಲ್ಪ ಸಮಯ ಕಳೆಯೋಣ". ಇನ್ನು ಮೊದಲಿಗೆಲ್ಲ ಎಲ್ಲಾ ಪ್ರಾಣಿಗಳನ್ನೂ ಚಿಕ್ಕಚಿಕ್ಕದಾದ ಪಂಜರಗಳಲ್ಲಿಟ್ಟು, ಅವುಗಳ ಸ್ವಾತಂತ್ರ್ಯವನ್ನೇ ಹರಣಮಾಡಲಾಗಿತ್ತು. ಅಂತರ ರಾಷ್ಟ್ರೀಯ ಮೃಗಾಲಯ ಕಾನೂನಿನ ಪ್ರಕಾರ ಅವುಗಳಿಗೆ ಸಾಕಷ್ಟು ಸ್ಥಳಾವಕಾಶ ನೀಡಿ, ಅವು ಆರಾಮವಾಗಿ ತಿರುಗಾಡಿಕೊಳ್ಳಲು ಅನುಕೂಲ ಕಲ್ಪಿಸಬೇಕಾಗಿದೆ. ಅದರಂತೆಯೇ, ಪ್ರತಿ ಪ್ರಾಣಿಗೂ ಸಾಕಷ್ಟು ವಿಸ್ತೀರ್ಣವಾದ ಪ್ರದೇಶ ಕಲ್ಪಿಸಿದ್ದು ಪಂಜರದಲ್ಲಿ ರಾತ್ರಿಹೊತ್ತು ಮಲಗಲು ಮಾತ್ರ ವ್ಯವಸ್ಥೆಮಾಡಲಾಗಿದೆ.

ನೀವು ಹೇಳಿದುದೇನೋ ಸರಿ, ಆದರೆ ಮೊದಲಾದರೆ ಪ್ರತಿ ಪಂಜರದಲ್ಲೂ ಯಾವುದಾದರೂ ಪ್ರಾಣಿ ಇದ್ದೇ ಇರುತ್ತದೆ ಎಂಬ ಭರವಸೆ ಇರುತ್ತಿತ್ತು. ಈಗ ಆ ದೊಡ್ಡ ಬಯಲಿನಲ್ಲಿ ಯಾವುದೋ ಮೂಲೆಯಲ್ಲೋ, ಹುಲ್ಲುಗಾವಲಿನ ನಡುವೆಯೋ ಅವು ಕೂತಿರುವಾಗ ನಮಗೆ ಖಾಲಿ ಪಂಜರದ ದರ್ಶನದ ಲಾಭವಷ್ಟೇ ಅಲ್ಲವೇ? ಅದೂ ಅಲ್ಲದೆ ಮೊದಲಿದ್ದ ವಿಸ್ತೀರ್ಣ ಈ ಬಯಲು ಆಲಯದ ದೆಸೆಯಿಂದ ಮೂರ್‍ನಾಲ್ಕು ಪಟ್ಟು ವಿಸ್ತಾರವಾಗಿದ್ದು ಅಷ್ಟು ಪ್ರದೇಶ ನೋಡಿಬರಲು ಯಾವುದೇ ವಾಹನ ವ್ಯವಸ್ಥೆ ಇಲ್ಲದಿದ್ದಲ್ಲಿ ತ್ರಾಸವಾಗುತ್ತದೆ ಅಲ್ಲವೇ?

ಅಯ್ಯೋ ನಿನ್ನ ಆಲೋಚನೆಗಿಷ್ಟು, ನಾವು 'ಝೂ'ಗೆ ಹೋಗುವುದಕ್ಕೆ ಬದಲಾಗಿ ಅಭಯಾರಣ್ಯಕ್ಕೆ ಹೋದೆವೆಂದಿಟ್ಟುಕೋ. ಅಲ್ಲಾದರೂ ನಿನಗೆ ಪ್ರಾಣಿಪಕ್ಷಿಗಳ ದರ್ಶನಭಾಗ್ಯ ಸಿಗುವ ಗ್ಯಾರಂಟಿಯಿರುತ್ತದೆಯೇ? ಅಲ್ಲಿಗೆ ಹೋಗಿ ನಿರಾಸೆಗೊಂಡು ವಾಪಸಾಗುವುದಕ್ಕಿಂತ ಅಭಯಾರಣ್ಯಗಳ ಬಗೆಗೆ ತೆಗೆದಿರುವ

ಡಾಕ್ಯುಮೆಂಟರಿಯನ್ನೋ, ಟೀವಿಯಲ್ಲಿ ಬರುವ ನ್ಯಾಷನಲ್ ಜ್ಯಾಗ್ರಫಿ/ ಅನಿಮಲ್ ಪ್ಲ್ಯಾನೆಟ್ ಚಾನಲ್ಲನ್ನೋ ಹಾಕಿಕೊಂಡು ನೋಡಿದರೆ, ಎಷ್ಟೋ ವಾಸಿ. ಅದಕ್ಕೆ ಹೋಲಿಸಿದರೆ ಈ 'ಝೂ' ಭೇಟಿ ಫಲದಾಯಕವಾಗಿರುತ್ತವೆ.

ನೀನು ಹೇಳುವುದು ನಿಜ ರಮ್ಯ, ಅದಕ್ಕೆಂದೇ ಮೃಗಾಲಯದಲ್ಲಿ ಈಗ ವೀಕ್ಷಕರನ್ನು ಕರೆದುಕೊಂಡುಹೋಗಲು ವಿದ್ಯುತ್ ಚಾಲಿತ ವಾಹನಗಳ ವ್ಯವಸ್ಥೆ ಏರ್ಪಡಿಸಿದ್ದಾರೆ. ನಿನಗೆ ಅಷ್ಟೂ ಜಾಗಗಳಿಗೆ ನಡೆದುಕೊಂಡು ಹೋಗುವುದು ಕಷ್ಟ ಎನಿಸಿದರೆ, ನಾವೂ ಒಂದು ವಾಹನವನ್ನು ಗೊತ್ತುಮಾಡಿಕೊಂಡು ಅದರಲ್ಲಿ ಎಲ್ಲ ಪ್ರದೇಶಗಳನ್ನೂ ಆರಾಮವಾಗಿ, ಕಾಲು ನೋವುಮಾಡಿಕೊಳ್ಳದೇ ನೋಡಿಕೊಂಡು ಬರಬಹುದು. ವರ್ಷ ವರ್ಷವೂ ಮೃಗಾಲಯಕ್ಕೆ ಬೇರೆ ಬೇರೆ ದೇಶಗಳಿಂದ ಹೊಸ ಹೊಸ ಪ್ರಾಣಿ ಪ್ರಬೇಧಗಳನ್ನು ತರಿಸುತ್ತಲೇ ಇದ್ದಾರೆ; ಇದರಿಂದ ಮೃಗಾಲಯದ ಆಕರ್ಷಣೆ ದುಪ್ಪಟ್ಟಾಗಿದೆ. ವಿವಿಧ ರೀತಿಗಳಲ್ಲಿ ರಮಿಸಿದನಂತರವಷ್ಟೇ ರಮ್ಯ ಆನಂದನೊಡನೆ 'ಝೂ'ಗೆ ತೆರಳಲು ಸಮ್ಮತಿ ಸೂಚಿಸಿದುದು.

ಇಷ್ಟೆಲ್ಲ ವಾದವಾಗ್ವಾದಗಳು ಮುಗಿದನಂತರ ಇಬ್ಬರೂ ಅಂದು 'ಝೂ'ಗೆ ಹೊರಡಲು ತಯಾರಾದರು. ಗೂಗಲ್‌ನಲ್ಲಿ ಅಲ್ಲಿನ ವೀಕ್ಷಣೆ ಸಮಯ, ಪ್ರವೇಶದರ ಇತ್ಯಾದಿ ವಿವರಗಳನ್ನು ತಡಕಾಡುತ್ತಿದ್ದಾಗ ಅವರ ಗಮನ ಅದರ ಕೆಳಗಿನ ಸಾಲಿನ ಕಡೆಗೆಹೋಯಿತು. ಅವರು ಹೋಗಬೇಕೆಂದು ನಿರ್ಧರಿಸಿದ್ದ ದಿನದಂದು 'ಝೂ' ವೀಕ್ಷಣೆಗೆ ರಜಾದಿನವಾಗಿತ್ತು. ಇಷ್ಟೆಲ್ಲ ಕಷ್ಟಪಟ್ಟು ಒಲಿಸಿದ್ದ ಸತಿಗೂ, ತನ್ನೆಲ್ಲ ಬುದ್ಧಿವಂತಿಕೆಯನ್ನೂ ಉಪಯೋಗಿಸಿ ಅವಳನ್ನು 'ಝೂ' ವೀಕ್ಷಣೆಗೆ ಒಪ್ಪಿಸಿದ್ದ ಆನಂದನಿಗೂ ದೊಡ್ಡ ನಿರಾಸೆ ಉಂಟಾಯಿತು.

15–7–2017

* * * * *

## ಲೇಖನ – 15

# ಹೊಗಳುವಿಕೆ

ಬಸವಣ್ಣ ಹೇಳಿದ್ದು 'ಹೊಗಳಿ ಹೊಗಳಿ ಎನ್ನ ಹೊನ್ನ ಶೂಲಕ್ಕೇರಿಸದಿರಯ್ಯ'. ನಮ್ಮಲ್ಲಿರುವ ಮತ್ತೊಂದು ಆಡುಮಾತು 'ಹೊಗಳಿ ಅಟ್ಟಕ್ಕೆ ಏರಿಸುವುದು'. ಆದರೆ ಮನುಷ್ಯ ಸಹಜನಾದವನಿಗೆ ಹೊಗಳುವಿಕೆ ಆಪ್ಯಾಯಮಾನವಾದುದು ಎಂಬಂಶವನ್ನು ಯಾರೂ ಅಲ್ಲಗಳೆಯಲಾರರು. ಇದಕ್ಕಾಗಿಯೇ ಇರಬೇಕು ಹಿಂದೆಲ್ಲ ಅರಸರು ಹೊಗಳುಭಟ್ಟರ ಗುಂಪೊಂದನ್ನೇ ಸಾಕುತ್ತಿದ್ದರು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಮನಶ್ಶಾಸ್ತ್ರಿಗಳ ಪ್ರಕಾರ ಮನುಷ್ಯ ಎಲ್ಲಕ್ಕಿಂತ ಹೆಚ್ಚು ಪ್ರೀತಿಸುವುದು ಯಾವುದನ್ನು? ಎಂಬ ಪ್ರಶ್ನೆಗೆ ಬಹುಪಾಲು ಬರುವ ಉತ್ತರ "ನಾನು" ಎಂಬುದು. ಉದಾಹರಣೆಗೆ ಒಂದು ಗುಂಪು ಚಿತ್ರವನ್ನು ನೋಡುವಾಗ ಅದರಲ್ಲಿ ಹುಡುಕುವುದು ತಾನೆಲ್ಲಿ ಮತ್ತು ಹೇಗೆ ಕಾಣುತ್ತಿದ್ದೇನೆಂಬುದನ್ನು ಗಮನಿಸಬಹುದು. ಎಂತಹಾ ಸ್ಥಿತಪ್ರಜ್ಞ ಎಂದುಕೊಳ್ಳುವವನೂ ಸಹಾ ತಾನು ಮಾಡುತ್ತಿರುವ ಕಾರ್ಯಕ್ಕೆ ನಾಲ್ಕು ಮಂದಿ ಮೆಚ್ಚುಗೆಯ ಮಾತನ್ನಾಡಿದರೆ ಸಂತೋಷಪಡದೇ ಇರುತ್ತಾನೆಯೇ, ಇದು ಚಿಂತನಾರ್ಹ ವಿಚಾರವಲ್ಲವೇ? ಮತ್ತೊಂದು ದಿಕ್ಕಿನಿಂದ ಯೋಚಿಸಿದರೆ ತಮ್ಮ ಕೆಲಸವನ್ನು ಮೆಚ್ಚಿ ಮಾತನಾಡಿದರೆ, ಇನ್ನೂ ಹೆಚ್ಚು ಕ್ರಿಯಾಶೀಲನಾಗಲು ಪ್ರೇರಣೆ ಸಿಗುತ್ತದೆ ಎಂಬ ವಿಚಾರ. ತಮ್ಮ ಕೆಲಸ ಆಗಬೇಕಾದರೆ 'ಕಾರ್ಯವಾಸಿ ಕತ್ತೆಕಾಲನ್ನು ಬೇಕಾದರೂ ಹಿಡಿ' ಎಂಬ ನಾಣ್ಣುಡಿ, ಜನರು ತಮ್ಮ ಬೇಳೆ ಬೇಯಿಸಿಕೊಳ್ಳಬೇಕಾದಲ್ಲಿ ಎಂತಹವನನ್ನು ಬೇಕಾದರೂ

ಹೊಗಳಲಿಕ್ಕೆ ಪ್ರಾರಂಭಿಸುತ್ತಾರೆ. ಕೆಲವರ ಮುಖ ಮೊದಲನೋಟಕ್ಕೆ ವಿಕಾರವಾಗಿ ಕಾಣುತ್ತಿರುತ್ತದೆ. ಆದರೆ ಅದೇ ಮುಖವನ್ನು ಪದೇಪದೇ ನೋಡುತ್ತಿದ್ದಲ್ಲಿ ಕೆಲಕಾಲಾನಂತರ ಅದು ಸಹ್ಯ ಎನಿಸತೊಡಗುತ್ತದೆ. ಗಂಡ ಹೆಂಡಿರ ನಡುವೆ ಈ ರೀತಿಯ ವರ್ತನೆ ಕಾಣಸಿಗುತ್ತದೆ. ಹೀಗೆ ಆ ಕೆಟ್ಟಮುಖವನ್ನು ಸಹ್ಯವಾಗಿಸಿಕೊಳ್ಳಲು ನಮ್ಮ ಮನಸ್ಸು ಇತರ ಆಯಾಮಗಳನ್ನು ಹುಡುಕತೊಡಗುತ್ತದೆ. ಮುಖ ಕೆಟ್ಟದಾಗಿದ್ದರೇನಂತೆ ಆ ವ್ಯಕ್ತಿಯ ಮನಸ್ಸು ಒಳ್ಳೆಯದು ಎಂದೋ, ತನ್ನ ಪಾಲಿಗೆ ಬಂದದ್ದೇ ಪಂಚಾಮೃತ ಎಂದೋ ತನ್ನನ್ನು ತಾನೇ ಸಮಾಧಾನಪಡಿಸಿಕೊಳ್ಳುತ್ತದೆ. ಇದೇ ರೀತಿಯ ವರ್ತನೆ ಚಲನಚಿತ್ರ ಕ್ಷೇತ್ರದಲ್ಲಿ ಕಾಣಬಹುದಾಗಿದೆ. ಹಣಕ್ಕಾಗಿ ನಟನೆಮಾಡುವ ನಟನಟಿಯರು ಎಂತಹ ಕೆಟ್ಟ ಮುಖ ಹೊಂದಿರುವವರ ಜೊತೆಯೂ ನಟನೆಮಾಡುವುದನ್ನು ಕಾಣುತ್ತೇವಲ್ಲವೇ? ನೋಡುಗರಿಗೆ ಅನ್ನಿಸುತ್ತಿರುತ್ತದೆ ಈ ಸುಂದರಿ ಯಾ ಸುಂದರ ಆ ಕೆಟ್ಟ ಮುಖದವರನ್ನು ಹೇಗೆ ಸಹಿಸಿಕೊಂಡು ನಟನೆಮಾಡುತ್ತಿದ್ದಾರೆ ಎಂಬುದು. ಏನಿದ್ದರೂ ಅದು 'ನಟನೆ'ಮಾತ್ರ ಅಲ್ಲವೇ? ಅಲ್ಲಿ ಪ್ರಧಾನ ಪಾತ್ರವಹಿಸುತ್ತಿರುವುದು 'ಹಣ' ಮಾತ್ರ. ಹೊಗಳುವವರ ಅಂತರ್ಯವನ್ನು ನಾವು ಅರಿತುಕೊಳ್ಳಲು ಯತ್ನಿಸಬೇಕು. ಅವರು ಮನಃಪೂರ್ವಕವಾಗಿ ನಮ್ಮನ್ನು ಹೊಗಳುತ್ತಿದ್ದಾರೆಯೋ ಅಥವಾ ನಮ್ಮನ್ನು ಸಂಪ್ರೀತಗೊಳಿಸಲು ಹೊಗಳುತ್ತಿದ್ದಾರೆಯೋ ಇದನ್ನರಿತರೆ ನಾವು ನಮ್ಮನ್ನು ಹೊಗಳುವವರನ್ನು ಸ್ವೀಕರಿಸಬೇಕೋ ಅಥವಾ ತಿರಸ್ಕರಿಸಬೇಕೋ ಎಂಬುದನ್ನು ನಿರ್ಧರಿಸಬಹುದು. ಹೊಗಳಿಕೆಗೆ ಉಬ್ಬದೇ ತೆಗಳಿಕೆಗೆ ತಗ್ಗದೇ ಇರುವ ಗುಣವನ್ನು ರೂಢಿಸಿಕೊಂಡವನೇ ಈ ಜಗತ್ತಿನಲ್ಲಿ ಜಾಣ ಎನ್ನಿಸಿಕೊಳ್ಳುತ್ತಾನೆ. ಕೆಲವು ಸಲ ಎದುರಿನವರನ್ನು ಅಥವಾ ಹಿತೈಷಿಗಳ ಮನನೋಯಿಸಬಾರದೆಂದೇ ಕೆಲವರು ಎಲ್ಲದಕ್ಕೂ 'ಚೆನ್ನಾಗಿದೆ' ಎಂದು ಹೇಳಬಹುದು. ನಿಜಕ್ಕೂ ಅವರ ನಡೆ ನುಡಿ ಮೆಚ್ಚತಕ್ಕಂತಹವೇ ಆಗಿದ್ದರೆ ಮುಕ್ತವಾಗಿ ಹೊಗಳುವುದು, ಅದರಲ್ಲಿ ನಮ್ಮ ಮನಕ್ಕೊಪ್ಪದ, ಅವಾಸ್ತವಿಕ ಸಂಗತಿಗಳಿದ್ದಲ್ಲಿ ಅದನ್ನು ತೋರಿಸಿ ಟೀಕಿಸುವ ಮನಸ್ಥಿತಿ ನಮ್ಮದಾಗಬೇಕು.

14-7-2017

* * * * *

# ಲೇಖನ – 16

# ರೂಪಾಂತರ

'ಮುಂದೆಬಂದರೆ ಹಾಯಲಾರೆ, ಹಿಂದೆಬಂದರೆ ಒದೆಯಲಾರೆ' ಎಂಬಂತ ಸ್ವಭಾವ ಆತನದು. ಎಂದೂ ಯಾರೊಂದಿಗೂ ಜಗಳವಾಡದ ಪ್ರಾಣಿ. ಹೇಗೋ ಮಾಡಿ ಸರ್ಕಾರಿ ಕಛೇರಿಯೊಂದರಲ್ಲಿ ನೌಕರಿ ಹಿಡಿದು ಮದುವೆಯಾಗಿ ತಾನಾಯಿತು ತನ್ನ ಸಂಸಾರವಾಯಿತು ಎಂದು ಕಾಲ ತಳ್ಳುತ್ತಿದ್ದನವ. ಎಂದಿಗೂ ಯಾರೊಂದಿಗೂ ಜಗಳವಾಡಿಲ್ಲ ಎಂದಮೇಲೆ ಕೈಹಿಡಿದ ಪತ್ನಿಯೊಂದಿಗೆ ಜಗಳವಾಡುವುದು ಸಾಧ್ಯವೇ? ಎಲ್ಲರಿಗೂ ಬೇಕಾದವನಾಗಿ, ಯಾರು ಏನು ಕೆಲಸ ಹೇಳಿದರೂ ಶಿರಸಾವಹಿಸಿ ನಿರ್ವಹಿಸುತ್ತಿದ್ದ ಆತನ ಬಗೆಗೆ ಎಲ್ಲರಿಗೂ ಪ್ರೀತಿ ಜೊತೆಜೊತೆಗೇ ಕನಿಕರ. ಇದರಿಂದ ಆತನಿಗೂ ಒಂದು ರೀತಿಯ ಕಸಿವಿಸಿ. ಯಾರೂ ತನಗೆ ಹೆದರರು, ತನ್ನ ಸಾಧುತನವನ್ನು ಪುಕ್ಕಲುತನವೆಂದು ಅರ್ಥೈಸಿದವರೂ ಇದ್ದರು. ಒಬ್ಬ ವ್ಯಕ್ತಿ ನಿರುಪದ್ರವಿಯಾಗಿದ್ದಾನೆ ಎಂದರೆ ಆತ ದುರ್ಬಲ ಎಂದು ಭಾವಿಸಬಾರದು. ತಪ್ಪಿಸಿಕೊಳ್ಳಲಾರದಾದಾಗ ಎಂತಹ ಪುಕ್ಕಲು ಪ್ರಾಣಿಯಾದರೂ ತಿರುಗಿ ಬೀಳಬಹುದು. ಕನಿಕರ ಎಂದರೆ ಈತ ನಿಜಕ್ಕೂ ಅಷ್ಟು ಸಾಧುವೇ, ಎಂದಿಗೂ ಈತನಿಗೆ ಕೋಪವೇ ಬರುವುದಿಲ್ಲವೇ? ಅವನ ತಾಳ್ಮೆಯನ್ನು ಪರೀಕ್ಷಿಸಲೆಂದೇ ಕೆಲವು ಸಂದರ್ಭಗಳಲ್ಲಿ ಅವನನ್ನು ಕಿಚಾಯಿಸಿದವರೂ ಇದ್ದರು. ಎದುರು ಬಂದವರಿಗೆ ಅಣ್ಣನಾಗಿ ಪಕ್ಕ ಬಂದವರಿಗೆ ತಮ್ಮನಾಗಿ ನಡೆಯುತ್ತಿದ್ದ ಈತನ ಬಗೆಗೆ ಒಂದು ರೀತಿಯ ಕುತೂಹಲ. ಈತನ ಪತ್ನಿಯ ಗೆಳತಿಯರು

ಆಕೆಯನ್ನು ನೀವು ದಂಪತಿ ಎಂದೂ ಜಗಳವಾಡಿದ್ದೇ ಇಲ್ಲವೇ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದೂ ಉಂಟು. ಪ್ರಪಂಚದ ಯಾವ ದಂಪತಿಗಳೂ ಎಷ್ಟೇ ಪ್ರೀತಿಪೂರ್ವಕ ಬಾಳ್ವೆ ನಡೆಸುತ್ತಿದ್ದರೂ ಒಂದಲ್ಲ ಒಂದು ಸಲ ಯಾವುದಾದರೂ ಕಾರಣಕ್ಕೆ ಜಗಳ ಆಡಿಯೇ ಇರುತ್ತಾರೆ. ಅಂತಹುದರಲ್ಲಿ ನೀವು ಎಂದೂ ಜಗಳವಾಡಿಯೇ ಇಲ್ಲ ಎನ್ನುವಿರಲ್ಲ, ಇದನ್ನು ನಂಬುವುದಾದರೂ ಹೇಗೆ ಎಂದೂ ಪ್ರಶ್ನಿಸುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ನನಗೆ ನೆನಪಾಗುತ್ತಿದ್ದುದು ಒಂದು ಜೋಕು. ಗಂಡಹೆಂಡಿರ ನಡುವೆ ಜಗಳವಾದಾಗಲೆಲ್ಲಾ ಗಂಡ ಮನೆಬಿಟ್ಟು ಹೊರನಡೆದುಬಿಡುತ್ತಿದ್ದ ಪ್ರಸಂಗ. ಅದು ಬಿಟ್ಟರೆ ಜಗಳವೇ ಆಗಬಾರದೆಂದಲ್ಲಿ ಇಬ್ಬರಲ್ಲಿ ಒಬ್ಬರಿಗೆ ಕಿವಿ ಮಂದವಾಗಿರುವುದು. ಆದರೆ ಇಂತಹ ಪರಿಸ್ಥಿತಿಗಳಲ್ಲಿ ನಡೆದುಕೊಳ್ಳುತ್ತಿದ್ದ ರೀತಿಯ ಬಗೆಗೆ ದಂಪತಿಗಳ ಉತ್ತರ: "ನಮಗೂ ಒಮ್ಮೊಮ್ಮೆ ಕೋಪ ಬರುತ್ತದೆ. ಆದರೆ ಒಬ್ಬರಿಗೆ ಕೋಪ ಬಂದಿದೆ ಎಂಬುದು ಮತ್ತೊಬ್ಬರಿಗೆ ತಿಳಿಯುತ್ತಿದ್ದಂತೆ ಮತ್ತೊಬ್ಬರು ಎದುರು ವಾದಿಸದೇ ಕೆಲ ನಿಮಿಷ ಸುಮ್ಮನಿದ್ದು ನಂತರ ನಮ್ಮಲ್ಲೇ ಅಂತಹ ಪರಿಸ್ಥಿತಿ ಉಂಟಾಗಲು ಕಾರಣಗಳನ್ನು ವಿಶ್ಲೇಷಿಸಿಕೊಂಡು, ನಮ್ಮದೇ ತಪ್ಪು ಎಂದು ಅನ್ನಿಸಿದಾಗ ಯಾವುದೇ ಮುಜುಗರಪಟ್ಟುಕೊಳ್ಳದೇ ಮತ್ತೊಬ್ಬರಿಗೆ 'ಸಾರಿ' ಕೇಳಿಬಿಡುತ್ತೇವೆ. ಅಲ್ಲಿಗೆ ನಮ್ಮಿಬ್ಬರ ನಡುವಿನ ಮನಸ್ತಾಪಕ್ಕೆ ಫುಲ್‌ಸ್ಟಾಪ್ ಬಿದ್ದುಬಿಡುತ್ತದೆ" ಎಂಬುದು.

ಇದು ಎಲ್ಲರಿಗೂ ತಿಳಿದಿರುವ ವಿಚಾರ. ಈ ಆಟೋದವರು ಇರುತ್ತಾರಲ್ಲ ಒಂದು ರೀತಿ ನಮಗೆ ರೇಗಿಸಲೆಂದೇ ಇರುವವರು ಎನ್ನಿಸುತ್ತದೆ. ನಾವು ಕರೆದಾಗ ಕರೆದ ಸ್ಥಳಬಿಟ್ಟು ಉಳಿದೆಲ್ಲ ಸ್ಥಳಗಳಿಗೂ ಬರಲು ತಯಾರಾಗಿರುತ್ತಾರೆ. ನಾವು ಆಟೋದಲ್ಲಿ ಹೋಗಬೇಕೆಂದರೆ ಅವರು ಹೋಗುತ್ತಿರುವ ದಿಕ್ಕಿನಲ್ಲೇ ಹೋಗಬೇಕಾಗಿರುತ್ತದೆ. ನಮ್ಮ ಮುಂದೆ ಹಾದುಹೋಗುವ ಪ್ರತಿ ಖಾಲೀ ಆಟೋದವನನ್ನೂ, 'ಅಲ್ಲಿಗೆ ಬರ್ತೀಯೇನಪ್ಪ' ಅಂತ ವಿಚಾರಿಸಿದ್ದುದೇ ಬಂದಿದ್ದು. ಅಂತಹ ಸಂದರ್ಭಗಳಲ್ಲಿ ಯಾರಿಗೆ ತಾನೇ ಕೋಪಬರುವುದಿಲ್ಲ ಹೇಳಿ, ಅಂತಹ ಪರಿಸ್ಥಿತಿಯಲ್ಲೂ ನಮ್ಮ ಹೀರೋ ತಾಳ್ಮೆ ಕಳೆದುಕೊಳ್ಳದೇ, ತಾವು ಹೋಗಬೇಕಾದ ಗಮ್ಯದ ಕಡೆಗೆ ಹೆಜ್ಜೆಹಾಕುತ್ತಾ ಪಕ್ಕದಲ್ಲಿ ಹಾದುಹೋಗುವ ಆಟೋಗಳ ಕಡೆಗೆ ಕೈ ತೋರಿಸುತ್ತಲೇ ಮುಕ್ಕಾಲು ಭಾಗ ಸವೆಸಿದ್ದೂ ಉಂಟು. ಅವನ ಸಾಧುತನಕ್ಕೆ ಇನ್ನೆಂತಹ ಉದಾಹರಣೆ ನೀಡಬೇಕು.

ಇಂತಹ ವ್ಯಕ್ತಿಗೆ ಇದ್ದಕ್ಕಿದ್ದಂತೆ ತಾನೂ ಏಕೆ ಇತರರಂತೆ ಬದಲಾಗಬಾರದು ಎನ್ನಿಸಿತು. ಮನೋವಿಜ್ಞಾನಿಗಳು ಹೇಳುವ ಹಾಗೆ ನಾವು ಏನಾಗಿಲ್ಲವೋ ಹಾಗೆ

ನಟಿಸುತ್ತಿದ್ದಲ್ಲಿ ನಾವು ಬಯಸಿದಂತೆ ಆಗಬಹುದು ಎನ್ನುವ ತತ್ವದಂತೆ ಈತನೂ ತಾನಲ್ಲದ ರೀತಿಯಲ್ಲಿ ವರ್ತಿಸತೊಡಗಿದ. ಸದಾಕಾಲ ಸಾಧುಪ್ರಾಣಿಯಂತಿದ್ದ ಆತ ಅಂದು ಬೆಳಿಗ್ಗೆ ಎದ್ದ ಕ್ಷಣದಿಂದ ಗುರ್ ಎನ್ನಲಾರಂಭಿಸಿದ್ದ. ಅದು ಮನೆಯವರ ಮೇಲಲ್ಲ, ಹೊರಗಿನವರ ಮೇಲೆ. ಹಾಲಿನವನು ಲೇಟಾಗಿ ಹಾಲು ತಂದನೆಂದು ಅವನ ಮೇಲೆ ಎಗರಾಡಿದ, ಕಛೇರಿಗೆ ಹೋಗಲು ಕರೆದ ಆಟೋ ಬರಲಿಲ್ಲ ಎಂದು ಅವರ ಮೇಲೆ ಕೂಗಾಡಿದ. ಕಛೇರಿ ತಲುಪಿದಾಗ ಸೆಲ್ಯೂಟ್ ಹೊಡೆಯಲಿಲ್ಲ ಎಂದು ಸೆಕ್ಯೂರಿಟಿಯವನ ಮೇಲೆ ರೇಗಾಡಿದ. ಅಕ್ಕಪಕ್ಕದವರೆಲ್ಲರೂ ವಿಚಿತ್ರವಾಗಿ ತನ್ನನ್ನೇ ನೋಡುತ್ತಿದ್ದಾರೆಂದು ಅನ್ನಿಸಿದಾಗ ಅವರ ಮೇಲೂ ಗಲಾಟೆಮಾಡಿದ. ಎಂದೂ ಆ ರೀತಿ ವರ್ತಿಸದ ಈತ ಇಂದೇಕೆ ಹೀಗೆ ಎಂದು ಅರ್ಥವಾಗದ ಇತರ ಸಹೋದ್ಯೋಗಿಗಳು ಒಂದು ರೀತಿ ಭಯದಿಂದ ನಡೆದುಕೊಳ್ಳತೊಡಗಿದ್ದರು. ತನ್ನ ಈ ವರ್ತನೆಯಿಂದಾಗಿ ತನ್ನನ್ನು ನೋಡುವ ರೀತಿ ಬದಲಾಗಿ ಎಲ್ಲರೂ ತನಗೆ ಗೌರವ ನೀಡುತ್ತಿದ್ದಾರೆಂದು ಅಂದುಕೊಂಡ ಆತ, ಇನ್ನು ಮುಂದೆ ಹೀಗೇ ಇರಬೇಕು ಎಂದು ನಿರ್ಧರಿಸಿದ. ಹೀಗೆ ದಿನಪೂರ್ತಿ ಡಿಫರೆಂಟ್ ಡ್ಯಾನಿಯಾಗಿ ಮೆರೆದ ಈತ ಕಛೇರಿ ಮುಗಿದನಂತರ ಮತ್ತೆ ಮನೆಕಡೆಗೆ ಆಟೋ ಹಿಡಿದು ಹೋಗಬೇಕೆಂದು ನಿಂತಿದ್ದಾಗ ಬಂದ ಆಟೋದವನನ್ನು ಬರ್ತೀಯೇನಪ್ಪಾ ಎಂದೂ ಕೇಳದೆ ಮೊದಲು ಹತ್ತಿ ಕುಳಿತು ಇಂತಹ ಕಡೆಗೆ ಕರೆದುಕೊಂಡು ಹೋಗಯ್ಯಾ ಎಂದು ಗತ್ತಿನಿಂದ ಹೇಳಿದಾಗ ಆಟೋದವನು ಪ್ರತಿರೋಧ ತೋರಲಾರದೇ ಈತ ಹೇಳಿದ ಸ್ಥಳಕ್ಕೆ ಕರೆದುಕೊಂಡು ಹೋದ. ಎಷ್ಟು ಬಾಡಿಗೆ ಎಂದು ಕೇಳಿದಾಗ ಆತ ಮೀಟರ್ ನೋಡಿ ಕೊಡಿ ಅರವತ್ತು ಎಂದು ಎಡಗೈ ಚಾಚಿದ್ದನ್ನು ಗಮನಿಸಿದ ಈತ ನಾನು ಕೊಡುತ್ತಿರುವುದು ದುಡ್ಡು, ಅದಕ್ಕೆ ಗೌರವ ಕೊಡು, ತೆಗೆದುಕೊಳ್ಳಬೇಕಾದರೆ ಬಲಗೈಲಿ ತೆಗೆದುಕೊಳ್ಳಬೇಕು, ದುಡ್ಡನ್ನು ಅಷ್ಟು ಅಲಕ್ಷ್ಯದಿಂದ ಕಾಣಬೇಡ ಎಂದು ಜೋರಿನಿಂದ ಹೇಳಿದ. ಆಗ ಆಟೋ ಡ್ರೈವರ್ ತುಂಬುತೋಳನ್ನು ಹಿಂದಕ್ಕೆ ಮಡಿಚುತ್ತಾ, ತನ್ನ ಬಲಗೈ ನೀಡಿ, ಸಾರ್ ಈ ಕೈನಿಂದ ನಾನು ಹೇಗೆ ಹಣ ಪಡೆಯಲಿ? ಎಂದಾಗ ಈತ ಅವನ ಬಲಗೈ ಗಮನಿಸಿದ, ಆ ಡ್ರೈವರ್‌ನ ಬಲಗೈ ಅದು ಬಲಗೈ ಎನ್ನುವ ಸ್ಥಿತಿಯಲ್ಲಿರಲಿಲ್ಲ, ಬೆರಳುಗಳೇ ಇಲ್ಲದ ಒಂದೇ ಒಂದು ಬೆರಳು ಅರ್ಧ ಹೊರಚಾಚಿದ್ದ ಮೊಂಡುಗೈ! ಈತನಲ್ಲಿ ಅಲ್ಲಿಯವರೆಗೆ ಮರೆಯಾಗಿದ್ದ ಅಂತಃಕರಣ ಜಾಗೃತಗೊಂಡಿತು. ಆ ಕ್ಷಣದಲ್ಲಿ ಅಷ್ಟು ಹೊತ್ತು ಎಲ್ಲರ ಮೇಲೂ ರೇಗಾಡುತ್ತಿದ್ದ ಈತ ಒಮ್ಮೆಲೇ ಕರಗಿಹೋದ, ತನ್ನ ಅಹಂಕಾರವೆಲ್ಲ ಜರ್ರನೇ ಇಳಿದುಹೋಯಿತು. ಅಲ್ಲಿಯವರೆವಿಗೆ ಈ ಮೊಂಡು ಕೈನಲ್ಲೇ ಆತ

ಯಾವ ರೀತಿ ಆಟೋ ಚಲಾಯಿಸಿದ್ದ ಎಂದು ಆಶ್ಚರ್ಯಚಕಿತನಾದ. ಆ ಅವಘಡಕ್ಕೂ ಆತನ ಆಟೋ ಅಪಘಾತವೇ ಕಾರಣವಾಗಿತ್ತು, ಆದರೂ ಸಂಸಾರ ಸಾಗಿಸಲು ಅನಿವಾರ್ಯವಾಗಿ ಡ್ರೈವರ್ ವೃತ್ತಿಯನ್ನು ಮುಂದುವರೆಸಬೇಕಾದ ಪರಿಸ್ಥಿತಿ ಅರಿತನಂತರ ಆತ ಮತ್ತೆಂದಿಗೂ ಯಾರೊಂದಿಗೂ ಅನುಚಿತವಾಗಿ ವರ್ತಿಸಬಾರದೆಂದು ನಿಶ್ಚಯಿಸಿದ. ಆತನ ಎಡಗೈಗೇ ಮೀಟರ್ ತೋರಿಸಿದ ಹಣಕ್ಕಿಂತ ಹತ್ತು ರೂಪಾಯಿ ಹೆಚ್ಚಿಗೆ ಕೊಟ್ಟು, ತಾನು ಮೊದಲು ಹೇಗಿದ್ದನೋ ಹಾಗೇ ಇದ್ದರೆ ಚೆನ್ನ, ಎಲ್ಲರ ಪ್ರೀತಿ ವಿಶ್ವಾಸಕ್ಕಿಂತ ಉತ್ತಮವಾದುದು ಮತ್ತೊಂದಿಲ್ಲ ಎಂದವನಿಗನ್ನಿಸಿತು. ಮಾರನೇ ದಿನ ಕಛೇರಿಗೆ ಹಾಜರಾದ ಆತನ ನಡವಳಿಕೆ ಕಂಡು ಕಛೇರಿಯಲ್ಲಿದ್ದವರೆಲ್ಲರಿಗೂ ಪರಮಾಶ್ಚರ್ಯ. ಹಿಂದಿನ ದಿನ ಏನಾದರೂ ಗ್ರಹಣ ಕವಿದಿತ್ತೇ ಎಂಬ ಅನುಮಾನವೂ ಮೂಡಿತ್ತು.

2–7–2017

* * * * * *

ಲೇಖನ – 17

# ಪರಸ್ಪರ ಸಹಬಾಳ್ವೆ

**ನಾ** ಹೇಳಹೊರಟಿರುವುದು ಯಾವುದೋ ಸಿನಿಮಾ ಕಥೆಯಲ್ಲ, ಸೀರಿಯಲ್ಲೂ ಅಲ್ಲ. ಅದು ಮಾನವ ಸಂಬಂಧಗಳ ಒಂದು ಎಳೆಯ ಬಗೆಗೆ. ಸಾಮಾನ್ಯವಾಗಿ ಮನೆ ಎಂದರೆ ಅದಕ್ಕೊಬ್ಬ ಯಜಮಾನ ಇರುತ್ತಾನೆ. ಉಳಿದವರೆಲ್ಲರೂ ಅವನ ಆದೇಶ ಪಾಲಿಸಿಕೊಂಡು ಬರಬೇಕು. ಆಗಮಾತ್ರ ಹಿಂದೆ ಜನಪ್ರಿಯವಾಗಿದ್ದ ಕೂಡು ಕುಟುಂಬ ಪದ್ಧತಿ ಉಳಿಯಲು ಸಾಧ್ಯ. ನಾನಾ ಕಾರಣಗಳಿಂದ ಇಂದು ಮೈಕ್ರೋ ಫ್ಯಾಮಿಲಿಗಳು ಅಸ್ತಿತ್ವಕ್ಕೆ ಬಂದಿವೆ. ಒಟ್ಟು ಕುಟುಂಬ ಹೇಳ ಹೆಸರಿಲ್ಲವಾಗಿದೆ. ಮನೆಗೊಬ್ಬ ಯಜಮಾನ ಇಂದೂ ಇದ್ದಾನಾದರೂ ಯಜಮಾನರುಗಳ ಸಂಖ್ಯೆ ಮಿತಿಮೀರಿದೆ. ಅಪ್ಪನ ಮಾತನ್ನು ತಿರಸ್ಕರಿಸುವ ಮಕ್ಕಳು, ಕೆಲಸ ಸಿಕ್ಕಿ ಮದುವೆಯಾದ ಮಕ್ಕಳು ತಮ್ಮದೇ ಸಂಸಾರವೆಂದು ಬೇರೆ ಮನೆಮಾಡಿ ಹೊರಹೋಗುವುದು, ಮುದಿ ತಂದೆ ತಾಯಿಗಳನ್ನು ಒಂಟಿಯಾಗಿಸಿ ಹೋಗುವುದು, ಅಥವಾ ವೃದ್ಧಾಶ್ರಮಗಳಿಗೆ ಸೇರಿಸುವುದು ಸಾಮಾನ್ಯ ವಿಷಯಗಳಾಗಿವೆ. ಈ ಪ್ರವೃತ್ತಿ ಎಷ್ಟರಮಟ್ಟಿಗೆ ಸರಿ ಎಂಬುದು ಪ್ರಶ್ನಾರ್ಹ ವಿಚಾರ.

ಒಂದು ಸಾರ್ವತ್ರಿಕ ಸತ್ಯ ಎಲ್ಲರೂ ಮನಗಾಣಬೇಕಾಗಿದೆ. ಅದೆಂದರೆ ನಾವು ನಮ್ಮ ಮಕ್ಕಳನ್ನು ಎಷ್ಟು ಕಾಳಜಿ, ಪ್ರೀತಿಯಿಂದ ಬೆಳೆಸಿರುತ್ತೇವೆಯೋ ಅಷ್ಟೇ ಪ್ರೀತಿ ಕಾಳಜಿ ನಮ್ಮ ಬಗೆಗೆ ನಮ್ಮ ಬೆಳೆದ ಸ್ವತಂತ್ರವಾದ ಮಕ್ಕಳು ತೋರಿಸುವುದು ಅಪರೂಪ. ಇದರಲ್ಲಿ ನಮ್ಮ ತಪ್ಪೂ ಇರುತ್ತದೆ. ನಾವು ನಮ್ಮ ತಾಯಿತಂದೆಯರನ್ನು

ಅವರ ಜೀವಿತಾವಧಿಯ ಅಂತ್ಯದವರೆವಿಗೂ ನಮ್ಮ ಬಳಿಯೇ ಇಟ್ಟುಕೊಂಡು ನೋಡಿಕೊಂಡಿರುತ್ತೇವೆಯೇ ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬರೂ ತಮಗೆ ತಾವೇ ಹಾಕಿಕೊಳ್ಳಬೇಕು. ಈ ಪ್ರಶ್ನೆಗೆ ನಮ್ಮ ಉತ್ತರ ನಕಾರಾತ್ಮಕ ಆಗಿದ್ದಲ್ಲಿ, ನಮ್ಮ ಮಕ್ಕಳು ನಮ್ಮನ್ನು, ನಮ್ಮ ಅಂತ್ಯಕಾಲದವರೆವಿಗೂ ನೋಡಿಕೊಳ್ಳಿ ಎಂದು ಕೇಳಲು ನಮಗೆ ಯಾವ ಅಧಿಕಾರವಿರುತ್ತದೆ. ನಾವು ಮುದಿಯಾದಾಗ ನಮ್ಮನ್ನು ಒಂದು ಹೊರೆಯೆಂದು ನಮ್ಮ ಮಕ್ಕಳು ಭಾವಿಸುವುದರಲ್ಲಿ ತಪ್ಪೇನಿದೆ? ಅದೂ ಅಲ್ಲದೆ ನಾವು ನಮ್ಮ ಮಕ್ಕಳನ್ನು, ಬೆಳೆಸುವಾಗ ಇದ್ದ ಸಾಮಾಜಿಕ ವ್ಯವಸ್ಥೆ ನಮ್ಮ ಮಕ್ಕಳ ಕಾಲಕ್ಕೆ ಅಪಾರ ಬದಲಾವಣೆ ಹೊಂದಿರುವ ಸಾಧ್ಯತೆಯಿದ್ದು, ನಮಗೇ ಅದಕ್ಕೆ ಹೊಂದಿಕೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ. ಇನ್ನು ನಮ್ಮ ಮೊಮ್ಮೊಕ್ಕಳ ಕಾಲಕ್ಕೆ ನಾವು 'ಟೋಟಲಿ ಅನ್‌ಫಿಟ್' ಅನ್ನಿಸಿಕೊಂಡು ಬಿಡಲೂಬಹುದು. ಆದುದರಿಂದ ಮಕ್ಕಳ ಮೊಮ್ಮೊಕ್ಕಳ ಆಸರೆ ಬಯಸಿ ಹೋದರೂ ನಾವು ನೀರಿನಿಂದ ಹೊರಗೆಸೆಯಲ್ಪಟ್ಟ ಮೀನುಗಳಂತೆ ಬದುಕು ಸವೆಸಬೇಕಾಗುತ್ತದೆ. ಈ ಇಕ್ಕಟ್ಟಿನಿಂದ ಪಾರಾಗಿ ನಮ್ಮ ನಡುವಿನ ಸಂಬಂಧ ಹಳಸದಂತೆ ನೋಡಿಕೊಳ್ಳಬೇಕೆಂದರೆ ಇರುವುದೊಂದೇ ದಾರಿ! ಅದು ನಮ್ಮಷ್ಟಕ್ಕೆ ನಾವು ಇದ್ದ ಕಡೆಯಲ್ಲೇ ಇದ್ದು ಜೀವನ ಸವೆಸುವುದು. ಆದಾಗ ನಾವು ನಮ್ಮ ಮಕ್ಕಳ ಮನೆಗೆ ಅತಿಥಿಗಳಾಗಿ ಒಂದೆರಡು ದಿನಗಳು ಹೋಗಿಬಂದರೆ, ನಮಗೂ ಗೌರವ, ಅವರಿಗೂ ಸೌಖ್ಯ. ನಮ್ಮ ಮಕ್ಕಳೇ ಅವರಿಗೆ ಬಿಡುವಾದಾಗ, ಬರಬೇಕೆನಿಸಿದಾಗ ಬಂದು ನಮ್ಮೊಡನೆ ಒಂದೆರಡು ದಿನಗಳೋ, ವಾರಗಳೋ ಕಳೆದುಹೋಗಬಹುದು.

ಉಳಿದಂತೆ ನನಗೆ ನೀನು ನಿನಗೆ ನಾನು ಎಂದು ಬಾಳಬೇಕಾಗಿರುವುದು ಗಂಡ ಹೆಂಡಿರಿಬ್ಬರೇ ಎನ್ನುವ ಸಾರ್ವಕಾಲಿಕ ಸತ್ಯ ನಾವು ತಿಳಿದಿರಬೇಕು. ಯಾವ ಹೊರಗಿನವರ ಜೊತೆ ಬೇಕಾದರೂ ವೈರತ್ವ ಬೆಳೆಸಿಕೊಂಡು ಬದುಕಬಹುದು, ಆದರೆ ಗಂಡ ಹೆಂಡಿರ ನಡುವೆ ಮಾತ್ರ ವೈರತ್ವ ರೂಢಿಸಿಕೊಳ್ಳಬಾರದು. ಅವರೀರ್ವರ ನಡೆ ಒಬ್ಬರೊಬ್ಬರಿಗೆ ಪೂರಕವಾಗಿರಬೇಕೆ ವಿನಹ ಮಾರಕವಾಗಬಾರದು. ಒಬ್ಬರು ಮತ್ತೊಬ್ಬರನ್ನು ತಿರಸ್ಕರಿಸುತ್ತಿದ್ದಾರೆಂಬ ಭಾವನೆ ಈರ್ವರಲ್ಲೊಬ್ಬರಿಗೆ ಮೂಡಿದರೂ ಬದುಕು ಅಸಹನೀಯವಾಗಿ ಅದನ್ನು ಅಂತ್ಯಗೊಳಿಸಿಕೊಂಡುಬಿಡಬೇಕೆಂಬ ಇಚ್ಛೆ ಬಂದುಬಿಡುವ ಸಾಧ್ಯತೆಯಿರುತ್ತದೆ. ನಮ್ಮ ಹಿಂದೂ ಸಂಪ್ರದಾಯದಲ್ಲಿ 'ಭೀಮನಮಾವಾಸ್ಯೆ' ಎಂಬ ಹಬ್ಬ ಇರುವುದು ತಮಗೆಲ್ಲರಿಗೂ ತಿಳಿದಿದೆ. ಅದರಲ್ಲಿ ಪತ್ನಿ ತನ್ನ ಪತಿಯ ದೀರ್ಘಾಯುಷ್ಯಕ್ಕಾಗಿ ಅಂದು ಅವನ ಪಾದಪೂಜೆಮಾಡುತ್ತಾಳೆ. ಅಂತೆಯೇ ಉತ್ತರ ಭಾರತೀಯರಲ್ಲಿ

'ಕರವಾ ಚೌಕ್' ಎಂಬ ಆಚರಣೆಯಲ್ಲಿ ರಾತ್ರಿ ಚಂದ್ರ ದರ್ಶನಮಾಡಿದ ನಂತರ ಪತಿಯೊಡನೆ ಊಟಮಾಡುವ ಪದ್ಧತಿಯೂ ಉಂಟೆಂದು ಕೇಳಿದ್ದೇನೆ. ಸಂದರ್ಭದಲ್ಲಿ ಹಿಂದೆಲ್ಲಾ 'ಗಂಡ'ನೆಂಬುವವನಿಗೆ ಪತ್ನಿ ನೀಡುತ್ತಿದ್ದ ಪ್ರಾಶಸ್ತ್ಯ ಎಷ್ಟೆಂಬುದು ವಿಧಿತವಾಗುತ್ತದೆ.

ಇಂದು ಸಮಾಜದ ಆಚರಣೆಗಳು, ವ್ಯವಸ್ಥೆಗಳು ಬದಲಾಗಿವೆ. ಗಂಡ ಕಟ್ಟಿದ ತಾಳಿಗೇ ಪ್ರಾಶಸ್ತ್ಯ ನೀಡಲಾಗದ ಪರಿಸ್ಥಿತಿ ಎದುರಾಗಿದೆ. ಹೆಂಗಸರು ಕೆಲಸಕ್ಕೆಂದು ಹೊರಗೆ ಹೋಗಬೇಕಾದಾಗ ಗಂಡ ಕಟ್ಟಿದ ತಾಳಿಯನ್ನೇ ಮನೆಯಲ್ಲಿ ಬಿಚ್ಚಿಟ್ಟು ಹೋಗುತ್ತಿದ್ದಾರೆ, ಕಳ್ಳಕಾಕರಭಯದಿಂದ! ಇನ್ನು ಕೆಲವರ ಧೋರಣೆ 'ಗಂಡನೇ ಜೊತೆಯಲ್ಲಿರುವಾಗ' ಅವನು ಕಟ್ಟಿದ ತಾಳಿ ಕೊರಳಿನಲ್ಲಿ ಇರದಿದ್ದರೂ ಪರವಾಗಿಲ್ಲ ಎನ್ನುವಂತಿರುತ್ತದೆ. ಅದು ಏನೇ ಆಗಲಿ 'ಗಂಡ' ಎನ್ನುವವನಿರುವ ತನಕ 'ಹೆಂಡತಿ'ಗೊಂದು ರಕ್ಷಣೆ, ಸಮಾಜದಲ್ಲಿ ಒಂದು ಗೌರವ, ಅಂತೆಯೇ 'ಹೆಂಡತಿ' ಇರುವತನಕ 'ಗಂಡ'ನಿಗೆ ಸಮಾಜದಲ್ಲಿ ಒಂದು ಮರ್ಯಾದೆ ಇರುತ್ತದೆ. ಒಬ್ಬರನ್ನು ಬಿಟ್ಟು ಮತ್ತೊಬ್ಬರಿಗೆ ಸಮಾಜದಲ್ಲಿ ಪೂರ್ಣ ಪ್ರಮಾಣದ ಮನ್ನಣೆ ಎಂಬುದಿರುವುದಿಲ್ಲ ಎಂದಂತಾಯಿತು ಅಲ್ಲವೇ?

ಹಿಂದಿನ ದಿನಗಳಲ್ಲಿ ಪತಿ ಹೊರಗೆ ದುಡಿಯುತ್ತಿದ್ದರೆ ಪತ್ನಿ ಮನೆಯಲ್ಲಿನ ಕೆಲಸಗಳಲ್ಲಿ ಪೂರ್ಣಪ್ರಮಾಣದಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಿದ್ದಳು.ಇಂದಿನ ದಿನಗಳಲ್ಲಿ ಇಬ್ಬರೂ ಹೊರಗೆ ದುಡಿಯುತ್ತಿದ್ದರೂ, ಪತ್ನಿಗೆ ಮನೆಕೆಲಸವನ್ನೂ ಪೂರೈಸಬೇಕಾದ ಅನಿವಾರ್ಯತೆಯಿರುತ್ತದೆ. ಕೆಲವು ವೇಳೆ ಮನೆಗೆಲಸಕ್ಕೆ ಮತ್ತೊಬ್ಬರನ್ನು ಸಂಬಳಕ್ಕೆ ನೇಮಿಸಿಕೊಂಡು ಸಮಯ ಹೊಂದಾಣಿಕೆ ಮಾಡಿಕೊಳ್ಳುವ ಅನಿವಾರ್ಯತೆಯನ್ನೂ ಕಾಣಬಹುದು. ಅಪರೂಪಕ್ಕೆ ಪತಿ ದುಡಿಯಲು ನಿತ್ರಾಣನಾಗಿ, ಪತ್ನಿಯೇ ಹೊರಗೆ ದುಡಿಯುವಂತಾದಲ್ಲಿ, ಆ 'ಪತಿ'ಯನ್ನು ಕೀಳಾಗಿ ಕಾಣುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಇದಾಗಬಾರದು. ಅದರಲ್ಲೂ ಹೆಂಡತಿಗಿಂತ ಹೆಚ್ಚು ವಯಸ್ಸಾದ ಪತಿಯಿದ್ದರಂತೂ ಅವರನ್ನು ಅಗಲಿ, ತಿರಸ್ಕರಿಸಿ ಹೊರಗಿನ ಕೆಲಸಗಳಲ್ಲೇ ತೊಡಗಿಕೊಳ್ಳುವ ಹೆಂಗಳೆಯರಿಗೆ ಆ ಪತಿ ಇಲ್ಲವಾದಲ್ಲಿ ತಮಗೆ ಸಮಾಜದಲ್ಲಿ ಈಗ ಲಭ್ಯವಿರುವ ಸ್ಥಾನಮಾನಗಳಿಗೆ ಕುಂದುಂಟಾಗಬಹುದೆಂಬ ಅರಿವಿರಬೇಕಾದುದು ಅತ್ಯಗತ್ಯ. ಆದುದರಿಂದ ಜೀವಿತದ ಅಂತ್ಯಕಾಲ ಸಮೀಪಿಸುತ್ತಿರುವಾಗ ಪತಿ ಪತ್ನಿಯರಿಬ್ಬರೂ ಆದಷ್ಟೂ ಹೆಚ್ಚು ಸಮಯ ಒಬ್ಬರೊಡನೊಬ್ಬರು ಇರಬೇಕಾದುದು ಅವಶ್ಯಕವೂ ಹೌದು. ಯಾವ ಸಮಯದಲ್ಲಿ ಯಾರ ಆರೋಗ್ಯ ಬೇಕಾದರೂ

ಹೆಚ್ಚುಕಮ್ಮಿಯಾಗಬಹುದಾದರಿಂದ ಅನಿವಾರ್ಯವಾದ ಸಂದರ್ಭಗಳನ್ನು ಹೊರತುಪಡಿಸಿ, ಒಬ್ಬರ ಅವಶ್ಯಕತೆಯನ್ನು ಮತ್ತೊಬ್ಬರು ಪೂರೈಸುತ್ತಾ ಒಬ್ಬರನ್ನೊಬ್ಬರು ಗೌರವಿಸುತ್ತಾ ಬದುಕ ಸವೆಸುವುದು ಸಮಾಜದ ಹಿತದೃಷ್ಟಿಯಿಂದ ಅಪೇಕ್ಷಣೀಯ ಅಲ್ಲವೇ!

29–5–2017

* * * * *

## ಲೇಖನ – 18

# ಹೀಗೂ ಒಂದು ಬದುಕು !

ಆ ಹೈವೇನಲ್ಲೊಂದು ಪುಟ್ಟ ಊಟದ ಹೋಟಲ್. ಆಚೀಚೆ ಹಲವು ಕಿಲೋಮೀಟರ್‌ವರೆಗೆ ಮತ್ಯಾವುದೇ ಹೋಟಲ್‌ಗಳು ಇಲ್ಲದುದರಿಂದ ಈ ರಸ್ತೆಯಲ್ಲಿ ಊಟದ ಸಮಯದಲ್ಲಿ ಸಾಗುವ ಪ್ರಯಾಣಿಕರಿಗೆ ಇಲ್ಲೇ ಆಗಬೇಕು ಊಟ. ಆದರೂ ಇಂದಿನ ಮಾರಾಟತಂತ್ರ ಯುಗದಲ್ಲಿ ಈ ಹೋಟಲ್ ಮಾಲೀಕ ಸಹಾ ಸಣ್ಣ ಪ್ರಮಾಣದಲ್ಲಿ ತನ್ನದೇ ತಂತ್ರ ಬಳಸುತ್ತಿರುತ್ತಾನೆ. ಊಟದ ಸಮಯ ಹತ್ತಿರವಾಗುತ್ತಿದ್ದಂತೆ ಹೋಟಲಿಗೆ ಒಬ್ಬನನ್ನು ಹೈವೇಯಲ್ಲಿ ಊಟ ಸಿದ್ಧವಾಗಿದೆ ಎಂಬ ಫಲಕ ಹಿಡಿದುಕೊಂಡುನಿಲ್ಲಲು ನೇಮಕಮಾಡಿರುತ್ತಾನೆ.

ಆತ ಸುಮಾರು ಹನ್ನೊಂದು ಹನ್ನೊಂದೂವರೆ ಘಂಟೆಗೆ ಹೋಟಲಿಗೆ ಪಂಚೆ, ಶರ್ಟು ಧರಿಸಿಕೊಂಡು ಬರಿಗಾಲಿನಲ್ಲಿ ಬರುತ್ತಾನೆ, ಅಲ್ಲಿಟ್ಟಿರುವ ಸಮವಸ್ತ್ರವನ್ನು ಧರಿಸಿ ಕೈನಲ್ಲಿ ಊಟ ರೆಡಿಯಾಗಿದೆ ಎನ್ನುವ ಫಲಕ ಹಿಡಿದುಕೊಂಡು ರಸ್ತೆಬದಿಯಲ್ಲಿ ನಿಲ್ಲುತ್ತಾನೆ. ಬಿಸಿಲು ಏರುತ್ತಿದ್ದಂತೆ ನೆಲ ಕಾವೇರುತ್ತಿರುತ್ತದೆ. ಪಾದಗಳು ಸುಡತೊಡಗುತ್ತಿದ್ದರೂ ಆತ ಅಲ್ಲಿಯೇ ನಿಂತು ಬರುತ್ತಿರುವ ವಾಹನಗಳನ್ನು ಹೋಟಲಿನ ಕಡೆಗೆ ಆಕರ್ಷಿಸಬೇಕಾದುದರಿಂದ ಸುಡುವ ಪಾದಗಳನ್ನು ಬದಲಾಯಿಸಿಕೊಂಡು ಒಂಟಿಕಾಲಿನಲ್ಲಿ ನಿಂತಿರಲೇಬೇಕಾದ ದುಸ್ಥಿತಿ ಆತನದು. ಕೆಲ ಪ್ರಯಾಣಿಕರು ಇವನ ಫಲಕದಿಂದ ಆಕರ್ಷಿತರಾಗಿ ಹೋಟಲಿಗೆ ಬಂದು ಊಟವನ್ನೋ ಚಹವನ್ನೋ ಕುಡಿದು

ಹೋಗಿದ್ದೂ ಉಂಟು. ಆದರೆ ಸಂಜೆ ಆಗುವವರೆಗೆ ಈತ ಒಂದು ತೊಟ್ಟು ನೀರನ್ನೂ ಕುಡಿಯದೇ, ಏನನ್ನೂ ತಿನ್ನದೇ ರಸ್ತೆಬದಿಯಲ್ಲೇ ನಿಂತು ತನ್ನ ಡ್ಯೂಟಿ ನಿರ್ವಹಿಸಿದರೆ ಮಾತ್ರ ಹೋಟಲ್‌ಮಾಲೀಕ ನೀಡುವ ಅಂದಿನ ಬುತ್ತಿಗೆ ಅರ್ಹ! ಇವನೇನಾದರೂ ಬರುವ ಗ್ರಾಹಕರನ್ನು ಸೆಳೆಯುವಲ್ಲಿ ಅಸಫಲನಾದುದು ಮಾಲೀಕನ ಗಮನಕ್ಕೆ ಬಂದುದೇ ಆದಲ್ಲಿ ಮಾಲೀಕನ ಕೆಂಗಣ್ಣಿನ ನೋಟಕ್ಕೆ ಗುರಿಯಾಗಬೇಕಾಗುತ್ತದೆ. ಕೆಲವೊಮ್ಮೆ ಬಂದ ಗ್ರಾಹಕರು ಮಿನರಲ್ ವಾಟರ್ ಬಾಟಲುಗಳನ್ನು ಖರೀದಿಸಿ, ಅದರಲ್ಲೇ ತಮ್ಮ ಮುಖ ತೊಳೆದುಕೊಂಡು, ಬಾಯಿಮುಕ್ಕಳಿಸಿಕೊಂಡು, ಉಳಿದ ಅರ್ಧಕ್ಕಿಂತ ಹೆಚ್ಚಿನ ನೀರನ್ನು ದೂರಕ್ಕೆ ಬಿಸಾಡಿಹೋಗುವಾಗ ಇವನ ಮನ 'ಅರೆ ಆ ನೀರು ನನಗಾದರೂ ಕುಡಿಯಲು ಸಿಕ್ಕಿದ್ದರೆ, ನನ್ನ ಬಾಯಾರಿಕೆಯಾದರೂ ನೀಗುತ್ತಿತ್ತಲ್ಲಾ ನಾಲಗೆಯಾದರೂ ಒದ್ದೆಯಾಗುತ್ತಿತ್ತಲ್ಲ ಎಂದು ಕೊರಗುತ್ತಿರುತ್ತದೆ. 'ಇವನ ಅದೃಷ್ಟಕ್ಕೋ ಎಂಬಂತೆ ಒಬ್ಬ ತರುಣ ಎಸೆದುಹೋದ ನೀರಿನ ಬಾಟಲ್ ಇವನ ಕಾಲಬುಡಕ್ಕೇ ಬಂದುಬಿದ್ದಾಗ ಇವನಿಗೆ ಪರಮಾನಂದ! ಆ ಬಾಟಲ್‌ನಲ್ಲಿ ಉಳಿದಿರುವ ನೀರನ್ನು ಕುಡಿದು ದಣಿವಾರಿಸಿಕೊಳ್ಳಬೇಕೆಂದಿರುವಾಗಲೇ ಯಾವುದೋ ವಾಹನ ಇವನ ಕಡೆ ಬರುತ್ತಿರುತ್ತದೆ. ತಕ್ಷಣ ಇವನ ಕರ್ತವ್ಯಪ್ರಜ್ಞೆ ಜಾಗೃತವಾಗಿ ಅದರ ಕಡೆಗೆ ಫಲಕ ಹಿಡಿದು ನಿಲ್ಲಬೇಕಾಗುತ್ತದೆ. ಈ ಪ್ರಕ್ರಿಯೆ ನಡೆಯುತ್ತಿರುವಾಗಲೇ ಬಾಟಲಿಯಲ್ಲಿ ಉಳಿದಿದ್ದ ನೀರು ನೆಲಕ್ಕೆ ಸೋರಿಹೋಗಿರುತ್ತದೆ. ಕೊನೆಗೊಮ್ಮೆ ಆ ಬಾಟಲಿಯನ್ನು ಕೈಗೆತ್ತಿಕೊಂಡು ಬಾಯಿಗೆ ಬಗ್ಗಿಸಿಕೊಂಡಾಗ ಇವನ ಪಾಲಿಗೆ ದಕ್ಕಿದ್ದು ಎರಡು ಹನಿ ನೀರು! ಅದನ್ನೇ ಚಪ್ಪರಿಸಿ ಚಪ್ಪರಿಸಿ ನುಂಗಿ ತನ್ನ ಬಾಯಾರಿಕೆಯನ್ನು ಪರಿಹರಿಸಕೊಂಡನಾ ನತದೃಷ್ಟ!

ಅದಾದ ಸ್ವಲ್ಪ ಹೊತ್ತಿನಲ್ಲೇ ಬಂದಿತ್ತು ಆ ಫ್ಯಾಮಿಲಿಯನ್ನು ಹೊತ್ತುತಂದ ಕಾರು! ಗಂಡ, ಹೆಂಡತಿ, ಅವರ ಪುಟ್ಟ ಮಗಳು ಆ ಕಾರಿನಲ್ಲಿದ್ದವರು. ಇವನ ಫಲಕ ಕಂಡ ಆ ಕಾರಿನವ ವಾಪಸು ಬಂದು ಇವರ ಹೋಟಲಿನ ಕಡೆಗೆ ಕಾರು ತಿರುಗಿಸಿದ. ಆ ಪುಟ್ಟ ಹುಡಿಗಿಗೆ ಈತನನ್ನು ಕಂಡು ಅದೇನೋ ಆಕರ್ಷಣೆ. ಹೋಟಲಿನಲ್ಲಿ ಊಟ ಮಾಡುತ್ತಿದ್ದಾಗಲೂ ಈತನ ಕಡೆಗೇ ಆಕೆ ಪದೇಪದೇ ನೋಡಿ ನಗುತ್ತಿದ್ದಳು. ಈತನೂ ಸಹಾ ಆ ಮುಗ್ಧ ನೋಟಕ್ಕೆ ಮರುಳಾಗಿ ಆಗಾಗ ಆಕೆಯ ಕಡೆಗೆ ನೋಡುತ್ತಿದ್ದನು. ಊಟ ಮುಗಿಸಿ ವಾಪಸು ಹೋಗುವಾಗ ಆಕೆ ಇವನ ಕೈಗೆ ಒಂದು ಚಾಕಲೇಟ್ ಇಟ್ಟು ಟಾಟಾ ಹೇಳಿದ್ದಳು ಬಲು ಬೇಗನೆ ಆ ಕಾರು ದೂರವಾಗಿ ದೃಷ್ಟಿಯಿಂದ ಮಾಯವಾಗಿಹೋಗಿತ್ತು, ಚಾಕಲೇಟು

ಇವನ ಕೈಲೇ ಉಳಿದಿತ್ತು, ಮತ್ಯಾವುದೋ ವಾಹನ ರಸ್ತೆಯಲ್ಲಿ ಹಾದುಹೋಗಲಾಗಿ ಇವನು ಆ ಚಾಕಲೇಟನ್ನು ಜೇಬಿಗೆ ತುರುಕಿ, ಮನದಲ್ಲೇ ಆ ಮಗುವಿನ ನಗುವನ್ನು ನೆನೆಯುತ್ತಾ, ಹಸಿವು ನೀರಡಿಕೆಗಳನ್ನು ಮರೆತು ಫಲಕ ತೋರಿಸುತ್ತಾ ನಿಂತ.

ಹಾಗೂಹೀಗೂ ಸಂಜೆ 5 ರ ವರೆವಿಗೆ ನಿಂತೂ ನಿಂತೂ ತನ್ನ ಡ್ಯೂಟಿ ಮುಗಿಸಿ, ಹೋಟಲಿನ ಸಮವಸ್ತ್ರ ಕಳಚಿಟ್ಟು ಮಾಲೀಕನ ಮುಂದೆ ದೀನನಾಗಿ ನಿಂತವನಿಗೆ ಮಾಲೀಕ ನೀಡುವ ಬುತ್ತಿ, ಯಾರೋ ಉಳಿಸಿಹೋಗಿದ್ದ ಚೂರುಪಾರು ಅನ್ನ, ಸಾರು, ಪಲ್ಯ ಎಲ್ಲದರ ಕದಂಬ! ಅದನ್ನೇ ದೈನ್ಯತೆಯಿಂದ ಸ್ವೀಕರಿಸಿದಾತ ಮತ್ತೆ ಪಂಚೆ, ಶರ್ಟು ಬರಿಗಾಲಲ್ಲಿ ಹೋಟಲಿನಿಂದ ಹಲವಾರು ಕಿಲೋಮೀಟರ್ ದೂರದ ತನ್ನ ಗುಡಿಸಲಿಗೆ ತೆಗೆದುಕೊಂಡು ಹೋದರೆ ಅಲ್ಲಿ ಆ ಊಟಕ್ಕಾಗಿ ಕಾಯುತ್ತಿದ್ದ ಎರಡು ಜೀವಗಳು, ಒಂದು ಅವನ ಅಮ್ಮ, ಮತ್ತೊಂದು ಅವನು ಪ್ರೀತಿಯಿಂದ ಸಾಕಿದ್ದ ಬೆಕ್ಕಿನ ಮರಿ! ತಂದ ಮೃಷ್ಟಾನ್ನ ಸವಿಯಲು ಕಾದಿರುವ ಆ ಜೀವಗಳೊಂದಿಗೆ ಇವನು ಹಂಚಿ ತಿಂದು ತೇಗಿ ಸಂತಸದ ನಗು ಚೆಲ್ಲಿದ.

ಆಗ ಅವನ ನೆನಪಿಗೆ ಬಂದುದು ಅವನ ಜೇಬಿನಲ್ಲಿದ್ದ ಆ ಪುಟ್ಟ ಹುಡುಗಿ ಕೊಟ್ಟುಹೋಗಿದ್ದ ಚಾಕಲೇಟ್. ಅದನ್ನು ತೆಗೆದು ಅವನು ಅಮ್ಮನ ಕೈಲಿಟ್ಟು ಅವಳನ್ನೇ ನೋಡುತ್ತಾ ವಿನೀತನಾಗಿ ನೋಡುತ್ತಾ ನಿಂತ. ಅದರ ಹೊರಸಿಪ್ಪೆಯನ್ನು ತೆಗೆದು ಒಳಗಿನ ಚಾಕಲೇಟ್ ನೋಡಿ ಖುಷಿಯಾದ ಆತನ ಅಮ್ಮ ಅದನ್ನು ತನ್ನ ಬಾಯಿಯಲ್ಲಿ ಉಳಿದಿದ್ದ ಒಂದೆರಡು ಹಲ್ಲುಗಳಿಂದ ಕಚ್ಚಿ ತುಂಡುಮಾಡಿ ಒಂದು ತುಂಡನ್ನು ಮಗನ ಬಾಯಿಯಲ್ಲಿ ಹಾಕಿದಾಗ ಅಮ್ಮನ ಆ ಅಗಾಧ ಪ್ರೀತಿ, ಮಗನ ಧನ್ಯತಾಭಾವ ನೋಡುವವರ ಕಣ್ಣುಗಳನ್ನು ತೇವಗೊಳಿಸದೇ ಇರದು.

1–6–2017

* * * * * *

ಲೇಖನ – 19

# ಬದುಕು ಎಷ್ಟೊಂದು ದುಸ್ತರ

ದೃಶ್ಯ 1: ಸಾರ್, ತಾತ, ತಾತ ತರಕಾರಿ ತಗೊಳ್ಳಿ ತಾತ, ಪ್ಲೀಸ್ ಅಜ್ಜಿ ತಾತನಿಗೆ ತರಕಾರಿ ಕೊಂಡುಕೊಳ್ಳೋದಕ್ಕೆ ನೀವಾದ್ರೂ ಹೇಳಿ.

"ಅಯ್ಯೋ ಮನೇಲಿ ಈಗಾಗಲೇ ಬೇಕಾದಷ್ಟು ತರಕಾರಿ ಇದೆ ಕಣಪ್ಪ, ನಮಗೆ ಬೇಕಿಲ್ಲ."

ನನಗೆ ಬೇಕಜ್ಜಿ, ನಾನು ಸ್ಟೂಡೆಂಟು, ನೀವು ಸ್ವಲ್ಪನಾದ್ರೂ ತರಕಾರಿ ಕೊಂಡುಕೊಂಡರೆ, ನನಗೆ ಸ್ಕೂಲ್ ನೋಟ್ ಬುಕ್ ಕೊಂಡುಕೊಳ್ಳೋದಕ್ಕೆ ಅನುಕೂಲ ಆಗತ್ತೆ.

ತರಕಾರಿ ಗಿರಕಾರಿ ಏನೂ ಬೇಡ ಹೋಗಯ್ಯ, ನಿನಗೋಸ್ಕರ ನಾವು ಅವಶ್ಯಕತೆ ಇಲ್ಲದಿದ್ರೂ ಕೊಂಡುಕೋಬೇಕಾ? ನಡಿ, ನಡಿ. ಯಾವಯಾವ ರೀತಿ ಮೋಸಮಾಡ್ತಾರೋ ಯಾರಿಗೆ ಗೊತ್ತು.

ರೀ ಪಾಪ ಹುಡುಗ ನೋಟುಬುಕ್ಕು ಕೊಂಡುಕೊಳ್ಳೋದಕ್ಕೆ ಸಹಾಯ ಆಗುತ್ತೆ ಅಂತಾ ಇದಾನೆ ಏನಾದ್ರೂ ಕೊಂಡು ಕೊಳ್ಳೋಣಾ ರೀ.

ಏನು ಬೇಡ, ಬೇಕಾದ್ರೆ ನೋಟುಬುಕ್ಕು ಕೊಂಡುಕೊಳ್ಳೋದಕ್ಕೆ ಸಹಾಯ ಅಂತ ಒಂದ್ಹತ್ತು ರೂಪಾಯಿ ಕೊಟ್ಟುಬಿಡೋಣ ಕಣೆ.

ದೃಶ್ಯ 2: ಸಾರ್, ಇದು ನಾನೇ ನನ್ನ ಕೈಯ್ಯಾರ ಮಾಡಿರೋ ಕುಂಕುಮದ ಭರಣಿ ಸಾರ್. ಒರಿಜಿನಲ್ ಗಂಧದ ಮರದ್ದು, ನೀವು ದೊಡ್ಡ ಮನಸ್ಸು ಮಾಡಿ ಒಂದು ಭರಣಿ ಕೊಂಡುಕೊಂಡರೆ ಮನೇಲಿ ನಮಗೆ ಒಂದು ಹೊತ್ತಿನ ಊಟಕ್ಕೆ ಅನುಕೂಲ ಆಗುತ್ತೆ ಸಾರ್.

ಅಯ್ಯೋ ಬಿಡಯ್ಯ ಒರಿಜಿನಲ್ ಗಂಧ ಅಂತ ಬುರುಡೆ ಬಿಡಬೇಡ ಕಣಯ್ಯ. ಒರಿಜಿನಲ್ ಗಂಧದ್ದೇ ಆಗಿದ್ದರೆ ಇಷ್ಟು ಕಡಿಮೆ ಬೆಲೆಗೆ ಎಲ್ಲಿ ಕೊಡೋಕಾಗುತ್ತೆ. ಇದು ಯಾವುದೋ ಕಾಡು ಮರದ್ದೇ ಇರಬೇಕು.

ಸಾರ್, ಹಾಗೆಲ್ಲ ನಾನು ಮೋಸಮಾಡೊಲ್ಲ ಸಾರ್. ನೀವೇ ಮೂಸಿ ನೋಡಿ ಸಾರ್. ಉಜ್ಜಿನೋಡಿ ಸಾರ್, ಬೇಕಾದರೆ ಕೆರೆದುನೋಡಿ ಸಾರ್, ನಾವು ಹಂಗೆಲ್ಲ ಸುಳ್ಳುಹೇಳೊಲ್ಲ ಸಾರ್.

ಆಯ್ತು ಎಷ್ಟಕ್ಕೆ ಕೊಡ್ತಿ ಹೇಳು, ನಾವು ಎರಡು ಪೀಸ್ ಕೊಂಡುಕೊಳ್ಳುತ್ತೇವೆ.

ಸಾರ್ ನಾನು ಸುಳ್ಳು ಹೇಳೊಲ್ಲ ಸಾರ್, ಈಗತಾನೇ ಆ ಕಾರಿನವರಿಗೆ ಒಂದು ಪೀಸಿಗೆ 500 ರೂ.ಗೆ ಕೊಟ್ಟಿದ್ದೀನಿ ಸಾರ್.

ನೀನು ಯಾರಿಗಾದರೂ ಎಷ್ಟು ಬೆಲೆಗಾದರೂ ಕೊಟ್ಟುಕೋ, ಅದು ನನಗೆ ಬೇಕಾಗಿಲ್ಲ, ನನಗೆ ಎಷ್ಟಕ್ಕೆ ಕೊಡುತ್ತೀಯಾ ಅದು ಹೇಳು?

ಸಾರ್ ನಾನು ಮಕ್ಕಳೊಂದಿಗಾ ಸಾರ್, ನಿಮ್ಮಂತಹವರು ಕೊಂಡುಕೊಂಡರೇ ಅಲ್ವಾ ನಮಗೆ ಎರಡು ಹೊತ್ತಿನ ಊಟ ಸಿಗೋದು.

ಅರೇ ನಿನ್ನ ಪುರಾಣ ಕಷ್ಟ ಕೇಳೋಕೆ ನಾವು ಬಂದಿಲ್ಲ. ಏನೋ ಕಷ್ಟದಲ್ಲಿದ್ದೀಯಾ ಅಂದೆಯಲ್ಲಾ ಅದಕ್ಕೇ ಕೊಂಡುಕೊಳ್ಳುತಿರೋದು. ಎಷ್ಟಕ್ಕೆ ಕೊಡುತ್ತೀಯ ಹೇಳು?

ಸಾರ್ ನಿಮಗೆ ನಾನು ಒಂದು ಪೀಸಿಗೆ 300 ರೂ. ಗೆ ಕೊಟ್ಟುಬಿಡುತ್ತೀನಿ. ಅದೆಲ್ಲ ಆಗೊಲ್ಲಯ್ಯ ಎರಡು ಪೀಸಿನಿಂದ 250 ರೂ. ಕೊಡುತ್ತೀನಿ. ಆಯ್ತಾ?

ಸಾರ್ ಬಡವರ ಹೊಟ್ಟೆಮೇಲೆ ಹೊಡೀಬೇಡಿ ಸಾರ್, ಸ್ವಲ್ಪ ದೊಡ್ಡ ಮನಸ್ಸು ಮಾಡಿ 300 ರೂ. ಕೊಟ್ಟುಬಿಡಿ ಸಾರ್.

ಆಗೊಲ್ಲ ಅಂದ್ರೆ ಆಗೊಲ್ಲ. ಒಂದು ಸಲ ಡಿಸೈಡ್ ಮಾಡಿದಮೇಲೆ ಮುಗೀತು. 250 ರೂ. ಮೇಲೆ ಒಂದು ಪೈಸೇನೂ ಹೆಚ್ಚಿಗೆ ಕೊಡೋಲ್ಲ, ಕೊಟ್ರೆ ಕೊಡು ಇಲ್ಲದಿದ್ರೆ ಬಿಡು, ಸರಿ ಹೊರಡಿ ಎಲ್ಲ.

ಆಯ್ತು ಸಾರ್ 250 ರೂ. ನೇ ಕೊಡಿ

ಸಾರ್.

ಸರಿಯಾಗಿ ನೋಡಿ ತಗೋಳ್ಳಿ, ಇವರಂತಹವರು ಟೋಪಿ ಹಾಕೋಕ್ಕೆ ನಿಂತಿರ್ತಾರೆ.

ದೃಶ್ಯ 3: ಟೈಂ ಪಾಸ್ ಕಡಲೇಕಾಯಿ, ಕೂಲ್ ಕೂಲ್ ಸೌತೇಕಾಯಿ, ಮದ್ದೂರು ವಡೆ ಬೇಕಾ ಸಾರ್. ರಾಮನಗರ ಬಸ್ ಸ್ಟ್ಯಾಂಡ್ ಸಿಗ್ನಲ್ ಬಳಿ ಪ್ರತಿ ಬಸ್ ಬಂದಾಗಲೂ ಕೇಳಿಬರುವ ಕಂಡುಬರುವ ದೃಶ್ಯ ಇದು. ಹತ್ತಾರು ಹುಡುಗರು ತಲೆ ಮೇಲೋ ಕೈನಲ್ಲೋ ಒಂದು ತಟ್ಟೆ ಹಿಡಿದುಕೊಂಡು ಕಾರುಗಳ ಬಳಿ, ಬಸ್ಸುಗಳ ಬಳಿ ಬಂದು ಪ್ರಯಾಣಿಕರನ್ನು ಅವರು ತಂದಿರುವ ಕಡಲೇಕಾಯಿ, ಸೌತೇಕಾಯಿ ಚೂರು, ವಡೆ ಪ್ಯಾಕೆಟ್ಟುಗಳನ್ನು ಮಾರಲು ಯತ್ನಿಸುತ್ತಿರುತ್ತಾರೆ. ಬಸ್ಸು ಹೊರಡುತ್ತಿದ್ದಂತೆಯೇ ಮತ್ತೊಂದು ವಾಹನದ ಬಳಿ ಓಡುತ್ತಾರೆ. ನಮಗೋ ನಮ್ಮ ಹಿರಿಯರು ಕ್ಲೀನ್ ಹುಚ್ಚು ಹಿಡಿಸಿದ್ದು ಈ ರೀತಿ ಓಪನ್ ಆಗಿ ಮಾರೋ ಪದಾರ್ಥಗಳನ್ನು ತಿಂದರೆ ಯಾವ್ಯಾವುದೋ ರೋಗಗಳು ಅಟಕಾಯಿಸಿಕೊಳ್ಳುತ್ತವೆ ಎಂದು ಹೆದರಿಸಿರುವುದರಿಂದ ಅಂತಹ ಮಾರಾಟಗಾರರನ್ನು ಕಂಡರೆ ಮುಖ ಆ ಕಡೆ ತಿರುಗಿಸಿಕೊಳ್ಳಬೇಕೆನಿಸುತ್ತದೆ. ಅವರು ಈ ರೀತಿ ದಿನವಿಡೀ ಬಿಸಿಲಿರಲಿ, ಮಳೆಯಿರಲಿ, ಚಳಿಯಿರಲಿ ವ್ಯಾಪಾರದಲ್ಲಿ ಏಕೆ ತೊಡಗಬೇಕು. ಬೇಕಾದವರು ತಮ್ಮ ಬಳಿಯೇ ಬರಲಿ ಎಂದು ಎಲ್ಲೋ ಒಂದು ಜಾಗದಲ್ಲಿ ಅಂಗಡಿ ಹಾಕಿಕೊಂಡು ಕುಳಿತುಕೊಂಡು ವ್ಯಾಪಾರಮಾಡಬಾರದೇಕೆ ಎಂಬ ಪ್ರಶ್ನೆ ಮನದಲ್ಲಿ ಮಟಿದೇಳುತ್ತಿರುತ್ತದೆ. ಅದು ಸಾಧ್ಯವಾಗದೇ ಇರುವುದರಿಂದ ತಾನೇ ಅವರು ಈ ರೀತಿ ಬೀದಿ ವ್ಯಾಪಾರ ಮಾಡುತ್ತಿರುವುದು ಎಂಬ ಸಣ್ಣ ಸತ್ಯವೂ ನಮ್ಮ ಮನಸ್ಸಿಗೆ ಬರುವುದಿಲ್ಲ.

ಮೇಲಿನ ಎಲ್ಲ ದೃಶ್ಯಗಳೂ ನಮಗೆ ಪ್ರತಿನಿತ್ಯ ಕಣ್ಣಿಗೆ ಬೀಳುತ್ತಿರುತ್ತವೆ ಅಲ್ಲವೇ? ಆದರೆ ಆ ಕಷ್ಟಜೀವಿಗಳ ಹಿಂದಿನ ಕತೆಗಳ ಬಗೆಗೆ ತಲೆ ಕೆಡಿಸಿಕೊಳ್ಳುವುದೇ ಇಲ್ಲ. ಅಲ್ಲದೇ ಅವರು ಯಾರ ತಲೆ ಒಡೆಯದೆ, ಮೋಸ ಮಾಡದೇ ಕಷ್ಟಪಟ್ಟು ತಮ್ಮ ಅನ್ನ ಸಂಪಾದಿಸುತ್ತಿರುವುದರ ಕಡೆಗೆ ನಮ್ಮ ಗಮನ ಹೋಗುವುದೇ ಇಲ್ಲ. ಗಟ್ಟಿಮುಟ್ಟಾದ ಮೈಕಟ್ಟು ಹೊಂದಿದ್ದರೂ ಸೋಮಾರಿತನದಿಂದ ಯಾವುದೇ ಕೆಲಸಮಾಡದೆ ಭಿಕ್ಷೆಬೇಡುವವರನ್ನು ನೋಟುಗಳನ್ನೇ ಭಿಕ್ಷೆಹಾಕಿ ಪ್ರೋತ್ಸಾಹಿಸುವ ನಾವು ಈ ಕಷ್ಟಜೀವಿಗಳ ಕಷ್ಟಕ್ಕೆ ಮರುಗದಿರುವುದು ವಿಪರ್ಯಾಸವೇ ಸರಿ. ಕಳ್ಳತನಮಾಡುವವರು, ದರೋಡೆ ಮಾಡುವವರು, ಬ್ಲ್ಯಾಕ್‌ಮೇಲ್ ಮಾಡಿ ಹಣಸಂಪಾದಿಸುವವರು ಸಮಾಜದ್ರೋಹಿಗಳು. ಈ ಸಮಾಜದ್ರೋಹಿಗಳಿಗೆ ಹೋಲಿಸಿದರೆ ಈ ರಸ್ತೆಬದಿ ಮಾರಾಟಗಾರರು ನಿಷ್ಠಾವಂತ ಕಾರ್ಮಿಕರು. ಮಾತೃ ಹೃದಯವಿರುವವರು ಮಾತ್ರ ಅವರ ಕಷ್ಟ ನೋಡಲಾರದೇ ತಮಗೆ

ಅವಶ್ಯಕತೆ ಇಲ್ಲದಿದ್ದರೂ ಅವರಿಗೆ ಸಹಾಯವಾಗಲೆಂದು ಕೊಳ್ಳುವ ದೊಡ್ಡ ಮನಸ್ಸು ಮಾಡಬಹುದು.

ನಾವು ಪಟ್ಟ ಕಷ್ಟದಿಂದಲೋ, ನಮ್ಮ ಹಿರಿಯರು ಮಾಡಿದ ಪುಣ್ಯಫಲವೋ ನಮಗೆ ನಿವೃತ್ತಿಯಾದ ನಂತರವೂ ತಿಂಗಳಾಂತ್ಯಕ್ಕೆ ಸರಿಯಾಗಿ ನಿವೃತ್ತಿವೇತನ ನಮ್ಮ ಬ್ಯಾಂಕು ಖಾತೆಗೆ ಜಮಾ ಆಗಿಬಿಡುತ್ತದೆ. ಹೀಗಾಗಿ ಇತರರ ಕಷ್ಟ ನಮಗೆ ಅರ್ಥವಾಗುವುದೇ ಇಲ್ಲ. ಆದರೆ ಈ ಮೇಲೆ ತಿಳಿಸಿದ ರೀತಿಯ ಮಂದಿಯ ಪರಿಸ್ಥಿತಿ, ದುಡಿದರೆ ಅಂದಿನ ಊಟ, ಇಲ್ಲದಿದ್ದರೆ ಉಪವಾಸ! ಅವರ ಕಷ್ಟಗಳನ್ನು ಅರಿತುಕೊಳ್ಳಬೇಕಾದರೆ ಅದನ್ನು ಕಲ್ಪಿಸಿಕೊಳ್ಳಬೇಕು ಅಷ್ಟೇ. ಆದರೂ ಅದರ ತೀವ್ರತೆ ನಮಗೆ ಅರ್ಥವಾಗುವುದೇ ಇಲ್ಲ. ದಂಪತಿಗಳಲ್ಲಿ ಒಬ್ಬರಿಗಾದರೂ ಆ ಮಾತೃಹೃದಯ ಇದ್ದಲ್ಲಿ ಕಿಂಚಿತ್ತಾದರೂ ಸಹಾಯ ಇಂತಹ ಕಷ್ಟ ಜೀವಿಗಳಿಗೆ ಸಲ್ಲಬಹುದೋ ಏನೋ? ಇನ್ನು ಮುಂದಾದರೂ ಇಂತಹ ಕಷ್ಟಜೀವಿಗಳು ನಿಮ್ಮ ಮುಂದೆ ಬಂದರೆ ಅವರ ಒಂದು ಹೊತ್ತು ಕೂಳಿಗೆ ನಿಮ್ಮ ಕಾಣಿಕೆಯನ್ನೂ ಕರುಣಿಸಿ ಎನ್ನುವುದು ನನ್ನ ಮನವಿ. ನೀವೇನಂತೀರಿ?

31–5–2017

* * * * * *

## ಲೇಖನ – 20

# ಪರಿಚಿತ ಊರಿನಲ್ಲಿನ ಒಂದು ಅಸಂಬದ್ಧ ಕಥೆ

ಅದು ಹೇಗೆ ನಾವಿಬ್ಬರೂ ಬೇರೆಬೇರೆಯಾದೆವೋ ಗೊತ್ತಿಲ್ಲ. ಒಟ್ಟಿನಲ್ಲಿ ನನ್ನ ಶ್ರೀಮತಿ ಊರ ಹೊರವಲಯದ ಹೋಟಲ್ ಬಳಿ, ನಾನು ಊರ ಉತ್ತರದಿಕ್ಕಿನ ಬಸ್ ಸ್ಟ್ಯಾಂಡ್ ನಡುವೆ ಇದ್ದೆವು. ನನ್ನ ಶ್ರೀಮತಿಯನ್ನು ನಾನೇ ಆ ಹೋಟಲ್ ಬಳಿ ಸಾಯಂಕಾಲ 4 ಘಂಟೆಗೆ ಬಿಟ್ಟು ಏನನ್ನೋ ಹುಡುಕಿಕೊಂಡು ಹೊರಟಿದ್ದೆನೆಂದು ತೋರುತ್ತದೆ. ಅಂತೂ ಇಂತೂ ನಾನು ಹುಡುಕುತ್ತಿದ್ದುದು ದೊರಕದೇ, ಪತ್ನಿಯನ್ನೂ ಮರೆತು ನಡೆದುಕೊಂಡು ಮೂರ್ನಾಲ್ಕು ಮೈಲುಗಳೇ ಬಂದಿರಬಹುದು. ಕತ್ತಲು ಕವಿಯುವ ಸಮಯ ಅಂದರೆ ಸಂಜೆ ಆರು ಆರೂವರೆ ಆಗಿತ್ತೆನ್ನಬಹುದು. ಹಾಗೆ ನಡೆದುಕೊಂಡು ಬರುತ್ತಿದ್ದವನಿಗೆ ನಾನು ಬಸ್ ಸ್ಟ್ಯಾಂಡ್ ಒಳಗೆ ಬಂದ ಅರಿವಾಗುವುದರೊಳಗೆ, ಎದುರಿಗೆ ಬಂದ ಬಸ್ಸು ನನ್ನ ಮೇಲೆಯೇ ಹರಿಯಲು ಬರುತ್ತಿದ್ದುದು ತಿಳಿದು ತಟ್ಟನೆ ಪಕ್ಕಕ್ಕೆ ಜಿಗಿದು ಪ್ರಾಣ ಉಳಿಸಿಕೊಂಡೆ ಎನ್ನಿ. ತನ್ನ ಪ್ರಾಣ ಉಳಿದ ಕ್ಷಣದಲ್ಲಿ ನೆನಪಾದಳು ನಾನು ಹೋಟಲ್ ಬಳಿಯೇ ಬಿಟ್ಟುಬಂದಿದ್ದ ನನ್ನ ಪ್ರೀತಿಯ ಶ್ರೀಮತಿ. ಅಯ್ಯೋ ನನ್ನ ಬುದ್ಧಿಗೆ, ಹೀಗೆ ಅವಳನ್ನು ಒಬ್ಬಂಟಿಯಾಗಿ ಅದೂ ಈ ರಾತ್ರಿಯಲ್ಲಿ ಅಲ್ಲೆಲ್ಲೋ ಬಿಟ್ಟುಬಂದು ತಪ್ಪುಮಾಡಿದೆನಲ್ಲ ಎಂದು ಮನಸ್ಸಿಗೆ ಕಸಿವಿಸಿಯಾಗಿ, ಅವಳ ಮೊಬೈಲಿಗೆ ಫೋನಾಯಿಸಿದೆ, ಅತ್ತ ಕಡೆಯಿಂದ ಇನ್ನಾರೊಂದಿಗೋ ಆಕೆ ಮಾತನಾಡುತ್ತಿರುವುದು ಕೇಳಿಸಿತು. ಅವಳನ್ನು ಎಷ್ಟು ಬೇಗನೆ ಸಾಧ್ಯವೋ ತಲುಪಲು ಅಲ್ಲಿ ಹಾದುಹೋಗುತ್ತಿದ್ದ ಹತ್ತಾರು ಆಟೋಗಳಿಗೆ ಕೈಯೊಡ್ಡಿದರೂ

ಅವು ನಿಲ್ಲುತ್ತಿರಲಿಲ್ಲ. ನಿಮಗೆ ಗೊತ್ತೇ ಇದೆಯಲ್ಲ ನಮಗೆ ಬೇಕೆನಿಸಿದಾಗ ಅವು ಖಾಲಿಯಿರುವುದೇ ಇಲ್ಲ, ಇದ್ದರೂ ಅವು ನಾವು ಕರೆದ ದಿಕ್ಕಿಗೆ ಬರುವುದೇ ಇಲ್ಲ. ಹೀಗಾಗಿ ಬಾರದ ಆಟೋದವರನ್ನು ಮನಸಾರೆ ಶಪಿಸುತ್ತಾ, ಅವಳನ್ನು ಸೀತೆಯನ್ನು ರಾಮ ಅರಣ್ಯದಲ್ಲಿ 'ಹಾ ಸೀತಾ' ಎಂದು ಹುಡುಕಿಕೊಂಡು ಹೋದಂತೆ ಮಳೆಯಿಂದ ರಾಡಿಯಾಗಿದ್ದ ಆ ಗಜಿಬಿಜಿ ಅಂಗಡಿ ಸಾಲುಗಳ ರಸ್ತೆಯಲ್ಲಿ, ಭಾರವಾದ ಹೆಜ್ಜೆಗಳನ್ನಿಡುತ್ತಾ ಜನರನ್ನು ಸೀಳಿಕೊಂಡು ನಾನು ನನ್ನ ಶ್ರೀಮತಿಯನ್ನು ಬಿಟ್ಟುಬಂದಿದ್ದ ಹೋಟಲಿನ ಕಡೆಗೆ ಹೊರಟೆ. ಮಧ್ಯದಲ್ಲಿತ್ತು ಒಂದು ಹಳೆಯ ಗುರುಭವನದ ಕಟ್ಟಡ; ನನ್ನ ಗಮ್ಯ ಊರಹೊರವಲಯದ ಹೋಟಲ್ ಆಗಿರಬೇಕಾಗಿತ್ತು. ಆದರೆ ಈ ಗುರುಭವನದೊಳಗೆ ನಾನ್ಯಾಕೆ ಹೋದೆ? ಗೊತ್ತಿಲ್ಲ. ಆ ಕಟ್ಟಡದ ಹೊರಗೆ ನನ್ನ ಚಪ್ಪಲಿಗಳನ್ನು ಬಿಟ್ಟು, ಮಧ್ಯದ ಬಾಗಿಲಿನಿಂದ ನಾನು ಏಕೆ ಒಳ ಪ್ರವೇಶಿಸಿದೆ ನನಗೇ ಗೊತ್ತಿಲ್ಲ. ಆ ಭವನದ ಒಂದು ಬಾಗಿಲಿನಿಂದ ಹಾದು ಮತ್ತೊಂದು ಬಾಗಿಲಿನ ಮೂಲಕ ಹೊರಹೋಗುವ ಪ್ರಯತ್ನ ನನ್ನದೇನೋ ಅದೂ ಗೊತ್ತಿಲ್ಲ. ಆದರೆ ಹಾಗೆ ಹಾದುಹೋಗುವಾಗ ಹಾಲಿನಲ್ಲಿ ನನ್ನ ಶ್ರೀಮತಿ ಮತ್ತು ಇನ್ನೂ ಹಲವಾರು ಮಹಿಳಾ ಪರಿಚಿತರುಗಳೊಂದಿಗೆ ಆಕೆ ಮಲಗಲು ಸಿದ್ಧತೆನಡೆಸುತ್ತಿದ್ದುದು ಕಂಡುಬಂದಿತು. ಆ ಮಹಿಳೆಯರು ನನ್ನನ್ನು ನೋಡಿದ್ದರೇನೋ, ನನ್ನ ಶ್ರೀಮತಿಗೆ "ಇಂದು ನೀವು ಇಲ್ಲೇ ಮಲಗಿ ವಿಶ್ರಮಿಸಿ, ನಾಳೆ ನಾವೇ ನಿಮ್ಮನ್ನು ನಮ್ಮೊಂದಿಗೆ ಕರೆದುಕೊಂಡುಹೋಗಿ ನಿಮ್ಮ ಊರು ತಲುಪಿಸುತ್ತೇವೆ" ಎಂದು ಹೇಳುತ್ತಿದ್ದುದು ನನ್ನ ಕಿವಿಗಳಿಗೆ ಬಿದ್ದಿತು. ನಾನು ನನ್ನ ಪತ್ನಿಗೆ ಟಾಟಾ ಹೇಳಿ ಹೊರಹೋಗಲು ಯತ್ನಿಸುತ್ತಿದ್ದಾಗ ಪತಿ ಭಕ್ತಳಾದ ಆಕೆ ಅವರುಗಳನ್ನು ತೊರೆದು ನನ್ನೊಂದಿಗೆ ಊರಿಗೆ ಹೋಗಲು ಎದ್ದುಬಂದಳು. ಅವಳನ್ನು ಹಿಂಬಾಗಿಲಿನ ಮೂಲಕ ಕರೆದುಕೊಂಡುಹೋಗಲು ತಯಾರಾದಾಗ ಮುಂಬಾಗಿಲಿನ ಬಳಿ ಬಿಟ್ಟಿದ್ದ ನನ್ನ ಚಪ್ಪಲಿ ನೆನಪಾದವು. ಅವುಗಳನ್ನು ಮೆಟ್ಟಿಕೊಂಡು ಹೋಗೋಣವೆಂದು ಆ ಮುಂಭಾಗಕ್ಕೆ ಹಿಂಭಾಗದಿಂದ ಬಂದರೆ ನಾನು ಒಳಪ್ರವೇಶಿಸಿದ ವೇಳೆಯಲ್ಲಿ ಖಾಲಿಖಾಲಿಯಾಗಿದ್ದ ಮುಂಭಾಗದಲ್ಲೊಂದು ರಾತ್ರಿ ತರಕಾರಿ ಸಂತೆ! ಎಲ್ಲ ತರಕಾರಿಗಳನ್ನೂ ಸಣ್ಣ ಸಣ್ಣ ಗುಡ್ಡೆ ಇಟ್ಟು ಮಾರಾಟ ನಡೆಸುತ್ತಿದ್ದರು. ಭರ್ಜರಿ ವ್ಯಾಪಾರವೂ ನಡೆಯುತ್ತಿತ್ತು. ನನ್ನ ಚಪ್ಪಲಿಯನ್ನು ಆ ಕೊಚ್ಚೆಯಲ್ಲಿ ಹುಡುಕಿ ತೆಗೆದರೆ ಅದರಲ್ಲಿ ಒಂದರ ಉಂಗುಷ್ಟವೇ ಕಿತ್ತುಹೋಗಿತ್ತು. ಅದನ್ನು ಅಲ್ಲೇ ಬಿಸಾಡಿ ಉಳಿದೊಂದು ಚಪ್ಪಲಿಯನ್ನು ಮೆಟ್ಟಿಕೊಂಡು ಮತ್ತೊಂದು ಕಾಲನ್ನು ನೋಡಿದರೆ ಅದರಲ್ಲಾಗಲೇ ಕಪ್ಪುಬಣ್ಣದ ಬೆಲ್ಟ್ ಚಪ್ಪಲಿ ರಾರಾಜಿಸುತ್ತಿತ್ತು!

ನಾನು ಧರಿಸಿದ್ದುದು ಕಂದು ಬಣ್ಣದ ಚಪ್ಪಲಿ, ಈ ಬೆಲ್ಟ್ ಚಪ್ಪಲಿ ಕಪ್ಪು ಬಣ್ಣದ್ದು! ಇರಲಿ ಎರಡೂ ಪಾದಗಳಿಗೆ ಏನೋ ಒಂದು ರಕ್ಷಣೆ ಆಯಿತಲ್ಲ ಎಂದು ಪತ್ನಿಯೊಡನೆ ಹೊರಟಾಗ ತಲೆಗೆ ಹೊಳೆದದ್ದು ಅರೇ ನಾನು ಯಾವಾಗ ಈ ಕಾಲಿಗೆ ಬೆಲ್ಟ್ ಚಪ್ಪಲಿ ಧರಿಸಿದ್ದೆ ಎಂಬ ವಿಚಾರ. ಅಷ್ಟರಲ್ಲಿ ದಿಗ್ಗನೆ ಎಚ್ಚರವಾಗಿ ನನ್ನ ಕನಸು ಅಪೂರ್ಣವಾಗಿ ನಿಂತಿತ್ತು. ಗೋಡೆಯ ಗಡಿಯಾರ ಬೆಳಗಿನಜಾವದ 3 ಘಂಟೆ ತೋರಿಸುತ್ತಿತ್ತು. ಕಂಡಿದ್ದು ಕನಸಾದರೂ ಪ್ರೀತಿಯ ಹೆಂಡತಿಯನ್ನು ಕೆಲವು ಸಮಯ ದೂರಮಾಡಿದುದನ್ನು ನೆನೆದು ಆ ಕ್ಷಣಕ್ಕೆ ಮೈ ಬೆವರೊಡೆದಿತ್ತು. ನಿಮಗೂ ಇಂತಹ ಅಸಂಬದ್ಧ ಕನಸು ಬಿದ್ದಿತ್ತಾ!

18–5–2017

* * * * *

## ಲೇಖನ – 21

# ಟಾಯ್ಲೆಟ್ಟುಗಳು

ರೀ ಸ್ವಾಮಿ ಈಗಲೇ ಹಾಗೆ ಮೂಗು ಮುಚ್ಚಿಕೊಳ್ಳಬೇಡಿ. ನಾನು ಟಾಯ್ಲೆಟ್ ಅರ್ಥಾತ್ ಕಕ್ಕಸುಗಳ ಬಗೆಗೆ ಗಂಭೀರವಾಗಿ ಚಿಂತನೆಮಾಡಹೊರಟಿದ್ದೇನೆ. ಇತ್ತೀಚೆಗೆ ಟೀವಿಗಳಲ್ಲಿ ನೋಡಿದ ಒಂದು ಜಾಹಿರಾತಿನಲ್ಲಿ ನೋಡಿದ್ದು: ಒಂದು ಹೋಟಲಿನ ಎಲ್ಲ ಸೀಟುಗಳೂ ಕಮೋಡ್ ಮಾದರಿ ಸೀಟುಗಳಾಗಿದ್ದವು.ಅಲ್ಲದೇ ಟಾಯ್ಲೆಟ್ಟುಗಳು ಬೆಳೆದುಬಂದ ಬಗೆಯನ್ನು ತಿಳಿಸಲೋಸುಗವೇ ಪ್ರತ್ಯೇಕ 'ಮ್ಯೂಸಿಯಂ'ಗಳ ಸ್ಥಾಪನೆಯೂ ಹಲವಾರು ದೇಶಗಳಲ್ಲಿ ಆಗಿವೆ. ನಾನು ಅಂದರೆ ನೀವುಗಳೂ ಗಮನಿಸಿದಂತೆ ಈ ಟಾಯ್ಲೆಟ್ಟುಗಳ ಬೆಳವಣಿಗೆ ಮಾರ್ಪಾಡು ಹೇಗೆಲ್ಲಾ ಆಯಿತು ಎಂಬುದನ್ನು ನೆನಪುಮಾಡಿಕೊಡುವ ಉದ್ದೇಶದಿಂದ ಬರೆದ ಲೇಖನ ಇದು.

ಅಲ್ಲ ಈಗ್ಗೆ 50 – 60 ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಈ 'ಟಾಯ್ಲೆಟ್' ಕಲ್ಪನೆ ಇರಲಿಲ್ಲ. ಆಗೆಲ್ಲ, ಆಗೆಲ್ಲ ಏನೂ ಈಗಲೂ ಸಹಾ ನಮ್ಮ ಉತ್ತರ ಕರ್ನಾಟಕದ ಮೂರೂ ಮುಕ್ಕಾಲು ಪಾಲು ಹಳ್ಳಿಗಳಲ್ಲಿ ಬಯಲೇ ಅಲ್ಲವೇ ಟಾಯ್ಲೆಟ್ಟು, ಬೆಳಗಾದರೆ ಚೊಂಬು ಹಿಡಿದುಕೊಂಡು ಬಯಲಿಗೆ ಹೋಗಿಬರುವುದು ಸರ್ವೇಸಾಮಾನ್ಯ ಸಂಗತಿ. ಈ ಬಯಲು ಶೌಚದ ಅನಾನುಕೂಲಗಳನ್ನು ಅನುಭವಿಸಿದವರಷ್ಟೇ ಬಲ್ಲರು. ಹಾವು ಚೇಳುಗಳ ಕಾಟ, ಹಾದುಹೋಗುವ ಗಂಡಸರ ಕಾಟ, ಅತ್ಯಾಚಾರಿಗಳ ಕಾಟ ಮುಂತಾದವುಗಳ ನಡುವೆಯೇ ತಮ್ಮ ವಿಸರ್ಜನಾಕಾರ್ಯ

ಪೂರ್ತಿಗೊಳಿಸಿಕೊಳ್ಳಬೇಕಿತ್ತು. ಆದುದರಿಂದಲೇ ತಮ್ಮ ಮನೆಗಳಲ್ಲಿಯೇ ಶೌಚಾಲಯ ನಿರ್ಮಾಣದ ಅವಶ್ಯಕತೆ ಮನಗಂಡವರು ಆ ಮಹಿಳೆಯರು. ಸರ್ಕಾರ ಸಹಾ ಮನೆಯಮುಂದೆ ಶೌಚಾಲಯ ನಿರ್ಮಾಣವಾಡಿ-ಕೊಳ್ಳಲೋಸುಗವೇ ಸಹಾಯಧನ ನೀಡುವ ಯೋಜನೆಗಳನ್ನು ಜಾರಿಗೆ ತಂದಿತು. ಇನ್ನು ಕೆಲವು ಕಡೆ ಸಾರ್ವಜನಿಕ ಶೌಚಾಲಯಗಳನ್ನೂ ನಿರ್ಮಿಸಲಾಯಿತಾದರೂ, ಜೋರಾದ ಬಿರುಗಾಳಿ ಬೀಸಿದಾಗ ಇಡೀ ಶೌಚಾಲಯವೇ ಹಾರಿಹೋದ ಉದಾಹರಣೆಗಳೂ, ಅದನ್ನು ಬಳಸುತ್ತಿರುವವರಿಗೆ ಗಾಯಗಳಾದ ಉದಾಹರಣೆಗಳೂ ಇಲ್ಲದಿಲ್ಲ.

ವಿದೇಶಗಳಲ್ಲೇನೋ ಬಹಳ ಹಿಂದಿನಿಂದಲೂ 'ಟಾಯ್ಲೆಟ್' ಬಳಕೆಯಲ್ಲಿ ಇದ್ದಿರಬಹುದು. ಬ್ರಿಟೀಷರು ಭಾರತವನ್ನು ಆಕ್ರಮಿಸಿಕೊಂಡನಂತರವಷ್ಟೇ ಇಲ್ಲೂ ಅಲ್ಲೊಂದು ಇಲ್ಲೊಂದು ಟಾಯ್ಲೆಟ್ಟುಗಳು ಉದಯವಾಗಿರಬೇಕು. ಆದರೂ ಆರೋಗ್ಯದ ದೃಷ್ಟಿಯಿಂದ ಈ ಟಾಯ್ಲೆಟ್ಟುಗಳು ವಾಸಸ್ಥಳದಿಂದ ಆದಷ್ಟೂ ದೂರ ಇದ್ದರೆ ಒಳ್ಳೆಯದು ಎಂಬುದು ಹಿಂದಿನವರ ವಾದ. ಅದಕ್ಕೇ ಅವರು ಊರಹೊರಗಿನ ತೋಟಗಳನ್ನೋ, ಬಯಲನ್ನೋ ಟಾಯ್ಲೆಟ್ಟಾಗಿ ಮಾಡಿಕೊಂಡಿರುತ್ತಿದ್ದರು.

ನಂತರದ ಕೆಲವು ವರ್ಷಗಳಲ್ಲಿ ಬಯಲಿನಿಂದ ಅದು ಹತ್ತಿರವಾಗಿ ಮನೆಯ ಹಿತ್ತಲಿಗೆ ಬಂತು. ಮನೆಯ ಹಿಂದಿನ ಖಾಲಿಜಾಗದ ಒಂದು ಮೂಲೆಯಲ್ಲಿ ಒಂದು ದೊಡ್ಡ ಗುಂಡಿಹೊಡೆದು ಅದರ ಮೇಲೆ ಮಧ್ಯೆ ಸಣ್ಣಸೀಳು ಬಿಟ್ಟು ಎರಡು ಕಲ್ಲಿನ ಚಪ್ಪಡಿಗಳನ್ನು ಇಟ್ಟ ಟಾಯ್ಲೆಟ್ಟುಗಳನ್ನು ನಾನು ಚಿಕ್ಕವನಿದ್ದಾಗ ನನ್ನ ಸೋದರತ್ತೆಯ ಮನೆಯಲ್ಲಿ ನೋಡಿದ್ದುಂಟು. ಬಹುಶಃ ಇಂತಹ ಗುಂಡಿಯಲ್ಲೇ ಬಿದ್ದ ಬುಗುರಿಯ ಕಥೆಯನ್ನು ಡಾ। ಮೊಗಳ್ಳಿ ಗಣೇಶ್ ಬರೆದದ್ದು. ಈ ಟಾಯ್ಲೆಟ್ಟುಗಳು ವಾಸಸ್ಥಳದಿಂದ ಸುಮಾರು ಮೂವತ್ತರಿಂದ ನಲ್ವತ್ತು ಅಡಿಗಳ ದೂರದಲ್ಲಿರುತ್ತಿತ್ತು. ಒಂದು ಗುಂಡಿ ಮಲದಿಂದ ತುಂಬುತ್ತಬಂದಾಗ, ಅದನ್ನು ಮಣ್ಣುತುಂಬಿ ಮತ್ತೊಂದು ಕಡೆ ಹೊಸಗುಂಡಿಹೊಡೆದು ಕಲ್ಲುಚಪ್ಪಡಿಗಳನ್ನು ಇಟ್ಟು ಹೊಸ ಟಾಯ್ಲೆಟ್ ರೆಡಿ ಮಾಡುತ್ತಿದ್ದರು.

ಆ ನಂತರದ ದಿನಗಳಲ್ಲಿ ಟಾಯ್ಲೆಟ್ಟುಗಳು ಮನೆಯ ಒಳಗಡೆಗೆ ಬಂದವು. ಮನೆಗಳ ಹಿಂಬದಿಯಲ್ಲೊಂದು ಗಲ್ಲಿ (ಸಣ್ಣ ಓಣಿ) ಬಿಟ್ಟಿರುತ್ತಿದ್ದರು. ಅವಕ್ಕೆ 'ಕನ್ಸರ್‌ವೆನ್ಸಿ' ಎಂದು ಕರೆಯುತ್ತಿದ್ದರು. ಈ ಟಾಯ್ಲೆಟ್ಟುಗಳಲ್ಲಿ ಗುಂಡಿ ಹೊಡೆಯುತ್ತಿರಲಿಲ್ಲ. ಬದಲಿಗೆ ನೆಲದಲ್ಲಿ ಟಾಯ್ಲೆಟ್ ಬೇಸಿನ್ನುಗಳನ್ನು ಹೂತು ಕೆಳಗಡೆ ಓಪನ್ ಬಿಟ್ಟು ಅಲ್ಲಿ ಮನೆಯ ಗಲ್ಲಿಯ ಕಡೆ ಒಂದು ಒಂದಡಿ ಬೈ

ಒಂದಡಿ ತೂತುಬಿಟ್ಟಿರುತ್ತಿದ್ದರು. ಆ ತೂತಿನಿಂದ ಬೇಸಿನ್ ಕೆಳಕ್ಕೆ ಒಂದು ಮುತ್ತುಗದೆಲೆ ಇಟ್ಟಿರುತ್ತಿದ್ದರು. ದಿನದ ಯಾವುದೋ ವೇಳೆಯಲ್ಲಿ ಒಬ್ಬ ಮನುಷ್ಯ ಬಂದು ಆ ಎಲೆಯನ್ನು ಸರಕ್ಕಂತ ಎಳೆದುಕೊಂಡು ಹೊಸ ಎಲೆ ಇಟ್ಟುಹೋಗುತ್ತಿದ್ದ ಪದ್ಧತಿ ಒಂದು ಐವತ್ತು ವರ್ಷಗಳ ಹಿಂದೆ ನಾನು ಬೆಂಗಳೂರಿನಲ್ಲಿ ನೋಡಿದ್ದೆ. ಕೆಲವೊಮ್ಮೆ ಟಾಯ್ಲೆಟ್ ಬಳಸುತ್ತಿರುವಾಗ ಆ ರೀತಿ ಎಲೆ ಎಳೆದಾಗ ಗಾಬರಿಯಾಗಿ ಎದ್ದುನಿಂತದ್ದೂ ಉಂಟು. ನಂತರದ ದಿನಗಳಲ್ಲಿ ಈ ಮಲಹೊರುವ ಪದ್ಧತಿ ವಿರುದ್ಧ ದೊಡ್ಡ ದನಿ ಕೇಳಿಬಂದ ಹಿನ್ನೆಲೆಯಲ್ಲಿ ಮನೆಮನೆಗಳಲ್ಲಿ ಮುಂಭಾಗದಲ್ಲಿ ಕಾಂಕ್ರೀಟ್ ತೊಟ್ಟಿ (ಸೆಪ್ಟಿಕ್ ಟ್ಯಾಂಕ್)ನಿರ್ಮಿಸಿ ವಿಸರ್ಜನೆಯನ್ನು ಅದರಲ್ಲಿ ಸಂಗ್ರಹಿಸುವ ಪದ್ಧತಿ ಪ್ರಾರಂಭವಾಯಿತು. ಅದು ತುಂಬಿದಾಗ ಆ ಮಲವನ್ನು ಖಾಲಿಮಾಡಿಸುವ ಕಾಯಕಕ್ಕೆ ಮಾತ್ರ ಹಿಂದೆ ಮಲಹೊರುತ್ತಿದ್ದ ಜನರನ್ನೇ ಕರೆಸತೊಡಗಿದರು. ಸಂಗ್ರಹವಾಗಿದ್ದ ಮಲವನ್ನು ಪಕ್ಕದಬಯಲಲ್ಲೋ, ಮನೆಮುಂದಿನ ಬಚ್ಚಲಲ್ಲೋ ಸುರಿದು ಮೂರು ನಾಲ್ಕು ದಿನಗಳು ಮೂಗುಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಆ ಟ್ಯಾಂಕನ್ನು ಖಾಲಿಮಾಡುತ್ತಿದ್ದ ದೃಶ್ಯವಂತೂ ವಾಕರಿಕೆ ಬರುವಂತಹುದು. ಆ ಮನುಷ್ಯನೋ ಪೂರಾ ಕುಡಿದುಬಂದು ಆ ಕೆಲಸ ಮಾಡುತ್ತಿದ್ದನೋ ಏನೋ, ನಾವು ವಿಸರ್ಜಿಸಿದ್ದ ಮಲವನ್ನು ಬಕೀಟುಗಳಲ್ಲೋ ಬಿಂದಿಗೆಗಳಲ್ಲೋ ತುಂಬಿ ತುಂಬಿ ಅಲ್ಲಲ್ಲಿ ಚೆಲ್ಲಿದ್ದ ಅವುಗಳ ಮೇಲೇ ನಡೆದಾಡುತ್ತಾ ಖಾಲಿಮಾಡುತ್ತಿದ್ದ ದೃಶ್ಯ ಕರುಳು ಕಿವುಚುತ್ತಿತ್ತು. ಎಲ್ಲ ಖಾಲಿಯಾದ ಮೇಲೆ ಮತ್ತೆ ಅದರ ಮೇಲೆ ಚಪ್ಪಡಿಮುಚ್ಚಿ ಮಾಡಿದ ಕೆಲಸಕ್ಕೆ ಕೂಲಿಪಡೆದು ಹೋಗಿ ಸ್ನಾನಮಾಡಿ ಮತ್ತೆ ಕಂಠಪೂರ್ತಿ ಕುಡಿದು ಮಲಗಿಬಿಡುತ್ತಿದ್ದನೋ ಏನೋ.

ಈ ಅಂಡರ್‌ಗ್ರೌಂಡ್ ಡ್ರೈನೇಜ್ ಪದ್ಧತಿಬಂದ ಮೇಲೆ, ಆಗಾಗ ಸೆಪ್ಟಿಕ್ ಟ್ಯಾಂಕ್ ಖಾಲಿಮಾಡುವ ಕಾಯಕ ತಪ್ಪಿ, ಅದು ರಸ್ತೆಯ ಮಧ್ಯೆ ಎಲ್ಲಾದರೂ ಕಟ್ಟಿಕೊಂಡಾಗ ಮಾತ್ರ ಅದನ್ನು ತೆಗೆದು ಅಡೆತಡೆಗಳನ್ನು ನಿವಾರಿಸಲು ಪೌರಕಾರ್ಮಿಕರ ಬಳಕೆ ಪಡೆಯುವಂತಾಯಿತು. ವಿಷಯ ಎಲ್ಲೋ ತಿರುವು ತೆಗೆದುಕೊಂಡುಬಿಟ್ಟಿತು ಅಂತ ಕಾಣಿಸುತ್ತೆ.

ಜನರಲ್ಲಿ ಮಾನದ ಬಗೆಗೆ ಜಾಗೃತಿ ಮೂಡತೊಡಗಿ, ಬಯಲುಮುಕ್ತ ಶೌಚಾಲಯ ವ್ಯವಸ್ಥೆ ಮಾಡಬೇಕೆನ್ನುವ ಪ್ರಯತ್ನ ಅಲ್ಲಲ್ಲಿ ನಡೆಯುತ್ತಿತ್ತು. ಅದರಲ್ಲೂ ಹಳ್ಳಿಗಳಲ್ಲಿ ಮನೆಮನೆಗಳಲ್ಲಿ ಶೌಚಾಲಯ ಕಟ್ಟಿಸಿಕೊಳ್ಳುವ, ಕಟ್ಟಿಸಿಕೊಡುವ ಕಾಯಕ ಸರ್ಕಾರದವತಿಯಿಂದ ನಡೆಯಬೇಕೆನ್ನುವ ಒಂದು ರೀತಿಯ ಚಳುವಳಿ

ಶುರುವಾಗಿದ್ದು ನಮ್ಮ ದಿವಂಗತ ಹೂವಿನಹಡಗಲಿ ಶಾಸಕ, ಅಂದಿನ ಸರ್ಕಾರದ ಸಚಿವ ಪ್ರಕಾಶ್‌ರವರಿಂದ ಎಂದು ನನ್ನ ನೆನಪು. ಅವರು ಮನೆಮನೆಗೂ ಕಕ್ಕಸು ಇರಬೇಕು ಎಂಬ ಧೋರಣೆಹೊಂದಿದವರು. ಅದಕ್ಕಾಗಿ ಯೋಜನೆಗಳನ್ನು ರೂಪಿಸಿದವರು. ಎಲ್ಲರೂ ಅವರನ್ನೇ 'ಕಕ್ಕಸು ಪ್ರಕಾಶ್' ಎಂದು ಆಡಿಕೊಂಡಿದ್ದೂ ಉಂಟು. ಇಂದಿನ ಮೋದಿ ಸರ್ಕಾರವೂ ಆ ಯೋಜನೆಯನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಂಡಿದೆ.

ಇನ್ನು ಚಲಿಸುವ ವಾಹನಗಳಲ್ಲಿ ಟಾಯ್ಲೆಟ್ ವಿಚಾರಕ್ಕೆ ಬರೋಣ. ಸಾಮಾನ್ಯವಾಗಿ ಪ್ರಯಾಣಿಕರಿಗೆ ಮಲವಿಸರ್ಜನೆಗೆ ಅವಸರವಾದರೆ ಅನುಕೂಲವಾಗಲೀ ಎಂದು ರೈಲುಗಳಲ್ಲಿ ಟಾಯ್ಲೆಟ್ಟುಗಳನ್ನು ಒದಗಿಸಿರುತ್ತಾರೆ. ಅಲ್ಲೂ ಟಾಯ್ಲೆಟ್ ಬೇಸಿನ್ ಕೆಳಗೆ ಓಪನ್ ಬಿಡುತ್ತಾರೆ. ವಿಸರ್ಜಿಸಿದ ಮಲ ನೇರವಾಗಿ ಕೆಳಗಿನ ಹಳಿಗಳ ನಡುವೆ ನೆಲದ ಮೇಲೇ ಬೀಳುತ್ತಿರುತ್ತದೆ. ನಿಲ್ದಾಣಗಳಲ್ಲಿ ವಾಹನದೊಳಗಿನ ಟಾಯ್ಲೆಟ್ಟುಗಳನ್ನು ಬಳಸದಂತೆ ವಿನಂತಿಸುವುದೇಕೆಂದರೆ ಆ ಮಲ ಅಲ್ಲಿನ ರೈಲುಹಳಿಗಳ ಮಧ್ಯೆಬಿದ್ದು ನಿಲ್ದಾಣದಲ್ಲಿ ಗಬ್ಬು ವಾಸನೆಹರಡಬಾರದೆನ್ನುವ ಕಾರಣಕ್ಕೆ ಅಷ್ಟೆ. ಕೆಲವೊಮ್ಮೆ ನಾನು ಈ ಅಂಡರ್‌ಬ್ರಿಡ್ಜುಗಳ ಮೇಲೆ ರೈಲುಗಳು ಹಾದುಹೋಗುವಾಗ ವಾಹನಸವಾರರು, ಪಾದಚಾರಿಗಳು ದೂರದಲ್ಲೇ ವಾಹನ ನಿಲ್ಲಿಸಿಕೊಂಡು, ರೈಲು ಹಾದುಹೋದನಂತರ ತಮ್ಮ ಸಂಚಾರ ಆರಂಭಿಸುವುದನ್ನು ಗಮನಿಸಿದ್ದೇನೆ. ಅವರೇನು ರೈಲು ಹಾದುಹೋಗುವುದನ್ನು ನೋಡಲು ಕುತೂಹಲ ಹೊಂದಿರುವವರೋ, ರೈಲಿನಲ್ಲಿನ ಪ್ರಯಾಣಿಕರನ್ನು ನೋಡಿ ಸಂತೋಷಿಸುವವರೋ ಇರಬೇಕು, ಅಥವಾ ರೈಲೇನಾದರೂ ಹಳಿತಪ್ಪಿಬಿದ್ದು ತಮಗೇನಾದರೂ ಅಪಾಯ ಸಂಭವಿಸಬಾರದೆನ್ನುವ ಮುನ್ನೆಚ್ಚರಿಕೆ ಹೊಂದಿದ್ದವರೋ ಇರಬೇಕು ಎಂದುಕೊಂಡಿದ್ದುಂಟು. ಆದರೆ ನಿಜ ಸಂಗತಿ ಏನೆಂದರೆ ಆ ಸಮಯದಲ್ಲಿ ವಿಸರ್ಜಿಸಬಹುದಾದ ಮಲವು ತಮ್ಮ ಮೇಲೆ ಬೀಳಬಾರದೆಂಬ ಮುನ್ನೆಚ್ಚರಿಕೆಯಿಂದ ಈ ಕ್ರಮ ಎಂದು ನನಗೆ ಈಗನ್ನಿಸತೊಡಗಿದೆ.

ಇನ್ನು ವಿರೋಪ್ಲೇನುಗಳಲ್ಲೂ ಮನೆಗಳಲ್ಲಿಯಂತೆಯೇ ಒಂದು ಮಲಸಂಗ್ರಹಾಗಾರ ಮಾಡಿರುತ್ತಾರೆ. ವಿರೋಪ್ಲೇನುಗಳು ನಿಲ್ದಾಣದಲ್ಲಿ ನಿಂತಕೂಡಲೇ ಒಂದೆಡೆ ಪ್ರಯಾಣಿಕರು, ಮತ್ತೊಂದೆಡೆ ಅವರ ಸಾಮಾನು ಸರಂಜಾಮುಗಳನ್ನು ಇಳಿಸುವ ಸಮಯದಲ್ಲಿಯೇ, ಮತ್ತೊಂದೆಡೆ ಸಂಗ್ರಹವಾಗಿದ್ದ ಮಲವನ್ನೂ ಯಂತ್ರಗಳ ಸಹಾಯದಿಂದ ಖಾಲಿಮಾಡಲಾಗುತ್ತದೆ.ರಾಕೆಟ್ಟುಗಳಲ್ಲಿನ

ಮತ್ತು 'ಅಂಬಾನಿ'ಯ(ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ)ಟಾಯ್ಲೆಟ್ಟುಗಳದ್ದು ವಿಶಿಷ್ಟ ಬಗೆ. ಅದರಲ್ಲೂ ನಿರ್ವಾತ ವಾತಾವರಣ ಇರುವುದರಿಂದ ಸ್ವಲ್ಪ ಏಮಾರಿದರೂ, ವಿಸರ್ಜಿತ ಮಲವೇ ತೇಲಾಡತೊಡಗುತ್ತದೆ. ಅದಕ್ಕಾಗಿ ಅಲ್ಲಿ ಸಕ್ಕಿಂಗ್ ಮೆಥಡ್ ಬಳಸಲಾಗುತ್ತದಂತೆ. ವಿಸರ್ಜಿತ ಮಲವನ್ನು ಒಳಕ್ಕೆಳೆದುಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಗಗನಯಾತ್ರಿ ಸುನೀತಾ ವಿಲಿಯಮ್ಸ್ ಒಂದು ವಿಡಿಯೋದಲ್ಲಿ ವಿವರಣೆ ನೀಡಿದುದು ನೆನಪಿಗೆ ಬರುತ್ತಿದೆ. ಈ ರೀತಿ ಮನೆಹೊರಗಿದ್ದ ಟಾಯ್ಲೆಟ್ಟುಗಳು ಇಂದು ಮನೆಯೊಳಕ್ಕೆ ಅದರಲ್ಲೂ ಕೊಠಡಿಗಳೊಳಕ್ಕೆ ಬಂದುಬಿಟ್ಟಿವೆ. ಅಟಾಚ್ಡ್ ಟಾಯ್ಲೆಟ್ಟುಗಳು ಎನ್ನುವ ಹೆಸರಿನಲ್ಲಿ ಒಂದು ಮನೆಗೆ ಒಂದು ಟಾಯ್ಲೆಟ್ ಅನ್ನುವ ಕಲ್ಪನೆ ಹೋಗಿ, ಪ್ರತಿಮನೆಯಲ್ಲೂ ಮೂರರಿಂದ ನಾಲ್ಕು ಟಾಯ್ಲೆಟ್ಟುಗಳು ಇರತೊಡಗಿವೆ. ದೇವಸ್ಥಾನಗಳಲ್ಲೂ ಟಾಯ್ಲೆಟ್ಟುಗಳು. ಹೆಚ್ಚಿನ ಮನೆಗಳಲ್ಲಿ ದೇವರ ಕೋಣೆಯ ಹಿಂದಿನಲ್ಲೇ ಟಾಯ್ಲೆಟ್ಟು ನಿರ್ಮಾಣವಾಗಿರುತ್ತದೆ. ಸ್ಪೇಸ್ ಸೇವಿಂಗ್ ಟೆಕ್ನಿಕ್!

ಟಾಯ್ಲೆಟ್ಟುಗಳೆಂದರೆ ಅಸಹ್ಯಪಟ್ಟುಕೊಳ್ಳುವ ದಿನಗಳು ದೂರವಾಗಿವೆ. ಅದಕ್ಕೆ ಹೊಸ ಹೆಸರು 'ವಾಶ್ ರೂಂ' ಅಂತಾಗಿದೆ. ಮನೆಯ ಇತರ ಭಾಗಗಳಂತೆ ಟಾಯ್ಲೆಟ್ಟುಗಳೂ ನೋಡಬೇಕಾದ ಪ್ರಮುಖ ಸ್ಥಳವಾಗಿದೆ. ಟೀವೀ ಜಾಹಿರಾತುಗಳಲ್ಲಿ ಟಾಯ್ಲೆಟ್ ಸ್ವಚ್ಛಮಾಡುವ ರಾಸಾಯನಿಕ ದ್ರಾವಣಗಳಿಗೆ ಪ್ರಖ್ಯಾತ ನಟ, ನಟಿಯರೆಲ್ಲಾ ಪ್ರಚಾರಕರಾಗಿ ಕಾಣಿಸಿಕೊಳ್ಳುತಿದ್ದಾರೆ. ನಮ್ಮ ಪ್ರತಿಭಾವಂತ ನಾಟಕ ಸೀರಿಯಲ್ ನಿರ್ದೇಶಕ, ನಟ ಎಸ್.ಎನ್. ಸೇತೂರಾಂ ಒಂದು ಧಾರಾವಾಹಿಯಲ್ಲಿ ಪಾತ್ರದ ಮೂಲಕ ಹೇಳಿಸುವ ಸಂಭಾಷಣೆ 'ಎಷ್ಟೇ ಲಕ್ಷ ಖರ್ಚುಮಾಡಿ ಕಟ್ಟಿಸಿದರೂ ಟಾಯ್ಲೆಟ್ಟಿನಲ್ಲಿ ಮಾಡುವ ಕೆಲಸ ಅದೇ ಅಲ್ಲವೇ' ಬಹಳ ಅರ್ಥಗರ್ಭಿತವಾಗಿದೆ. ವಿಸರ್ಜಿಸಿದ ನಮ್ಮ ದೇಹದ ಭಾಗವನ್ನು ಸ್ವಚ್ಛಗೊಳಿಸುವ ಕ್ರಿಯೆ ಇನ್ನೂ ಯಾಂತ್ರೀಕರಣಗೊಂಡಿಲ್ಲ ಎನಿಸುತ್ತದೆ. ಅದಕ್ಕೂ ಒಂದು ಪ್ರಯತ್ನ ಆಗಿತ್ತು. ನೀರು ಬಿಟ್ಟುಕೊಳ್ಳಲು ಫಾಸೆಟ್ ಬಂದಿದೆ. ಅದೂ ಆಗದವರಿಗೆಂದು ಪಕ್ಕದಲ್ಲಿರುವ ಲಿವರ್ ಕಾಲಿನಿಂದ ತುಳಿದರೆ ನೀರು ನೇರವಾಗಿ ಸ್ವಚ್ಛಗೊಳಿಸಬೇಕಾದ ಸ್ಥಳಕ್ಕೆ ಚಿಮ್ಮಿ ಸ್ವಚ್ಛಕಾರ್ಯ ಪೂರ್ಣಗೊಳ್ಳುತ್ತದೆ. ಅದು ಜನಪ್ರಿಯಗೊಳ್ಳಲಿಲ್ಲ ಅಷ್ಟೆ. ವಿದೇಶಗಳಲ್ಲಿ ತೊಳೆದು ಸ್ವಚ್ಛಮಾಡಿಕೊಳ್ಳುವ ಬದಲಿಗೆ ಟಿಶ್ಯೂ ಪೇಪರ್ ಬಳಸುತ್ತಾರೆ.

ಈಚೀಚೆಗೆ ಕುಕ್ಕರುಗಾಲಿನಲ್ಲಿ ಕುಳಿತು ಮಲವಿಸರ್ಜನೆಮಾಡುವುದೇ ಅಪರೂಪ ಆಗಿಹೋಗಿದೆ. ಎಲ್ಲರೂ ವೆಸ್ಟರನ್ ಕಮೋಡ್ ಮೊರೆಹೋಗಿದ್ದಾರೆ. ಕುರ್ಚಿಯಲ್ಲಿ

ಕುಳಿತಂತೆ ಕುಳಿತು ಮಲವಿಸರ್ಜನೆಮಾಡುವುದು ದೊಡ್ಡವರಿಂದ ಚಿಕ್ಕಮಕ್ಕಳವರೆವಿಗೂ ಸಾಮಾನ್ಯ. ಅಂತೆಯೇ ಆರ್ಥ್ರೈಟಿಸ್ ಇಲ್ಲದವರೂ ಕಮೋಡ್ ಬಳಸುತ್ತಾರೆ. ನಮ್ಮವರು ಅಲ್ಲಿಗೆ ಹೋದಾಗ ಅನುಭವಿಸುವ ಹಿಂಸೆ, ಮುಜುಗರ ಈ ಕಾರಣಕ್ಕೂ ಉಂಟು. ನೀರು ಅಲಭ್ಯವಾದ ಕಡೆಗಳಲ್ಲಿ ಈ ಒರಸುವಿಕೆಗೆ ಒಗ್ಗಿಕೊಳ್ಳಲೇಬೇಕೇನೋ. ಪ್ರಾಣಿಗಳೇನು ಮಲವಿಸರ್ಜನೆಯ ನಂತರ ನಮ್ಮನಿಮ್ಮಂತೆ ತೊಳೆದು ಸ್ವಚ್ಛಮಾಡಿಕೊಳ್ಳುತ್ತವೆಯೇ ಎಂದು ಪ್ರಶ್ನಿಸಲೂಬಹುದು. ಭಾರತೀಯರಾದ ನಮಗಂತೂ ನೀರಿನಿಂದ ತೊಳೆದುಕೊಳ್ಳುವುದೇ ಸಮಾಧಾನದ ವಿಷಯ. ಏನಂತೀರಿ?

ಟಾಯ್ಲೆಟ್ಟುಗಳಲ್ಲಿ ಹೊಸಹೊಸ ಆವಿಷ್ಕಾರಗಳು ನಡೆಯುತ್ತಿವೆ. ಬಯೋ ಡಿಗ್ರೇಡಬಲ್ ಟಾಯ್ಲೆಟ್, ಇಂಟೆಲಿಜಂಟ್ ಟಾಯ್ಲೆಟ್ ಅತ್ಯಾಧುನಿಕವಾದವು. ನೀರಿನ ಅವಶ್ಯಕತೆಯನ್ನೇ ಇಲ್ಲವಾಗಿಸಿ ರಾಸಾಯನಿಕಗಳಿಂದ ಮಲವನ್ನು ಇಲ್ಲವಾಗಿಸುವ, ನಾವು ಅದರ ಬಳಿ ಹೋಗುತ್ತಿದ್ದಂತೆಯೇ ಬಾಯಿ ತೆರೆದುಕೊಂಡು ನಮ್ಮ ಶೌಚಕಾರ್ಯ ಮುಗಿಸಿದ ಬಳಿಕ ತನ್ನಷ್ಟಕ್ಕೆ ತಾನೇ ಮುಚ್ಚಿಕೊಂಡು ವಾತಾವರಣವನ್ನು ಸುವಾಸನಾಯುಕ್ತ ಆಗಿಸುವ ತಂತ್ರಗಾರಿಕೆಯನ್ನು ಅಳವಡಿಸಲಾಗಿದೆ ಎನ್ನಲಾಗಿದೆ. ಈ ರೀತಿಯ ಟಾಯ್ಲೆಟ್ಟುಗಳನ್ನು ವಿಮಾನಗಳು, ಐಷಾರಾಮಿ ಬಸ್ಸುಗಳು, ರೈಲುಗಳಲ್ಲಿ ಅಳವಡಿಸಲಾಗುತ್ತಿದೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋದ ಸಮಾಜಗಳಲ್ಲಿ ನಾವು ಬೆಡ್ ರೂಮು, ಅಡುಗೆಮನೆಗೆ ಕೊಡುವ ಪ್ರಾಮುಖ್ಯತೆಯನ್ನೇ ಟಾಯ್ಲೆಟ್‌ಗಳಿಗೂ ನೀಡುವ ಕಾಲಬಂದಿದೆ. ಮನೆಗೆ ಬಂದವರಿಗೆ ಇತರ ಕೋಣೆಗಳಿಗೆ ಕರೆದುಕೊಂಡುಹೋಗಿ ತೋರಿಸುವಂತೆ ಟಾಯ್ಲೆಟ್ಟುಗಳನ್ನೂ ತೋರಿಸುವುದು ಒಂದು ಹೆಗ್ಗಳಿಕೆ ವಿಷಯವಾಗುತ್ತಿದೆ. ನಾನು ಓದಿದ ಒಂದು ಕಥೆಯಲ್ಲಿ ಮುಖ್ಯ ಹಜಾರದಲ್ಲೇ ಒಂದು ಮೂಲೆಯಲ್ಲಿ ಕಮೋಡ್ ಸ್ಥಾಪಿಸಲಾಗಿರುತ್ತದೆ. ಬಂದ ಅತಿಥಿಗಳಿಗೆ ಆಶ್ಚರ್ಯ ಹಾಗೂ ಮುಜುಗರ ಒಟ್ಟಿಗೇ ಆಗುತ್ತದೆ. ಎಲ್ಲರ ಮುಂದೆ ಮಲವಿಸರ್ಜನೆ ಮಾಡುವುದಾದರೂ ಹೇಗೆ ಎಂಬ ಕುತೂಹಲಕರ ಪ್ರಶ್ನೆಗೆ ಕಥಾ ನಾಯಕ ನೀಡುವ ಉತ್ತರ. "ಹಾಗೇನಿಲ್ಲ, ನಾವು ಮಲವಿಸರ್ಜನೆಗೆ ಹೋಗುತ್ತಿರುವಂತೆಯೇ ತಾರಸಿಯಿಂದ ಒಂದು ಅಪಾರದರ್ಶಕ ಪರದೆ ಕೆಳಕ್ಕಿಳಿದು ಅದನ್ನು ಸುತ್ತುವರಿಯುತ್ತದೆ. ನಮ್ಮ ಶೌಚಕಾರ್ಯ ಮುಗಿಸಿದ ನಂತರ ಹೊರಬರುತ್ತಿದ್ದಂತೆ ಪರದೆ ಮೇಲೆ ಸರಿದುಹೋಗುತ್ತದೆ." ಇನ್ನೂ ಏನೇನು ಸುಧಾರಣೆಗಳು ಮುಂದೆ ಬರುವುದೋ ಕಾದುನೋಡಬೇಕು. ಇವೆಲ್ಲದರ ನಡುವೆ

ಮತ್ತೆ ಕುಕ್ಕರುಗಾಲಿನಲ್ಲಿ ಕುಳಿತು ಮಲವಿಸರ್ಜನೆ ಮಾಡುವುದೇ ಅತ್ಯುತ್ತಮ ಎಂಬ ವಾದಮಂಡನೆಯಾಗುತ್ತಿದೆ. ಇಂಡಿಯನ್ ಕಮೋಡ್ ಬಳಸಲಾಗದವರು, ವೆಸ್ಟರನ್ ಕಮೋಡಿನ ಮೇಲೆ ಕುಳಿತು ಕಾಲನ್ನು ಒಂದು ಪುಟ್ಟ ಸ್ಟೂಲ್ ಮೇಲೆ ಇಟ್ಟುಕೊಳ್ಳಲು ಸಲಹೆ ನೀಡಲಾಗುತ್ತಿದೆ. ಮತ್ತೆ ಟಾಯ್ಲೆಟ್ಟುಗಳು ಮನೆಯಂಗಳ-ದಿಂದ ಹೊರಹೋಗುವ ಕಾಲವೂ ಬರಬಹುದೇನೋ!

9–8–2016

* * * * *

ಲೇಖನ - 22

# ಕಾತರ

ನಾವು ಪ್ರತಿನಿತ್ಯ ಒಂದಲ್ಲ ಒಂದು ಅಪಘಾತದ ಸುದ್ದಿಯನ್ನು ಓದುತ್ತಿರುತ್ತೇವೆ/ಕೇಳುತ್ತಿರುತ್ತೇವೆ. ಆದರೆ ಅದರ ಪರಿಣಾಮ ನಮ್ಮ ಮೇಲೆ ಆಗುವುದೇ ಇಲ್ಲ. ಅಹಿಂಸಾ ಪರಮೋ ಧರ್ಮಃ ಎಂದು ಹೇಳುತ್ತಲೇ ಪ್ರತಿಕ್ಷಣ ನಾವು ಎಷ್ಟೊಂದು ಜೀವಿಗಳನ್ನು ಅರಿತೋ ಅರಿಯದೆಯೋ ಕೊಲ್ಲುತ್ತಲೇ ಹೋಗುತ್ತಿರುತ್ತೇವೆ. ಆಗಲೂ ನಮಗೆ ಏನೂ ಅನ್ನಿಸುವುದೇ ಇಲ್ಲ. ಉದಾಹರಣೆಗೆ ಸೊಳ್ಳೆಗಳನ್ನು ಸಂಹಾರಮಾಡಲು ನಾವು ಬಳಸುತ್ತಿರುವ ಕರೆಂಟ್ ಬ್ಯಾಟು. ಹಿಂದೆ ಅಮಾನುಷ ಹಿಂಸಾಕೃತ್ಯ ಎಸಗಿದ ಅಪರಾಧಕ್ಕೆ ಎಲೆಕ್ಟ್ರಿಕ್ ಚೇರಿನಲ್ಲಿ ಕೂಡಿಸಿ, ಕರೆಂಟ್ ಹರಿಸಿ ಕೊಲ್ಲಲಾಗುತ್ತಿತ್ತು ಎಂದು ಕೇಳಿದ್ದೇವೆ. ಒಂದು ಜೀವಿಗೆ ಕರೆಂಟ್ ಕೊಟ್ಟು ಕೊಲ್ಲುವುದು ಎಂತಹ ಹೀನ ಹೇಯಕರ ಕೃತ್ಯ. ಈ ಸೊಳ್ಳೆ ಸಂಹಾರ ಬ್ಯಾಟಿನ ಮೂಲಕ ನಾವು ಮಾಡುತ್ತಿರುವುದಾದರೂ ಏನು? ಇದು ಅದೇ ತರಹ ಹಿಂಸೆ. ಆ ಪಾಪದ ಸೊಳ್ಳೆಯನ್ನು ನಿವಾರಿಸಿಕೊಳ್ಳುವ ಸಲುವಾಗಿ ಈಗ ಮನೆಮನೆಯಲ್ಲೂ ಈ ಸೊಳ್ಳೆ ಬ್ಯಾಟುಗಳನ್ನು ಬೀಸಲಾಗುತ್ತಿದೆ. ಅಮಾಯಕ ಕೆಲವೊಮ್ಮೆ ನಿರುಪದ್ರವಿ ಸೊಳ್ಳೆಗಳೂ ಆ ಕರೆಂಟಿನ ಶಾಕಿಗೆ ಸಿಲುಕಿ ಸುಟ್ಟು ಸತ್ತುಹೋಗುತ್ತಿವೆ. ನಮಗೆ ಏನೂ ಅನ್ನಿಸುವುದಿಲ್ಲ, ಕಾರಣ ನಮ್ಮ ಮನದಲ್ಲಿ ಸೊಳ್ಳೆ ಮಲೇರಿಯಾ, ಡೆಂಗ್ಯೂ ಮುಂತಾದ ಭಯಾನಕ ರೋಗಗಳನ್ನು ಹರಡುವ ಜೀವಿ. ಆ ಸೊಳ್ಳೆಯ ಸ್ಥಾನದಲ್ಲಿ ಆ ಬ್ಯಾಟಿಗೆ ಸಿಗುವ ಕ್ಷಣದಲ್ಲಿ ನಮ್ಮನ್ನು ನಾವೇ ಕಲ್ಪಿಸಿಕೊಂಡಲ್ಲಿ ಆ ಯಾತನೆ, ಆ ಮರಣ ಸಹಿಸಿಕೊಳ್ಳಲಾದೀತೇ. ಅಂತೆಯೇ ನಡೆದಾಡುವಾಗ

ಕಾಲಿಗೆ ಸಿಕ್ಕಿ ಸಾಯುವ ಇರುವೆಗಳು, ಕಣ್ಣಿಗೆ ಬಿದ್ದಕೂಡಲೆ ಪೊರಕೆಸೇವೆ ಪಡೆದು ನಿತ್ರಾಣವಾಗುವ ಜಿರಲೆಗಳು ಹೀಗೇ ನಮ್ಮ ಈ ಸಂಹಾರ ಪುರಾಣ ಮುಂದುವರೆಸಬಹುದು. ಅಹಿಂಸಾ ಪರಮೋಧರ್ಮಃ ಎನ್ನುವ ತತ್ವದಲ್ಲಿ ನಂಬಿಕೆಯಿಟ್ಟಿರುವ ಜೈನ ಯತಿಗಳು ಬಾಯಿಗೆ ಬಟ್ಟೆಕಟ್ಟಿಕೊಂಡು ನಡೆಯುತ್ತಾರೆ. ವಾಹನಗಳನ್ನು ಬಳಸದೇ ನಡೆದುಕೊಂಡೇ ಊರಿಂದ ಊರಿಗೆ ಪ್ರಯಾಣಬೆಳೆಸುತ್ತಾರೆ; ಅವರ ಕಾಲಿನಕೆಳಗೂ ಸಿಕ್ಕಿ ಸಾಯುವ ಕೀಟಗಳು ಇರಲಾರವೆಂದು ನಂಬಲು ಸಾಧ್ಯವೇ?

ಈಚೀಚೆಗಂತೂ ವೃತ್ತ ಪತ್ರಿಕೆಗಳು ಒಂದೆರಡು ಪುಟಗಳನ್ನೇ ಅಪರಾಧ ಸುದ್ದಿಗಳಿಗಾಗಿ ಮೀಸಲಿಡತೊಡಗಿವೆ. ಅಂದರೆ ಅಷ್ಟೊಂದು ಅಪರಾಧಗಳು ಪ್ರತಿನಿತ್ಯ ಜರುಗುತ್ತಿವೆ ಎಂದಂತಾಯಿತು. ನಮಗೂ ಮೊದಮೊದಲು ಕುತೂಹಲ ಇರುತ್ತಿತ್ತು, ಇತರ ಸುದ್ದಿಗಳ ಕಡೆಗೆ ಗಮನ ಹರಿಸುವುದಕ್ಕೆ ಮೊದಲು ಈ ಅಪರಾಧ ಜಗತ್ತಿನ ಚಟುವಟಿಕೆಗಳನ್ನು ಒಮ್ಮೆ ಅರಿತುಕೊಳ್ಳಬೇಕು ಎಂಬುದು. ಇಲ್ಲಿ ಅಪರಾಧಗಳ ಅರಿವಿಗಿಂತ ನಮ್ಮ ರಕ್ಷಣಾ ವ್ಯವಸ್ಥೆ ಎಷ್ಟು ಮಟ್ಟಿಗೆ ಸಶಕ್ತವಾಗಿದೆ ಎಂಬ ವಿಚಾರವೂ ಕುತೂಹಲಕರವಾದುದು. ಎಷ್ಟು ಅಪರಾಧಗಳು ಜರುಗಿದವು, ಅವುಗಳಲ್ಲಿ ಎಷ್ಟು ಅಪರಾಧಗಳು ಪತ್ತೆಯಾದವು, ಎಷ್ಟು ಅಪರಾಧಿಗಳಿಗೆ ಶಿಕ್ಷೆಯಾಯಿತು ಎಂಬುದು ನಮ್ಮ ಕುತೂಹಲ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಅಪರಾಧಗಳೇ ಬೆಳಕಿಗೆ ಬರುತ್ತಿರುವುದಿಲ್ಲ; ಅಪರಾಧಗಳು ವರದಿಯಾದರೂ ಅವುಗಳ ಬೆನ್ನಟ್ಟಿಹೋದ ಪೋಲೀಸಿನವರಿಗೆ ಅವುಗಳ ಜಾಡೇ ಸಿಗುತ್ತಿಲ್ಲ; ಅಪರಾಧಿಗಳು ಯಾರೆಂಬುದು ತಿಳಿದರೂ ಅವರುಗಳನ್ನು ಹಿಡಿದು ಅವರ ಮೇಲೆ ಕಾನೂನಿನ ಕ್ರಮ ಜರುಗಿಸಲು ಹೋದರೆ ರಾಜಕೀಯ ಮತ್ತು ಇತರೇ ಒತ್ತಡಗಳಿಂದ ಕ್ರಮ ಜರುಗಿಸುವುದೇ ಅನುಮಾನ; ಅಪ್ಪಿತಪ್ಪಿ ಕ್ರಮ ಜರುಗಿಸಹೊರಟಾಗ ಅಪರಾಧಿಗಳಿಗೆ ನಮ್ಮ ಬುದ್ಧಿವಂತ ವಕೀಲರಿಂದ ಶಿಕ್ಷೆ ತಪ್ಪಿಸಲು ಸರ್ವಸಕಲ ಪ್ರಯತ್ನ. ಕಾನೂನಿನ ನಾಣ್ಣುಡಿ 'ನೂರು ಜನ ಅಪರಾಧಿಗಳು ತಪ್ಪಿಸಿಕೊಂಡರೂ ಪರವಾಗಿಲ್ಲ, ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು' ಎಂಬ ತತ್ವ ಅಕ್ಷರಷಃ ಪಾಲನೆಗೆ ಪ್ರಯತ್ನ, ನಿಜ ನೂರು ಜನ ಅಪರಾಧಿಗಳು ಈ ತತ್ವದ ಆಧಾರದ ಮೇಲೇ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ.

ಮೇಲಿನ ಘಟನೆಗಳನ್ನು ಹೇಳುವ ಹಿಂದೆ ನನ್ನ ಉದ್ದೇಶವೇ ಬೇರೆಯದಾಗಿದೆ. ಅಕಸ್ಮಾತ್ ಈ ಅಪರಾಧಗಳು, ಅಪಘಾತಗಳು ನಮ್ಮ ಬಂಧುಗಳಿಗೇ ಸಂಭವಿಸಿದ್ದಲ್ಲಿ ನಮ್ಮ ಪ್ರತಿಕ್ರಿಯೆ ಮೇಲಿನ ಪ್ರತಿಕ್ರಿಯೆಗಳಂತೆ ಇರುತ್ತಿತ್ತೇ? ಖಂಡಿತಾ ಉತ್ತರ ಇಲ್ಲಾ ಎಂದೇ ಬರುತ್ತದೆ. ಎಲ್ಲೋ ಒಂದು ರೈಲು ಹಳಿತಪ್ಪಿ ಹಲವಾರು

ಮಂದಿ ಅಸುನೀಗಿದರು ಇನ್ನೆಷ್ಟೋ ಮಂದಿ ಗಾಯಗೊಂಡರು ಎಂದು ಪತ್ರಿಕೆಯಲ್ಲೋ ಟೀವಿಯಲ್ಲೋ ನಮ್ಮ ಗಮನಕ್ಕೆ ಬಂದಾಗ ನಮ್ಮ ಪ್ರತಿಕ್ರಿಯೆ ಯಾವ ರೀತಿ ಇರುತ್ತದೆಯೋ, ಅದೇ ರೈಲಿನಲ್ಲಿ ನಮ್ಮ ಹತ್ತಿರದ ಸಂಬಂಧಿಗಳು ಪ್ರಯಾಣಿಸುತ್ತಿದ್ದ ಪಕ್ಷದಲ್ಲಿ ನಮ್ಮ ಕಾತರ ಹೇಗೆ ಬದಲಾಗಿರುತ್ತದೆ? ಅದು ಬೇಡ, ನಮ್ಮ ಹತ್ತಿರದ ಆತ್ಮೀಯರು ಪರವೂರಿನಿಂದ ಬರುತ್ತಿದ್ದಾರೆ ಎಂಬ ವಿಚಾರ ತಿಳಿದುಬಂದಾಗ ಅವರು ಮನೆತಲುವುದು ಮಾಮೂಲಿಗಿಂತ ತಡವಾದ ಸಮಯದಲ್ಲಿ ನಮ್ಮ ಮನದ ಕಾತರ ಹೇಗಿರುತ್ತದೆ ಕಲ್ಪಿಸಿಕೊಳ್ಳಿ, ಈಗಿನ ದಿನಗಳಲ್ಲಂತೂ ಮನೆಬಿಟ್ಟ ಮಂದಿ ಮರಳಿ ಮನೆಗೆ ವಾಪಸಾಗುವ ತನಕ ವಾಪಸು ಬರುವರೆಂಬ ಖಾತ್ರಿ ಇರುವುದಿಲ್ಲ. ಇನ್ನೇನು ಮನೆತಲುಪಿದೆವು ಎನ್ನುವ ಕ್ಷಣದಲ್ಲಿಯೇ ಏನೋ ಎಡವಟ್ಟಾಗಿ ಅದು ತೀವ್ರ ಸ್ವರೂಪದ ಅಪಘಾತ ರೂಪ ಪಡೆದರೂ ಆಶ್ಚರ್ಯ ಪಡಬೇಕಾಗಿಲ್ಲ. ಉದಾ: ಮಂಗಳೂರಿನ ವಿಮಾನ ಅಪಘಾತ ತಂದೆತಾಯಿಯರಿಗೆ ಇರುವ ಆತಂಕ ಅವರ ಮಕ್ಕಳಿಗಿರುವುದಿಲ್ಲ. ಅವರು ಹೊರಟರು ಎಂಬ ಕ್ಷಣದಿಂದ ಆಗಾಗ್ಗೇ ಎಲ್ಲಿಗೆ ತಲುಪಿದರು ಎಂಬ ಬಗೆಗೆ ಇವರು ವ್ಯಕ್ತಪಡಿಸುವ ಕುತೂಹಲ, ಕಾಳಜಿ ಆ ಮಕ್ಕಳಿಗೆ ಹೇಗೆ ತಿಳಿಯಬೇಕು? ಪರವೂರಿನಲ್ಲಿರುವ ಮಕ್ಕಳು ವಾರಕ್ಕೊಮ್ಮೆಯಾದರೂ ಉಭಯಕುಶಲೋಪರಿ ವಿಚಾರಿಸದಿದ್ದಾಗಲೂ ಅದೇ ರೀತಿಯ ಆತಂಕ ಹೆತ್ತವರಿಗೆ ಇರುತ್ತದೆ. ಆದೇ ಆ ಮಕ್ಕಳಿಗೆ! ಏನೂ ಅನ್ನಿಸದೇ ಇರಬಹುದು. ಅವರ ಆಲೋಚನಾ ರೀತಿಯೇ ಬೇರೆ. ನಾವು ಫೋನ್ ಮಾಡದಿದ್ದಲ್ಲಿ ಏನೂ ತೊಂದರೆಯಾಗಿಲ್ಲ ಎಂದೇ ಅರ್ಥಮಾಡಿಕೊಳ್ಳಿ, ನೀವೇನೋ ಎಲ್ಲ ಮುಗಿಸಿ, ಏನೂ ಕೆಲಸವಿಲ್ಲದೇ ಸುಮ್ಮನೆ ಕುಳಿತಿರುತ್ತೀರಿ, ನಾವು ಹಂಗಲ್ಲವಲ್ಲ, ನಮಗೆ ಬೇರೆ ಕೆಲಸಕಾರ್ಯಗಳಿರುತ್ತವೆ. ನಮಗೆ ಬಿಡುವು ಸಿಕ್ಕಾಗ ನಾವೇ ನಿಮ್ಮನ್ನು ಸಂಪರ್ಕಿಸುತ್ತೇವೆ, ನೀವು ನಮ್ಮ ಚಿಂತೆಬಿಟ್ಟು ಆರಾಮವಾಗಿರಿ, ಇದು ಅವರ ಆಲೋಚನಾ ಲಹರಿ. ಆದರೆ ಹೆತ್ತವರಿಗೆ, ವಾರಕ್ಕೊಮ್ಮೆ ತಮ್ಮ ಮಕ್ಕಳ ಕ್ಷೇಮಸಮಾಚಾರ ತಿಳಿದರೆ, ಏನೋ ಮನಸ್ಸಿಗೆ ಸಮಾಧಾನ, ಸಂತೋಷ. ವಾರಕ್ಕೊಮ್ಮೆಯಾದರೂ ಅವರ ಧ್ವನಿ ಕೇಳಿದರೆ ನಮಗೆ ಆಗುವ ಸಂತೋಷ ಅವರಿಗೆ ಹೇಗೆ ತಿಳಿಯಬೇಕು? ಸ್ನೇಹಿತರು ತಮ್ಮ ಮಕ್ಕಳು ಪ್ರತಿನಿತ್ಯ ತಮ್ಮೊಂದಿಗೆ ಮಾತನಾಡುತ್ತಿರುತ್ತಾರೆ ಎಂದಾಗ ನಮ್ಮ ಮನಸ್ಸಿಗೆ ನಮ್ಮ ಮಕ್ಕಳೂ ಹೀಗೇ ಆಗಾಗ್ಗೇ ಮಾತನಾಡಿದರೆ ಎಷ್ಟು ಚೆನ್ನ ಎನ್ನಿಸದಿರದು. ಆದರೆ ಅದು ಅವರವರು ಪಡೆದ ಪುಣ್ಯ, ನಮಗೆ ಆ ಅದೃಷ್ಟವಿಲ್ಲ ಎಂದುಕೊಂಡು ನಮಗೆ ನಾವೇ ಸಮಾಧಾನ ಮಾಡಿಕೊಳ್ಳುವುದು ಬಿಟ್ಟು ಇನ್ನೇನು ದಾರಿಯಿದೆ, ಬಲ್ಲವರು ತಿಳಿಸುವಿರಾ?

ನಾವು ಅವರ ಕಾರಣದಿಂದಾಗಿ ಪಡುವ ಆತಂಕ ಅವರಿಗೆ ತಿಳಿಯುವುದಾದರೂ ಯಾವಾಗ? ಅವರು ನಮ್ಮಂತೆ ಹಿರಿಯರಾದಾಗ! ಅವರ ಮಕ್ಕಳು ಹೊರಹೋಗಿ ಮಾಮೂಲಿ ಸಮಯಮೀರಿದರೂ ವಾಪಸಾಗದೇ ಇದ್ದಾಗ ಆ ಆತಂಕ ಅವರನ್ನೂ ಕಾಡಬಹುದೇ ಅಥವಾ ನಾವು ನಮ್ಮ ಮಕ್ಕಳಲ್ಲಿ ತೋರುತ್ತಿರುವ ವಾತ್ಸಲ್ಯ ಮಮಕಾರ ಅವರನ್ನು ಕಾಡುವುದೇ ಇಲ್ಲವೇ? ಪ್ರಾಣಿಪ್ರಪಂಚದಲ್ಲೂ ತಮ್ಮ ಮರಿಗಳ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ ನಿದರ್ಶನಗಳನ್ನು ನಾವು ಕಾಣುವುದಿಲ್ಲವೇ? ತಮ್ಮ ಮರಿಗಳು ಕಾಣದಾದಾಗ ಕೂಗಿ ರಂಪಾಟಮಾಡುವ ತಾಯಂದಿರನ್ನು ನಾವು ನೋಡಿಲ್ಲವೇ? ಈ ರೀತಿ ಪ್ರಾಣಿಗಳಲ್ಲಿ ಕಾಣುವ "ಮಾನವ ಸಹಜ ಗುಣಗಳು" ನಮ್ಮ ಮಕ್ಕಳಲ್ಲಿ ಕಡಿಮೆಯಾಗುತ್ತಿವೆಯೇ? ಕಾದುನೋಡಬೇಕು. ಆದರೆ ಕಾಯುವ ಚೈತನ್ಯ, ಕಾಲಾವಕಾಶ ನಮಗೆ ಇರುತ್ತದೆಯೇ? ಉತ್ತರ ನಿಸರ್ಗದಲ್ಲೇ ಅಡಗಿದೆ. ಕಾಲಾಯ ತಸ್ಮೈ ನಮಃ ! ಈ ಸಂದಿಗ್ಧ ಹೀಗೇ ಮುಂದುವರಿಯುವುದೇ? ಎಷ್ಟು ಕಾಲ? ಆ ದೇವನೇ ಉತ್ತರಿಸಬೇಕು.

30–4–2017

* * * * * *

ಲೇಖನ – 23

# ಮಾತೃ ಹೃದಯ

ನಾನಿನ್ನೂ ಪಿ.ಯು.ಸಿ ಓದುತ್ತಿದ್ದೆ. ತಕ್ಕಮಟ್ಟಿಗೆ ಸುಂದರವಾಗಿಯೂ ಇದ್ದೆನೆಂದು ಕನ್ನಡಿ ನನಗೆ ತಿಳಿಸಿತ್ತು. ಒಬ್ಬ ಸ್ಫುರದ್ರೂಪಿ ಯುವಕ ನನ್ನನ್ನು ಆಗಾಗ ಹಿಂಬಾಲಿಸಿ ಓಡಾಡುತ್ತಿದ್ದುದು ನನ್ನ ಗಮನಕ್ಕೂ ಬಂದಿತ್ತು. ಆತನ ರೂಪಕ್ಕೆ ಮನಸೋತಿದ್ದರೂ ಆ ವಿಷಯವನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸುವ ಎದೆಗಾರಿಕೆ ನನಗಿರಲಿಲ್ಲ. ನಾನು ಮೊದಲ ಹೆಜ್ಜೆ ಇಡಲು ತಯಾರಿರಲಿಲ್ಲ. ನನ್ನ ಗಮನವೆಲ್ಲ ವಿದ್ಯಾಭ್ಯಾಸ ಒಂದು ಹಂತಕ್ಕೆ ಮುಗಿಸಬೇಕೆನ್ನುವುದಾದುದರಿಂದ ನಾನು ಆ ವಿಷಯದ ಬಗೆಗೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ.

ಒಂದು ದಿನ ಕಾಲೇಜಿನಿಂದ ಮನೆಗೆ ಬಂದಾಗ ನನಗೆ ಒಂದು ಆಶ್ಚರ್ಯ ಕಾದಿತ್ತು. ಮನೆಯ ಮುಂದೆ ಆ ಯುವಕ ನಿಂತಿದ. ನನಗೆ ಅವನನ್ನು ನನ್ನ ಮನೆಯ ಮುಂದೆ ನೋಡಿ ಸಖೇದಾಶ್ಚರ್ಯ! ತಲೆತಗ್ಗಿಸಿಕೊಂಡು ಮನೆಯೊಳಗೆ ಹೋದರೆ ಹಜಾರದಲ್ಲಿ ಕೆಲವು ಹಿರಿಯ ಗಂಡಸರು ಹೆಂಗಸರು ಕುಳಿತಿದ್ದರು. ನಾನು ಅವರನ್ನು ಅದುವರೆವಿಗೆ ನೋಡಿದ ನೆನಪಿರಲಿಲ್ಲ. ಅಮ್ಮನ ಬಳಿಸಾರಿ ವಿಷಯವೇನೆಂದು ವಿಚಾರಿಸಿದೆ. ಬಂದವರು ನಮ್ಮ ದೂರದ ಸಂಬಂಧೀಕರೆಂದೂ, ನಾನು ತೀರ ಚಿಕ್ಕವಳಾಗಿದ್ದಾಗ ಅವರು ನಮ್ಮ ಮನೆಗೆ ಬರುತ್ತಿದ್ದರೆಂದೂ, ನಂತರದ ವರ್ಷಗಳಲ್ಲಿ ಕಾರ್ಯನಿಮಿತ್ತ ಬೇರೆಬೇರೆ ಊರುಗಳಲ್ಲಿ ವಾಸ್ತವ್ಯಹೂಡಿ ಈಗ್ಗೆ ಒಂದೆರಡು ವರ್ಷಗಳಿಂದ ಇದೇ ಊರಿನಲ್ಲಿ

ವಾಸವಾಗಿರುತ್ತಾರೆಂಬ ವಿಷಯ ತಿಳಿದುಬಂದಿತು. ಆತನಿಗೆ ನಿನ್ನ ಮೇಲೆ ಮನಸ್ಸಾಗಿದೆಯೆಂದೂ, ನಿನ್ನನ್ನು ಮದುವೆಯಾಗಲು ಇಚ್ಛೆಯೊಂದಿಗೆ ತನ್ನ ತಂದೆ ತಾಯಿಯನ್ನು ಕರೆದುಕೊಂಡು ಬಂದಿರುವ ವಿಷಯವನ್ನು ಅಮ್ಮ ತಿಳಿಸಿದರು. ನಾನು ನನ್ನ ವಿದ್ಯಾಭ್ಯಾಸವನ್ನು ಮುಗಿಸಿದನಂತರವಷ್ಟೇ ಮದುವೆಯ ಬಗೆಗೆ ಒಂದು ತೀರ್ಮಾನಕ್ಕೆ ಬರುತ್ತೇನೆಂದು ತಿಳಿಸಬೇಕೆಂದು ವಿನಂತಿಸಿದೆ. ಆ ಯುವಕ ಅಪರಿಚಿತನಲ್ಲವೆಂದು ತಿಳಿದು, ತನ್ನನ್ನು ಕೆಲವು ಸಲ ಹಿಂಬಾಲಿಸಿದ್ದರೂ, ಎಂದೂ ಅಸಭ್ಯನಾಗಿ ವರ್ತಿಸಿರದಿದ್ದುದರಿಂದ ಆತನ ನಡತೆ ಬಗೆಗೆ ಒಂದು ರೀತಿಯ ಹೆಮ್ಮೆ ಎನಿಸತೊಡಗಿತು. ನನ್ನ ತಾಯಿಯೂ ನನ್ನ ಮಾತಿಗೆ ಸಮ್ಮತಿ ಸೂಚಿಸಿ ಬಂದವರಿಗೆ ವಿನಯಪೂರ್ವಕವಾಗಿ ಮದುವೆಗೆ ಇನ್ನೂ ಕಾಲ ಪಕ್ವವಾಗಿಲ್ಲ ಎಂದು ತಿಳಿಸಿ, ತಾವು ನಮ್ಮ ಮಗಳನ್ನೇ ಮದುವೆಮಾಡಿಕೊಳ್ಳಬೇಕೆಂದಿದ್ದಲ್ಲಿ ಅವಳ ವಿದ್ಯಾಭ್ಯಾಸ ಪೂರ್ಣಗೊಳ್ಳುವವರೆಗೆ ಕಾಯಬೇಕೆಂದೂ ಹೇಳಿಕಳುಹಿಸಿದರು. ಸಧ್ಯಕ್ಕೆ ಮದುವೆಯಾಗುವ ವಿಚಾರ ಮುಂದೂಡಿದರೂ, ಆತ ನಮ್ಮ ದೂರದ ಸಂಬಂಧೀಕನೆಂದು ತಿಳಿದುಬಂದನಂತರ, ಆತನ ನೆನಪು ಆಗಾಗ ಕಾಡತೊಡಗಿತು. ಇಂದಲ್ಲ ನಾಳೆ ನನ್ನ ಮದುವೆ ಆತನೊಡನೆ ಎಂದು ನಾನು ನಿರ್ಧರಿಸಿಕೊಂಡಿದ್ದೆನಾದುದರಿಂದ, ಆತನ ಬಗೆಗೆ ಕನಸು ಕಾಣುವುದರಿಂದ ತಪ್ಪಿಸಿಕೊಳ್ಳಲಾಗುತ್ತಿರಲಿಲ್ಲ. ಕನಸು ಕಾಣುವುದು ತಪ್ಪೇನಿಲ್ಲವಲ್ಲ! ಅದು ನನ್ನ ವಿದ್ಯಾಭ್ಯಾಸಕ್ಕೆ ತಡೆಯಾಗದಂತೆ ಎಚ್ಚರಿಕೆವಹಿಸಿದ್ದೆ.

ನಾನು ಪಿಯೂಸಿಯನ್ನು ಮೊದಲ ದರ್ಜೆಯಲ್ಲೇ ಮುಗಿಸಿದ್ದೆ. ಮುಂದೆ ಪದವಿಪಡೆಯಲು ಆಸೆಪಟ್ಟರೂ ಅದು ಈಡೇರುವ ಪರಿಸ್ಥಿತಿ ಇರಲಿಲ್ಲ. ಈ ನಡುವೆ ನನ್ನ ತಂದೆಯವರ ನಿಧನವಾಗಿದ್ದುದರಿಂದ ನನಗೆ ಓದು ಮುಂದುವರೆಸಲು ಆಗಲಿಲ್ಲ. ನನ್ನಮ್ಮ ಇತರ ತಾಯಿಯರಂತೆ, ಅಪ್ಪ ತೀರಿಕೊಂಡ ವರ್ಷದಲ್ಲೇ ಕನ್ಯಾದಾನ ಮಾಡಿಮುಗಿಸಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದರು. ನಾನೂ ಸಹಾ ಒಂದು ಹೆಣ್ಣಿನ ಬದುಕು ಪರಿಪೂರ್ಣವಾಗುವುದು ಮದುವೆಯಾಗಿ ತಾಯಾದನಂತರವಲ್ಲವೇ ಎಂಬ ಪ್ರಾಪಂಚಿಕ ನಿಯಮದಂತೆ ನಡೆಯಲು ನನ್ನ ಒಪ್ಪಿಗೆ ಸೂಚಿಸಿದೆ. ವರನ ಮನೆಯವರೂ ನಮ್ಮ ಮನೆಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸರಳವಾಗಿ ವಿವಾಹಕ್ಕೆ ಒಪ್ಪಿಕೊಂಡರು ವಿವಾಹ ಮಾಡಿಕೊಂಡು ಗಂಡನ ಮನೆಸೇರಿದೆ. ಎಲ್ಲ ನವವಿವಾಹಿತರಂತೆ ನಾವೂ ಸಹಾ ನಮ್ಮದೇ ಕಲ್ಪನಾಲೋಕದಲ್ಲಿ ವಿಹರಿಸಿದ್ದೂ ಆಯಿತು. ನನ್ನಮ್ಮ ನಮ್ಮಣ್ಣನ ಮನೆಸೇರಿಕೊಂಡಿದ್ದಳು.

ಮೊದಲ ಒಂದೆರಡು ವರ್ಷಗಳು ನಮಗೆ ಸಂತಾನ ಬೇಡವೆಂದು ನಿರ್ಧರಿಸಿ ನಾವು ಎಲ್ಲ ಮುಂಜಾಗರೂಕತೆಯನ್ನೂ ತೆಗೆದುಕೊಂಡಿದ್ದೆವು. ಆದರೆ ಸುತ್ತಮುತ್ತಲಿನ ಸಂಬಂಧದ ಬಾಯಿಗಳು ಸುಮ್ಮನಿರಬೇಕಲ್ಲ. ಕೆಲವರು ನಮ್ಮಲ್ಲಿ ಏನೋ ದೋಷವಿರಬೇಕೆಂದು ತರ್ಕಿಸಿದರೆ, ಮತ್ತೆ ಕೆಲವರು ಮತ್ತಿನ್ನೇನೇನೋ ಆಪಾದನೆಗಳನ್ನು ಹೊರಿಸತೊಡಗಿದ್ದುದು ನಮ್ಮ ಕಿವಿಗಳಿಗೆ ಬಿದ್ದರೂ, ನಾವು ಅದರ ಬಗೆಗೆ ಯಾವುದೇ ತಲೆಕೆಡಿಸಿಕೊಳ್ಳದೇ ನಮ್ಮ ಪಾಡಿಗೆ ನಾವು ಇರತೊಡಗಿದೆವು. ನಮ್ಮ ನಿರ್ಧಾರದ ಎರಡು ವರ್ಷ ಪೂರೈಸಿದನಂತರ ನಮಗೂ ಒಂದು ಮಗು ಬೇಕೆನಿಸಿದಾಗ ನಾನು ಗರ್ಭಿಣಿಯಾದೆ. ಹುಟ್ಟುವ ಮಗು ಗಂಡೋ ಹೆಣ್ಣೋ ಎಂಬ ಬಗೆಗೆ ಚರ್ಚೆ ಪ್ರಾರಂಭವಾಯಿತು. ಎಲ್ಲರಂತೆ ನಮ್ಮ ಮನೆಯಲ್ಲೂ 'ಗಂಡು ಮಗು'ವಿನ ಬಗೆಗೆ ಹೆಚ್ಚಿನ ಒಲವು ಇತ್ತು. ನಮ್ಮಿಬ್ಬರಲ್ಲಿ ಮೊದಮೊದಲಿಗೆ ಯಾವ ಮಗು ಬೇಕೆಂಬ ಬಗೆಗೆ ಭಿನ್ನಾಭಿಪ್ರಾಯವಿದ್ದರೂ, ಅಂತಿಮವಾಗಿ ಯಾವ ಮಗುವಾದರೂ ಸರಿ, ಮಗು ಎಲ್ಲರಂತೆ ಸಾಮಾನ್ಯವಾಗಿ ಜಗತ್ತಿಗೆ ಬಂದರೆ ಸಾಕು ಎಂದುಕೊಂಡೆವು. ಯಾರು ಏನೇ ಅನ್ನಲಿ ಹೆಣ್ಣಿನ ಎಂಬುದು ಪರಿಪೂರ್ಣ ಎನಿಸುವುದು ಆಕೆ ತಾಯಿ ಆದಮೇಲೆಯೆ. ಹೆರಿಗೆಯದಿನ ಹತ್ತಿರವಾದಂತೆ, ನನ್ನ ಬಗೆಗೆ ಅತ್ತೆ, ಪತಿ ಎಲ್ಲರೂ ಪ್ರೀತಿ ಆರೈಕೆಯಲ್ಲಿ ಯಾವುದೇ ಕೊರತೆಯಿಲ್ಲದಂತೆ ನೋಡಿಕೊಳ್ಳತೊಡಗಿದರು. ನಾನೂ ಹಲವು ಸಲ ವೈದ್ಯರಿಂದ ತಪಾಸಣೆಮಾಡಿಸಿಕೊಂಡಿದ್ದೆ, ವೈದ್ಯರೂ ಮಗುವಿನ ಬೆಳವಣಿಗೆ ನಾರ್ಮಲ್ ಆಗಿದೆಯೆಂದೇ ಹೇಳಿದ್ದರು. ಹೆರಿಗೆಯ ದಿವಸ ಬೆಳಿಗ್ಗೆ ಬೇಗ ಎದ್ದು ಸ್ನಾನಮುಗಿಸಿ ದೇವರಪೂಜೆಮುಗಿಸಿ, ಪತಿ, ಅತ್ತೆಯವರೊಡನೆ ನರ್ಸಿಂಗ್ ಹೋಂಗೆ ಸೇರಿದ್ದೂ ಆಯಿತು. ವೈದ್ಯರೂ ನಾರ್ಮಲ್ ಹೆರಿಗೆಯಾಗಲೆಂದು ಸಾಕಷ್ಟು ಸಮಯಕಾದರೂ ಹೆರಿಗೆ ಆಗಲಿಲ್ಲ. ಕೊನೆಗೆ ವಿಧಿಯಿಲ್ಲದೇ ಸಿಸೇರಿಯನ್ ಮಾಡಲು ನಿರ್ಧರಿಸಿದರು. ನಾವು ಏನೇ ಅಂದುಕೊಂಡಿದ್ದರೂ, ವೈದ್ಯರ ನಿರ್ಧಾರವೇ ಅಂತಿಮವಲ್ಲವೇ?

ರಾತ್ರಿ ಹನ್ನೆರಡರ ವೇಳೆಗೆ ಸಿಸೇರಿಯನ್ ಹೆರಿಗೆಮಾಡಲಾಯಿತು, ಮುದ್ದಾದ ಗಂಡುಮಗು. ಮನೆಯವರಿಗೆಲ್ಲಾ ಸಂಭ್ರಮವೋ ಸಂಭ್ರಮ. ಅಕ್ಕಪಕ್ಕದವರಿಗೆಲ್ಲಾ ಸಿಹಿವಿತರಣೆ ಮಾಡಿದರು. ನನಗೂ ಅತ್ತೆಮಾವಂದಿರ ಗಂಡು ಮಗುವಿನ ಬಯಕೆಯನ್ನು ಈಡೇರಿಸಿಕೊಟ್ಟ ಸಾರ್ಥಕಭಾವ. ನನ್ನ ಪೂರ್ಣ ಸಮಯವನ್ನು ಮಗುವಿನ ಆರೈಕೆಯಲ್ಲೇ ಕಳೆಯತೊಡಗಿದೆ. ಬರಬರುತ್ತಾ ನನ್ನ ಮಗು ಇತರ

ಸಾಮಾನ್ಯ ಮಕ್ಕಳಂತೆ ಚುರುಕಾಗಿಲ್ಲ ಎನ್ನಿಸತೊಡಗಿತು. ಸುತ್ತಲಿನ ಶಬ್ದಗಳಿಗೆ ಸೂಕ್ತ ಪ್ರತಿಕ್ರಿಯೆಗಳು ಕಾಣಿಸುತ್ತಿರಲಿಲ್ಲ. ತಲೆಯನ್ನು ಹೆಚ್ಚಾಗಿ ಒಂದು ಪಕ್ಕಕ್ಕೆ ವಾಲಿಸಿಕೊಂಡು ಇರುತ್ತಿತ್ತು. ಮೂರ್‍ನಾಲ್ಕು ತಿಂಗಳಾದರೂ ಹೊರಳಿಕೊಳ್ಳುತ್ತಿರಲಿಲ್ಲ. ಕಾಲಿನಲ್ಲಿ ಇರಬೇಕಾದಷ್ಟು ಶಕ್ತಿಯಿರಲಿಲ್ಲ. ನಿಲ್ಲಿಸಿಕೊಂಡರೂ ನಿಲ್ಲಲಾಗುತ್ತಿರಲಿಲ್ಲ. ನನ್ನ ಮಗು ಒಬ್ಬ ವಿಕಲಾಂಗನಾಗಿಬಿಡುತ್ತಾನೇನೋ ಎನ್ನುವ ಅಳುಕು ನನ್ನನಾವರಿಸತೊಡಗಿತು. ನನ್ನ ಆಸೆ ಸಂತೋಷಗಳೆಲ್ಲಾ ನೀರಿನ ಗುಳ್ಳೆಯಂತೆ ಒಡೆದುಹೋಯಿತು. ನನಗೆ ದಿಕ್ಕೇ ತೋಚದಂತಾಯಿತು. ಓ ದೇವ ನನಗೇಕಿಂತಹ ಶಿಕ್ಷೆ? ನನ್ನ ಯಾವ ತಪ್ಪಿಗಾಗಿ ಇಂತಹ ಘನಘೋರ ಶಿಕ್ಷೆ? ಯಾರಿಗೂ ನಾನು ಯಾವುದೇ ರೀತಿಯಲ್ಲಿ ಯಾವುದೇ ಅನ್ಯಾಯಮಾಡಿಲ್ಲ, ಆದರೂ ನನಗೇಕೆ ಇಂತಹ ಮಗು ಹುಟ್ಟಿತು? ಎಂದು ಆ ಕಾಣದ ದೇವರ ಬೇಡಿದೆ. ನನ್ನವರೂ ಮಗು ನಾರ್ಮಲ್ ಅಲ್ಲ ಎಂಬ ಕಾರಣಕ್ಕೆ ಅದನ್ನು ನಿರ್ಲಕ್ಷಿಸತೊಡಗಿದರು. ನನಗೆ ಅಳುವುದೊಂದೇ ಕೆಲಸ. ಅತ್ತೂ ಅತ್ತೂ ನನಗೆ ನಾನೇ ಸಮಾಧಾನಮಾಡಿಕೊಂಡೆ. ನಾನೂ ಸಹಾ ವೈದ್ಯರಲ್ಲಿಗೆ ಹಲವಾರು ಬಾರಿ ಕರೆದುಕೊಂಡು ಹೋಗಿ ತೋರಿಸಿದೆ. ವೈದ್ಯರನ್ನು ನನಗೆ ಇಂತಹ ಮಗು ಏಕೆ ಹುಟ್ಟಿತೆಂಬ ಬಗೆಗೆ ಆತಂಕ ವ್ಯಕ್ತಪಡಿಸಿದೆ. ವೈದ್ಯರು ನೀವು ಸಂಬಂಧೀಕರನ್ನು ಮದುವೆಯಾಗಿದ್ದೀರಾ ಎಂಬ ಪ್ರಶ್ನೆ ಕೇಳಿದರು. ಸಂಬಂಧಗಳಲ್ಲಿ ಮದುವೆಯಾದರೆ ಇಂತಹ ಮಕ್ಕಳು ಹುಟ್ಟುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು. ನನಗೆ ಇಂದಿಗೂ ಅಂತಹ ಸಾಧ್ಯತೆಯಿರಬಹುದೇ ಎಂಬ ಸಂಶಯ ಕಾಡುತ್ತಿದೆ. ಆದರೆ ನಾನು ಅದರ ತಾಯಿ, ಹೇಗಿದ್ದರೂ ಅದು ನನ್ನ ಮಗು. ಅದನ್ನು ನಾನು ತಿರಸ್ಕರಿಸಲಾರೆ. ನಾನಿಲ್ಲವಾದ ಮೇಲೂ ನನ್ನ ಮಗು ತನ್ನ ಕಾಲಮೇಲೆ ತಾನು ನಿಲ್ಲುವಂತಾಗಬೇಕು ಎಂದು ನನ್ನ ಮಾತೃ ಹೃದಯ ಚೀರಿಹೇಳಿತು.ಅದನ್ನು ಇತರ ಸಾಮಾನ್ಯ ಮಕ್ಕಳಂತೆ ಮಾಡಲು ಏನು ಮಾಡಬಹುದೆಂಬ ಬಗೆಗೆ ಚಿಂತಿಸತೊಡಗಿದೆ.

ನಾನು ವಾಸವಾಗಿರುವ ನಗರದಲ್ಲಿ ಹಲವಾರು ವಿಶೇಷ ಮಕ್ಕಳ ತರಬೇತಿ ಕೊಡುವ ಸಂಸ್ಥೆಗಳು ಇರುವುದು ಪತ್ತೆಹಚ್ಚಿದೆ. ಅಲ್ಲಿಗೆ ನನ್ನ ಮಗುವನ್ನು ಕರೆದುಕೊಂಡು ಹೋಗಿ ತೋರಿಸಿದೆ. ಅವರು ಶೇ.100 ರಷ್ಟು ಸರಿಮಾಡಬಹುದೆಂಬ ಆಶ್ವಾಸನೆಯನ್ನೇನೂ ನೀಡಲಿಲ್ಲ, ತಮ್ಮ ಕೈಲಾದಷ್ಟು ಪ್ರಯತ್ನಮಾಡುತ್ತೇವೆ ಎಂದಷ್ಟೇ ಹೇಳಿದರು. ಪ್ರತಿನಿತ್ಯ ಬೆಳಗ್ಗೆಯಿಂದ ಸಂಜೆವರೆಗೆ ಮಗನೊಡನೆಯೇ ಇದ್ದು ಇಂತಹ ಮಕ್ಕಳನ್ನು ಯಾವ ರೀತಿ ನೋಡಿಕೊಳ್ಳಬೇಕೆಂಬ ಬಗೆಗೆ ನಾನೂ ತರಬೇತಿ ಪಡೆದುಕೊಂಡೆ. ಇಂದಿಗೂ ನನ್ನ ಮಗುವಿನ ಆರೈಕೆ, ಚಿಕಿತ್ಸೆ ಮುಂದುವರೆಸಿದ್ದೇನಾದರೂ, ಸ್ವಲ್ಪ ಮಾತ್ರ ಇಂಪ್ರೂವ್‌ಮೆಂಟ್ ಕಂಡಿದೆ. ನನ್ನ

ಮಗುವಿನ ಪರಿಸ್ಥಿತಿ ಬಗೆಗೆ ಕೊರಗುವುದನ್ನು ಬಿಟ್ಟು ನನ್ನ ಮನದಲ್ಲಿ ಹೊಸದೊಂದು ಆಲೋಚನೆ ಹುಟ್ಟಕೊಂಡಿತು.

ಸುತ್ತಲೂ ಕಣ್ಣು ಹಾಯಿಸಿದೆ. ನನ್ನಂತೆಯೇ ಇಂತಹ ವಿಶೇಷ ಮಕ್ಕಳನ್ನು ಹೊಂದಿರುವ ನೂರಾರು ಮಕ್ಕಳು ಇರುವುದು ತಿಳಿದುಬಂದಿತು. ಶ್ರೀಮಂತರಿಗಾದರೋ ಕೆಂಪು ನೆಲಹಾಸು ಹಾಸಿ ಚಿಕಿತ್ಸೆನೀಡಲು ನೂರಾರು ಕೈಗಳು ಮುಂದೆಬರುತ್ತವೆ. ಆದರೆ ನಮ್ಮಂತ ಬಡವ/ಮಧ್ಯಮ ವರ್ಗದವರನ್ನು ಕಡೆಗಣಿಸುವವರೇ ಹೆಚ್ಚಾಗಿರುವ ಇಂದಿನ ಸಮಾಜದಲ್ಲಿ ಅಂತಹವರಿಗಾಗಿಯೇ ಏನನ್ನಾದರೂ ಮಾಡಬೇಕೆಂಬ ಛಲ ನನ್ನಲ್ಲಿ ಹುಟ್ಟಿಕೊಂಡಿತು. ನನ್ನನ್ನು ನಾನೇ ಸಮಾಧಾನಪಡಿಸಿಕೊಂಡು ಚಿಕಿತ್ಸೆ ಕೊಡಿಸಲೂ ಚೈತನ್ಯವಿಲ್ಲದ ಅಂತಹ ತಾಯಂದಿರ ಮಕ್ಕಳನ್ನು ಸೇರಿಸಿಕೊಂಡು ಒಂದು ಹಗಲು ತರಬೇತಿ ಶಾಲೆ ತೆರೆದು ಆ ತಾಯಂದಿರ ನೆರವಿನೊಂದಿಗೆ ಉಚಿತವಾಗಿ ಚಿಕಿತ್ಸೆ ಕೊಡಿಸುವ ಏರ್ಪಾಡುಮಾಡಿ, ಎಲ್ಲರಲ್ಲೂ ಒಂದು ಆಶಾಭಾವನೆ ಮೂಡಿಸಲು ತೊಡಗಿದೆ. ನಮ್ಮ ಮನೆಯ ಒಂದು ಭಾಗದಲ್ಲೇ ತರಬೇತಿ ಕೇಂದ್ರ ತೆರೆದು, ಪತಿಯನ್ನು ಕಾಡಿಬೇಡಿ ಒಂದು ವಾಹನವನ್ನು ಹೊಂದಿಸಿಕೊಂಡೆ. ದಾನಿಗಳ ನೆರವಿನಿಂದ ಬರುವ ಮಕ್ಕಳಿಗಾಗಿ ಬೆಳಗಿನ ತಿಂಡಿ, ಮಧ್ಯಾನ್ಹದ ಊಟದ ವ್ಯವಸ್ಥೆ ಮಾಡಿಕೊಂಡೆ. ಪ್ರತಿದಿನ ಬೆಳಿಗ್ಗೆ ನಮ್ಮ ವಾಹನದಲ್ಲಿ ಅವರ ಮನೆಗಳಿಗೆ ಹೋಗಿ ಅಂತಹ ವಿಶೇಷ ಮಕ್ಕಳನ್ನು ಕರೆತಂದು, ಮಧ್ಯಾಹ್ನದ ವರೆಗೆ ಅವರಿಗೆ ಯೋಗ, ಫಿಸಿಕಲ್ ಥೆರಪಿ, ಬರೆಯುವುದು, ಓದುವುದು, ನಿಲ್ಲುವುದು, ಕೂರುವುದು ಹೀಗೆ ಹಲವಾರು ಚಟುವಟಿಕೆಗಳಲ್ಲಿ ತೊಡಗಿಸಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರಲು ಪ್ರಯತ್ನಮುಂದುವರೆಸಿದ್ದೇನೆ ಮತ್ತು ಈ ನಿಟ್ಟಿನಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸನ್ನೂ ಕಂಡಿದ್ದೇನೆ.

ನನ್ನ ಈ ಪರಿಶ್ರಮವನ್ನು ಗಮನಿಸಿದ ದಾನಿಗಳೂ ತಮ್ಮ ಕೈಲಾದ ಹಣಕಾಸಿನ ನೆರವನ್ನು ನೀಡುತ್ತಾಬಂದಿರುತ್ತಾರೆ. ಸಮಾಜದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವವರಿದ್ದರೆ, ಅವರ ನೆರವಿಗೆ ಧಾವಿಸುವವರೂ ಇದ್ದೇ ಇರುತ್ತಾರೆ ಎಂಬ ನಂಬಿಕೆ ನಮ್ಮಲ್ಲಿರಬೇಕು.ಒಟ್ಟಿನಲ್ಲಿ ನಾ ಹೇಳುವುದಿಷ್ಟೇ. ನಿಮ್ಮ ಮಗು ಯಾವ ರೀತಿಯ ವೈಕಲ್ಯವನ್ನು ಹೊಂದಿದ್ದರೂ ಧೃತಿಗೆಡಬೇಡಿ. ಅವರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ಸದಾ ನಿಮ್ಮದಾಗಿರಲಿ.

4-3-2017 (ಬೆಳಕು ಏಪ್ರಿಲ್ 2017) (ಆಂದೋಲನ 31 ಡಿಸೆಂಬರ್ 2017)

* * * * *

## ಲೇಖನ – 24

# ನೆರೆಹೊರೆ

ಕೇಳಿಲ್ಲವೇ ಹಿರಿಯರು ಹೇಳುವುದು 'ನೆರೆಹೊರೆ'. ನೆರೆಯವರು ಹೊರೆಯಾಗದಿರಲಿ ಎಂದು ಬೇಡುವವರೇ ಎಲ್ಲರೂ. ಅಕ್ಕ ಪಕ್ಕದವರು ಸ್ವಂತಮನೆಯ ಮಾಲೀಕರುಗಳೇ ಆದಲ್ಲಿ ಮುಗಿದುಹೋಯಿತು. ಒಳ್ಳೆಯವರಿರಲಿ ಕೆಟ್ಟವರಿರಲಿ ಅನುಸರಿಸಿಕೊಂಡೇ ಹೋಗಬೇಕು. ಆದುದರಿಂದಲೇ ಬಯಸುವರು ಪಕ್ಕದ ಮನೆಯವರು ಬಾಡಿಗೆದಾರರೇ ಆಗಿರಲೆಂದು.

ಈಗಿಲ್ಲವೇ ನಮ್ಮ ನಾಡಿನ ಪರಿಸ್ಥಿತಿ. ನೆರೆರಾಜ್ಯದವರ ಪಿರಿಪಿರಿ. ಕೇಳಿಕೇಳಿ ಕಿತ್ತುಕೊಳ್ಳುವರು ನೀರು, ನಮ್ಮಲ್ಲಿಲ್ಲದಿದ್ದರೂ ನಮಗೇ ಸಾಲದಿದ್ದರೂ, ಬಿಡಬೇಕು ಅವರಿಗೆ ನೀರು. ಮಳೆರಾಯ ಕೃಪೆತೋರಿದಾಗ ಕೇಳದಿದ್ದರೂ ಬಿಡುವೆವು ನೀರು. ಬಳಸುವುದಕ್ಕಿಂತ ಹೆಚ್ಚಿಗೆ ಬಿಡುವರು ಸಮುದ್ರಕ್ಕೆ. ಆದರೂ ತೀರದು ಅವರ ದಾಹ।

ರಾಜ್ಯದ್ದೇನು ಮಹಾ ಅನ್ನುವಿರಾ। ರಾಷ್ಟ್ರದ್ದೂ ಅದೇ ಕಥೆ. ನೆರೆಯ ರಾಷ್ಟ್ರದಿಂದ ತಪ್ಪಿಲ್ಲ ಕಿರಿಕಿರಿ. ಕಾಲುಕೆರೆದು ಜಗಳವಾಡುವ ಪರಿ. ಕೇಳಿಲ್ಲವೇ ಮತ್ತೊಂದುಹೇಳಿಕೆ 'ಬಗಲ್ ಮೆ ದುಷ್ಮನ್' ಅಂತೆಯೇ ಈ ಜನ. ಸುಮ್ಮಸುಮ್ಮನೆ ಕೀಟಲೆಮಾಡುವುದೇ ಇವರ ಕೆಲಸ. ತಮಗೆ ಇಲ್ಲದ ತಾಖತ್ತನ್ನು ಉಗ್ರರ ನೆರವಿನೊಂದಿಗೆ ಪಡೆದು ಅಶಾಂತಿ ಉಂಟುಮಾಡಲು ಪ್ರಯತ್ನಿಸುತ್ತಲೇ ಇದ್ದಾರೆ, ಆದರೂ ಸಫಲರಾಗಿಲ್ಲ. ಗೊತ್ತಿರಲಿ ಅವರಿಗೆ ತಿರುಗಿಬಿದ್ದರೆ ನಾವು ಭಾರತೀಯರು, ಉಳಿಯುವುದಿಲ್ಲ ಅವರ ರಾಷ್ಟ್ರ. ಇದರ ಅನುಭವ

ಪಡೆದೂ ಇದ್ದಾರೆ ಅವರು ಕಾರ್ಗಿಲ್ ಕದನದ ಸಮಯದಲ್ಲಿ. ಜಗಳವಾಡುವುದೇ ಅವರ ಜಾಯಮಾನ ಎನ್ನಿಸುತ್ತದೆ.

ತೆಪ್ಪಗೆ ಹಿಂಸೆಯನ್ನು ಸಹಿಸಿಕೊಂಡಿರುವವರನ್ನು ಹೇಡಿಗಳೆಂದು ಪರಿಗಣಿಸುವುದು ತರವಲ್ಲ. ಅವರಿಗೆ ತಾಖತ್ ಇಲ್ಲವೆಂದೂ ಅರ್ಥವಲ್ಲ. ನಮ್ಮ ನೀತಿ ನಾವೆಂದೂ ಇತರರನ್ನು ಹಿಂಸಿಸಲು ಮೊದಲಿಗರಾಗುವುದಿಲ್ಲ. ಆದರೆ ಅದು ಮಿತಿಮೀರಿದಾಗ ನಮ್ಮ ಶಕ್ತಿಪ್ರದರ್ಶನ ನಿಲ್ಲುವುದೂ ಇಲ್ಲ. ತಿಳಿದಿರಲಿ "ಕೂತರೆ ಶಾಂತಮೂರ್ತಿ, ಎದ್ದುನಿಂತರೆ ರುದ್ರತಾಂಡವ" !

ಮತ್ತೆ ನಮ್ಮ ನೆರೆಮನೆಯವರ ವಿಚಾರಕ್ಕೆ ಬರುವುದಾದರೆ ಚಿಕ್ಕಪುಟ್ಟ ವಿಷಯಗಳಿಗೂ ಕ್ಯಾತೆ ತೆಗೆಯುವ ನೆರೆಯಿದ್ದಲ್ಲಿ ಕಿರಿಕಿರಿ ತಪ್ಪಿದ್ದಲ್ಲ. ಒಮ್ಮೆಯಂತೂ ನೆರೆಮನೆಯವನ ಕಾಟ ತಾಳಲಾರದ ಪಕ್ಕದ ಮನೆಯ ಮಾಲೀಕ ತನ್ನ ಮನೆಯನ್ನೇ ತೊರೆದುಹೋದ ಪ್ರಸಂಗ ನೆನಪಿಗೆ ಬರುತ್ತಿದೆ. ಆ ಪ್ರಸಂಗ ಹೀಗಿದೆ. ಈತನ ಮನೆಯ ನಾಯಿ ಕಾಂಪೌಂಡ್ ಹಾರಿ ಆತನ ಮನೆಯ ನಾಯಿಯೊಡನೆ ಸೇರಿ ರತಿಕ್ರೀಡೆಯಲ್ಲಿ ತೊಡಗಿತ್ತಂತೆ. ಆ ವಿಷಯ ತಿಳಿದ ಈತ ಜಗಳ ತೆಗೆದು ದೊಡ್ಡ ರಂಪಮಾಡಿ ಆತ ಮನೆಬಿಟ್ಟು ಹೋಗುವಂತೆ ಮಾಡುವಲ್ಲಿ ಸಫಲ ಆದನಂತೆ. ಈತ ಒಬ್ಬ ಆದಾಯತೆರಿಗೆ ಅಧಿಕಾರಿ, ಆತ ಬಡ ಸರ್ಕಾರಿ ಕಾರಕೂನ. ಮನೆಬಿಟ್ಟು ಹೋಗದಿದ್ದಲ್ಲಿ ಆತನಿಗೆ ವಿನಾಕಾರಣ ತೊಂದರೆ ನೀಡಲು ಮುಂದಾಗುತ್ತಿದ್ದನಂತೆ ಈತ. ಹೀಗೆ ಕೆಲವೊಮ್ಮೆ ವೈಯುಕ್ತಿಕ ವಿಷಯಗಳನ್ನು ಕೆಲಸದ ವಿಚಾರಕ್ಕೆ ವ್ಯವಹಾರಗಳಿಗೂ ವಿಸ್ತರಿಸಿ ಜೀವನ ದುಸ್ತರ ಮಾಡಿಬಿಡುತ್ತಾರೆ ಈ ನೆರೆಯವರು. ಆಗಷ್ಟೇ ಇವರನ್ನು ನಿಜವಾಗಿಯೂ ನೆರೆ"ಹೊರೆ" ಎಂದು ಪರಿಗಣಿಸಬೇಕಾದೀತು.

* * * * *

## ಲೇಖನ – 25

# ದತ್ತು

ನನಗೆ ಮದುವೆಯಾದಾಗ 20 ವರ್ಷ, ನಾನು ಮದುವೆಯಾದ ನನ್ನ ಪತಿಗೆ 25 ವರ್ಷ. ಮನೆಯವರನ್ನು ಧಿಕ್ಕರಿಸಿ ನಾನಿವರನ್ನು ಪ್ರೀತಿಸಿ ಮದುವೆಯಾದೆ. ಅಂದು ನಾವಿದ್ದ ಸ್ಥಿತಿಯಲ್ಲಿ ನಮಗೆ ಯಾರೂ ಬೇಕಾಗಿರಲಿಲ್ಲ. ನಾನು ನನ್ನವರು ನಮ್ಮದೇ ಪ್ರತ್ಯೇಕ ಲೋಕ. ಅಪ್ಪನೂ ಬೇಡ, ಅಮ್ಮನೂ ಬೇಡ, ಮನೆಯವರು ಸಾಕಷ್ಟು ಸ್ಥಿತಿವಂತರಾಗಿದ್ದರೂ, ಅವರ ಮಾತನ್ನು ಮೀರಿ ಮದುವೆಯಾದುದರಿಂದ, ಅವರ ಆಸ್ತಿಯಲ್ಲಿ ಚಿಕ್ಕಾಸೂ ನಮಗೆ ದೊರಕಲಿಲ್ಲ. ಧೃತಿಗೆಡದೇ ನನ್ನ ಪತಿಯ ಸಂಪಾದನೆಯಲ್ಲಿ ಸಂಸಾರ ತೂಗಿಸಿಕೊಂಡು ಹೋಗುವ ಛಲ ನನ್ನದು. ಮೊದಲ ಐದಾರು ವರ್ಷ ಯಾರ ಸಂಪರ್ಕವೂ ಇಲ್ಲದೆ ಕನಸಿನ ಲೋಕದಲ್ಲೇ ತೇಲಾಡುತ್ತಾ ಕಾಲಕಳೆದೆವು. ಆನಂತರ ನಮ್ಮಿಬ್ಬರ ಪ್ರೀತಿಯ ಫಲವೊಂದರ ಅಪೇಕ್ಷೆಯಿಂದ ಪ್ರಯತ್ನ ಪ್ರಾರಂಭಿಸಿದೆವು. ಇಂದಾಗಬಹುದು, ಮುಂದಿನ ಕೆಲವು ತಿಂಗಳಲ್ಲಾಗಬಹುದು ಎಂಬ ನನ್ನ ತಾಯಿಯಾಗುವ ಆಸೆ ನೀರಿನ ಗುಳ್ಳೆಯಂತೆ ಒಡೆಯತೊಡಗಿತು. ಹಾಗೂ ಹೀಗೂ ಎಂಟು ವರ್ಷಗಳಷ್ಟು ಸಮಯ ಕಳೆದರೂ ನನ್ನ ತಾಯಾಗುವ ಆಸೆ ಈಡೇರಲೇ ಇಲ್ಲ. ಹೊರಗೆ ತೋರಿಸಿಕೊಳ್ಳದೇ ಇದ್ದರೂ ಒಳಗೊಳಗೇ ಒಂದು ರೀತಿಯ ಕಸಿವಿಸಿ, ಖಿನ್ನತೆ ನನ್ನನ್ನು ಆವರಿಸಿಕೊಳ್ಳತೊಡಗಿತು. ಹಲವಾರು ರೀತಿಯ ವೈದ್ಯಕೀಯ ಪರೀಕ್ಷೆಗಳಿಗೆ ನಮ್ಮಿಬ್ಬರನ್ನೂ ಒಡ್ಡಿಕೊಂಡೆವು. ಯಾರಲ್ಲಿಯೂ ಯಾವುದೇ ರೀತಿಯ

ದೋಷವಿರಲಿಲ್ಲ. ಆದರೂ ಕೂಸೊಂದನ್ನು ಕಾಣಬೇಕೆಂಬ ನನ್ನಾಸೆ ಈಡೇರುತ್ತಿಲ್ಲವೇಕೆ, ತಿಳಿಯದಾಯಿತು. ಅವರು ಇಲ್ಲಿ ಹೋಗೆಂದರು, ಇವರು ಇನ್ನೆಲ್ಲಿಗೋ ಹೋಗೆಂದರು; ಅವರು ಈ ಮರವನ್ನು ಸುತ್ತೆಂದರು, ಅವರು ಆ ದೇವರಿಗೆ ಹರಕೆ ಹೊರೆಂದರು. ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿಯಾದರೂ ಆಸರೆ ಸಿಗಬಹುದೆಂಬ ಆಸೆಯನ್ನು ಚಿಗುರಿಸುವುದಂತೆ, ಅಂತೆಯೇ ನನ್ನದೂ ಆಯಿತು. ಏನಾದರೂ ಮಾಡಿ ಒಂದು ಮಗು ಪಡೆಯಬೇಕೆಂದುಕೊಂಡು ಯಾರು ಏನು ಹೇಳಿದರೂ ಅವೆಲ್ಲವನ್ನೂ ಮಾಡಿ ಪ್ರಯತ್ನಿಸಿದೆ. ಊಹೂಂ ಯಾವುದೂ ಸಫಲವಾಗಲಿಲ್ಲ, ನನ್ನಾಸೆ ಈಡೇರಲಿಲ್ಲ.

ಕೊನೆಗೆ ಒಬ್ಬರ ಮೇಲೆ ಇರುವ ಪ್ರೀತಿ ಮತ್ತೊಬ್ಬರಿಗೆ ಕಡಿಮೆಯಾಗದಂತೆ ವರ್ತಿಸುತ್ತಿದ್ದರೂ, ಇನ್ಯಾವುದಾದರೂ ರೀತಿಯಲ್ಲಿ ನಮ್ಮ ಈ ಕೊರತೆಯನ್ನು ತುಂಬಿಕೊಳ್ಳುವ ಮಾರ್ಗಗಳ ಬಗೆಗೆ ಚಿಂತಿಸತೊಡಗಿದೆವು. ಇತರರ ಮಕ್ಕಳನ್ನು ನಮ್ಮ ಮಕ್ಕಳಂತೆ ಕಾಣತೊಡಗಿದೆವು. ಮಕ್ಕಳಿರುವವರು ತಮ್ಮ ಮಕ್ಕಳನ್ನು, ಬಂಜೆಯೆಂದು ಜರಿದು, ನನ್ನ ಬಳಿಗೆ ಕಳುಹಿಸಲು ಹಿಂಜರಿಯುತ್ತಿದ್ದರು. ಅನಾಥಾಲಯಗಳಿಗೆ ಹೋಗಿ ವಾರಾಂತ್ಯಗಳಲ್ಲಿ ಕಾಲಕಳೆಯತೊಡಗಿದೆವು. ಆದರೂ ಆ ಮಕ್ಕಳ ಪ್ರೀತಿ ಪ್ರೇಮ ಸಂಪೂರ್ಣವಾಗಿ ಪಡೆಯುವಲ್ಲಿ ವಿಫಲರಾದೆವು. ಕೊನೆಗೊಮ್ಮೆ ನಮಗೆ ಮಕ್ಕಳಾಗದಿದ್ದರೂ, ನಮ್ಮ ಮಕ್ಕಳಂತೆ ಬೆಳೆಸಲು ಯಾವುದಾದರೂ ಮಗುವನ್ನು ದತ್ತಕ ತೆಗೆದುಕೊಳ್ಳುವ ಒಮ್ಮತದ ನಿರ್ಣಯಕ್ಕೆ ಬಂದೆವು. ಮೊದಮೊದಲಿಗೆ ನಮ್ಮವರಿಗೆ ಈ ನಿರ್ಧಾರ ಅಷ್ಟು ಸಮಂಜಸ ಎನಿಸದಿದ್ದರೂ, ಅನಿವಾರ್ಯವಾಗಿ ಈ ನನ್ನ ನಿರ್ಧಾರಕ್ಕೆ ಬದ್ಧರಾದರು. ತೆಗೆದುಕೊಳ್ಳುವ ನಿರ್ಧಾರ ಮಾಡಿಯಾಗಿದೆ, ಒಂದಕ್ಕೆ ಬದಲು ಎರಡು ಮಕ್ಕಳನ್ನು ದತ್ತು ತೆಗೆದುಕೊಂಡರೆ, ಒಂಟಿತನ ಕಾಡದೆ, ಒಬ್ಬರಿಗೆ ಮತ್ತೊಬ್ಬರು ಆಟ ಪಾಠಕ್ಕೆ ಸಿಗುತ್ತಾರೆ. ಒಂದು ಗಂಡು, ಒಂದು ಹೆಣ್ಣು ಮಗುವನ್ನು ತೆಗೆದುಕೊಳ್ಳಬಹುದಲ್ಲವೇ ಎಂಬುದು ನನ್ನ ಸಲಹೆ. ತೆಗೆದುಕೊಳ್ಳುವುದರಲ್ಲಿ ತಪ್ಪೇನಿಲ್ಲ, ಆದರೆ ಅವುಗಳ ಪಾಲನೆ ಪೋಷಣೆ ನಿನ್ನ ಹೊಣೆ ಎಂದು ಹೇಳಿ ನನ್ನವರು ಜಾರಿಕೊಂಡರು. ನನಗೂ ಎರಡು ಮಕ್ಕಳನ್ನು ಸಾಕುವುದು ಅಷ್ಟು ಕಷ್ಟ ಎನಿಸಲಿಲ್ಲ. ಆದರೆ ನನ್ನ ಸಂಪೂರ್ಣ ಸಮಯವನ್ನು ಅವುಗಳ ಪೋಷಣೆಗೆ ವೈಯುಕ್ತಿಕವಾಗಿ ನೀಡಲು ಸಾಧ್ಯವಾಗದಾದಾಗ ಅವುಗಳನ್ನು ಬೆಳಗಿನಿಂದ ಸಂಜೆವರೆಗೆ ನೋಡಿಕೊಳ್ಳಲು ಮತ್ತೊಬ್ಬಳು ಆಯಾವನ್ನು ನೇಮಿಸಿಕೊಂಡೆವು. ನಾನು ನನ್ನದೇ ಕಾರ್ಯಗಳಲ್ಲಿ ತೊಡಗಿದುದರಿಂದ ಆ ಮಕ್ಕಳೂ ಆ ಆಯಾಳೇ ತಾಯೆಂದು ಭಾವಿಸತೊಡಗಿದವು.

ದತ್ತು ತೆಗೆದುಕೊಳ್ಳುವುದಕ್ಕೆ ಹೋದಾಗ ಅದರಲ್ಲಿನ ತೊಡಕುಗಳು, ಷರತ್ತುಗಳು ನಮಗೆ ಪರಿಚಯವಾದವು. ನನ್ನ ಕೆಲವು ಗೆಳತಿಯರು ಈ ರೀತಿ ದತ್ತು ತೆಗೆದುಕೊಳ್ಳುವುದಕ್ಕೆ ಹೋದಾಗ ದತ್ತು ನೀಡುವವರು ನಮ್ಮ ಬಗೆಗೆ ತಿಳಿದುಕೊಳ್ಳುವ ಅಂಶಗಳು ಎಷ್ಟು ಕಠಿಣವಾಗಿರುತ್ತವೆ ಎಂಬುದು ಅರಿವಾಗತೊಡಗಿತು. ದತ್ತು ನೀಡುವವರು ತಾವು ದತ್ತು ನೀಡುವ ಮಗುವಿನ ಭವಿಷ್ಯದ ಬಗೆಗೆ ಕಾಳಜಿವಹಿಸುತ್ತಾರೆ. ಅವರನ್ನು ಸಾಕುವ ನಮ್ಮ ಸಾಮರ್ಥ್ಯದ ಬಗೆಗೆ ಅವರಿಗೆ ಖಚಿತವಾದ ಮಾಹಿತಿ ನೀಡಬೇಕು. ಆ ಮಕ್ಕಳ ಹೆಸರಿನಲ್ಲಿ ಎಷ್ಟೋ ಲಕ್ಷ ರೂ.ಗಳ ನಿಶ್ಚಿತ ಠೇವಣಿ ಇಡಬೇಕು. ಆಗಾಗ ಆ ಸಂಸ್ಥೆಯವರು ಬಂದು ನಾವು ಮಗುವನ್ನು ಹೇಗೆ ನೋಡಿಕೊಳ್ಳುತ್ತಿದ್ದೇವೆಂದು ಮಗುವಿನಿಂದ, ನೆರೆಹೊರೆಯವರಿಂದ ಮಾಹಿತಿ ಪಡೆಯುತ್ತಿರುತ್ತಾರೆ. ಮಗುವಿನ ಭವಿಷ್ಯತ್ತಿಗಾಗಿ ನಾವು ಏನೇನು ಆಸ್ತಿಯನ್ನು ಮೀಸಲಿಟ್ಟಿರುತ್ತೇವೆ ಎಂಬ ಬಗೆಗೂ ಅವರಿಗೆ ಸಮಾಧಾನ ಆಗುವ ರೀತಿಯಲ್ಲಿ ವಿವರಣೆ ನೀಡಬೇಕಾಗುತ್ತದೆ. ಇವೆಲ್ಲ ಷರತ್ತುಗಳನ್ನೂ ವಿಧಿವತ್ತಾಗಿ ಪೂರೈಸಿದನಂತರವಷ್ಟೇ ಅವರು ಆ ಮಗುವನ್ನು ನಮ್ಮ ಸುಪರ್ದಿಗೆ ನೀಡಿ ದತ್ತಕ ನಿಬಂಧಕರಲ್ಲಿ ರಿಜಿಸ್ಟರ್ ಮಾಡಿಸುತ್ತಾರೆ. ಈ ರೀತಿ ಸಂದರ್ಶನದಲ್ಲಿ ದತ್ತು ತೆಗೆದುಕೊಂಡು ಮಕ್ಕಳನ್ನು ಸಾಕುವ ಸಾಮರ್ಥ್ಯ ಇಲ್ಲವೆಂಬ ಕಾರಣಕ್ಕೆ ಗೆಳತಿಯೊಬ್ಬಳಿಗೆ ದತ್ತನ್ನು ನಿರಾಕರಿಸಲಾದ ವಿಚಾರ ತಿಳಿದುಬಂತು. ಅಂತೂ ಇಂತೂ ಎಲ್ಲ ನಿಯಮಗಳನ್ನೂ ಪೂರೈಸಿ ಮಗುವನ್ನು ದತ್ತು ತೆಗೆದುಕೊಂಡು ಬಂದ ದಿನ ನನ್ನ ಜೀವನ ಸಾರ್ಥಕವಾಯಿತೆನ್ನುವ ಭಾವ ನನ್ನಲ್ಲಿ ಮೂಡಿತು. ಮಗುವಿಗೆ ನಿಜತಾಯಿಯಂತೆ ಅದರ ಬೇಕುಬೇಡಗಳನ್ನು ಪೂರೈಸುತ್ತಾ ಅದರ ಮೂಲಕ ನನ್ನ ಕೊರತೆಯನ್ನು ನೀಗಿಕೊಳ್ಳುವ ಕಾಯಕದಲ್ಲಿ ತೊಡಗಿದೆ. ನಮ್ಮವರೂ ತಮ್ಮ ಮಗುವಿನಂತೆಯೇ ಅದನ್ನು ಮುದ್ದಿಸತೊಡಗಿದರು. ಮಗುವಿನ ಜನ್ಮದಿನವನ್ನು ಭರ್ಜರಿಯಾಗಿ ಮಾಡಿದೆವು. ಇವೆಲ್ಲದರ ನಡುವೆ ಸಂಬಂಧೀಕರು, ಅಕ್ಕಪಕ್ಕದವರು ಆಡಿಕೊಳ್ಳುವುದು ತಪ್ಪಲಿಲ್ಲ. ಮಗುವನ್ನು ಹೆರದೇ ತಾಯಿಯಾದವಳು, ಅವಳಿಗೆ ಹೇಗೆ ಗೊತ್ತಾಗಬೇಕು ಮಗು ಹೆತ್ತ ತಾಯಿಯ ನೋವುನಲಿವು. ತನ್ನ ಒಡಲಿನಿಂದ ಹೊರಬಂದ ಕೂಸೇ ಮುಪ್ಪಿನಲ್ಲಿ ತಂದೆತಾಯಿಯರನ್ನು ದೂರಮಾಡುವ ಇಂದಿನ ಕಾಲದಲ್ಲಿ ದಿಕ್ಕು- ದೆಸೆಯಿಲ್ಲದ ಯಾರದೋ ಮಗು ಸಾಕಿದವರನ್ನು ನೋಡಿಕೊಳ್ಳುವುದುಂಟೇ ಇತ್ಯಾದಿ ಮೂದಲಿಕೆಗಳು ಕಿವಿಗೆ ಅಪ್ಪಳಿಸುತ್ತಿದ್ದವು. ಇದ್ಯಾವುದನ್ನೂ ಲೆಕ್ಕಿಸದೇ ನನ್ನ ಪಾಡಿಗೆ ನಾನು ಮಗುವಿನ ಆರೈಕೆಯಲ್ಲೇ ನನ್ನ ಜೀವನವನ್ನು ಕಳೆಯತೊಡಗಿದೆ. ನನಗೆ ಆ ಮಗು ನಮ್ಮ ಮುಪ್ಪಿನ ದಿನಗಳಲ್ಲಿ ನಮ್ಮನ್ನು ನೋಡಿಕೊಳ್ಳಬೇಕೆಂಬ

ಆಸೆಯೇನೂ ಇರಲಿಲ್ಲ. ಪ್ರಾಣಿಪಕ್ಷಿಗಳ ಪ್ರಪಂಚದಲ್ಲಿ ಅಂತಹ ವಿಚಾರಗಳೇನೂ ಇರುವುದಿಲ್ಲ ಅಲ್ಲವೇ? ಮೊಟ್ಟೆಯೊಡೆದು ಮರಿ ಹೊರಬಂದು ಅದರ ರೆಕ್ಕೆ ಬಲಿಯುವವರೆಗೆ ಅದರ ತಂದೆತಾಯಿಗಳು ಅವುಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತವೆ. ಆದರೂ ರೆಕ್ಕೆಬಲಿತ ಹಕ್ಕಿ ತನ್ನ  ಮುಂದಿನ ಬದುಕನ್ನು ತಾನೇ ಕಂಡುಕೊಳ್ಳಲು ಹಾರಿಹೋಗುವಂತೆ, ಪ್ರಾಣಿಗಳೂ ಯೌವನಕ್ಕೆ ಬಂದಾಗ ತಮ್ಮ ಬದುಕನ್ನು ಹುಡುಕಿಕೊಂಡು ಬೇರೆಲ್ಲಿಗೋ ಹೊರಟುಹೋಗುತ್ತವೆ. 'ಸಮರ್ಥನಿಗೆ ಮಾತ್ರ ಬಾಳು' (Survival of the fittest) ಇದು ಪ್ರಾಣಿಪ್ರಪಂಚದ ನಿಯಮ. ಈಚೀಚೆಗೆ ಇದು ಮಾನವ ಪ್ರಪಂಚಕ್ಕೂ ಅನ್ವಯಿಸತೊಡಗಿದೆ. ಹಾಗಾಗಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಮಗುವನ್ನು ಬೆಳೆಸತೊಡಗಿದೆವು. ಅದರ ಎಲ್ಲ ಬೇಕುಗಳನ್ನು ನಮಗೆ ತಿಳಿದಂತೆ ಪೂರೈಸತೊಡಗಿದೆವು ಕೂಡಾ.

ಮಗುವಿಗೆ ಐದು ವರ್ಷ ತುಂಬುವವರೆಗೆ ಅಂತಹ ತೊಂದರೆ ಏನೂ ಆಗಲಿಲ್ಲ. ಐದು ವರ್ಷ ತುಂಬಿದನಂತರ ಮಗುವಿಗೆ ತಾವು ಅದನ್ನು ದತ್ತು ಪಡೆದ ವಿಚಾರವನ್ನು ಅದಕ್ಕೆ ತಿಳಿಸಿದೆವು. ನಂತರವಷ್ಟೇ ಶುರುವಾಯಿತು ಸಮಸ್ಯೆಗಳ ಸರಮಾಲೆ.ದತ್ತು ಪಡೆದ ಮಗುವನ್ನು ಮುದ್ದಿನಿಂದ ಸಾಕಿದರೂ ಅದು ಬೆಳೆದು ವಿಷಯ ಅರ್ಥಮಾಡಿಕೊಳ್ಳುವ ವೇಳೆಗೆ ಅದಕ್ಕೆ ನಿಜಸಂಗತಿ ತಿಳಿಸಬೇಕೆಂದು ಕಾನೂನು ಹೇಳುತ್ತದೆಯಾದುದರಿಂದ ನಾವು ಆ ವಿಷಯವನ್ನು ಬೆಳೆಯುತ್ತ ಬಂದ ಮಗುವಿಗೆ ತಿಳಿಸಿದ್ದೆವು. ನಿಜಸಂಗತಿ ತಿಳಿದನಂತರ ನಮ್ಮ ಬಗೆಗಿನ ಆ ಮಗುವಿನ ನಡವಳಿಕೆ ದೊಡ್ಡ ಪ್ರಮಾಣದಲ್ಲಿ ವ್ಯತ್ಯಾಸಗೊಳ್ಳುತ್ತಾಹೋಯಿತು. ನಾವು ನಿರೀಕ್ಷಿಸದ ರೀತಿಯಲ್ಲಿ ಆ ಮಗು ನಮ್ಮ ಮುಂದೆ ಇಟ್ಟ ವಿಚಾರ ನಮ್ಮನ್ನು ಬೆಚ್ಚಿಬೀಳಿಸಿತು. ನನ್ನನ್ನು ನೀವು ದತ್ತು ತೆಗೆದುಕೊಂಡುದರಿಂದ ನಾನು ಹಲವಾರು ಸೌಲಭ್ಯವಂಚಿತನಾಗಿರುತ್ತೇನೆ. ನೀವು ನನ್ನನ್ನು ದತ್ತು ತೆಗೆದುಕೊಳ್ಳದೇ ಹೋಗಿದ್ದಲ್ಲಿ, ನನ್ನನ್ನು ಇನ್ನೂ ಶ್ರೀಮಂತರು ದತ್ತು ಪಡೆದುಹೋಗುವ ಅವಕಾಶವಿತ್ತು. ನೀವು ಅದನ್ನು ತಪ್ಪಿಸಿರುತ್ತೀರಿ. ಈಗ ನನಗೆ ಇಂತಿಂತಹ ಸೌಲಭ್ಯಗಳು ಬೇಕಾಗಿವೆ. ಅವುಗಳನ್ನು ಕೊಡಿಸಿಕೊಡುವ ಹೊಣೆಗಾರಿಕೆ ನಿಮ್ಮ ಮೇಲಿದೆ. ನನ್ನನ್ನು ದತ್ತು ತೆಗೆದುಕೊಳ್ಳುವ ಸಮಯದಲ್ಲಿ ನೀವು ಶಿಶುನಿವಾಸದವರಿಗೆ ಬರೆದುಕೊಟ್ಟಿರುವ ಮುಚ್ಚಳಿಕೆ ಪ್ರಕಾರ ನನ್ನನ್ನು ಯಾವುದೇ ಕೊರತೆ ಇಲ್ಲದಂತೆ ಬೆಳೆಸುವೆವೆಂದು ತಿಳಿಸಿರುತ್ತೀರಿ. ನೀವು ನನ್ನ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ, ನನ್ನನ್ನು ಸೌಲಭ್ಯವಂಚಿತ ಮಾಡಿರುವುದಾಗಿ ನಾನೇ ಈ ಬಗೆಗೆ ಪೋಲೀಸರಿಗೆ

ಮರುನೀಡಬೇಕಾಗುತ್ತದೆ ನಾವು ಈ ರೀತಿಯಲ್ಲಿ ಯೋಚಿಸಿಯೇ ಇರಲಿಲ್ಲ. ಸುಖಾಸುಮ್ಮನೆ ಇಲ್ಲದ ಉಸಾಬರಿಯನ್ನು ಮೈಮೇಲೆ ಎಳೆದುಕೊಂಡಂತಾಯಿತು ಎನ್ನಿಸತೊಡಗಿದೆ. ಒಂದು ರೀತಿಯಲ್ಲಿ ನಮ್ಮನ್ನೇ ಬ್ಲಾಕ್‌ಮೇಲ್ ಮಾಡತೊಡಗಿವೆ ಆ ದತ್ತು ಮಕ್ಕಳು. ಒಂಬತ್ತು ತಿಂಗಳು ಒಡಲಲ್ಲಿ ಹೊತ್ತು ಹೆತ್ತ ಮಕ್ಕಳು ಬೆಳೆದನಂತರ ಒಂದು ರೀತಿಯ ಸಮಸ್ಯೆಯನ್ನು ತಂದರೆ ಸ್ವಂತಮಕ್ಕಳನ್ನು ಪಡೆಯಲಾಗದವರು ಇತರರ ಮಕ್ಕಳನ್ನೇ ತಮ್ಮ ಮಕ್ಕಳೆಂದು ಎಲ್ಲ ಪ್ರೀತಿ ಧಾರೆ ಎರೆದು ಸಾಕಿದರೂ ಅವುಗಳು ಮತ್ತೊಂದು ರೀತಿಯ ಸಮಸ್ಯೆಗಳನ್ನು ತಂದೊಡ್ಡುತ್ತಿವೆ. ಇದಕ್ಕೆ ಅಪವಾದಗಳಾದವರೂ ಇರಬಹುದು ಅದು ಬಲು ಅಪರೂಪ. ನೀವೇನಾದರೂ ದತ್ತು ತೆಗೆದುಕೊಳ್ಳಬೇಕೆಂದು ಬಯಸಿದ್ದಲ್ಲಿ ತುಂಬಾ ಯೋಚನೆ ಮಾಡಿ ನಿರ್ಧಾರಕ್ಕೆ ಬನ್ನಿ ಪ್ಲೀಸ್.

2–3–2017

* * * * *

## ಲೇಖನ – 26

# ಅರಮನೆ ಎಂಬ ಸಂತೆಯಲ್ಲಿ

ಅಲ್ಲಾ ಮೊದಲೆಲ್ಲಾ ಜನಸಂಖ್ಯೆ ಇಷ್ಟಿರಲಿಲ್ಲವೋ ಅಥವಾ ಜನರಿಗೇ ಸುಖಾಸುಮ್ಮನೇ ತಿರುಗಾಡುವ ಹುಚ್ಚು ಹಿಡಿದಿರಲಿಲ್ಲವೋ ಗೊತ್ತಿಲ್ಲ. ಈಗಂತೂ ಅದು ಅರಮನೆಯೇ ಇರಲಿ, ಸೆರೆಮನೆಯೇ ಇರಲೀ, ಮೃಗಾಲಯವೇ ಆಗಲಿ, ಮ್ಯೂಸಿಯಂ ಇರಲೀ ಎಲ್ಲಿ ನೋಡಿದರೂ ಒಂದು ಸಂತೆಯೇ ನೆರೆದಿರುತ್ತದೆ. ತಿರುಪತಿ ಮತ್ತು ಅಯ್ಯಪ್ಪನ ದೇವಸ್ಥಾನಗಳಲ್ಲಿ ಮಾತ್ರವೇ ಆ ನೂಕುನುಗ್ಗಲು ಎಂದುಕೊಂಡಿದ್ದವರಿಗೆ ಈಗ ಎಲ್ಲಿ ಹೋದರೂ ನೆಮ್ಮದಿ ಶಾಂತಿ ಸಿಗುವುದು ಅನುಮಾನವೇ ಸರಿ.

ನಿಧಾನವಾಗಿ ಸಂಜೆಹೊತ್ತು ಕೆಲಸಮಯ ಕಳೆಯಲು ನಮ್ಮಪ್ಪನೊಡನೆ ಮೈಸೂರಿನ ಅರಮನೆ ಕಡೆಗೆ ಹೆಜ್ಜೆಹಾಕುತ್ತಿದ್ದುದು ಇನ್ನೂ ಮನದಲ್ಲಿ ಹಚ್ಚಹಸುರಾಗಿದೆ. ನಾನು, ನನ್ನ ತಂಗಿಯರೊಡನೆ ಕೆಂಪನಂಜಾಂಬ ಅಗ್ರಹಾರದಿಂದ ಹೊರಟ ನಮ್ಮ ಪುಟ್ಟ ಮೆರವಣಿಗೆ ಒಂದರ್ಧ ಘಂಟೆಯಲ್ಲಿ ಅರಮನೆ ತಲುಪಿಬಿಡುತ್ತಿತ್ತು. ಅರಮನೆ ಒಳ ಪ್ರವೇಶಿಸಲು ಮಾರಮ್ಮನ ಗುಡಿ ಮಗ್ಗುಲ ಪುಟ್ಟ ದರ್ವಾಜ, ಪ್ಯಾಲೇಸ್ ಕಛೇರಿ ಕಡೆಯಿಂದ ದೊಡ್ಡ ಗೇಟ್ ಮತ್ತು ಕೋಟೇ ಆಂಜನೇಯನ ಗುಡಿ ಪಕ್ಕದ ಎರಡು ಗೇಟುಗಳು ಎಲ್ಲದರಲ್ಲೂ ಅನುಮತಿ ಇರುತ್ತಿತ್ತು. ಸಂಜೆ ಹೊತ್ತು 7 ಘಂಟೆಗೆ ಸರಿಯಾಗಿ ಅರಮನೆಯ ಮುಖ್ಯ ಕಟ್ಟಡ, ಸುತ್ತಮುತ್ತಲಿನ ಕೋಟೆ ಬಾಗಿಲುಗಳು ಎಲ್ಲ ದೀಪಗಳೂ ಒಮ್ಮೆಗೇ ಹತ್ತಿಕೊಂಡು ಒಂದು ಇಂದ್ರಲೋಕವನ್ನೇ ಸೃಷ್ಟಿಸುತ್ತಿದ್ದವು. ಈ

ದೀಪಾಲಂಕಾರ ನೋಡಲೆಂದೇ ಸಹಸ್ರಸಹಸ್ರ ಸಂಖ್ಯೆಯ ಮೈಸೂರಿಗರು ಸಂಜೆಯಾಗುತ್ತಿದ್ದಂತೆಯೇ ಅರಮನೆಯ ಅಂಗಳದಲ್ಲಿ ಜಮಾಯಿಸುತ್ತಿದ್ದರು. ಅದರಲ್ಲೂ ದಸರಾ ಸಮಯದಲ್ಲಿ ದರ್ಬಾರ್ ನಡೆಸಲು ಮಹಾರಾಜರು ಸಿಂಹಾಸನವನ್ನೇರುತ್ತಿದ್ದಂತೆ ಈ ದೀಪಗಳು ಹತ್ತಿಕೊಳ್ಳುತ್ತಿದ್ದುದನ್ನು ಕಂಡ ನಾವುಗಳು ರಾಜರ ಕಾಲಬಳಿಯಲ್ಲಿಯೇ ಎಲ್ಲ ದೀಪಗಳ ಸ್ವಿಚ್ ಇರಬಹುದೆಂದು ಭಾವಿಸಿದ್ದೆವು. ಈ ಜನಸಂದಣಿಯ ಲಾಭ ಪಡೆಯಲು ಹುರಿದ ಕಡಲೇಕಾಯಿಯವರು, ಚುರುಮುರಿ ವ್ಯಾಪಾರಿಗಳು ಅಲ್ಲಲ್ಲಿ ಓಡಾಡಿಕೊಂಡು ಭರ್ಜರಿ ವಹಿವಾಟು ನಡೆಸುತ್ತಿದ್ದರು. ಸಂಜೆ ದೀಪಗಳನ್ನು ನೋಡಲು ಮುಗಿಬೀಳುತ್ತಿದ್ದ ಜನ ಹಗಲುಹೊತ್ತು ಅರಮನೆಯ ಒಳಗಡೆಯ ದೃಶ್ಯ ವೀಕ್ಷಣೆಗೆ ಹೋಗಲು ಅವಕಾಶವಿರುತ್ತಿತ್ತು. ಬೊಂಬೆ ತೊಟ್ಟಿ, ದರ್ಬಾರ್ ಹಾಲ್, ಆಯುಧ ಕೋಣೆ, ಮಯೂರ ಸಿಂಹಾಸನ, ಚಿನ್ನದ ಅಂಬಾರಿ, ರಾಜವಂಶಜರ ಪೋಷಾಕುಗಳು, ಛಾಯಾಚಿತ್ರಗಳು ಎಲ್ಲವನ್ನೂ ಮುಕ್ತವಾಗಿ ಕಾಣಬಹುದಿತ್ತು. ಆದರೆ ಇಂದಿನ ಪರಿಸ್ಥಿತಿಯೇ ಬೇರೆ. ಜನಜಂಗುಳಿಯ ನಡುವೆ ಯಾವ ದೃಶ್ಯವೂ ಮನದಲ್ಲಿ ಉಳಿಯುವುದಿಲ್ಲ. ಮಾರಿಗುಡಿಯ ಬಯಲು ತುಂಬಿ, ಪ್ಯಾಲೇಸ್ ಆಫೀಸಿನ ಮುಂಭಾಗದ ಕೋಟೆ ಆವರಣ, ಪ್ಯಾಲೇಸ್ ಕಛೇರಿಯ ಆವರಣ ಹೀಗೆ ಎಲ್ಲ ಕಡೆಯೂ ಕಾರ್ ಪಾರ್ಕಿಂಗ್ ಏರ್ಪಡಿಸಿದ್ದರೂ ಸ್ಥಳಾವಕಾಶದ ಕೊರತೆ ಇದ್ದೇ ಇರುತ್ತದೆ. ಹೇಗೋ ಕಾರು ನಿಲ್ಲಿಸಿ ಅರಮನೆ ಪ್ರವೇಶಿಸಬೇಕೆಂದರೆ ಅಲ್ಲೂ ದೊಡ್ಡ ಜನಸಾಗರ. ನಡುವೆ ನುಸುಳಿ ಪ್ರವೇಶ ಟಿಕೇಟ್ ಪಡೆದು ಒಳಗೆ ಹೆಜ್ಜೆಯಿಟ್ಟರೆ ಅಲ್ಲಿ ಮತ್ತೊಂದು ಕಡೆ ದೊಡ್ಡ ಗುಂಪು, ತಳ್ಳಾಟ, ನೂಕಾಟ. ಇದು ಏತಕ್ಕೆಂದರೆ ನಿಮ್ಮ ಪಾದರಕ್ಷೆಗಳನ್ನು ಕಾಪಿಡಲು ಮತ್ತು ವಾಪಸುಪಡೆಯಲು. ತಮ್ಮವರ ಚಪ್ಪಲಿಗಳನ್ನು ಎರಡೂ ಕೈಗಳಲ್ಲಿ ಎದೆಗವುಚಿಕೊಂಡು ಬಂದು ಕೌಂಟರ್‌ನಲ್ಲಿ ಕೊಟ್ಟು ಅವನಿಂದ ಟೋಕನ್ ಪಡೆದು ಯುದ್ಧವೊಂದನ್ನು ಗೆದ್ದುಬಂದವರಂತೆ ಬೀಗುತ್ತಿದ್ದವರೇ ಎಲ್ಲರೂ. ನಂತರ ಬರಿಗಾಲಲ್ಲಿ ಅರಮನೆ ಪ್ರವೇಶ.

ಮೊದಲೆಲ್ಲ ಅರಮನೆ ಒಳಹೊಕ್ಕರೆ ಬೊಂಬೆತೊಟ್ಟಿಯಲ್ಲಿ ಕಾಣಸಿಗುತ್ತಿದ್ದುದು ಆಳೆತ್ತರದ ಬೊಂಬೆಗಳು, ನಂತರ ರಾಜರು ಬಳಸುತ್ತಿದ್ದ ಆಯುಧಗಳು, ಪೋಷಾಕುಗಳು, ದಸರಾದಲ್ಲಿ ಮಹಾರಾಜರನ್ನು ಹೊತ್ತೊಯ್ಯುತ್ತಿದ್ದ ಅಂಬಾರಿ, ದಸರಾ ದರ್ಬಾರಿನಲ್ಲಿ ರಾಜರೇರಿ ಕುಳಿತುಕೊಳ್ಳುತ್ತಿದ್ದ ರತ್ನಖಚಿತ ಸ್ವರ್ಣಸಿಂಹಾಸನ ಇವೆಲ್ಲವುಗಳ ದರ್ಶನವಾಗುತ್ತಿತ್ತು. ಇಂದು ಅಂಬಾರಿಯ ಪ್ರತಿಕೃತಿ ಒಂದೆಡೆ ಕಂಡು ಬಂದರೆ ಮತ್ತೊಂದೆಡೆ ಸಿಂಹಾಸನ ದರ್ಶನವೇ ಆಗುತ್ತಿಲ್ಲ. ಇರುವುದನ್ನೇ

ನೆಮ್ಮದಿಯಿಂದ ವೀಕ್ಷಿಸೋಣವೆಂದರೆ ಅದಕ್ಕೂ ಸಂಚಕಾರ. ಮುಂಬೈ ಮದರಾಸುಗಳಲ್ಲಿ ಲೋಕಲ್ ಟ್ರೈನುಗಳಿಗೆ ನುಗ್ಗುವಂತೆ ಜನ ನುಗ್ಗುತ್ತಿರುತ್ತಾರೆ. ಅದಕ್ಕೇ ಅಂದುದು "ಅರಮನೆ ಎಂಬ ಸಂತೆ" ಎಂದು.!

* * * * * *

# ಲೇಖನ – 27

# ಈ ಜೀವ ನಿಮಗಾಗಿ

**ಲೇ** ಕೆಂಪಿ, ಆ ಬಿಳಿಯಮ್ಮನ 30 ಮಕ್ಕಳು ನಿನ್ನೆ ಬೆಂದೋದ್ವಂತಲ್ಲೇ, ಕೇಳಿ ಶ್ಯಾನೆ ಬೇಜಾರಾಯ್ತು. ಅಯ್ಯೋ ಬುಡುಬುಡು ಇವೆಲ್ಲಾ ಮಾಮೂಲಿ, ಕಳೆದ್ವಾರ ಆ ಕರಗೀ ಕಡೇ ಹತ್ಕಂದೀನ ಕಚಕಚಕ್ ಅಂತ ಕತ್‌ಕುಯ್ದು ಕುದಿಯೋ ನೀರಾಗೇ ಬೇಸ್ಬುಟ್ರು, ನಮ್ವಂಸಾ ಇರೋದೇ ಅದಕಲ್ವಾ, ಅದ್ಕೇ ಏಳೋದೂ 'ಈ ಜೀವ ನಿಮಗಾಗಿ' ಅಂಮ್ತ. ಇದು ಯಾವುದೋ ಸಿನಿಮಾ ಡಯಲಾಗಲ್ಲಾ, ಕೆಲ ಸಾಕುಪ್ರಾಣಿಗಳು ತಮ್ಮನ್ನು ಸಾಮೂಹಿಕವಾಗಿ ಕೊಲ್ಲುತ್ತಿರುವ ಮನಗಳ ಬಗೆಗೆ ಆಡಿಕೊಳ್ಳಬಹುದಾದ ಸಂಭಾಷಣೆ. ಮನುಷ್ಯರು ತಮ್ಮವರನ್ನು ಬಿಟ್ಟು, ಮಿಕ್ಕೆಲ್ಲರನ್ನೂ, ಮಿಕ್ಕೆಲ್ಲವನ್ನೂ ಕಬಳಿಸುತ್ತಿರುವ ಬಗೆಗೆ ನನ್ನ ಅನ್ನಿಸಿಕೆ. ತೀರ ಅನಿವಾರ್ಯ ಅಂದ್ರೆ ತಮ್ಮಂತಹ ಇತರರನ್ನೂ ಇಲ್ಲವಾಗಿಸತೊಡಗಿರುವ ಕಥೆ.

ಇಂದು ಮತ್ತೊಬ್ಬರನ್ನು ಇಲ್ಲವಾಗಿಸುವುದು ಅಂದರೆ ಕೊಲೆ ಮಾಡುವುದು, ಅದು ಕತ್ತು ಸೀಳಿ ಇರಬಹುದು, ಎದೆ ಬಗೆದು ಇರಬಹುದು, ನೇಣುಬಿಗಿದು ಇರಬಹುದು, ವಿಷ ಉಣ್ಣಿಸಿ ಇರಬಹುದು, ಗುಂಡುಹಾರಿಸಿಯೂ ಇರಬಹುದು. ಇನ್ನು ಪ್ರಾಣಿಗಳನ್ನು ಈ ಮಂದಿ ಹಾಗೇ ಬದುಕಲು ಬಿಟ್ಟಾರೇ? ಮನುಜರಿಗೆ ಈ ಹಿಂದೆ ಪೂರ್ಣಚಂದ್ರ ತೇಜಸ್ವಿ ಹೇಳಿದ್ದಂತೆ "ಎರಡು ಕಾಲಿನಮೇಲೆ ನಡೆಯುವ ಮನುಷ್ಯರನ್ನು ಬಿಟ್ಟು, ಉಳಿದೆಲ್ಲವನ್ನೂ ತಿನ್ನಲು ನನಗಿಷ್ಟ". ಒಮ್ಮೆ ನಾನು ನನ್ನ ಸಹೋದ್ಯೋಗಿಯೊಬ್ಬನನ್ನು ಕೇಳಿದ್ದೆ, "ಅಲ್ಲಾ ಅಷ್ಟು ಜತನದಿಂದ

ಸಾಕಿದ ಪ್ರಾಣಿಪಕ್ಷಿಗಳನ್ನು ಕೊಂದು ತಿನ್ನಲು ನಿಮಗೆ ಅದು ಹೇಗೆ ಮನಸ್ಸು ಬರುತ್ತೆ?" ಅದಕ್ಕವರು ಕೊಟ್ಟ ಉತ್ತರ ಹೀಗಿತ್ತು: 'ನಾವು ಅವುಗಳನ್ನು ಸಾಕುವುದೇ ಮುಂದೆ ತಿನ್ನಲು. ಪ್ರತಿದಿನ ಅವುಗಳಿಗೆ ಮೇವುಹಾಕುವಾಗ ಎಷ್ಟು ಕೊಬ್ಬಿಬೆಳೆಯುತ್ತಿದೆ, ಆ ದಿನಕ್ಕೆ ಒಳ್ಳೆಯ ಊಟಕ್ಕೆ ಆಗುತ್ತೆ ಅನ್ನುತ್ತಲೇ ಸಾಕಿಬೆಳೆಸುವುದರಿಂದ, ಯಾವುದೇ ವ್ಯಾಮೋಹ ಅವುಗಳ ಮೇಲೆ ಬೆಳೆಯುವುದಿಲ್ಲ'.

ಈಗ್ಗೆ ಕೆಲದಿನಗಳ ಹಿಂದೆ ದೂರದರ್ಶನ ಚಾನಲ್ ಒಂದರಲ್ಲಿ ಒಂದು ಪ್ರಾಣಿವರ್ಗ ಮತ್ತೊಂದನ್ನು ಬೇಟೆಯಾಡುವ ದೃಶ್ಯ ಭಯಾನಕ ಹಾಗೂ ಬೀಭತ್ಸವಾಗಿತ್ತು. ಕೃಷ್ಣಮೃಗವೊಂದನ್ನು ಅಟ್ಟಿಸಿಕೊಂಡು ಬಂದ ಸೀಳುನಾಯಿಗಳ ಹಿಂಡೊಂದು, ಅದನ್ನು ಹಿಡಿದು ಅದು ಇನ್ನೂ ಕಣ್ಣು ಬಿಟ್ಟುಕೊಂಡು ಬಿಡಿಸಿಕೊಂಡು ಓಡಲು ಯತ್ನಿಸುತ್ತಿದ್ದಂತೆ ಆ ನಾಯಿಗಳು ಅದರ ಮೈಯನ್ನು ಸಿಗಿದು, ಮಾಂಸವನ್ನು ಕಿತ್ತುತಿನ್ನುತ್ತಿದ್ದ ದೃಶ್ಯ ನೋಡಲು ಅಸಹ್ಯವಾಗುತ್ತಿತ್ತು. ಇಂದು ಮನುಷ್ಯರಲ್ಲೂ ಈ ರಕ್ಕಸ ಪ್ರವೃತ್ತಿ ರಾರಾಜಿಸುತ್ತಿದೆ. ಕಾನೂನಿನ ಹೆದರಿಕೆಯೇ ಇಲ್ಲದೇ, ಪ್ರತಿದಿನವೂ ಹತ್ತಾರು ಜನರನ್ನು ಕೊಂದುಹಾಕುತ್ತಿದ್ದಾರೆ. ಬಂಧನವಾಗುವ ಮುನ್ನವೇ 'ಜಾಮೀನು' ಪಡೆದು ಹೊರಗೆ ನಿರ್ಲಜ್ಜೆಯಿಂದ ಎದೆಯುಬ್ಬಿಸಿ ಓಡಾಡಿಕೊಂಡಿರುತ್ತಾರೆ. ಅಪರಾಧ ಪ್ರಜ್ಞೆ ಅವರಿಗೆ ಕಾಡುವುದೇ ಇಲ್ಲ.

ವಿಷಯ ಎಲ್ಲೆಲ್ಲಿಗೋ ಹೋಗುತ್ತಿದೆ. ನಾನು ಹೇಳಹೊರಟದ್ದು ಪ್ರಕೃತಿ ತನ್ನ ಮೇಲಿನ ಹೊರೆ ಹೆಚ್ಚಾಗುತ್ತಿದ್ದಂತೆ ಅದನ್ನು ಕಡಿಮೆಮಾಡಿಕೊಳ್ಳುವ ದಾರಿ ತಾನೇ ಕಂಡುಕೊಳ್ಳುತ್ತದೆ. ಅದು ಭೂಕಂಪ ರೂಪದಲ್ಲಾಗಲೀ, ನೆರೆ-ಪ್ರವಾಹ ರೂಪದಲ್ಲಾಗಲೀ ಒಟ್ಟೊಟ್ಟಿಗೆ ಸಾಯಿಸಿಬಿಡುತ್ತದೆ. ಆದರೆ ಈ ಮನುಷ್ಯರು, ಕ್ಷುಲ್ಲಕ ಕಾರಣಗಳಿಗಾಗಿ ಕೊಲ್ಲುತ್ತಾರೆ. ಅದರಲ್ಲೂ ಕುರಿ, ಕೋಳಿ, ಮೀನು, ಹಂದಿ, ಮೊಲ ಅವರ ದೈನಂದಿನ ಆಹಾರ ಮಾಡಿಕೊಂಡಿರುವುದು ಎಷ್ಟು ಮಟ್ಟಿಗೆ ಸರಿ ಎನ್ನುವುದು ಸಸ್ಯಾಹಾರಿಗಳಿಗೆ ಅರಗಿಸಿಕೊಳ್ಳಲಾಗದ ವಿಷಯ. ಅದರಲ್ಲೂ ಬಡತನದ ಕಾರಣದಿಂದ ಸತ್ತ ದನದ ಮಾಂಸ ತಿನ್ನುವ ಒಂದು ವರ್ಗವಿದೆ. ಗೋಹತ್ಯೆ ನಿಷೇಧ ಕಾನೂನು ಜಾರಿಗೆ ತರುತ್ತೇವೆಂದುದಕ್ಕೆ ಪ್ರತಿಯಾಗಿ, ಇತ್ತೀಚೆಗೆ ಮಾಂಸ ತಿನ್ನದವರೂ ದನದ ಮಾಂಸ ತಿನ್ನಿಸಲು ನಿಂತು ಪ್ರತಿಭಟನೆಯಲ್ಲಿ ಭಾಗವಹಿಸಿದುದು ವಿಪರ್ಯಾಸವೇ ಸರಿ. ಈ ಪ್ರಾಣಿಗಳ ವಿಷಯ ಬಿಡಿ, ಅವನಿಗೆ ಒಂಟೆ ಮಾಂಸ, ಕೋತಿ ಮಾಂಸ, ಕೃಷ್ಣಮೃಗ/ಜಿಂಕೆ

ಮಾಂಸ ಬೇಕು. ನನ್ನ ಸಸ್ಯಾಹಾರಿ ಸಹೋದ್ಯೋಗಿಯೊಬ್ಬ ಒಂದು ಸಂದರ್ಭದಲ್ಲಿ ಆಡಿದ ಮಾತು: ನೀವೇನು ಹುಲಿಮಾಂಸ ತಿನ್ನಲಿಕ್ಕೆ ಆಗುತ್ತೇನ್ರೋ? ಅಂತೆಯೇ 'ಅಮಲಿನ ವಚನಗಳು' ಬರೆದ ಅ.ನ.ಪ್ರಹ್ಲಾದರಾಯರ ಒಂದು ಚರಣ: "ಕುದುರೆಯನಲ್ಲ, ಆನೆಯನಲ್ಲ, ಹುಲಿಯನ್ನಂತೂ ಮೊದಲೇ ಅಲ್ಲ, ಮೇಕೆಯಮರಿ ಬಲಿಕೊಡಬೇಕಂತೆ, ದೈವವೂ ದುರ್ಬಲ ಘಾತಕವಾಯ್ತ?

* * * * * *

# ಲೇಖನ - 28

## ಒಂದು ಬೆಕ್ಕಿನ ಕಥೆ

**ಒಂ**ದು ಮುಂಜಾವು ಮನೆಯ ಅಕ್ಕಪಕ್ಕದಲ್ಲೆಲ್ಲೋ ಸಣ್ಣಮಗು ಅರಚುತ್ತಿದ್ದ ಕೀರಲು ಧ್ವನಿ ಕೇಳಿಸುತ್ತಿತ್ತು. ನಮಗೆ ತಿಳಿದಮಟ್ಟಿಗೆ ನಮ್ಮ ಹಿಂದಿನ, ಮಗ್ಗುಲ ಮನೆಗಳಲ್ಲಿ ಅಷ್ಟು ಚಿಕ್ಕ ಮಕ್ಕಳು ಇದ್ದುದು ನೆನಪಿಗೆ ಬರಲಿಲ್ಲ. ಕಣ್ಣುಜ್ಜಿಕೊಳ್ಳುತ್ತಾ ಬಾಗಿಲು ತೆಗೆದು ಧ್ವನಿಯಮೂಲ ಹುಡುಕತೊಡಗಿದೆವು. ಮನೆಯ ಪಕ್ಕದ ಪೊದೆಗಳ ನಡುವಿನಿಂದ ಬರುತ್ತಿತ್ತು ಆ ಧ್ವನಿ. ಜಾಗರೂಕತೆಯಿಂದ ಆ ಸ್ಥಳ ತಲುಪಿದವರಿಗೆ ಗೋಚರಿಸಿದ್ದು ಒಂದು ಬೆಕ್ಕಿನ ಮರಿಯ ಕೂಗು. ಆ ಕೂಗು ಎಷ್ಟು ಹೃದಯ ವಿದ್ರಾವಕ ಆಗಿತ್ತೆಂದರೆ ಆ ಕೂಡಲೆ ಅದರ ರಕ್ಷಣೆಗೆ ಮುಂದಾಗದೇ ಅನ್ಯ ಮಾರ್ಗ ತೋಚಲಿಲ್ಲ.

ಈ ಹಿಂದೆಯೂ ನಮಗೆ ಬೆಕ್ಕಿನಮರಿಗಳ ಅಂತಹ ಕೂಗಿಗೆ ಮನಸೋತುದಕ್ಕೆ ಮನೆತುಂಬ ಬೆಕ್ಕುಗಳ ದೊಡ್ಡ ತಾಂಡವೇ ನಿರ್ಮಾಣಗೊಂಡಿತ್ತು. ಅಪ್ಪ, ಅಮ್ಮ, ಮಗ, ಮಗಳು, ಮೊಮ್ಮೊಕ್ಕಳು, ಮರಿಮಕ್ಕಳು ಹೀಗೆ ಅವುಗಳ ವಂಶಾಭಿವೃದ್ಧಿ ಆಗಿ ಯಾವ ರೀತಿ ಇವುಗಳಿಂದ ಮುಕ್ತಿಪಡೆಯುವುದು ಎಂಬ ಚಿಂತೆ ಕಾಡತೊಡಗಿತ್ತು. ಪ್ರಕೃತಿ ತನ್ನ ಭಾರವನ್ನು ತಾನೇ ಸಮತೋಲನಮಾಡಿಕೊಳ್ಳುವುದಂತೆ.ಅಂತೆಯೇ ಈ ಬೆಕ್ಕುಗಳ ಬಾಧೆ ತಂತಾನೇ ತೀರಿಹೋದ ಬಗೆ ಆಶ್ಚರ್ಯಕರವಾದುದು. ಬೆಳೆದ ವಯಸ್ಕ ಗಂಡುಬೆಕ್ಕುಗಳು ಮತ್ತೆಲ್ಲೋ ಹೆಣ್ಣುಬೆಕ್ಕುಗಳನ್ನು ಅರಸುತ್ತಾ ನಮ್ಮ ಮನೆಯಿಂದ ಕಣ್ಮರೆಯಾದರೆ, ಹಲವಾರು ಮರಿಬೆಕ್ಕುಗಳು ತಪ್ಪಿಸಿಕೊಳ್ಳಲಾರದೇ ನಾಯಿಗಳ ಬಾಯಿಗೆ ಆಹುತಿಯಾದವು.

ಮತ್ತೆ ಕೆಲವು ಕಾಯಿಲೆಯಿಂದ ನನ್ನ ಮಡದಿಯ ಮಡಿಲಿನಲ್ಲಿಯೇ ಕೊನೆಯುಸಿರೆಳೆದವು. ಒಟ್ಟು 30 ರಿಂದ 40 ರಷ್ಟಿದ್ದ ಬೆಕ್ಕುಗಳ ಸಂಖ್ಯೆ ಎರಡು ಗಂಡು ಬೆಕ್ಕುಗಳಿಗೆ ಬಂದುನಿಂತಿತು.

ಆ ಎರಡು ಬೆಕ್ಕುಗಳಲ್ಲಿ ಒಂದು ಬೆಕ್ಕು ಪಕ್ಕಾ ಕೋಳಿಕಳ್ಳ ಎಂಬ ಖ್ಯಾತಿಗೆ ಪಾತ್ರವಾಗಿತ್ತು. ನೂರಾರು ಅಡಿದೂರದಲ್ಲಿದ್ದ ಮನೆಗಳ ಬಳಿ ತೆರಳಿ ಸಾಕಿದ ಕೋಳಿಗಳನ್ನೇ ಹೊತ್ತುಕೊಂಡು ಬಂದು ತಾರಸಿಯ ಮೇಲೋ, ಗಿಡಗಳ ಮರೆಯಲ್ಲೋ ತಿಂದುಮುಗಿಸಿ ಏನೂ ಅರಿಯದವನಂತೆ ಬಂದು ಕೊಠಡಿಯ ಮಂಚದ ಕೆಳಗೆ ಮಲಗಿಬಿಡುತ್ತಿತ್ತು. ಒಂದೆರಡು ಸಲ ಕೋಳಿಮಾಲೀಕರು ಮನೆಯ ಬಳಿಬಂದು ನಿಮ್ಮ ಬೆಕ್ಕು ನಮ್ಮ ಕೋಳಿ ಹೊತ್ತುತಂದು ತಿಂದಿದೆ ಎಂದು ದೂರಿದರೂ ನಾವು ಅದು ಇಲ್ಲೇ ನಮ್ಮ ಮನೆಯಲ್ಲೇ ಮಲಗಿದೆ; ಕೋಳಿ ಕದ್ದುದು ಇನ್ನಾವುದೋ ಬೆಕ್ಕು ಇರಬೇಕು ಎಂದು ದಬಾಯಿಸಿ ಕಳುಹುತ್ತಿದ್ದೆವು. ಆದರೆ ಒಂದು ದಿನ ಸಂಜೆ ಕಾಲೆಳೆದುಕೊಂಡು ಒಂದು ಕಣ್ಣುಮುಚ್ಚಿಕೊಂಡು ಬಂದ ನಮ್ಮ ಬೆಕ್ಕನ್ನು ನೋಡಿದಾಗಲೇ ಕೋಳಿಕಳ್ಳ ಇದೇ ಇರಬೇಕು ಎಂದನ್ನಿಸಿದ್ದು. ಮನೆಯಲ್ಲೇ ಇಟ್ಟುಕೊಂಡರೆ ಇದರಿಂದ ನೆರೆಹೊರೆಯವರೊಡನೆ ಜಗಳ ಆಡಬೇಕಾಗುತ್ತದೆ ಎಂದೆನಿಸಿದಾಗ ಅದನ್ನು ಪಕ್ಕದ ಜಿಲ್ಲೆಗೆ ಸಾಗಿಸಿ ಬಿಟ್ಟುಬಂದುದಾಯಿತು. ಉಳಿದಿದ್ದ ಮತ್ತೆರಡು ಬೆಕ್ಕುಗಳನ್ನು ಬೆಂಗಳೂರಿನ ಹೆಬ್ಬಾಳ ದಲ್ಲಿರುವ 'ಕರುಣಾ' ಸಂಸ್ಥೆಗೆ ಹಸ್ತಾಂತರಿಸಲಾಯಿತು. ಹೀಗೆ ಬೆಕ್ಕುಗಳಿಂದ ದೊರಕಿಸಿಕೊಂಡೆವು ಮುಕ್ತಿ.

ಪದೇ ಪದೇ ನನ್ನ ಶ್ರೀಮತಿಗೆ ಬೆಕ್ಕಿನ ಮೋಹದ ಬಗೆಗೆ ಎಚ್ಚರಿಸುತ್ತಿದ್ದೆ. ಮಗಳ ಹಠಕ್ಕೆ ಮನಸೋತು ಬೆನ್ನಿಗೆ ಕಟ್ಟಿಕೊಂಡ ಕಷ್ಟಗಳ ಸರಮಾಲೆ ಮತ್ತೆ ಮತ್ತೆ ನೆನಪಿಸುತ್ತಿದ್ದೆ. ಹಲವಾರು ವರ್ಷಗಳ ಬಳಿಕ ಆ ಮೋಹ ಮಗಳಿಗೆ ಮತ್ತೆ ಅಂಟಿಕೊಳ್ಳಬೇಕೇ! ಎಲ್ಲೋ ಪಕ್ಕದ ಮನೆ ಬಳಿ ಸುಳಿದಾಡುತ್ತಿದ್ದ ಹಲವಾರು ಬೆಕ್ಕಿನಮರಿಗಳಲ್ಲಿ ಒಂದೆರಡು ಇವರ ಮನೆಬಳಿ ಬಂದಾಗ ಅದಕ್ಕೆ ಮೊದಮೊದಲು ಹಾಲು ಹಾಕಿ, ನಂತರದ ದಿನಗಳಲ್ಲಿ 'ಕ್ಯಾಟ್ ಫುಡ್' ತರಿಸಿ ಹಾಕತೊಡಗಿದಳು. ಅವುಗಳ ಸಂತಾನವೂ ವೃದ್ಧಿಯಾಗತೊಡಗಿತು. ಸಂಖ್ಯೆ ಬಲುಬೇಗ ಐದಾರಕ್ಕೆ ಮುಟ್ಟಿತು. ನಾವು ಈಗಲೇ ಅವುಗಳನ್ನು ದೂರವಿಡದಿದ್ದಲ್ಲಿ ಹಿಂದೆ ಅನುಭವಿಸಿದ ತೊಂದರೆ ಮತ್ತೆ ಪುನರಾವರ್ತನೆಯಾಗುವ ಬಗೆಗೆ ಎಚ್ಚರಿಕೆ ನೀಡಿ ಬಂದುದಾಯಿತು. ಮುಂದಿನದು ಅವಳಿಗೆ ಬಿಟ್ಟುಬಿಟ್ಟೆವು.

ಈಗ ನೋಡಿದರೆ ಮತ್ತೆ ಮಾಯಾಜಿಂಕೆಯ ರೀತಿಯಲ್ಲಿ ಮನೆಮಗ್ಗುಲ ಖಾಲೀ ನಿವೇಶನದಲ್ಲಿ ಆರ್ತನಾದ ಕೇಳಬರುತ್ತಿದೆ. ನಮ್ಮನ್ನು ತಮ್ಮದಾಗಿಸಿಕೊಳ್ಳಲು

ಗೋಗರೆಯುವ ಆರ್ತನಾದ. ನಮಗ್ಯಾಕೆ ಈ ಉಸಾಬರಿ ಎಂದು ಸುಮ್ಮನಾಗಲು ಆಗಲಿಲ್ಲ. ಅದನ್ನು ಯಾರು ತಂದು ಅಲ್ಲಿ ಬಿಟ್ಟುಹೋದರೋ ತಿಳಿಯಲಿಲ್ಲ. ಈ ಹಿಂದೆಯೂ ನಮ್ಮ ಬೆಕ್ಕಿನ ಸಂಸಾರ ಪ್ರಾರಂಭವಾದುದೇ ಇದೇ ರೀತಿ ಯಾವನೋ ತನ್ನ ಟವಲಿನಲ್ಲಿ ಸುತ್ತಿಕೊಂಡು ಬಂದು ಪಕ್ಕದ ನಿವೇಶನದಲ್ಲಿ ಬಿಸಾಕಿಹೋದಾಗಲೇ. ಈಗಲೂ ಅದೇ ರೀತಿ ಈ ಬೆಕ್ಕಿನ ಮರಿ ಪ್ರತ್ಯಕ್ಷವಾಗಿದೆ. ಅದನ್ನು ಆಚೀಚೆ ಓಡಿಸಲು ಪ್ರಯತ್ನಿಸಿದರೂ ಜಪ್ಪಯ್ಯ ಅನ್ನುತ್ತಿಲ್ಲ. ಬಹುಶಃ ಯಾವುದೋ ನಾಯಿ ಅದನ್ನು ಕಚ್ಚಿಬಿಟ್ಟಿರಬಹುದು ಎಂದು ಭಾವಿಸಿ ಅಂದೇ ಅದನ್ನು ಸ್ಥಳೀಯ 'ಪ್ರಾಣಿರಕ್ಷಕ ಸಂಸ್ಥೆಗೆ' ಸಾಗಿಸಲು ಆಲೋಚಿಸಿದೆವು. ನೆಟ್‌ನಲ್ಲಿ ಹುಡುಕಲಾಗಿ ವಿಜಯನಗರದ 4ನೇ ಹಂತದಲ್ಲಿ ಅವರ ಸಂಸ್ಥೆ ಸ್ಥಾಪಿತವಾಗಿರುವುದು ತಿಳಿದುಬಂತು.

ಅವರ ಸಂಸ್ಥೆಗೆ ಮರಿಯನ್ನು ಹೊತ್ತುಕೊಂಡು ಹೋಗಿ ತೋರಿಸಲಾಗಿ ಅದನ್ನು ಬೆನ್ನುಹುರಿಹಿಡಿದು ಮೇಲೆತ್ತಿ, ಪಕ್ಕಕ್ಕೆ ಹೊರಳಿಸಿ, ಅದರ ಎಕ್ಸ್‌ರೇ ತೆಗೆದುನೋಡಿ ಅಂತಹ ಮೇಜರ್ ತೊಂದರೆ ಏನೂ ಆಗಿಲ್ಲ. ಬಹುಶಃ ಯಾವುದೋ ಪ್ರಾಣಿ ಕಚ್ಚಿರುವುದರಿಂದ ಮಾಂಸಕ್ಕೆ ಪೆಟ್ಟುಬಿದ್ದಿದೆ ಎಂಬ ತೀರ್ಮಾನಕ್ಕೆ ಬಂದರು. ಹಾಗೇ ಅದನ್ನು ತಿರುಗಿಸಿನೋಡುವಾಗ ಅದರ ಹೊಟ್ಟೆಯ ಭಾಗದಲ್ಲಿ ಹೊಲಿಗೆ ಹಾಕಿರುವುದು ಗಮನಕ್ಕೆ ಬಂತು. ಆ ಮರಿಯನ್ನು ಇಲ್ಲಿ ಬಿಟ್ಟುಹೋದವರು ಮೊದಲಿಗೆ ಯಾವುದೋ ಆಪರೇಶನ್ ಮಾಡಿಸಿರುತ್ತಾರೆ. ಬಹುಶಃ ಜನನ ನಿಯಂತ್ರಣ ಶಸ್ತ್ರಚಿಕಿತ್ಸೆಮಾಡಿಸಿರಬಹುದು ಎಂದು ತೀರ್ಪಿತ್ತರು ನಾವು ಇಷ್ಟು ಚಿಕ್ಕ ಮರಿಗೆ ಜನನ ನಿಯಂತ್ರಣ ಶಸ್ತ್ರಚಿಕಿತ್ಸೆ ಮಾಡಿಸುತ್ತಾರಾ ಎಂಬ ಸಂಶಯ ವ್ಯಕ್ತಪಡಿಸಿದಾಗ ಇದ್ದರೂ ಇರಬಹುದು ಎಂದರು. ಏನೋ ನಾವು ಅದನ್ನು ಗಮನಿಸಲಿಲ್ಲ ಎಂದೆವು. ಆದರೂ ಮನದೊಳಗೆ ಬಹುಶಃ ಇನ್ಯಾವುದೋ ಕಾರಣಕ್ಕೆ ಶಸ್ತ್ರಚಿಕಿತ್ಸೆಮಾಡಿಸಿದ್ದರೂ, ಅದು ಸರಿಯಾಗಲಾರದೇನೋ ಎಂಬ ಶಂಕೆಯಿಂದ ಅದನ್ನು ಹೀಗೆ ಬಿಸಾಡಿಹೋಗಿರಬಹುದೇನೋ ಎಂಬ ಸಂಶಯಮೂಡಿತು.

ಅದಕ್ಕೆ ಬೇಕಾದ ಶುಶ್ರೂಷೆ ಮಾಡಿ ಅದು ಮಾಮೂಲಾಗಿ ಓಡಾಡುವಂತೆ ಆದಾಗ ನೀವು ಎಲ್ಲಿಂದ ಅದನ್ನು ಹುಡುಕಿತಂದಿರೋ ಅದೇ ಪ್ರದೇಶಕ್ಕೆ ತಂದು ಬಿಡುತ್ತೇವೆ' ಎಂದು ನಮ್ಮ ಮನೆ ವಿಳಾಸ, ಮೊಬೈಲ್ ಸಂಖ್ಯೆ ಎಲ್ಲವನ್ನೂ ಬರೆದಿಟ್ಟುಕೊಂಡು, ಎಷ್ಟು ದೇಣಿಗೆ ಕೊಡುತ್ತೀರಿ ಎನ್ನಬೇಕೇ? ನಾವೂ ನಮ್ಮ ಕೈಲಾದ ಸಹಾಯಮಾಡಿದನಂತರ ನಮಗೆ ಮುಂದಿನ ಅದರ ಪ್ರಗತಿಯ ಬಗ್ಗೆ

ತಿಳಿದುಕೊಳ್ಳಲು ಆಗಾಗ ಕರೆಮಾಡುತ್ತಿರಿ ಎಂದು ತಿಳಿಸಿ ಬೀಳ್ಕೊಟ್ಟರು.

ಆ ಮರಿಯನ್ನು, ನಮ್ಮ ಮನೆಯ ಬಳಿ ಬಿಟ್ಟಾಗ ಮತ್ತೆ ಅದು ನಾಯ
ಬಾಯಿಗೆ ಸಿಕ್ಕಿಹಾಕಿಕೊಂಡರೆ ಎಂಬ ನಮ್ಮ ಪ್ರಶ್ನೆಗೆ ಅವರ ಉತ್ತರ 'ಪ್ರಾಣ
ಪ್ರಪಂಚದಲ್ಲಿನ ಕಾನೂನು 'Survival of the fittest' (ಸಶಕ್ತರಿಗಷ್ಟೇ ಬದುಕು)'
ಎಂದು! ಆ ಮರಿ ಮತ್ತೆ ಎಂದು ನಮ್ಮ ಮನೆಬಳಿ ಬಂದು ಬೀಳುತ್ತದೋ
ಎಂಬ ಕಾತರದಿಂದ ಕಾಯುತ್ತಲಿದ್ದೇವೆ.

30–8–2016

* * * * *

## ಲೇಖನ – 29

# ಮಹಾನ್ ಮೋಸಗಾರರು

ದಿನಬೆಳಗಾದರೆ ಟೀವೀ ಚಾನಲ್ಲುಗಳಲ್ಲಿ ಬರುವ ಒಂದು ಪ್ರಮುಖ ಸಮಾಚಾರ ಅಂದರೆ 'ನಾವು ಆ ಸಂಸ್ಥೆಯಲ್ಲಿ ಚೀಟಿಹಾಕಿ ಇಷ್ಟು ಲಕ್ಷ ಹಣ ಕಳೆದುಕೊಂಡೆವು, ಈ ವ್ಯಕ್ತಿ ನಮಗೆ ಇಷ್ಟು ಲಕ್ಷ ಮೋಸಮಾಡಿದ' ಎಂಬುದು. 'ನಮಗೆ ನಮ್ಮ ಹಣ ಕೊಡಿಸಿಕೊಡಿ, ಆ ವ್ಯಕ್ತಿಯನ್ನು ಜೈಲಿಗೆ ತಳ್ಳಿ' ಅಂತ ಪೋಲೀಸರ ಮೇಲೆ, ವಾಹಿನಿಗಳಲ್ಲಿ ಕುಳಿತು ಕಣ್ಣೀರು ಸುರಿಸುವುದು ಸರ್ವೇಸಾಮಾನ್ಯ.

ಯಾಕೆ ಈ ರೀತಿ ಜನ ಮೋಸಹೋಗುತ್ತಿದ್ದಾರೆ? ಬಹುಶಃ ನಮಗೆ ಸಿಗುವ ಉತ್ತರ ಅಂದರೆ 'ದುರಾಸೆ'. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾವಧಿ ಠೇವಣಿಗಳ ಮೇಲೆ ಸಾ.ಶೇ. 8 ಬಡ್ಡಿ ಕೊಟ್ಟರೆ, ಸಾಮಾಜಿಕ ನಿಯಂತ್ರಣದಲ್ಲಿರುವ ಬ್ಯಾಂಕುಗಳು ಸಾ.ಶೇ. 9 ಬಡ್ಡಿ ನೀಡಬಹುದು. ಆದರೆ ಯಾವುದೋ ಖಾಸಗೀ ಸಂಸ್ಥೆಗಳು ತಾವು ಸಾ.ಶೇ. 10 ಅಥವಾ 11 ಬಡ್ಡಿ ನೀಡುವ ಆಮಿಷ ನೀಡಿದಾಗ ಕುರಿಗಳಂತೆ ಹಳ್ಳಕ್ಕೆ ಬೀಳುತ್ತಾರೆ. ನಂತರ ತಾವು ಕಷ್ಟಪಟ್ಟು ಉಳಿಸಿಟ್ಟ ಹಣವನ್ನು ಅಂತಹ ಸಂಸ್ಥೆಗಳಲ್ಲಿ ತೊಡಗಿಸಿ, ಮೂಲ ಬಂಡವಾಳವನ್ನೇ ಕಳೆದುಕೊಳ್ಳುತ್ತಾರೆ. ಹಣಕಾಸು ಸಂಸ್ಥೆಗಳಲ್ಲಿ ಹೆಚ್ಚಿನ ಬಡ್ಡಿಗಾಗಿ ಆಸೆಪಟ್ಟು ಉಳಿಕೆಯನ್ನು ಕಳೆದುಕೊಳ್ಳುವವರ ಜೊತೆಗೆ ಇತರ ರೀತಿಯ ಆಮಿಷಗಳಿಗೆ ಒಳಗಾಗುವವರ ಬಗ್ಗೆಯೂ ತಿಳಿಯಬೇಕಿದೆ.

ಇಂದು ಎಲ್ಲರಿಗೂ ತಮ್ಮದೂ ಒಂದು ಸ್ವಂತ ಮನೆಯನ್ನೋ, ನಿವೇಶನವನ್ನೋ ಹೊಂದುವ ಆಸೆಯಿರುತ್ತದೆ. ಅವರ ಈ

ವೀಕ್‌ನೆಸ್ ಬಳಸಿಕೊಂಡು ಅವರ ಹಣಹೊಡೆಯಲು ಈ ರಿಯಲ್ ಎಸ್ಟೇಟ್ ಕುಳಗಳು ಕಾದುಕುಳಿತಿರುತ್ತವೆ. ಇತ್ತೀಚಿನ ಈ ಡೆಮಾಲಿಶನ್ ಪ್ರಸಂಗದಲ್ಲಿ ಒಬ್ಬ ಮನೆಮಾಲೀಕ ತನ್ನ ಮನೆ ಡೆಮಾಲಿಶ್ ಆಗುತ್ತದೆ ಎಂದು ತಿಳಿದತಕ್ಷಣ ತನ್ನ ಹನ್ನೆರಡು ಹದಿಮೂರು ಕೋಟಿ ಆಸ್ತಿಯನ್ನು ಕೇವಲ ಮೂರುಕೋಟಿಗೆ ಮತ್ತೊಬ್ಬನಿಗೆ ಮಾರಿ ಕೈತೊಳೆದುಕೊಂಡ. ಆದರೆ ಅತಿ ಕಡಿಮೆ ಬೆಲೆಗೆ ಸಿಕ್ಕ ಆಸ್ತಿ ಎಂದುಕೊಂಡ ಹೊಸ ಮನೆ ಮಾಲೀಕ ಆ ಮನೆ ತನ್ನ ಕಣ್ಣಮುಂದೆಯೇ ನೆಲಸಮ ಆಗುತ್ತಿರುವುದನ್ನು ಕಂಡು ಎಂತಹ ಸಂಕಟ ಅನುಭವಿಸಿರಬೇಡ? ಇಂತಹವರಿಗೆ ನಮ್ಮ ಕನಿಕರ ಇರಬೇಕೇ? ಯೋಚಿಸಿನೋಡಿ. ಪ್ರಮುಖ ನಗರಗಳಲ್ಲಿ ಸ್ಥಿರಾಸ್ತಿ ಕೊಳ್ಳಬಯಸುವವರು ಯಾವುದೇ ನಿವೇಶನ, ಕಟ್ಟಡ ಕೊಳ್ಳುವ ಮುಂಚೆ ಆ ಬಿಲ್ಡರ್‌ಗಳ ಬಗೆಗೆ ಆ ಆಸ್ತಿ ಗ್ರೀನ್ ಬೆಲ್ಟ್‌ನಲ್ಲಿ ಬರುತ್ತದೆಯೇ, ರಾಜಕಾಲುವೆಯ ಮೇಲೆ ಕಟ್ಟಲ್ಪಟ್ಟಿದೆಯೇ, ಕೆರೆ ಒತ್ತುವರಿ ಜಾಗದಲ್ಲಿ ನಿರ್ಮಿಸಲ್ಪಟ್ಟಿದೆಯೇ ತಿಳಿದು ಮುಂದುವರೆಯುವುದು ಅತಿಮುಖ್ಯ.

ನೀವು ಕೇಳಿರಬಹುದು, ಮನುಷ್ಯ ಹಾಳಾಗುವುದೇ 'ಹೆಣ್ಣು, ಹೊನ್ನು ಮತ್ತು ಮಣ್ಣು' ಇವುಗಳ ಹಿಂದೆ ಬೀಳುವುದರಿಂದ ಎನ್ನುವ ಮಾತು ಬಹಳ ಜನಜನಿತ. ಸರ್ಕಾರ ಸಹಾ, ವಾಹಿನಿಗಳ ಮೂಲಕ, ಪೋಲೀಸರ ಮೂಲಕ ಜನ ಯಾವ ಯಾವ ರೀತಿ ಮೋಸಹೋಗಬಹುದು ಎಂಬ ಬಗೆಗೆ ಆಗಾಗ ಹಲವಾರು ಜಾಹಿರಾತುಗಳನ್ನು, ಸೂಚನೆಗಳನ್ನೂ ನೀಡುತ್ತಿರುತ್ತದೆ. ಆದರೂ ಮೋಸ ಹೋಗುವವರನ್ನು 'ರಾತ್ರಿ ಕಂಡ ಬಾವಿಯೊಳಗೆ ಹಗಲೇ ಬಿದ್ದ' ಎನ್ನಬೇಕಾದೀತು!

ಎಂತೆಂತಹ ಹಣಕಾಸು ಸಂಸ್ಥೆಗಳೇ ಹಲವಾರು ವರ್ಷಗಳ ನಂತರ ಮುಳುಗಿಹೋದ ಉದಾಹರಣೆಗಳು ನಮ್ಮ ಮುಂದೆಯೇ ಇವೆ. ಶಾರದಾ ಹಗರಣ ಗೋಪಾಲರಾಯರ ಬ್ಯಾಂಕ್ ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಇನ್ನು ಸಣ್ಣಮಟ್ಟ ಚಿಟ್‌ಫಂಡ್/ ಚೀಟಿ ಸಂಸ್ಥೆಗಳು, ವ್ಯಕ್ತಿಗಳು ಕೈಯೆತ್ತುವುದಿಲ್ಲ ಎಂದು ಹೇಗೆ ನಂಬುವುದು? ಅವು ನಿಜವಾಗಿ ಚಿಟ್ ಅಲ್ಲ ಚೀಟ್ ಫಂಡ್ ಸಂಸ್ಥೆಗಳು.

ಇನ್ನು ಕೆಲವು ಚೈನ್ ಲಿಂಕ್ ಸಂಸ್ಥೆಗಳೂ ಇದೇ ರೀತಿಯಲ್ಲಿ ಮೋಸದ ಜಾಲ ಬೀಸುವುದರಲ್ಲಿ ನೈಪುಣ್ಯತೆ ಪಡೆದಿವೆ. ಮೊದಮೊದಲಿಗೆ ಕೆಲವು ಗ್ರಾಹಕರಿಗೆ ಕೊಟ್ಟ ಹಣಕ್ಕಿಂತ ಹೆಚ್ಚಿನ ಮೌಲ್ಯದ ವಸ್ತುಗಳನ್ನು ನೀಡಿ, ಇತರರನ್ನು ಸೆಳೆದು, ಅವರಿಂದ ನಿಗದಿತ ಮೊತ್ತವನ್ನು ಪಡೆದು, ರಾತ್ರೋರಾತ್ರಿ ಅಂಗಡಿ ಬಾಗಿಲು ಹಾಕಿ ಓಡಿಹೋಗುತ್ತಿರುವುದು ಕಂಡುಬರುತ್ತಿದೆ.

ಮೋಸಹೋಗಲು ಮತ್ತೊಂದು ಮುಖ್ಯ ಕಾರಣ ಎಂದರೆ ಮುಗ್ಧತೆ ಅಥವಾ ಹಿಂದೆಮುಂದೆ ಯೋಚಿಸದೆ ಇತರರನ್ನು ನಂಬುವುದು. ಬಿಳಿಕೋಟು ಹಾಕಿರುವವರೆಲ್ಲರನ್ನೂ ಡಾಕ್ಟರೆಂದೂ, ಕರಿಕೋಟು ಹಾಕಿರುವವರೆಲ್ಲರೂ ವಕೀಲ ಎಂದೂ, ಖಾಕಿ ಹಾಕಿರುವವರೆಲ್ಲರನ್ನೂ ಪೊಲೀಸರೆಂದೂ ನಂಬುವ ಮಂದಿ ಬಹಳಷ್ಟು. ಅವರು ನಿಜವಾಗಲೂ ವೈದ್ಯ ಪದವಿ ಪಡೆದಿರುವವರಾ, ಅವರ ಪದವಿ ಅಸಲಿಯೋ, ನಕಲಿಯೋ, ಅವರ ಕ್ಲಿನಿಕ್ಕಿನಲ್ಲಿ ವೈದ್ಯಕೀಯ ಮಂಡಳಿ ನೀಡಿದ ಪ್ರಮಾಣಪತ್ರ ಇದೆಯೋ ಮುಂತಾದ ವಿವರಗಳನ್ನು ಯಾವ ಮೂಲದಿಂದಲಾದರೂ ಪಡೆದು ಪರಿಶೀಲಿಸಿ ಚಿಕಿತ್ಸೆಗಾಗಿ ತೆರಳುವುದು ನಮ್ಮ & ನಮ್ಮವರ ಹಿತದೃಷ್ಟಿಯಿಂದ ಒಳ್ಳೆಯದು.

ಅದೇ ರೀತಿ ಯಾರೇ ಖಾಕಿ ಉಡುಪು ಧರಿಸಿ ಬಂದರೂ, ಅವರು ಪೊಲೀಸರೆಂದು ಬಗೆದು ಅವರು ಹೇಳಿದಷ್ಟು ಹಣವನ್ನೋ ಮತ್ತೇನನ್ನು ಆ ವ್ಯಕ್ತಿ ಅಪೇಕ್ಷಿಸುವನೋ ಅದನ್ನು ನೀಡುವುದಕ್ಕೆ ಮುಂದಾಗುವುದು ಕೂಡಾ ಮೂರ್ಖತನವೇ ಸರಿ. ಮುಂದೆ ದರೋಡೆಕೋರರಿದ್ದಾರೆ, ನಿಮ್ಮ ಒಡವೆಗಳನ್ನು ಬಿಚ್ಚಿಕೊಡಿ ಎಂದುದಕ್ಕೆ ಬಿಚ್ಚಿಕೊಟ್ಟು ಒಡವೆ ಕಳೆದುಕೊಳ್ಳುವವರು, ಒಡವೆ ಪಾಲೀಶ್ ಮಾಡಿಕೊಡುವ ನೆಪದಲ್ಲಿ ಮೋಸಹೋದವರು ಇತ್ಯಾದಿ.

ಯಾಕೆ ಮೋಸಮಾಡುತ್ತಾರೆ ಎಂಬ ಸರಳ ಪ್ರಶ್ನೆಗೆ ನಮಗೆ ಸಿಗುವ ಸರಳ ಉತ್ತರ ಹಣಮಾಡಬೇಕು, ಹೇಗಾದರೂ ಹಣಮಾಡಬೇಕು ಎನ್ನುವ ದುರಾಸೆ. ಇತರರು ಶೋಕಿಮಾಡುವುದನ್ನು ಕಂಡವರು, ತಾವೂ ಹಾಗೇ ಇರಬೇಕು ಎಂದು ಬಯಸಿದಾಗ ಅದಕ್ಕೆ ಬೇಕಾದ ಹಣ ದೊರಕದೇ ಇದ್ದಲ್ಲಿ, ಹುಡುಕುವ ಮಾರ್ಗವೇ 'ಮೋಸಮಾಡುವುದು'. ಇದಕ್ಕೆ ತದ್ವಿರುದ್ಧವಾಗಿ ನಿಜವಾಗಿಯೂ ಬಡತನ ಇರುವವರು, ತಮ್ಮ ದೈನಂದಿನ ಅಗತ್ಯಗಳನ್ನು ನ್ಯಾಯಯುತವಾದ ರೀತಿಯಲ್ಲಿ ಪೂರೈಸಿಕೊಳ್ಳಲಾಗದಾಗ ಹುಡುಕುವ ಮಾರ್ಗವೂ ಮೋಸಮಾಡುವುದು.

ಕೊನೆಗಾದರೂ ನಾವು ನೆನಪಿನಲ್ಲಿಡಬೇಕಾದ ನಾಣ್ನುಡಿ ' ಮೋಸ ಹೋಗುವವರು ಇರುವವರೆಗೂ, ಮೋಸಮಾಡುವವರು ಈ ಜಗದಲ್ಲಿ ಇರುತ್ತಾರೆ'

10–8–2016

* * * * *

## ಲೇಖನ – 30

# ಸ್ವಾರ್ಥಿ ಮಾನವ

ಎಂದೋ ಯಾವುದೋ ಹಕ್ಕಿ ತನ್ನ ಬಾಯಿಂದಲೋ, ಹಿಕ್ಕೆಯೊಂದಿಗೆ ಭೂಮಿಗೆ ಎಸೆಯಲ್ಪಟ್ಟ ನಾನು ಅವರಂತೆಯೇ ಆಗಸದೆಡೆಗೆ ಮೊಗಮಾಡಿ, ಸಾವು ಬದುಕುಗಳ ಆತಂಕದಲ್ಲಿ ಬಿದ್ದಿದ್ದೆ. ಅದು ಹಾಗೆಯೇ, ಲಕ್ಷಾಂತರ ಮಂದಿ ಹುಟ್ಟಿದರೂ ಬದುಕುವ ಅದೃಷ್ಟ ಬರುವುದು ಕೆಲವರಿಗೆ ಮಾತ್ರ. ನನ್ನ ಪೂರ್ವಜರ ಪುಣ್ಯವೋ ಎಂಬಂತೆ ಭುವಿಗೆ ಬಿದ್ದ ಕೆಲವೇ ದಿನಗಳಲ್ಲಿ ವರುಣ ತನ್ನ ಕೃಪೆತೋರಿದ ಕಾರಣದಿಂದ ನಾನೂ ಇಂದು ಒಂದು ಬೃಹತ್ ಮರವಾಗಿ ನಿಮ್ಮ ಮುಂದೆ ನಿಂತಿದ್ದೇನೆ. ದಾರಿಹೋಕರಿಗೆ ನೆರಳಾಗಿ, ಸಾವಿರಾರು ಪಕ್ಷಿಸಂಕುಲಗಳಿಗೆ ಮನೆಯಾಗಿ, ಇಂಗಾಲ ಸೇವಿಸಿ, ಆಮ್ಲಜನಕ ನೀಡುತ್ತಾ ಕಳೆದ ನೂರು ವರ್ಷಗಳಿಂದ ಜೀವಿಗಳ ಉಳಿವಿಗೆ ನನ್ನ ಅಳಿಲುಸೇವೆ ನೀಡುತ್ತಿದ್ದೇನೆ. ನನ್ನಂತೆಯೇ ನನ್ನ ಮಕ್ಕಳೂ, ಮರಿಮಕ್ಕಳೂ ಕೆಲವು ಪುಣ್ಯಾತ್ಮರ ಸಹಾಯದಿಂದ ರಸ್ತೆಬದಿಗಳಲ್ಲೋ, ಉದ್ಯಾನವನಗಳಲ್ಲೋ ಬೆಳೆದು ಸಾರ್ವಜನಿಕರಿಗೆ ನೆರಳು, ಶುದ್ಧ ಗಾಳಿನೀಡುತ್ತಲಿವೆ.

ಅಗೋ ನೋಡಿ ಬರುತ್ತಿದ್ದಾನೆ ಕೃತಘ್ನ ಮಾನವ, ತನ್ನ ವಿದ್ಯುತ್‌ಚಾಲಿತ ಗರಗಸ ಹಿಡಿದು, ನನ್ನ ಬದುಕಿಗೆ ಅಂತ್ಯಹಾಡಲು! ವಯೋಮಾನದ ಕಾರಣ ನನ್ನಲ್ಲಿನ ರೆಂಬೆಕೊಂಬೆಗಳು ತಮ್ಮ ಶಕ್ತಿಯನ್ನು ಕಳೆದುಕೊಂಡಿರಬಹುದು. ನನ್ನ ಪೊಟ್ಟೆಯಲ್ಲಿ ಹಲವು ತೂತುಗಳು ಬಿದ್ದಿರಲೂಬಹುದು. ಅದನ್ನೇ ಪ್ರಧಾನವಾಗಿಸಿ ನನ್ನನ್ನು

ಮುಗಿಸಲು ಮುನ್ನುಗ್ಗಿ ಬರುತ್ತಿದ್ದಾನೆ ಆತ ಕರುಣಾಹೀನ ಮಾನವ. ಇದು ಬರೀ ನನ್ನೊಬ್ಬಳ ಅಂತ್ಯವಲ್ಲ, ಸಾವಿರಾರು ಪಕ್ಷಿಗಳ ಸಂಸಾರಗಳನ್ನು ಗತಿಹೀನರಾಗಿಸುವ ಹುನ್ನಾರ. ಅದರಲ್ಲೇ ಆತನಿಗೆ ಆನಂದ ಎನಿಸುತ್ತಿದೆ.

ನಮಗೆ ಇತರರಿಗೆ ಹಾನಿಮಾಡುವುದು ತಿಳಿದೇ ಇಲ್ಲ. ಮಾಂಸಾಹಾರಿ ಪ್ರಾಣಿಗಳೂ ಸಹಾ ವಿನಾಕಾರಣ ಇತರ ಪ್ರಾಣಿಗಳನ್ನು ಕೊಲ್ಲುವುದಿಲ್ಲ. ಆದರೆ ಈ ಮಾನವ ತನ್ನ ಅವಶ್ಯಕತೆಗೂ ಮೀರಿ ಸಂಗ್ರಹದಲ್ಲಿ ತೊಡಗಿರುತ್ತಾನೆ, ಅದು ಆಹಾರವಾಗಿರಬಹುದು, ಆಸ್ತಿಯಾಗಿರಬಹುದು. ಮಾನವನೊಬ್ಬನನ್ನು ಹೊರತುಪಡಿಸಿ ಈ ದುರ್ಬುದ್ಧಿ ಇತರ ವರ್ಗಗಳಲ್ಲಿ ಕಂಡುಬರುವುದೇ ಇಲ್ಲವೆಂದು ಹೇಳಬಹುದು. ಕಾಡಿನಲ್ಲಿರಲಿ, ನಾಡಿನಲ್ಲಿರಲಿ ಅವನೇನೂ ಶ್ರಮಪಡಲಿಲ್ಲ ನಮ್ಮ [illegible]ಕಮಾಡಲು, ಆದರೂ ನಮ್ಮ ಅಂತ್ಯಹಾಡಿ ಅದರಿಂದಲೂ ತನ್ನ ಬೇಳೆ ಬೇಯಿಸಿಕೊಳ್ಳುವ ಹುನ್ನಾರ ಅವನದು. ನಮ್ಮನ್ನು ಸೀಳಿ ಸೌದೆಯಾಗಿಯೋ, ಮರಮುಟ್ಟುಗಳಾಗಿಯೋ ಮಾಡಿ ಮಾರಿಕೊಳ್ಳುವ ತವಕ ಅವನಿಗೆ.ನಮ್ಮ ನಿಸ್ವಾರ್ಥ ಬದುಕಿನಿಂದ ನಾವು ನೂರಾರು ಸಾವಿರಾರು ಮಂದಿಗಾಗುವಷ್ಟು ಹೂ, ಕಾಯಿ, ಹಣ್ಣುಗಳನ್ನು ಪುಕ್ಕಟೆಯಾಗಿ ನೀಡುತ್ತಿದ್ದೇವೆ. ಇವ್ಯಾವುದೂ ಇಲ್ಲದವರು, ನೆರಳನ್ನು, ಜೀವರಕ್ಷಕ ಆಮ್ಲಜನಕವನ್ನಾದರೂ ನೀಡುತ್ತೇವೆ. ಸಮಾಜಕ್ಕೆ ನಿಮ್ಮ ಕೊಡುಗೆಯೇನು? ಬರೀ ಜನಸಂಖ್ಯೆ! ಹತ್ತಾರು ವರ್ಷಗಳಲ್ಲಿ ದ್ವಿಗುಣಗೊಳಿಸುತ್ತಾ ಸಂಕಷ್ಟಗಳ ಸರಮಾಲೆಯನ್ನೇ ಸೃಷ್ಟಿಸುತ್ತಾ ಇರುವವರು ನೀವು. ನಿಮ್ಮ ಅವಶ್ಯಕತೆಗಳಿಗೆ ಸ್ಪಂದಿಸಲು ನಾವು ಅಶಕ್ತರಾದಾಗ, ಕೃತಕ ರಾಸಾಯನಿಕಗಳನ್ನು ನಮಗೆ ಉಣ್ಣಿಸಿ, ನಮ್ಮ ಗುಣಗಳನ್ನು ಇಲ್ಲವಾಗಿಸಿ, ನಿಮ್ಮ ಆರೋಗ್ಯವನ್ನೂ ಹಾಳುಮಾಡಿಕೊಳ್ಳುವ ನಿಮ್ಮ ನೀಚ ಬುದ್ಧಿಗೆ ನಮ್ಮ ಧಿಕ್ಕಾರವಿರಲಿ.

ಇನ್ನು ಮನೆಯ ಮಗ್ಗುಲಿಗೆ ಹೂ ಬಿಡುತ್ತಿರುವ ನನ್ನ ಸೋದರಿಯರ ಕಷ್ಟ ಏನೆಂದು ಹೇಳಲಿ. ಬೆಳಗಿನ ಜಾವ ನೆಟ್ಟಗೆ ಕಣ್ಣು ಕಾಣದಿದ್ದರೂ ವಾಕಿಂಗ್ ಹೊರಡುವ ಆ ಮಂದಿಯ ಕೈಯಲ್ಲಿ ಒಂದು ಪ್ಲಾಸ್ಟಿಕ್ ಕೈಚೀಲ. ರಸ್ತೆ ನೋಡಿ ನಡೆಯುವುದಕ್ಕಿಂತ ಅತ್ತ ಇತ್ತ ಇರುವ ಹೂಗಿಡಗಳಮೇಲೇ ಇವರ ಕಣ್ಣು. ಯಾವ ಗಿಡಬಳ್ಳಿಮರಗಳಲ್ಲಿ ಕೈಗೆಟುಕುವ ಹಾಗೆ ಹೂ ಇದ್ದರೂ ಅವು ಇವರ ಪಾಲು. ಮನೆ ಮಾಲೀಕರಿಗೂ ಪೂಜೆಗೆ ಬಿಡದೆ ಇರುವೆಲ್ಲ ಹೂಗಳ ಲೂಟಿ ಈ ಮಂದಿಯಿಂದ!

ಹಣ್ಣು ಕಾಯಿಬಿಡುವ ಮರಗಳಾದರೆ ಇನ್ನೂ ಕಷ್ಟ, ಕಾಂಪೌಂಡ್ ಹತ್ತಿ, ಬೇಲಿ ಹಾರಿ, ಕಲ್ಲುಬೀರಿ ಆ ಹಣ್ಣುಕಾಯಿಗಳನ್ನು ಉದುರಿಸಿಕೊಳ್ಳುವ ಕಾಯಕ

ಈ ಮಂದಿಯದು. ಅವರ ಈ ಸಾಹಸದಲ್ಲಿ ಎಷ್ಟೋ ಮನೆಯ ಕಿಟಕಿ ಗಾಜುಗಳು ಹೆಂಚುಗಳು ಪುಡಿಯಾದ ಉದಾಹರಣೆಗಳೂ ಇಲ್ಲದಿಲ್ಲ. ಸರ್ಕಾರ ಹೇಳಿತೆಂದು ಮನೆಯ ಮುಂದೆ ಗಿಡಮರ ಹಾಕಿದವರು, ಈ ಕಳ್ಳರ, ಲೂಟಿಕೋರರ ದೆಸೆಯಿಂದ ಯಾಕಾದರೂ ನಾವು ಗಿಡಮರಬೆಳೆಸಿದೆವೋ ಎಂದು ಆತಂಕಪಟ್ಟು ಮರುಗುವ ಸ್ಥಿತಿ ಇಂದುಂಟಾಗಿದೆ.

ಹಿಂದೆಲ್ಲಾ ರಾಜಮಹಾರಾಜರು ಸಾಲುಮರಗಳನ್ನು ಬೆಳೆಸಿ ಕೃತಾರ್ಥ-ರಾಗಿದ್ದರೆ, ಇಂದಿನವರು ಕಾಂಕ್ರೀಟ್ ಕಾಡುಗಳನ್ನು ಬೆಳೆಸುತ್ತಿದ್ದಾರೆ. ಇದರಿಂದ ಪರಿಸರಕ್ಕೆ ಧಕ್ಕೆಯುಂಟಾಗಿ, ಮಳೆ ಕೈಕೊಡುತ್ತಿದೆ. ಬೆಳೆ ಕುಂಠಿತವಾಗುತ್ತಿದೆ. ಕಾಡು ಪ್ರಾಣಿಗಳು ನಾಡಿಗೆ ದಾಳಿಯಿಡುತ್ತಿವೆ. ಈ ಹೀನ ಪರಿಸ್ಥಿತಿಗೆ ಕಾರಣ ನಾವು ಮತ್ತು ನಮ್ಮ ದುರಾಸೆ!

31–8–2016

* * * * *

## ಲೇಖನ – 31

# ಆರ್ತನಾದ

ಎಷ್ಟು ಚೆನ್ನಾಗಿತ್ತು ಆ ಕೆಲವು ದಿನಗಳು, ನಿನ್ನ ಬೆಚ್ಚನೆಯ ಆರೈಕೆಯಲ್ಲಿ ಕಳೆದ ಆ ದಿನಗಳು. ಹೊತ್ತುಹೊತ್ತಿಗೆ ಹಾಲು, ಕೆಲದಿನಗಳ ನಂತರ ನನ್ನ ಇಷ್ಟವಾದ ಇಲಿ, ಹಕ್ಕಿ, ಕೀಟಗಳು! ಯಾವುದಕ್ಕೂ ಎಂದೂ ಕೊರತೆಮಾಡಿದವಳಲ್ಲ ನೀನು. ಸ್ವತಂತ್ರವಾಗಿ ಬದುಕ ಕಲಿಸಹೊರಟಿದ್ದೆ ನೀನು. ಹಾರುವುದು, ಓಡುವುದು, ಮರಹತ್ತುವುದು, ನೋವೇ ಆಗದಂತೆ ಮೇಲಿನಿಂದ ಕೆಳಕ್ಕೆ ಜಿಗಿಯುವುದು ಎಲ್ಲ ಕಲಿಸಿದ್ದೆ. ಸ್ವತಂತ್ರವಾಗಿ ಬೇಟೆಯಾಡುವುದನ್ನೂ ಹೇಳಿಕೊಡುತ್ತಿದ್ದೆ, ಅಮ್ಮ ನನ್ನ ಪ್ರೀತಿಯ ಅಮ್ಮ ನಿನ್ನ ಬಿಟ್ಟು ನಾ ಹೇಗೆ ಇರಲೀ ಅಮ್ಮ, ಆದರೂ ನೀನು ನನಗೆಂದೇ ಪ್ರತ್ಯೇಕ ಮನೆಯನ್ನು ಹುಡುಕಿಕೊಟ್ಟು ಹೋದೆಯಲ್ಲೇ.

'ಅಮ್ಮಾ ಎಲ್ಲಿ ಹೋದೆಯೇ ನನ್ನ ಬಿಟ್ಟು, ನಿನ್ನ ನೆನಪಿನಲ್ಲೇ ಉಳಿಯಬೇಕಾಯಿತಲ್ಲ ನನಗೆ. ಹೊಟ್ಟೆ ತುಂಬಾ ನೋಯುತ್ತಿದೆ. ಯಾರಲ್ಲಿ ತೋಡಿಕೊಳ್ಳಲೇ ನನ್ನ ನೋವನ್ನು. ಯಾರಾದರೂ ಇದ್ದೀರಾ ನನ್ನನ್ನು ಕಾಪಾಡಲು'. ಎಷ್ಟು ಪ್ರೀತಿಯಿಂದ ನನ್ನನ್ನು ನೋಡಿಕೊಳ್ಳುತ್ತಿದ್ದರು ಎಲ್ಲರೂ ನನ್ನನ್ನು. ಆ ಪುಟ್ಟ ಹುಡುಗನಂತೂ ನನ್ನನ್ನು ಎಷ್ಟು ಮುದ್ದಿಸುತ್ತಿದ್ದನೋ ಹೇಳೋಕ್ಕೇ ಆಗದು. ಮೊದಮೊದಲಿಗೆ ಹಾಲು ಅನ್ನ ಹಾಕುತ್ತಿದ್ದರು. ನನಗೋ ಮಾಂಸ ಅಂದರೆ ತುಂಬ ಇಷ್ಟ, ಅದನ್ನು ಮನಗಂಡ ಮನೆಯಾಕೆ ನನಗೇ ಅಂತ 'ಕ್ಯಾಟ್ ಫುಡ್' ತರಿಸಿಹಾಕತೊಡಗಿದರು. ಅದರಲ್ಲೂ ಮರಿಗಳಿಗೇ ಬೇರೆ, ದೊಡ್ಡವರಿಗೇ ಬೇರೇಯಂತೆ! ಸುಲಭವಾಗಿ

ಜೀರ್ಣವಾಗಲಿ ಎಂದು ತರಿಸುತ್ತಿದ್ದರು. ಇನ್ನೂ ಕೆಲವು ದಿನಗಳನಂತರ ಹಸಿಮಾಂಸ ಹೊಂದಿರುವ ವೆಟ್ ಕ್ಯಾಟ್ ಫುಡ್ ಹಾಕಲು ಶುರುಮಾಡಿದರು. ಎಲ್ಲರೊಡನೆ ಪ್ರೀತಿಯಿಂದ ಆಡುತ್ತಾ ಆಡುತ್ತಾ ಬೆಳೆಯುತ್ತಿದ್ದೆ.

ಅದೊಂದು ಕೆಟ್ಟ ದಿನ. ಹೊರಲೋಕ ನೋಡಿ ಆನಂದಿಸಲು ಹೋಗಿದ್ದ ನನ್ನನ್ನು ಆ ಹಾಳು ಗಡವ ನಾಯಿ ಧುತ್ತೆಂದು ಎಲ್ಲಿಂದಲೋ ಪ್ರತ್ಯಕ್ಷವಾಗಿ ನೇರ ನನ್ನ ಹೊಟ್ಟೆಗೇ ಬಾಯಿಹಾಕಿ ಕಚ್ಚಿಬಿಟ್ಟಿತಲ್ಲಾ. ಪ್ರಜ್ಞೆತಪ್ಪಿ ರಕ್ತದ ಮಡುವಿನಲ್ಲಿ ಬಿದ್ದಿದ್ದೆ. ಸ್ವಲ್ಪ ಹೊತ್ತಾದನಂತರ ಎಚ್ಚರಗೊಂಡ ನಾನು ನಡೆಯಲು ನೋಡಿದರೆ ನನ್ನ ಹಿಂದಿನ ಕಾಲುಗಳು ಸಹಕಾರನೀಡುತ್ತಿಲ್ಲ. ತೆವಳಿಕೊಂಡೇ ಅಲ್ಲೇ ನಿಂತಿದ್ದ ಕಾರಿನಡಿಗೆ ಹೋದೆ. ನನ್ನನ್ನು ರಕ್ಷಿಸಲು ಯಾರಾದರೂ ಮುಂದೆಬರುತ್ತಾರಾ ಎಂದು ಕಣ್ಣು ಬಿಟ್ಟುಕೊಂಡು ಬಿದ್ದಿದ್ದೆ. ಕೂಗಲು ಧ್ವನಿಕೂಡ ಜೋರಾಗಿರಲಿಲ್ಲ. ನನ್ನ ಆರ್ತನಾದ ಯಾರಕಿವಿಗೂ ಬೀಳುತ್ತಿಲ್ಲವಲ್ಲಾ ಎನ್ನುವ ಕೊರಗು ಬೇರೆ.

ದೇವರಿದ್ದಾನೋ ಇಲ್ಲವೋ ಗೊತ್ತಿಲ್ಲ. 'ಗಜೇಂದ್ರಮೋಕ್ಷ' ಪ್ರಕರಣದಲ್ಲಿ ಗಜರಾಜನನ್ನೇ ಮೊಸಳೆಬಾಯಿಂದ ರಕ್ಷಿಸಲು ಆ ದೇವ ಪ್ರತ್ಯಕ್ಷನಾಗಿದ್ದನೆಂದು ಹೇಳುತ್ತಾರೆ. ಅಂತೆಯೇ ಆ ದೇವನೇ ನನ್ನನ್ನು ಕಾಪಾಡಬೇಕೇನೋ ಎಂದು ಕನವರಿಸುತ್ತಿದ್ದೆ. ದೇವನೇ ಪ್ರತ್ಯಕ್ಷವಾಗಬೇಕೆಂದೇನಿಲ್ಲ, ಅವನ ಪ್ರತಿನಿಧಿಯಾಗಿ ಯಾರಾದರೂ ಬರಬಹುದು ಎಂಬಂತೆ ನನ್ನ ಅದೃಷ್ಟವೋ ಏನೋ ಯಾರೋ ಈ ಕಡೆ ಬರುತ್ತಿರುವ ಕಾಲಸದ್ದು ಕೇಳಿಬಂತು. ನೋಡುತ್ತಾಯಿದ್ದೆ ಆ ಹೆಜ್ಜೆಗಳು ಯಾವಕಡೆ ಚಲಿಸುತ್ತಿವೆಯೆಂದು. ಕಾಣಿಸಿದರು ನನಗೆ ಒಬ್ಬ ತಾಯಿ ಮತ್ತು ಅವಳ ಮುದ್ದಾದ ಮಗ! ಆ ಹುಡುಗನ ನೋಟ ನನ್ನತ್ತ ಹರಿದಿತ್ತು. 'ಅಮ್ಮಾ ನೋಡು ಅಲ್ಲೊಂದು ಪುಟ್ಟ ಬೆಕ್ಕಿನ ಮರಿ' ಮುದ್ದಾಗಿದೆ, ಮನೆಗೆ ಕರೆದುಕೊಂಡು ಹೋಗೋಣವಮ್ಮಾ' ಎಂದು ತಾಯಿಯನ್ನು ಅಂಗಲಾಚಿದ. ತಾಯಿ ಮೊದಮೊದಲಿಗೆ 'ನಮಗ್ಯಾಕೆ ಇಲ್ಲದ ಉಸಾಬರಿ, ನಮ್ಮ ಪಾಡಿಗೆ ನಾವು ಹೋಗೋಣ ನಡಿ' ಎಂದು ಗದರಿದಳು. ಆದರೂ ಆ ಹುಡುಗನ ಹಠವೇ ಗೆದ್ದಿತು. ಮಣಿದ ಆ ತಾಯಿ ನನ್ನನ್ನು ಎತ್ತಿಕೊಳ್ಳುವ ಮೊದಲು ನನ್ನ ತಲೆಸವರಿದಳು. ನನಗೆ ಒಂದು ತರಹಾ ಹಾಯ್ ಎನ್ನಿಸತೊಡಗಿತು. ಕೊನೆಗೆ ನನ್ನನ್ನು ಎತ್ತಿಕೊಳ್ಳಲು ಆಕೆ ಮುಂದಾಗಿ ಕೈ ನನ್ನ ಹೊಟ್ಟೆಕಡೆಗೆ ಹಾಕಿದಾಗ ರಕ್ತ! ಗಾಬರಿಯಾದ ಆಕೆ ನನ್ನನ್ನು ಕೆಳಗಿಳಿಸಿದಳು. ಕೊನೆಗೆ ತನ್ನ ಬ್ಯಾಗಿನಲ್ಲಿದ್ದ ವೃತ್ತಪತ್ರಿಕೆಯನ್ನು ಬಿಡಿಸಿ ಅದರಲ್ಲಿ ನನ್ನನ್ನು ಮಲಗಿಸಿದಳು. ಯಾರಿಗೋ ಫೋನ್ ಮಾಡಿದಳು. ನಂತರ ಅಲ್ಲೇ ಬರುತ್ತಿದ್ದ ಒಂದು ಆಟೋ ನಿಲ್ಲಿಸಿ

ಅದರಲ್ಲಿ ನನ್ನನ್ನೂ ಕರೆದುಕೊಂಡು ವೈದ್ಯರಬಳಿ ಹೋದಳು. ನನ್ನ ಗಾಯವನ್ನು ಗಮನಿಸಿದ ವೈದ್ಯ ನನಗೆ ಪ್ರಜ್ಞೆತಪ್ಪುವ ಇಂಜಕ್ಷನ್ ನೀಡಿ ಒಂದೆರಡು ಹೊಲಿಗೆ ಹಾಕಿದನೆಂದು ತೋರುತ್ತದೆ.

ಮನೆಗೆ ಕರೆತಂದ ಆ ತಾಯಿ ನನಗೆ ಮೆತ್ತನೆಯ ಬಟ್ಟೆಹಾಸಿ ಮಲಗಿಸಿದಳು, ನನ್ನ ಮುಂದೆ ಒಂದು ತಟ್ಟೆಯಲ್ಲಿ ಸ್ವಲ್ಪ ಹಾಲನ್ನು ಇಟ್ಟಳು. ನನಗೆ ಕೊನೆಗೂ ಒಂದು ಆಶ್ರಯತಾಣ ಸಿಕ್ಕಿತೆಂದು ಸಂತಸಪಟ್ಟೆ, ಆದರೆ ಆ ಸಂತಸ ಹೆಚ್ಚು ಸಮಯ ಉಳಿಯಲಿಲ್ಲ. ಆ ತಾಯಿಗೆ ನನ್ನನ್ನು ನೋಡಿಕೊಳ್ಳಲು ಸಮಯವಿರಲಿಲ್ಲವೆಂದು ತೋರುತ್ತದೆ. ಮಗನಿಗೆ ಇನ್ನೊಂದು ಬೆಕ್ಕಿನಮರಿ ತಂದುಕೊಡುವುದಾಗಿ ಸಮಾಧಾನಪಡಿಸಿ, ಮೊಬೈಲಿನ ನೆಟ್‌ನಲ್ಲಿ ಯಾವುದೋ ವಿಳಾಸ ಹುಡುಕತೊಡಗಿದಳು. ಕೆಲಹೊತ್ತು ಹುಡುಕಾಟ ನಡೆಸಿದ ನಂತರ ಅವಳ ಮುಖ ಅರಳಿತು. ಕೂಡಲೇ ತನ್ನ ಕಾರಿನಲ್ಲಿ ನನ್ನನ್ನು ಕರೆದುಕೊಂಡು ಹೊರಟು ಒಂದು ದೊಡ್ಡ ಬಾಗಿಲಿನ ಬಯಲುಬಯಲಾಗಿದ್ದ ಒಂದು ಕಟ್ಟಡದ ಮುಂದೆ ನಿಲ್ಲಿಸಿದಳು. ನನ್ನನ್ನು ಮತ್ತೆ ಎತ್ತಿಕೊಂಡು ಹೋಗಿ ಅಲ್ಲಿನ ಅಧಿಕಾರಿಗಳೊಂದಿಗೆ ಏನೋ ಮಾತನಾಡಿ, ಸ್ವಲ್ಪ ಹಣವನ್ನೂ ಅವರಿಗೆ ಕೊಟ್ಟು, ನನ್ನನ್ನು ಮತ್ತೆ ಅನಾಥನನ್ನಾಗಿಸಿ ಅವರ ಬಳಿಯೇ ಬಿಟ್ಟು ಹೊರಟುಹೋದಳು.

ನನ್ನನ್ನು ಕೂಲಂಕಷವಾಗಿ ಪರೀಕ್ಷಿಸಿದ ಅಲ್ಲಿನ ಸಿಬ್ಬಂದಿಗೆ ನನ್ನ ಹೊಟ್ಟೆಯ ಬಳಿಯ ಹೊಲಿಗೆ ಕಂಡು ಏನೋ ಅನುಮಾನ! ಆದರೂ ಕೈಗೆ ತುರುಕಿದ್ದ ಹಣ ಆ ಪ್ರಶ್ನೆಗಳನ್ನು ಅವರ ಮನದಲ್ಲೇ ಉಳಿಸಿತು. ನನ್ನನ್ನು ಎತ್ತಿಕೊಂಡು ಒಂದು ದೊಡ್ಡ ಬೋನಿನೊಳಗೆ ಬಿಟ್ಟರು. ಅಲ್ಲಿ ನೋಡಿದರೆ ನನ್ನಂತೆಯೇ ಇನ್ನೂ ಹತ್ತಾರು ಬೆಕ್ಕುಗಳು ಅಲ್ಲಿದ್ದವು. ಪ್ರಾಯಶಃ ಅವುಗಳನ್ನೂ ಯಾರೋ ಇಲ್ಲಿ ತಂದು ಬಿಟ್ಟುಹೋಗಿದ್ದರೋ ಏನೋ. ಅನಾಥಾಶ್ರಮಗಳಲ್ಲಿ, ವೃದ್ಧಾಶ್ರಮಗಳಲ್ಲಿ ಮೊದಮೊದಲಿಗೆ ಅಪರಿಚಿತರಾಗಿದ್ದವರು ನಂತರದ ದಿನಗಳಲ್ಲಿ ಅಲ್ಲಿರುವವರನ್ನೇ ತಮ್ಮವರಾಗಿಸಿಕೊಳ್ಳುವಂತೆ ನಾನೂ ಇತರ ಬೆಕ್ಕುಗಳೊಡನೆ ಒಗ್ಗಿಕೊಳ್ಳತೊಡಗಿದೆ. ಕೊನೆಗೂ ನನ್ನ ಆರ್ತನಾದಕ್ಕೆ ಬೆಲೆಬಂದು ನನಗೂ ಒಂದು ಸುಂದರ ಆಶ್ರಯತಾಣ ದೊರಕಿಸಿಕೊಟ್ಟದುದಕ್ಕೆ ಆ ತಾಯಿ ಮಗನಿಗೆ ನನ್ನ ಮನದಲ್ಲೇ ವಂದಿಸಿದೆ.

1–9–2016

* * * * * *

ಲೇಖನ – 32

# ಸುಖ – ಆನಂದ ಅಂದರೆ ಇದೇನಾ

ನೀವೆಲ್ಲಾ ಈ ಅಕ್ಬರ್ ಬೀರಬಲ್ ಬಗೆಗಿನ ಸ್ವಾರಸ್ಯಕರ ಘಟನೆ ಕೇಳಿರಬಹುದು. ಅಕ್ಬರ್ ಬೀರಬಲ್‌ನನ್ನು ಮನುಷ್ಯನಿಗೆ ಅತಿ ಸುಖಾನಂದದ ಕ್ಷಣ ಯಾವುದು ಎಂದು ಕೇಳಿದಾಗ ಬೀರಬಲ್ ನೀಡಿದ ಉತ್ತರದಿಂದ ವಿಪರೀತ ಕೋಪಗೊಂಡಿದ್ದ ಅಕ್ಬರ್ ಬಾದಷಹ. ಕೆಲದಿವಸಗಳು ಕಳೆದನಂತರ ಅವರಿಬ್ಬರೂ ಜಲವಿಹಾರಕ್ಕೆ ತೆರಳಿದ್ದರು. ಸರೋವರದ ಮಧ್ಯಭಾಗಕ್ಕೆ ತಲುಪಿದ ಸಂದರ್ಭದಲ್ಲಿ ಬಾದಷಃನಿಗೆ ಜಲಬಾಧೆಗೆ ಅರ್ಜೆಂಟಾಯಿತು. ಬೀರಬಲ್‌ನನ್ನು ತುರ್ತಾಗಿ ದಡಕ್ಕೆ ತಲುಪಿಸಲು ಆದೇಶಿಸಿದ, ಆದರೆ ಬೀರಬಲ್ ಕಿವಿಗೆ ಹಾಕಿಕೊಳ್ಳಲಿಲ್ಲ. ಬಾದಷಹನ ಚಡಪಡಿಕೆ ಹೆಚ್ಚಾಗಿ ಅವನು ಬೀರಬಲ್‌ನನ್ನು ಕೂಡಲೆ ದಡಕ್ಕೆ ತಲುಪಿಸಲು ವಿನಂತಿಸಿದ. ದಡ ತಲುಪಿದ ಕೂಡಲೆ ತನ್ನ ಜಲಬಾಧೆ ತೀರಿಸಿಕೊಂಡು ಬಂದ ಬಾದಷಹ ಬೀರಬಲನಿಗೆ ಹೇಳಿದ್ದು: 'ನಿಜ ಎಲ್ಲರ ಜೀವನದಲ್ಲೂ ಅತಿ ಸಂತಸದ/ ಸುಖಾನಂದದ ಸಮಯ ಅಂದರೆ ಇದೇನೇ' ಎಂದು.

ಮತ್ತೊಂದು ಘಟನೆ. ಒಬ್ಬ ವ್ಯಕ್ತಿ ಕಡುಬಡವನಾಗಿದ್ದ. ಕಷ್ಟಪಟ್ಟು ಕಾಸಿಗೆಕಾಸ್ ಗಂಟಾಕಿ ಕಾಲಕ್ರಮದಲ್ಲಿ ಅತಿ ಶ್ರೀಮಂತನಾದ. ಬಡತನದಲ್ಲಿದ್ದ ನೆಮ್ಮದಿ ಶ್ರೀಮಂತನಾದಮೇಲೆ ಹಾರಿಹೋಯಿತು. ಕಳ್ಳಕಾಕರಿಂದ ಆಸ್ತಿ ಕಾಪಾಡಿಕೊಳ್ಳುವ ಚಿಂತೆ, ವಕ್ಕರಿಸಿಕೊಂಡ ಕಾಯಿಲೆಗಳು, ಇವೆಲ್ಲದರಿಂದ ಬೇಸರಗೊಂಡಾತ, ನೆಮ್ಮದಿ ಅರಸಿಕೊಂಡು ಸುತ್ತಾಡತೊಡಗಿದ. ಹಾಗೇ ಸುತ್ತಾಡುತ್ತಾ

ಬರುತ್ತಿರುವಾಗ ಎದುರಿಗೆ ಒಬ್ಬ ಸನ್ಯಾಸಿಯನ್ನು ಕಂಡ. ಅವನ ಬಳಿ ಸಾಗಿ ತನಗೆ ನೆಮ್ಮದಿ ನೀಡಬೇಕೆಂದು ಕೋರಿದ. ಆಗ ಆ ಸನ್ಯಾಸಿ 'ನಿನ್ನೆಲ್ಲ ಸಮಸ್ಯೆಗಳಿಗೆ ಮೂಲಕಾರಣ ನಿನ್ನ ಆಸ್ತಿ. ನೀನು ನಿನ್ನ ಸಂಪತ್ತನ್ನೆಲ್ಲಾ ಒಂದು ಗಂಟುಕಟ್ಟಿ ನನ್ನ ಕಾಲಬಳಿತಂದಿಡು, ನಾನು ನಿನ್ನ ಸಮಸ್ಯೆಯನ್ನು ದೂರೀಕರಿಸುತ್ತೇನೆ' ಎಂದ.ಸನ್ಯಾಸಿಯ ಮಾತಿನಂತೆಯೇ ಮಾಜಿ ಬಡವ, ಹಾಲಿ ಸಾಹುಕಾರ ತನ್ನೆಲ್ಲ ಸಂಪತ್ತನ್ನೂ ಗಂಟುಕಟ್ಟಿ ಸನ್ಯಾಸಿಯ ಪಾದದಬಳಿ ಇಟ್ಟು ತನಗೆ ನೆಮ್ಮದಿ ನೀಡಬೇಕೆಂದು ಸಾಷ್ಟಾಂಗ ನಮಸ್ಕಾರಮಾಡಿದ. ಆ ಕೂಡಲೇ ಸನ್ಯಾಸಿ ಸಂಪತ್ತಿನ ಗಂಟನ್ನು ಎತ್ತಿಕೊಂಡು ಓಡತೊಡಗಿದ. ಸಾಹುಕಾರನಿಗೆ ದಿಕ್ಕೇ ತೋಚದಾಯಿತು. ತಾನು ಜೀವಮಾನವಿಡೀ ದುಡಿದ ಸಂಪತ್ತನ್ನು ಈ ಕಪಟ ಸನ್ಯಾಸಿ ಎಗರಿಸಿಕೊಂಡು ಹೋಗುತ್ತಿರುವನಲ್ಲ ಎಂದು ದುಃಖಿಸುತ್ತಾ ಆ ಸನ್ಯಾಸಿಯ ಹಿಂದೆಹಿಂದೆ ಓಡತೊಡಗಿದ. ಬಹಳ ದೂರ ಸುತ್ತಾಡಿಸಿದ ಬಳಿಕ ಸನ್ಯಾಸಿ ತಾನು ಮೊದಲಿದ್ದ ಸ್ಥಳಕ್ಕೇ ಬಂದುಕುಳಿತ. ಏದುಸಿರುಬಿಡುತ್ತಾ ಓಡಿಬಂದ ಸಾಹುಕಾರನ ಕೈಗೆ ಗಂಟನ್ನು ಕೊಟ್ಟು 'ನನಗೆ ನಿನ್ನ ಗಂಟು ಬೇಕಿಲ್ಲ, ಆದರೆ ಸುಖ ಎಂದರೆ ಏನೆಂಬುದು ನಿನಗೆ ತಿಳಿಯಲಿ ಎಂದು ಹೀಗೆಮಾಡಿದೆ ಎಂದ. ಈ ರೀತಿ ಕಳೆದೇಹೋಯಿತು ಎಂಬ ವಸ್ತು ಮರಳಿ ದೊರೆತಾಗ ಸಿಗುವ ಸುಖ ಆನಂದ ವರ್ಣಿಸಲಸದಳ.

ಮೇಲಿನ ಘಟನೆಗಳನ್ನು ಹೇಳಿದ ಕಾರಣ ಎಂದರೆ ನನಗೂ ಇಂತಹುದೇ ಸಂದರ್ಭ ಇತ್ತೀಚೆಗೆ ಎದುರಾಯಿತು. ಹಾಗೂಹೀಗೂ ನನ್ನ ನಾಲ್ಕು ಪುಸ್ತಕಗಳು ಇತ್ತೀಚೆಗೆ ಬಿಡುಗಡೆಗೊಂಡವು. ಅವುಗಳನ್ನು ಕೊಳ್ಳಲು ಹಲವರು ಬೇಡಿಕೆ ಇಟ್ಟಿದ್ದರು. ಆ ಬೇಡಿಕೆಗಳನ್ನು ಪೂರೈಸಲು ನೆರೆಜಿಲ್ಲೆಗೆ ಹೊರಡುವ ಸಂದರ್ಭದಲ್ಲೇ ನಮ್ಮ ಮನೆಯ ಕೆಲಸದಾಕೆ ಹೇಳಿದ ಸಮಯಕ್ಕೆ ಬರದೇ ತಡಮಾಡಿದ್ದಳು. ಇದರಿಂದ ಕುಪಿತನಾದ ನಾನು ಎಲ್ಲರ ಮೇಲೆ ರೇಗಾಡುತ್ತಾ ನಿಗದಿತ ಸಮಯಕ್ಕಿಂತ ಒಂದು ಘಂಟೆ ತಡವಾಗಿ ಹೊರಟೆ ಅನ್ನಿ. ಹಾಗೆ ಹೊರಡುವಾಗ ಏನೆಲ್ಲ ದಾಖಲೆಗಳನ್ನು ವಸ್ತುಗಳನ್ನು ತೆಗೆದುಕೊಂಡು ಹೋಗಬೇಕಾಗಿತ್ತೋ ಅವುಗಳೆಲ್ಲವನ್ನೂ ತೆಗೆದುಕೊಂಡು ಹೊರಟೆನೆಂಬುದು ನನ್ನ ನಂಬುಗೆ. ಗುರಿ ತಲುಪಿ ನನ್ನ ಕೆಲಸಗಳನ್ನೆಲ್ಲ ಮುಗಿಸಿಕೊಂಡು ವಾಪಸಾಗುವಾಗ ನನಗೆ ಎಲ್ಲಿಲ್ಲದ ಸಂತೋಷ. ನನ್ನ ಬರವಣಿಗೆಗೂ ಒಂದು ಬೆಲೆ ಬಂದ ಸಂತಸ. 40 ಕಿ.ಮೀ ದೂರದ ನನ್ನ ವಾಸಸ್ಥಳಕ್ಕೆ ಅರ್ಧದೂರ ಕ್ರಮಿಸಿದ್ದೆ, ಏನೋ ನೆನಪು ಬಂದು ಪ್ಯಾಂಟಿನ ಕಿಸೆಯೊಳಗೆ ಕೈಹಾಕಿ ತಡಕಾಡತೊಡಗಿದೆ, ಇಲ್ಲ, ಅದಿಲ್ಲ. ಒಂದು

ತರಹಾ ಗಾಬರಿಯಿಂದ ಮೈಬೆವರತೊಡಗಿತು. ತಲೆತಿರುಗತೊಡಗಿತು. ನನ್ನ ಈ ಸ್ಥಿತಿಗೆ ಕಾರಣ, ನಾನು ವಾಹನ ಚಲಾಯಿಸುವಾಗ ಜೊತೆಗೆ ಕೊಂಡೊಯ್ಯುತ್ತಿದ್ದ ಚಾಲನಾ ಪರವಾನಗಿ, ವಾಹನ ನೋಂದಣಿ ಪತ್ರ, ವಾಹನ ವಿಮಾಪಾಲಿಸಿ, ನನ್ನ ಬ್ಯಾಂಕುಗಳ ಡೆಬಿಟ್ ಕಾರ್ಡುಗಳು ಎಲ್ಲವನ್ನೂ ಒಟ್ಟಿಗೆ ಇಟ್ಟಿರುವ ಆನ್‌ಲೈನಿನಲ್ಲಿ ತರಿಸಿದ್ದ ಅಲ್ಯೂಮಿನಿಯಂ ವ್ಯಾಲಟ್, ಕಿಸೆಯಲ್ಲಿಲ್ಲದಿದ್ದುದು. ಅವು ಎಲ್ಲಿ ಕಳೆದುಹೋದವೋ ಎಂಬ ಆತಂಕಕ್ಕಿಂತ ಹೆಚ್ಚಿನದು ನನ್ನ ದುರಾದೃಷ್ಟಕ್ಕೆ ದಾರಿಮಧ್ಯೆ ಯಾವನಾದರೂ ಖಾಕಿ ಕೈ ಅಡ್ಡಹಾಕಿ ನಿಲ್ಲಿಸಿದರೆ ನನ್ನ ಗತಿ ಏನು? ಲೈಸನ್ಸ್ ಇಲ್ಲದೆ ವಾಹನ ಚಲಾವಣೆ, ದಾಖಲೆ ಇಲ್ಲದ ವಾಹನ, ವಿಮಾಪತ್ರ ಇಲ್ಲದಿರುವುದು, ಈ ಲ್ಯಾಪ್ಸ್‌ಗಳಿಗಾಗಿ ಹಾಕಬಹುದಾದ ದಂಡ ಎಷ್ಟು ಎಂಬುದೇ ದೊಡ್ಡ ಚಿಂತೆ ! ಎಮಿಷನ್ ಟೆಸ್ಟ್ ಮಾಡಿಸಿದ ಪ್ರಮಾಣಪತ್ರ ಮಾತ್ರ ಕಾರಿನಲ್ಲಿತ್ತು. ವಿಷಯ ತಿಳಿದುದೇ ನಾನು ಎಲ್ಲೆಲ್ಲಿಗೆ ಹೋಗಿದ್ದೆನೋ ಅಲ್ಲಿಗೆಲ್ಲ ವಾಪಸು ಹೋಗಿ ವಿಚಾರಿಸಬೇಕೆನ್ನಿಸಿತು. ಹಾಗೆಂದು ಕಾರನ್ನು ವಾಪಸುತಿರುಗಿಸಿ ಒಂದೈದು ಕಿ.ಮೀ ಹೋಗುತ್ತಿದ್ದೆ. ಆಗೊಂದು ಯೋಚನೆ ತಲೆಗೆ ಹೊಳೆಯಿತು. ಅಲ್ಲಿಗೆ ಹೋದಾಗಲೂ ಸಿಗದೇ ಹೋದರೆ ಎನ್ನಿಸಿ, ಎಲ್ಲೆಲ್ಲಿಗೆ ಹೋಗಿದ್ದೆನೋ ಅಲ್ಲಿಗೆಲ್ಲ ಫೋನಾಯಿಸಿ ಕೇಳಿದೆ. ಎಲ್ಲಕಡೆಯಿಂದ ನಕಾರಾತ್ಮಕ ಉತ್ತರ. ಅಷ್ಟರಲ್ಲಿ ನನ್ನ ಶ್ರೀಮತಿ 'ನೀವು ಮನೆಯಿಂದ ಹೊರಟಾಗ ವ್ಯಾಲಟ್ ಕಿಸೆಗೆ ಹಾಕಿಕೊಂಡಿದ್ದಿರಾ?' ಎಂಬ ಪ್ರಶ್ನೆಕೇಳಿದಳು. ನಾನು ಫೋನಾಯಿಸಿದಾಗ ನನ್ನ ಮಿತ್ರನೂ ಸಹಾ ಅದೇ ಪ್ರಶ್ನೆ ಹಾಕಿದ್ದ. ಆಗ ನನ್ನ ಮನದಲ್ಲಿ ಗೊಂದಲ, ನಾನು ವ್ಯಾಲಟ್ ತೆಗೆದುಕೊಂಡಿದ್ದೆನೋ ಇಲ್ಲವೋ ಎಂಬ ಗೊಂದಲ. ನನ್ನ ಮಡದಿಯಂತೂ ಅದು ಮನೆಯಲ್ಲಿಯೇ ಇರಲೆಂದು ಕಾಣದ ದೇವರಿಗೆ ಬೇಡಿಕೊಂಡಿದ್ದೂ ಆಯಿತು. ನನ್ನ ಮನದ ಯಾವುದೋ ಮೂಲೆಯಲ್ಲಿ ಚಿಗುರಿತು ಒಂದು ಆಸೆ. ಆದರೂ ನಾನು ಯಾವಾಗಲೂ ವ್ಯಾಲಟ್ ತೆಗೆದುಕೊಳ್ಳದೇ ವಾಹನ ಏರುತ್ತಿರಲಿಲ್ಲ, ಒಂದೆರಡು ಸಲ ಹೊರತುಪಡಿಸಿ. ಆದರೆ ಅವೆಲ್ಲ ನಾನಿದ್ದ ಊರಿನಲ್ಲೇ.

ಏನು ಮಾಡಲೂ ತೋಚದೆ, ಮತ್ತೆ ನನ್ನೂರಿಗೆ ಕಾರು ಜಾಗರೂಕತೆಯಿಂದ ಓಡಿಸತೊಡಗಿದೆ. ಓವರ್ ಸ್ಪೀಡಿಂಗ್ ಮಾಡದೇ ವೇಗದ ಮಿತಿಯನ್ನು ಗಮನಿಸುತ್ತಾ, ನನ್ನ ಕಡೆ ಬರುವವರಿಗೆ ಅಣ್ಣನಾಗಿ, ಇತರ ಚಾಲಕರಿಗೆ ತಮ್ಮನಾಗಿ ನನ್ನೂರು ಸೇರಿದೆ. ಮನೆಯ ಬೀಗತೆಗೆದ ನನ್ನ ಮಡದಿ, ಗ್ಯಾರೇಜ್ ಬಾಗಿಲು ತೆರೆಯುವುದಕ್ಕೂ ಮುನ್ನ ಬೀರುವಿನ ಬಾಗಿಲು ತೆರೆದುನೋಡಿ ದೊಡ್ಡ ನಿಟ್ಟುಸಿರುಬಿಟ್ಟಳು. ಗ್ಯಾರೇಜ್

ಬಾಗಿಲು ತೆಗೆಯುತ್ತಾ ಕೂಗಿಹೇಳಿದುದು 'ಅದು ಇಲ್ಲೇ ಇದೆ. ಆತಂಕದಿಂದ ಪ್ರಪಾತಕ್ಕಿಳಿದುಹೋಗಿದ್ದ ನನ್ನ ಮನ ನನ್ನ ಮಡದಿಯ ಹೇಳಿಕೆಯಿಂದ ನಿರಾಳ ಆಯಿತು. ಶ್ರೀಮಂತನಿಗೆ ಸಿಕ್ಕಿದ ಸುಖಾನಂದ ನನ್ನದೂ ಆಗಿತ್ತು.

11–8–2016

* * * * *

ಲೇಖನ – 33

# ಸೋಲಿಗರ ಕೆಲವು ಆಚರಣೆಗಳು

ಸೋಲಿಗರಲ್ಲಿ ನಮ್ಮ ನಿಮ್ಮಂತೆ ಛತ್ರದಲ್ಲಿ ಗಂಡು ಹೆಣ್ಣು ಪುರೋಹಿತರ ನಿರ್ದೇಶನದಂತೆ ತಾಳಿಕಟ್ಟಿ ಸತಿಪತಿಯಾಗುತ್ತಿರಲಿಲ್ಲ. ರಕ್ತ ಸಂಬಂಧಿಗಳಲ್ಲದ ವಯಸ್ಸಿಗೆ ಬಂದ ಗಂಡು ಹೆಣ್ಣುಗಳು ಒಟ್ಟಿಗೆ ಕಾಡಿಗೆ ಓಡಿಹೋಗಿ ಎರಡು ಮೂರು ದಿವಸಗಳು ಅಲ್ಲೇ ಕಳೆದು ತಮ್ಮ ಪೋಡುಗಳಿಗೆ ವಾಪಸಾಗುತ್ತಿದ್ದರು. ಅದೇ ಅವರ ಮದುವೆ, ಅವರೇ ಸತಿಪತಿ ಎನಿಸಿಕೊಳ್ಳುತ್ತಿದ್ದರು.

ಇನ್ನು, ಹೆಣ್ಣು ಬಸುರಿಯಾದಾಗ, ಹೆರಿಗೆ ನೋವು ಕಾಣಿಸಿಕೊಂಡ ತಕ್ಷಣ ಒಂದು ಕುಡುಗೋಲು ಕೆಲವು ಬಟ್ಟೆಗಳನ್ನು ತೆಗೆದುಕೊಂಡು ಕಾಡಿಗೆ ಓಡಿಹೋಗುತ್ತಿದ್ದು, ತಾನೇ ಸ್ವಯಂ ಹೆರಿಗೆಮಾಡಿಕೊಂಡು ಕುಡುಗೋಲಿನಿಂದ ಕರುಳುಬಳ್ಳಿಯನ್ನು ಕತ್ತರಿಸಿಕೊಂಡು ಮಗುವನ್ನೆತ್ತಿಕೊಂಡು ವಾಪಸಾಗುತ್ತಿದ್ದುದು ಸಾಮಾನ್ಯ ಸಂಗತಿ. ಸರ್ಕಾರ ಸೋಲಿಗ ಬಸುರಿ ಹೆಣ್ಣುಮಕ್ಕಳಿಗೆ ಸುರಕ್ಷಿತ ಹೆರಿಗೆ ಮಾಡಿಸಲೆಂದೇ 'ಮಿಡ್ ವೈಫ್' ನೇಮಕಮಾಡಿರುತ್ತಿದ್ದರೂ, ಅವರನ್ನು ಕಂಡ ಕೂಡಲೇ, ಕಾಡಿಗೆ ಓಡಿಹೋಗುತ್ತಿದ್ದರು ಎಂದು ಹೇಳಲಾಗುತ್ತದೆ.

ಅವರ ದೈವ 'ದೊಡ್ಡ ಸಂಪಿಗೆ ಮರ'. ಸುಮಾರು ಇನ್ನೂರಕ್ಕೂ ಹೆಚ್ಚು ವರ್ಷವಾಗಿದ್ದ ಆ ಸಂಪಿಗೆಮರದಲ್ಲಿ ಋಷಿಮುನಿಗಳು ತಪಸ್ಸು ಮಾಡುತ್ತಿದ್ದರೆಂಬ ನಂಬಿಕೆ ಆ ಸೋಲಿಗರದು. . ಅದಕ್ಕೆ ಸೋಲಿಗರೆಲ್ಲರೂ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಅದರ ಜೊತೆಗೆ ಅವರು ಆಚರಿಸುತ್ತಿದ್ದ ಒಂದು ದೊಡ್ಡ ಹಬ್ಬ ಎಂದರೆ

'ರೊಟ್ಟಿ ಹಬ್ಬ'. ಒಂದು ಗುಡಿಯ ಬಳಿ ಸೇರಿದ ಸೋಲಿಗರು 'ತಮಡಿ' ಎಂಬ ಪೂಜಾರಿಯ ನೇತೃತ್ವದಲ್ಲಿ ಈ ಹಬ್ಬದ ಆಚರಣೆ ನಡೆಸುತ್ತಿದ್ದರು. ಆ 'ತಮಡಿ' ಮೈಮೇಲೆ ದೇವರು ಬಂದಾಗ ಅವರೆಲ್ಲ ತಮ್ಮ ಕಷ್ಟಗಳನ್ನು ಅವನ ಮುಂದೆ ನಿವೇದಿಸಿಕೊಂಡು ಪರಿಹಾರ ಪಡೆಯುತ್ತಿದ್ದರು. ಸಾಮೂಹಿಕವಾಗಿ ಭಕ್ತರು ಕೊಂಡ ಹಾದ ನಂತರ ರೊಟ್ಟಿ ಬೇಯಿಸಿ ತಿನ್ನುವುದೇ ಈ 'ರೊಟ್ಟಿ ಹಬ್ಬ' ಅಥವಾ ಗೋರುಗೋರುಕ ಗೋರುಕಾನ! ಸೋಲಿಗರ ಎಲ್ಲ ಹಬ್ಬಗಳಲ್ಲೂ ಸಾಮಾನ್ಯವಾಗಿ ಸರ್ಕಲ್ ರೂಪದಲ್ಲಿ ನೃತ್ಯಮಾಡುತ್ತಾ ಹಾಡುತ್ತಿದ್ದ ಹಾಡೇ 'ಗೋರುಗೋರುಕ ಗೋರುಕಾನ'. ಈ ಹಾಡಿನ ಚರಣಗಳಲ್ಲಿ ತಾವು ಬೆಳೆಯುತ್ತಿದ್ದ, ಬಳಸುತ್ತಿದ್ದ ಬೆಳೆಗಳನ್ನು ದೇವರಿಗೆ ಅರ್ಪಿಸುವುದಾಗಿ ಹೇಳುತ್ತಿದ್ದರು. ಅದು ಹಲಸಿನ ಹಣ್ಣಾಗಿರಬಹುದು, ದುರ್ಗದ ಬಾಳೆಹಣ್ಣಾಗಿರಬಹುದು ಇತ್ಯಾದಿ.

ಈ ಸಂಪಿಗೆ ಮರದ ಹೂವುಗಳು ಎಂದಿಗೂ ಬಾಡುವುದಿಲ್ಲ ಎಂಬ ನಂಬಿಕೆಯೂ ಸೋಲಿಗರಲ್ಲಿ ಇದೆ. ನಮ್ಮ ಮಾವ ಒಂದು ಬಾಟಲಿಯಲ್ಲಿ ಹಲವಾರು ಸಂಪಿಗೆ ಹೂವುಗಳನ್ನು ಹಲವಾರು ವರ್ಷಗಳ ಕಾಲ ಕಾಪಾಡಿ ಇಟ್ಟಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರ ಕಾಲಾನಂತರ ಆಕಸ್ಮಿಕವಾಗಿ ಬಾಟಲು ಒಡೆದುಹೋಯಿತು. ಆ ಬಾಟಲಿಯಲ್ಲಿದ್ದುದು "ದೊಡ್ಡ ಸಂಪಿಗೆ ಮರದ" ಹೂವುಗಳಾಗಿರಬಹುದು ಎಂದು ಈಗ ನನಗನ್ನಿಸುತ್ತಿದೆ.

14-9-2016

* * * * *

## ಲೇಖನ – 34

# ರಾಮರಾಜ್ಯ!

ಆಗಾಗ ಜನಸಾಮಾನ್ಯರು ಮಾತನಾಡಿಕೊಳ್ಳುವ ಪದ ಈ 'ರಾಮರಾಜ್ಯ'. ಈ ರಾಮರಾಜ್ಯ ಎಂದರೆ ಹೇಗಿರುತ್ತೆ ಎಂಬ ಬಗೆಗೆ ಕುತೂಹಲ ಹೆಚ್ಚಾಗಿ ಅದರ ಬಗೆಗೆ ಆಲೋಚಿಸತೊಡಗಿದೆ. ರಾಮರಾಜ್ಯದಲ್ಲಿ ದೈನಂದಿನ ಅವಶ್ಯಕತೆಗಳಿಗೆ ಯಾವುದೇ ಕೊರತೆ ಇರಬಾರದು. ಅಂದರೆ ಅವರಿಗೆ ಬೇಕಾದ ಅನ್ನ, ವಸತಿ, ಆರೋಗ್ಯಕಾರಕಗಳು ಇವು ಯಾವುದೇ ಬೇಧವಿಲ್ಲದೇ ಎಲ್ಲರಿಗೂ ದೊರಕಬೇಕು. ಅನ್ನ ಎಂದರೆ ಮತ್ತೆ ಧವಸಧಾನ್ಯಗಳು ಎಲ್ಲರಿಗೂ ಧಾರಾಳವಾಗಿ ದೊರಕಬೇಕಾದಲ್ಲಿ ಅವುಗಳ ಉತ್ಪಾದನೆಗೆ ಮೊದಲ ಪ್ರಾಶಸ್ತ್ಯ ನೀಡಬೇಕು. ರಾಸಾಯನಿಕ ಮುಕ್ತ, ಕಲಬೆರಕೆಯಿಲ್ಲದ ಆಹಾರ ಪದಾರ್ಥಗಳು ಸಿಗುವಂತಾಗಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಪ್ರಜೆಗಳು ಸತ್ಯಸಂಧರಾಗಿರಬೇಕು!

ವಿಶ್ವದಲ್ಲೇ ಭ್ರಷ್ಟಾಚಾರದಲ್ಲಿ ನಾಲ್ಕನೇ ಸ್ಥಾನ ತಲುಪಿರುವ ಭಾರತದಲ್ಲಿ ಮತ್ತೆ ನಾವು ರಾಮರಾಜ್ಯ ಸ್ಥಾಪಿಸಲು ಸಾಧ್ಯವೇ? ಕಲ್ಪನೆಗೂ ಮೀರಿದ ಕನಸು! ಹಿಂದೆಲ್ಲಾ ಹದಿನಾರಾಣೆ ಸತ್ಯ ಎನ್ನುವ ಪದ ಚಾಲ್ತಿಯಲ್ಲಿತ್ತು, ಜನ ಸುಳ್ಳಾಡಲು ಅಂಜುತ್ತಿದ್ದ ಕಾಲ. ಸುಳ್ಳಾಡಿದರೆ ಭಗವಂತ ಮೆಚ್ಚುವುದಿಲ್ಲ ಎಂಬ ಹೆದರಿಕೆ ಜನರಲ್ಲಿತ್ತು. ಆದರೆ ಈಗ ದೇವರ ಒಡವೆಗಳನ್ನೇ, ಹುಂಡಿಗಳನ್ನೂ ದೋಚುತ್ತಿದ್ದಾರೆ ಕಳ್ಳರು, ದರೋಡೆಕೋರರು. ದೇವರಲ್ಲಿ ಭಕ್ತಿಯೂ ಇಲ್ಲ, ಹೆದರಿಕೆಯೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ರಾಮರಾಜ್ಯ ಮತ್ತೆ ಮರುಕಳಿಸಬಹುದೇ?

ಪ್ರತಿಯೊಬ್ಬರೂ ದಿಢೀರ್ ಶ್ರೀಮಂತಿಕೆಯ ಕನಸು ಕಾಣಲಾರಂಭಿಸಿದ್ದಾರೆ. ಈ ರೀತಿ ದಿಢೀರ್ ಶ್ರೀಮಂತಿಕೆ ಬರಬೇಕೆಂದರೆ ಸತ್ಯಮಾರ್ಗ ಬಿಟ್ಟು ನಡೆಯಬೇಕು. ಕಲಬೆರಕೆ ಮಾಡುವುದು, ತೂಕ ಅಳತೆಯಲ್ಲಿ ಮೋಸಮಾಡುವುದು, ಕೆಲಸಮಾಡುವ ಸಮಯದಲ್ಲಿ ವ್ಯಥಾ ಕಾಲಹರಣಮಾಡುವುದು, ನ್ಯಾಯಯುತವಾಗಿ ಮಾಡಿಕೊಡಬೇಕಾದ ಕೆಲಸಗಳಿಗೆ ವ್ಯಥಾ ವಿಳಂಬನೀತಿ ಅನುಸರಿಸಿ, ಆ ಕೆಲಸ ಮಾಡಿಕೊಡಲು ಲಂಚ ಸ್ವೀಕರಿಸುವುದು ಮುಂತಾದ ರೀತಿಗಳಲ್ಲಿ ಮೋಸಮಾಡಿ ಹಣ ಸಂಪಾದನೆಮಾಡುತ್ತಿದ್ದಾರೆ. ಕೆಲಸ ಮಾಡಿಸಿಕೊಳ್ಳಬೇಕಾದವರೂ ಸಹಾ ಈ ಅನ್ಯಾಯಗಳ ವಿರುದ್ಧ ಪ್ರತಿಭಟಿಸದೇ, ಅವರ ಪಾಪದ ಕೆಲಸಗಳಲ್ಲಿ ತಾವೂ ಶಾಮೀಲಾಗುತ್ತಿದ್ದಾರೆ.

ಈಗಿನ ಕಾಲದಲ್ಲಿ ಅನೈತಿಕ, ಶೀಲ, ಸ್ವಾಮಿನಿಷ್ಠೆ ಎನ್ನುವ ಪದಗಳ ಅರ್ಥವೇ ಮರೆತುಹೋಗಿದೆ. ಹಿಂದೆಲ್ಲ ಸೆಕ್ಸ್ ವಿಚಾರಗಳನ್ನು ಮಾತನಾಡಲೇ ಹಿಂಜರಿಯುತ್ತಿದ್ದರು. ಈಗ ಎಲ್ಲವೂ ಖುಲ್ಲಂಖುಲ್ಲ. ವಿವಾಹ ಪೂರ್ವ ಲೈಂಗಿಕತೆಯಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸುವ ಮಂದಿ ಹೆಚ್ಚಾಗುತ್ತಿದ್ದಾರೆ. ಗಂಡನಿಗೆ ನಿಷ್ಠೆ ತೋರುವುದು ಬೇಕಾಗಿಲ್ಲ. ಉದ್ಯೋಗಪತಿಗೆ ನಿಷ್ಠೆ ತೋರಬೇಕಾಗಿಲ್ಲ. ತನ್ನ ಸ್ವಹಿತ ಕಾಯ್ದುಕೊಳ್ಳುವುದಷ್ಟೇ ಈಗಿನವರ ಧ್ಯೇಯ, ಪರಮ ಗುರಿ. ಅದಕ್ಕಾಗಿ ಯಾವ ರೀತಿಯ ತ್ಯಾಗಕ್ಕಾದರೂ ಅವರು ಸಿದ್ಧರಾಗಿಬಿಡುತ್ತಾರೆ. ಹಿಂದೆಲ್ಲ ಅನ್ನ ಹಾಕಿದ ಧಣಿ ಎಂದು ತಮಗೆ ಉದ್ಯೋಗ ನೀಡಿದವರನ್ನು ಪೂಜ್ಯಭಾವದಿಂದ ನೋಡುತ್ತಿದ್ದರು. ಅದೇ ಈಗ ಅವರ ಧೋರಣೆಯೇ ಬದಲಾಗಿಹೋಗಿದೆ. ತಾವು ದುಡಿದುದಕ್ಕೇ ಅಲ್ಲವೇ ಆತ ನಮಗೆ ಕೂಲಿ ಕೊಡುತ್ತಿದ್ದುದು, ಅದೇ ಅಲ್ಲದೆ ನಮ್ಮ ದುಡಿಮೆಯ ಫಲವಾಗಿಯೇ ಆತ ಕೋಟ್ಯಾಂತರ ರೂಪಾಯಿ ಲಾಭ ಮಾಡಿಕೊಂಡುದು! ನ್ಯಾಯವಾಗಿ ನೋಡಿದರೆ ಆತನೇ ನಮ್ಮನ್ನು ಶೋಷಣೆ ಮಾಡಿರುತ್ತಾನೆ. ನಮ್ಮ ವೇತನದ ಜೊತೆಗೆ ಆತ ನಮಗೆ ತನ್ನ ಪಾಲಿನ ಲಾಭದಲ್ಲೂ ಒಂದು ಪಾಲು ನೀಡಬೇಕು ಎನ್ನುವುದು ಅಂತಹವರ ವಾದ. ಇಂತಹ ಪರಿಸ್ಥಿತಿಯಲ್ಲಿ ಯಾರಾದರೂ 'ರಾಮ ರಾಜ್ಯ'ದ ಕನಸು ಕಾಣಲಿಕ್ಕೆ ಸಾಧ್ಯವೇ!

25-7-2017

* * * * * *

ಲೇಖನ – 35

# ಎಲ್ಲಿಂದಲೋ ಬಂದವರು

**ಸಾ**ಮಾನ್ಯವಾಗಿ ಈ ಗುಜರಾತಿಗಳು, ರಾಜಸ್ಥಾನಿಗಳು, ತಮಿಳರು, ಮಲಯಾಳಿಗಳು ಹೀಗೇ ಬೇರೆಬೇರೆ ಊರುಗಳಿಂದ ಬಂದು ಸೇರಿಕೊಂಡು ಇಲ್ಲಿಯೇ ಯಾವುದಾದರೊಂದು ವ್ಯಾಪಾರದಲ್ಲೋ, ಉದ್ಯಮದಲ್ಲೋ ತಮ್ಮನ್ನು ತೊಡಗಿಸಿಕೊಂಡು ಪ್ರವರ್ಧಮಾನಕ್ಕೆ ಬಂದವರು ಎಷ್ಟೋ ಮಂದಿ. ಅವರ ಅಭಿವೃದ್ಧಿಯನ್ನು ಸಹಿಸಲಾರದ ಮಂದಿ ಬಳಸುವ ಮಾತು "ಎಲ್ಲಿಂದಲೋ ಬಂದವರು". ಹೀಗೇ ಈ ಹೋಟಲುಗಳನ್ನು ನಡೆಸುತ್ತಿರುವ ಬಹುತೇಕರು ದಕ್ಷಿಣ ಕನ್ನಡದಿಂದ ಬಂದಿರುತ್ತಾರೆ. ಮೊದಲಿಗೆ ಹೆಗಲಮೇಲೆ ಒಂದು ಜಾಲರಿ, ಸೌಟು ಹಿಡಿದುಕೊಂಡು ಬಂದು ಯಾವುದೋ ಹೋಟಲಿನಲ್ಲೋ, ಮದುವೆ ಮುಂಜಿ ಮುಂತಾದ ಸಮಾರಂಭಗಳಲ್ಲೋ ಅಡುಗೆ ಮಾಡಿಕೊಂಡು ಕಾಲಾನಂತರ ಸ್ವಲ್ಪ ಹಣ ಹೊಂದಿಸಿಕೊಂಡು ಒಂದು ಪುಟ್ಟ ಕ್ಯಾಂಟೀನ್ ತೆರೆದು, ಕಾಲಕ್ರಮದಲ್ಲಿ ಅದನ್ನೇ ಬಡಾಯಿಸಿ ಪ್ರಖ್ಯಾತಿ ಪಡೆದವರೂ ಇರುತ್ತಾರೆ. ಅಂತಹವರನ್ನೂ ಸ್ಥಳೀಯ ಜನ ಎಲ್ಲಿಂದಲೋ ಬಂದವರು ಎಂದು ಆಡಿಕೊಳ್ಳುತ್ತಾರೆ. ಈ ರೀತಿಯ ಮಾತನ್ನೇ ತೀಕ್ಷವಾಗಿ ತೆಗೆದುಕೊಂಡ ಒಬ್ಬ ಹೋಟಲ್ ಮಾಲೀಕ ಅದಕ್ಕೆ ಪ್ರತಿಕ್ರಯಿಸಿದ ರೀತಿ "ನಾವೇನೂ ಎಲ್ಲಿಂದಲೋ ಬಂದವರಲ್ಲ, ನಾವೂ ಎಲ್ಲರೂ ಎಲ್ಲಿಂದ ಬಂದಿರುತ್ತಾರೋ ಅಲ್ಲಿಂದಲೇ ಅಂದರೆ ಅಮ್ಮನ ಹೊಟ್ಟೆಯಿಂದಲೇ ಬಂದವರು" ಎಂದು. ಇಲ್ಲಿ ವಿಶ್ಲೇಷಣೆಗೆ ಒಳಪಡಬೇಕಾದುದು ಈ ಎಲ್ಲಿಂದಲೋ

ಬಂದವರು ಎಂಬ ನುಡಿಯೇ. ಪುರಾಣ ಪುಣ್ಯ ಕತೆಗಳಲ್ಲಿ ನಾವು ಕೆಲವು ಮಹಾಪುರುಷರು ಕಿವಿಯಿಂದ ಜನಿಸಿದರು, ನಾಭಿಯಿಂದ ಜನಿಸಿದರು ಎಂದೆಲ್ಲ ಕೇಳುತ್ತೇವೆ. ಇಂತಹವರನ್ನೇ ಅಲ್ಲವೇ ನಾವು ಅಯೋನಿಜ ಎನ್ನುವುದು. ಆ ಅರ್ಥದಲ್ಲಿ ಈ ಮಾಲೀಕ ನಾವು ಅಯೋನಿಜರಲ್ಲ ಎನ್ನುವುದನ್ನು ಹೇಳಿರುವುದು. ಇವರೆ ಒಳಗಿನವರು ಹೊರಗಿನವರು ಎಂಬರ್ಥದಲ್ಲಿ ಈ ನುಡಿಯನ್ನು ವಿಶ್ಲೇಷಿಸಲೂ ಬಹುದು. ಬ್ರಿಟೀಷರು, ಮಹಮದೀಯ ದೊರೆಗಳು, ಫ್ರೆಂಚರು, ಡಚ್ಚರು ಹೀಗೇ ಬಂದವರೆಲ್ಲರೂ ನಮ್ಮ ದೇಶದ ಸಂಪತ್ತನ್ನು ದೋಚಿಕೊಂಡು ಹೋದವರೇ! ಈಗ ಬೆಂಗಳೂರನ್ನೇ ಉದಾಹರಣೆಗೆ ತೆಗೆದುಕೊಂಡರೆ ಬೆಂಗಳೂರಿನಲ್ಲಿ ಬೆಂಗಳೂರಿಗರ ಸಂಖ್ಯೆಗಿಂತ ಇತರೇ ರಾಜ್ಯ ದೇಶಗಳಿಂದ ಬಂದವರ ಸಂಖ್ಯೆಯೇ ಅಧಿಕವಾಗಿದೆ ಎಂಬುದು ಅಂಕಿ ಅಂಶಗಳಿಂದ ತಿಳಿಯಬರುತ್ತದೆ.

ಅಂತೆಯೇ ಯಾವುದೋ ಸ್ಥಳದಲ್ಲಿ ಉದ್ಯೋಗದಲ್ಲಿದ್ದವರು ವರ್ಗಾವಣೆ ಕಾರಣದಿಂದಲೋ, ನಿವೃತ್ತಿನಂತರದ ಜೀವನ ಕಳೆಯಲೆಂದೋ, ಮಕ್ಕಳ ಜೊತೆಗಿರಲೆಂದೋ, ಉದ್ಯೋಗಾವಕಾಶ ಹುಡುಕಿಕೊಂಡೋ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆಹೋಗುವುದೂ ಈ ಎಲ್ಲಿಂದಲೋ ಬರುವ ಕ್ರಿಯೆಗೆ ಕಾರಣವಾಗುತ್ತದೆ. ಆ ರೀತಿ ಹೊರಗಿನಿಂದ ಬರುವವರ ಸಲುವಾಗಿಯೇ ಬಾಡಿಗೆ ಮನೆಗಳಿಗೆ ಬೇಡಿಕೆ ಹೆಚ್ಚುತ್ತದೆ. ಒಂದಕ್ಕಿಂತ ಹೆಚ್ಚು ಮನೆಗಳನ್ನು ಹೊಂದಿರುವವರು ತಮ್ಮ ಇಂತಹ ಹೆಚ್ಚುವರಿ ಮನೆಗಳನ್ನು ಬಾಡಿಗೆಗೆ ನೀಡುತ್ತಾರೆ. ಕೆಲವರಿಗಂತೂ ಇದೂ ಒಂದು ಮುಖ್ಯ ಆದಾಯದ ಮೂಲವೇ ಆಗಿರುತ್ತದೆ. ಅಪಾರ್ಟ್‌ಮೆಂಟ್ ಹೆಸರಿನಲ್ಲಿ ಹತ್ತಾರರಿಂದ ನೂರಾರು ಮನೆಗಳನ್ನು ನಿರ್ಮಿಸಿದವರನ್ನೂ ಕಾಣಬಹುದು.

ಈ ಮೊದಲು ದೇವರಾಜ ಅರಸು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ "ಉಳುವವನೇ ಭೂಮಿಗೆ ಒಡೆಯ" ಎಂಬ ಕಾನೂನು ಜಾರಿಗೆ ಬಂದು ಹಲವಾರು ಜಮೀನುದಾರರನ್ನು ಭಿಕಾರಿಗಳನ್ನಾಗಿಸಿದ್ದು ಈಗ ಇತಿಹಾಸ. ಇದನ್ನು ಪಡೆದ ಕೃಷಿಕಾರ್ಮಿಕರೇನೂ ಸಂತೋಷವಾಗಿರಲಿಲ್ಲ. ಮೊದಲಾದರೆ ಯಜಮಾನ ಎಲ್ಲ ಕಷ್ಟನಷ್ಟಗಳನ್ನೂ ತನ್ನ ಹೆಗಲಮೇಲೆ ಹಾಕಿಕೊಂಡು ಇವರ ದುಡಿಮೆಗೆ ಕೂಲಿಕೊಟ್ಟು ಕಳುಹಿಸುತ್ತಿದ್ದ, ಈಗ ತಾನೇ ಯಜಮಾನನಾದ ಬಡ ರೈತ ಬಂಡವಾಳ ಒದಗಿಸಿ ಕೃಷಿ ವಿಪತ್ತುಗಳನ್ನು ಎದುರಿಸಲಾರದೇ ಮೊದಲಿಗಿಂತ ಹೀನ ಸ್ಥಿತಿ ತಲುಪಿದ ಹಾಗಾಯಿತು ಎಂದು ಅಡಿಕೊಳ್ಳುವವರೂ ಇದ್ದಾರೆ.

ಈಚೆಗೆ ಸಿದ್ಧರಾಮಯ್ಯನವರ ಆಡಳಿತದ ಸರ್ಕಾರ "ವಾಸಿಸುವವನೇ ಮನೆ" ಎಂಬ ಕಾನೂನು ತರಲು ಮುಂದಾಗಿದೆ. ಹೀಗಾದರೂ ವಸತಿಹೀನರ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಬಹುದಾಗಿದೆ ಎಂಬುದು ಸರ್ಕಾರದ ಆಶಯ ಆಗಿರಬಹುದು. ಈ ಕಾನೂನು ಜಾರಿಗೆ ಬಂದರೆ ಅದು ಸ್ವಾಗತಾರ್ಹವೇ. ಯಾರಿಗೆ? ಹಾಲಿ ಬಾಡಿಗೆ ಮನೆಗಳಲ್ಲಿರುವವರಿಗೆ ಮಾತ್ರ. ಆದರೆ ಮನೆ ಮಾಲೀಕರುಗಳಿಗೆ ಇದು ಸಂಕಟ ಸಮಯವೇ ಸರಿ. ಅವರು ಸರ್ಕಾರದ ಮೇಲೆ ಒತ್ತಡತಂದು ಈ ಕಾನೂನನ್ನು ಜಾರಿಗೊಳಿಸದೇ ಇರುವಂತೆ ಮಾಡಬಹುದು. ಆಗ ಬಾಡಿಗೆದಾರರ ಕನಸು ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತಾಗುತ್ತದೆ.ಬಹುಪಾಲು ಈ ಬಹುಮಹಡಿ ಒಡೆಯರು ರಾಜಕೀಯ ಸಂಬಂಧಗಳನ್ನು ಹೊಂದಿರುವ ಸಾಧ್ಯತೆ ತಳ್ಳಿಹಾಕುವಂತಿಲ್ಲ. ಹಾಗೇನಾದರೂ ಈ ಕಾನೂನು ಜಾರಿಯಾಗಿದ್ದೇ ಆದಲ್ಲಿ ಈ ಬಹುಮಹಡಿ ಯಜಮಾನರೂ ಬೀದಿಗೆ ಬೀಳುತ್ತಾರೆ. ಆದುದರಿಂದ ಅವರು ತಮ್ಮೆಲ್ಲ ಶಿಫಾರಸ್ಸುಗಳನ್ನೂ ಉಪಯೋಗಿಸಿ ಕಾನೂನು ಆದಷ್ಟೂ ತಡವಾಗುವಂತೆ ನೋಡಿಕೊಳ್ಳುತ್ತಾರೆ ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯಪಡಬೇಕಾಗಿಲ್ಲ.

25–7–2017

* * * * * *

## ಲೇಖನ – 36

# ಒಂದು ವಿಪರೀತ ಆಲೋಚನೆ

"ಕಣ್ಣರಿಯದೊಡಂ ಕರುಳರಿಯದೇ" ಈ ಮಾತು ಕುಂತಿ ಕರ್ಣನ ಎದುರಾಬದುರಾದಾಗ ಪಡುವ ಒಳತೋಟೆಯನ್ನು ವಿವರಿಸುವ ಸಂದರ್ಭದಲ್ಲಿ ಆಡುವ ಮಾತು. ಹೆತ್ತು ಗಂಗೆಗೆ ಅರ್ಪಿಸಿದ ನಂತರ ಬಹುಕಾಲಾನಂತರ ಕರ್ಣ ಎದುರು ಬಂದಾಗ ಆಕೆಯ ಮನದೊಳಗಣ ಸಂಕಟ ತಲ್ಲಣ ಮುಂತಾದ ಭಾವನೆಗಳ ಕೂಟವೇ ಈ ಕಣ್ಣರಿಯದೊಡಂ ಕರುಳರಿಯದೇ ಎನ್ನುವ ಪದ ಸಮೂಹ. ಕರುಳಿನ ಕರೆ, ಕರುಳ ಸಂಬಂಧ, ಈ ಪದಸಮೂಹಗಳೆಲ್ಲ ತಾಯಿ ಮಗುವಿನ ಸಂಬಂಧವನ್ನು ಸೂಚಿಸುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಚಾರವೇ. ಜನನ ಕಾಲದಲ್ಲಿ ತಾಯಿ ಹೊಟ್ಟೆಯಿಂದ ಬಂದ ಮಗುವಿಗೂ ತಾಯಿಗೂ ಹೊಟ್ಟೆಯೊಳಗಿರುವಾಗಲೂ ಭೌತಿಕ ಸಂಬಂಧ ಕಲ್ಪಿಸುವುದು ಇದೇ ಕರುಳುಬಳ್ಳಿ. ತಾಯಿ ತಿಂದ ಆಹಾರದಿಂದಲೇ ಕರುಳ ಬಳ್ಳಿಯ ಮೂಲಕ ಮಗು ತನ್ನ ಆಹಾರದ ಅಗತ್ಯತೆಗಳನ್ನು ಪೂರೈಸಿಕೊಳ್ಳುತ್ತಿರುತ್ತದೆ. ಆದರೆ ಕರುಳು ಕಿವುಚಿದ ಹಾಗಾಯಿತು ಎನ್ನುವಾಗ ಕರುಳಿನ ಕೆಲಸ ಏನು. ಇದು ತಾಯಿಯ ಯಾತನೆಯ ಭಾವನೆಯನ್ನು ಪ್ರಕಟಿಸುವ ಒಂದು ಬಗೆಯಲ್ಲವೇ? ಹೆಂಗರುಳುಳ್ಳವರು ಎಂಬ ಮಾತೂ ಸಹಾ ಇತರರ ಬಗೆಗೆ ಅನುಕಂಪ ಹೊಂದಿದವರನ್ನು ಕುರಿತು ಆಡುವ ಮಾತಾಗಿದೆ. ಇಲ್ಲಿ ಕರುಳು ಭಾವನೆಗಳ ತವರು ಎನ್ನಲಾದೀತೇ?

ಮನುಷ್ಯ ತನ್ನ ಭಾವನೆಗಳನ್ನು ಪ್ರಕಟಿಸುವುದು ಹೇಗೆ? ಹೃದಯದಿಂದ, ಮಿದುಳಿನಿಂದ ಅಥವಾ ಮತ್ತಾವ ಅಂಗದಿಂದ

ಎನ್ನುವ ಸಂದಿಗ್ಧತೆ ತಲೆದೋರುತ್ತಿದೆ. ಹೃದಯ ಯಾತನೆ ಪಡುತ್ತಿದೆ ಎಂದಾಗ ಈ ಮೊದಲು ಕರುಳು ವ್ಯಕ್ತಪಡಿಸಿದ್ದ ಭಾವನೆ ಹೃದಯದಿಂದ ಹೊರಹೊಮ್ಮಿದೆ ಎಂದ ಹಾಗಾಗಲಿಲ್ಲವೇ? ಹೃದಯ ಸಂವಾದ ಎಂದಾಗ ನಿಶಬ್ದವಾದ ಸಂವಾದ ನಡೆಯದಿದ್ದರೂ ಒಬ್ಬರು ಮತ್ತೊಬ್ಬರ ಮನಸ್ಸಿನ ಭಾವನೆಗಳಿಗೆ ಸ್ಪಂದಿಸುತ್ತಿದ್ದಾರೆ ಎಂದನ್ನಿಸುವುದಿಲ್ಲವೇ? ಹಾಗಿದ್ದಲ್ಲಿ ಹೃದಯ ಮನಸ್ಸು ಆತ್ಮ ಎಲ್ಲವುಗಳ ಸಂಗಮವೇ?

ಹಾಗಾದರೆ ಮನಸ್ಸು ಎಂದರ ಯಾವುದು ಎಂಬ ಜಿಜ್ಞಾಸೆ ಮೂಡುತ್ತದೆ. ಮನಸ್ಸು ಎಂಬುದು ಎಲ್ಲಿದೆ? ಹೃದಯದಲ್ಲೇ, ಮಿದುಳಿನಲ್ಲೇ, ಕರುಳಿನಲ್ಲೇ? ಎಲ್ಲಿ ಎಲ್ಲಿ ಎಲ್ಲಿ? ಮನಸ್ಸಿಗೂ ಆತ್ಮಕ್ಕೂ ಏನಾದರೂ ಸಾಮ್ಯತೆ ಇದೆಯೇ? ಮನಸ್ಸೇ ಆತ್ಮವೇ? ಮನುಷ್ಯನ ಆತ್ಮ ಆತನ ಸಾವಿನ ನಂತರ ತನ್ನ ಭೌತಿಕ ಶರೀರವನ್ನು ತ್ಯಜಿಸಿ ಮತ್ತೊಂದು ಶರೀರದಲ್ಲೋ ಭಗವಂತನಲ್ಲೋ ಲೀನವಾಗುತ್ತದೆ ಅಥವಾ ಸೇರಿಕೊಳ್ಳುತ್ತದೆ ಎಂದು ಹೇಳುವರಲ್ಲಾ ಹಾಗಂದರೇನು ಅರ್ಥ? ಅಲ್ಲಿಗೆ ಆತ್ಮ ಎನ್ನುವುದು ಉಸಿರು ಎಂದಂತಾಗುವುದೇ? ಮನುಷ್ಯ ಸತ್ತ ಎಂದು ನಿರ್ಣಯಿಸಬೇಕಾದಲ್ಲಿ ಆತನ ಉಸಿರಾಟ ನಿಂತಮೇಲಲ್ಲವೇ? ಹಾಗಿದ್ದಲ್ಲಿ ಉಸಿರು ಎಂದರೆ ಆತ್ಮ ಎನ್ನಬಹುದೇ? ಈಗ ಆತ್ಮಹತ್ಯೆ ಎನ್ನುವಾಗ ಸ್ವಯಂಪ್ರೇರಣೆಯಿಂದ ಉಸಿರು ನಿಲ್ಲಿಸಿಕೊಳ್ಳುವಿಕೆ ಎಂದರ್ಥವಲ್ಲವೇ? ಆಗಲೂ ಆತ್ಮ ಮತ್ತು ಉಸಿರು ಎರಡೂ ಒಂದೇ ಎಂದಾಗುವುದಲ್ಲವೇ? ಆತ್ಮಹತ್ಯೆ ಮೂಲಕ ಉಸಿರು ನಿಲ್ಲಿಸಿಕೊಳ್ಳುವುದು ಎಂದರೆ ಆತ್ಮವನ್ನೂ ನಿಲ್ಲಿಸಿಕೊಂಡಂತಾಗುವುದಿಲ್ಲವೇ?

ನಮ್ಮೆಲ್ಲ ಚಟುವಟಿಕೆಗಳ ಮೂಲ ನಿರ್ದೇಶಕ ನಮ್ಮ ಮಿದುಳು ಅಲ್ಲವೇ? ನಾವು ಉಸಿರಾಡುವುದು, ಕೈಕಾಲುಗಳ ಚಲನೆ, ಕಣ್ಣೋಟ, ಆಹಾರ ಜೀರ್ಣಿಸುವಿಕೆ, ಮಾತನಾಡುವಿಕೆ ಮುಂತಾದ ಸಕಲ ಚಟುವಟಿಕೆಗಳನ್ನು ನಿಯಂತ್ರಿಸುವುದೇ ನಮ್ಮ ಮಿದುಳು. ಈ ಕಾರಣಕ್ಕೆ ನಮ್ಮ ಆತ್ಮ ನಮ್ಮ ಮಿದುಳಿನಲ್ಲಿದೆ ಎನ್ನಬಹುದಲ್ಲವೇ? ವಿಜ್ಞಾನ ವೈದ್ಯಲೋಕದ ಪ್ರಕಾರ ಮನುಷ್ಯ ಸತ್ತನೆಂದು ತೀರ್ಮಾನವಾಗುವುದು ಅವನ ಉಸಿರಾಟ ನಿಂತರಷ್ಟೇ ಅಲ್ಲ ಅವನ ಮಿದುಳು ನಿಷ್ಕ್ರಿಯವಾದನಂತರವಷ್ಟೇ! ಎಂದರೆ ಈ ಮೇಲಿನ ಮನಸ್ಸು, ಆತ್ಮ ಎಂಬ ಪದಕ್ಕೆಲ್ಲ ಮಿದುಳು ಎಂದು ಅರ್ಥೈಸಬಹುದಲ್ಲವೇ? ಮಿದುಳು ದೋಷಪೂರಿತವಾಗಿದ್ದರೆ, ಆತನ ಆಲೋಚನಾ ಲಹರಿಯಲ್ಲೇ ಏರುಪೇರಾಗುತ್ತದೆಯಲ್ಲವೇ? ತನ್ನ ಯಾವ ಕೆಲಸಕಾರ್ಯಗಳನ್ನೂ ವ್ಯಕ್ತಿ ಸರಿಯಾದ ರೀತಿಯಲ್ಲಿ ಮಾಡಿಕೊಳ್ಳಲಾರನಲ್ಲವೆ? ಆದುದರಿಂದ ಇಡೀ ಮನುಷ್ಯ ಶರೀರದಲ್ಲಿ

ಎಲ್ಲಕ್ಕಿಂತ ಅತಿ ಮುಖ್ಯ ಅತ್ಯವಶ್ಯ ಅಂಗ ಎಂದರೆ ಅದು ನಮ್ಮ ಮೆದುಳು ಎನ್ನಬಹುದೇ?

ಪುನರಪಿ ಜನನಂ ಪುನರಪಿ ಮರಣಂ ಎನ್ನುವರಲ್ಲ ಈ ಮಾತಿನ ಅಂತರಾರ್ಥವೇನು? ಮನುಷ್ಯ ಸತ್ತನಂತರ ಮತ್ತೆ ಹುಟ್ಟಿಬರುತ್ತಾನೆ ಎಂದಾಗ ಅತನಿಗೆ ಸಾವಿಲ್ಲ ಎಂದಾಗುತ್ತದೆ. ಆ ಸತ್ತ ಮನುಷ್ಯ ಮತ್ತೊಂದು ರೂಪದಲ್ಲಿ ಜನಿಸುತ್ತಾನೆಯೇ? ಅವನು ಮುಂದಿನ ಜನ್ಮದಲ್ಲಿ ಯಾವ ರೂಪದಲ್ಲಿ ಜನಿಸುತ್ತಾನೆ ಎಂದು ಪೂರ್ವ ನಿರ್ಧಾರಿತವಾಗಿರುತ್ತದೆಯೇ? ಅತ ಮತ್ತೆ ಮಾನವರೂಪದಲ್ಲೇ ಜನಿಸುತ್ತಾನೆಯೋ ಅಥವಾ ಪ್ರಾಣಿರೂಪದಲ್ಲೋ. ಸತ್ತನಂತರ ಮತ್ತೆ ಆ ದೇಹದಲ್ಲೇ ಅವನ ಆತ್ಮ ಮರುಪ್ರವೇಶ ಬಯಸಲು ಸಾಧ್ಯವಿಲ್ಲವೇ? ಕೆಲವರನ್ನು ಸತ್ತರೆಂದು ತೀರ್ಮಾನಿಸಿ ಅಂತ್ಯಕ್ರಿಯೆಯ ಸಿದ್ಧತೆಗಳನ್ನು ನಡೆಸುತ್ತಿರುವಾಗಲೇ ಅವರು ಬದುಕಿ ಬಂದಿರುವ ಸಂಗತಿಗಳ ಬಗೆಗೆ ಏನೆಂದು ಹೇಳುವುದು. ಒಟ್ಟಿನಲ್ಲಿ ಎಲ್ಲವೂ ಒಗಟೊಗಟು. ಇವುಗಳ ಬಗೆಗೆ ಬಲ್ಲವರು ಉತ್ತರಿಸಿ ಉಂಟಾಗಿರುವ ಗೊಂದಲಗಳಿಗೆ ತೆರೆ ಎಳೆಯಬಲ್ಲರೇ?

28–7–2017

* * * * * *

## ಲೇಖನ – 37

# ಬತ್ತಿಯಿಡುವವರು ಒಳಗಿನವರೇ

ಪ್ರಖ್ಯಾತ ಸಾಹಿತಿಗಳಾದ ಅ.ರಾ. ಮಿತ್ರರವರು ಕಾರ್ಯಕ್ರಮ ಒಂದರಲ್ಲಿ ಹೇಳಿದ ಮಾತು: "ದೀಪ ಹಚ್ಚುವವರು ಹೊರಗಿನವರಾದರೂ ಬತ್ತಿ ಇಡುವವರು ಒಳಗಿನವರೇ", ಎಂತಹ ಮಾರ್ಮಿಕವಾದ ಮಾತು ಅದು. ಸಾಮಾನ್ಯವಾಗಿ ಯಾವುದೇ ಕಾರ್ಯಕ್ರಮಗಳಲ್ಲಾಗಲೀ, ಕಾರ್ಯಕ್ರಮ ನಡೆಸುವುದಕ್ಕಿಂತ ಬಹಳ ಮುಂಚೆಯೇ ಪೂರ್ವಸಿದ್ಧತೆಗಳು ನಡೆಸಬೇಕಾಗುತ್ತದೆ. ಅದರಲ್ಲಿ ಹತ್ತಾರು ಮಂದಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಬಹಳವಾಗಿ ಶ್ರಮಿಸಿರುತ್ತಾರೆ. ಆದರೂ ಕಾರ್ಯಕ್ರಮದಲ್ಲಿ ಏನಾದರೂ ಸಣ್ಣಪುಟ್ಟ ತಪ್ಪುಗಳೇನಾದರೂ ಘಟಿಸಿದಲ್ಲಿ, ಅದನ್ನೇ ದೊಡ್ಡದಾಗಿ ಮಾಡಿ ಟೀಕಿಸುವ ಮಂದಿಯೂ ಇವರೊಟ್ಟಿಗೇ ಇರುತ್ತಾರೆ. ಅಂತಹವರುಗಳನ್ನು ಮನದಲ್ಲಿಟ್ಟುಕೊಂಡೇ ಹೇಳಿರುವ ಮಾತು 'ಬತ್ತಿಯಿಡುವವರು ಒಳಗಿನವರೇ' ಎಂಬುದು. ಎತೆಂತಹ ವೀರ ಧೀರ ಸೇನಾನಿಗಳು ಯುದ್ಧಗಳಲ್ಲಿ ಸೋಲನುಭವಿಸಲು ಈ ಒಳಗಿನವರೇ ಕಾರಣಕರ್ತರಾಗಿರುತ್ತಾರೆ ಎಂಬುದೂ ಇತಿಹಾಸ ಕೆದಕಿನೋಡಿದರೆ ತಿಳಿದುಬರುವುದು. ಮೀರ್ ಸಾಧಕ್ ತಟ್ ಅಂತ ನೆನಪಿಗೆ ಬರುವ ಅಂತಹ ಹೆಸರು. ರಾಜನ ಜೊತೆಗಿದ್ದುಕೊಂಡೇ ಕತ್ತಿ ಮಸೆಯುತ್ತ ಅವರ ಸೋಲಿಗೆ, ಮರಣಕ್ಕೆ ಕಾರಣವಾಗುವವರು ಇಂತಹವರೇ.

ಸಾಮಾಜಿಕ ಸಂಸ್ಥೆಗಳಲ್ಲೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿಕೊಂಡು ಹೋಗುತ್ತಿರುವ ಹಲವಾರು ವ್ಯಕ್ತಿಗಳಿರುತ್ತಾರೆ. ತಮ್ಮ ವೈಯುಕ್ತಿಕ ಜೀವನವನ್ನೇ ಒತ್ತಟ್ಟಿಗಿರಿಸಿ ಸಮಾಜದ ಒಳಿತಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟು ಕಾರ್ಯ ಎಸಗುತ್ತಿರುವ ಇಂತಹ ವ್ಯಕ್ತಿಗಳ ಕಾರ್ಯವನ್ನು ಗುರುತಿಸಿ ಬೆನ್ನುತಟ್ಟುವುದು ನಮ್ಮ ಕೈಂಕರ್ಯವಾಗಬೇಕೇ ಹೊರತು, ಅವರು ಮಾಡಿರಬಹುದಾದ ಸಣ್ಣ ಸಣ್ಣ ತಪ್ಪುಗಳನ್ನೇ ಪ್ರಧಾನವಾಗಿಸಿ ಅದನ್ನೇ ಸಾರ್ವಜನಿಕವಾಗಿ ಎತ್ತಿತೋರಿಸಿ ಅವರ ಮನಸ್ಥೈರ್ಯ ಕುಗ್ಗಿಸುವಂತ ಕೆಲಸ ಮಾಡಬಾರದು. ಅಂತಹವರನ್ನು ಉತ್ತೇಜಿಸಿ ಕೆಲಸ ಮಾಡುವವರನ್ನು ಕೆಲಸ ಮಾಡದವರ ಗುಂಪಿಗೆ ಸೇರಿಸಬಯಸುವವರನ್ನು ಒಂದು ರೀತಿ ಕೊಲೆಗಡುಕರು ಎಂದೇ ಕರೆಯಬೇಕಾಗುತ್ತದೆ. ಸ್ವತಃ ಕೆಲಸಮಾಡಲಾಗದ ಸೋಮಾರಿಗಳು/ಮೈಗಳ್ಳರೇ ಇತರರ ಏಳಿಗೆಯನ್ನು ಸಹಿಸಲಾರದವರೇ ಇಂತಹ ದುಷ್ಕೃತ್ಯಗಳಿಗಿಳಿಯುವುದು ಎಂದೇ ಪರಿಗಣಿಸಬೇಕಾಗಿದೆ. ಎಂತಹ ಭವ್ಯ ಕಟ್ಟಡನಿರ್ಮಾಣವಾಗಬೇಕಾದರೂ ಲಕ್ಷಾಂತರ ಸಣ್ಣ ಸಣ್ಣ ಇಟ್ಟಿಗೆಗಳೇ ಅತಿ ಮುಖ್ಯವಾಗುವಂತೆ ಯಾವುದೇ ಸಭೆ, ಸಮಾರಂಭ ಯಶಸ್ವಿಯಾಗಬೇಕಾದಲ್ಲಿ ಅದರ ಯಶಸ್ಸಿಗೆ ಶ್ರಮಿಸಿದ ಎಲ್ಲರನ್ನೂ ಪ್ರಶಂಸಿಸಬೇಕೇ ಹೊರತು, "ಡೊನೇಟ್ ಯುವರ್ ಬ್ಲಡ್" ಎನ್ನುವ ಹಾಗೇ ತಾವು ಏನೂ ಮಾಡದಿದ್ದರೂ ಇತರರು ಮಾಡಿದ ಕೆಲಸಗಳಲ್ಲಿ ತಪ್ಪು ಕಂಡುಹಿಡಿಯಲೆಂದೇ ತಾವು ಹುಟ್ಟಿರುವುದು ಎಂಬ ಧೋರಣೆ ಹೊಂದಿರುವವರಿಂದ ಸಮಾಜಕ್ಕೆ ಒಳಿತಾಗುವುದಕ್ಕಿಂತ ಕೆಡುಕಾಗುವುದೇ ಹೆಚ್ಚು, ಇಂತಹವರನ್ನು ಎಲ್ಲರೂ ನಿರ್ಲಕ್ಷಿಸಬೇಕು, ಅದು ಸಾಧ್ಯವಾಗದಿದ್ದರೆ ಅಂತಹವರನ್ನು ದೂರವಿಡುವುದೇ ಇಡೀ ಸಮಾಜಕ್ಕೆ ಕ್ಷೇಮಕರ.

ಇಂತಹವರು ತಾವು ಮಾಡುತ್ತಿರುವ ಕೆಲಸ ಸಮಾಜೋದ್ಧಾರಕ್ಕಾಗಿ ಎಂದು ತಿಳಿದಿರಲೂಬಹುದು. ಜೊತೆಗೆ ತಾವು ಯಾರ ಮೇಲೆ ಆರೋಪ ಹೊರಿಸುತ್ತಿರುವೆವೋ ಅವರನ್ನು ಹೊಗಳುತ್ತಲೇ ತಮ್ಮ ಆರೋಪಗಳನ್ನು ಕಹಿಗುಳಿಗೆಗೆ ಸಿಹಿಲೇಪನ ಹಚ್ಚಿ ಉಣಿಸುವ ಕೆಲಸ ಮಾಡುತ್ತಿರುತ್ತಾರೆ. ಒಂದು ರೀತಿ ಶೇಕ್ಸ್‌ಪಿಯರನ ಜೂಲಿಯಸ್ ಸೀಸರನ ನಾಟಕದಲ್ಲಿ ಆಂಟೋನಿ ಸೀಸರನ ಶವದ ಮುಂದೆ ನಿಂತು ಬ್ರೂಟಸನ ಬಗೆಗೆ ಅವನನ್ನು ಹೊಗಳುತ್ತಲೇ ತೆಗಳುವ ಭಾಷಣದಂತಿರುತ್ತದೆ. ವ್ಯತ್ಯಾಸ ಒಂದೇ ಅಲ್ಲಿ ಮಾಡಿದ ದುಷ್ಕೃತ್ಯಕ್ಕಾಗಿ ಒಬ್ಬ ಖಳನಾಯಕನನ್ನು ಹೊಗಳುತ್ತಲೇ ಅವನ ದುಷ್ಕೃತ್ಯವನ್ನು ಬಯಲಿಗೆಳೆಯುವ

ಸಾತ್ವಿಕ ಆಂಟೋನಿಯಾದರೆ ಇಲ್ಲಿ ಹೀರೋಗಳನ್ನು ಅವರ ಕೆಲಸಗಳನ್ನು [illegible]
ತಾವು ಉದಾತ್ತ ಕೆಲಸಮಾಡಿದೆವೆಂದು ಬೀಗುವ ಮಂದಿ ಇವರು. ಇಂತಹ[illegible]
ಬಗೆಗೆ ಎಚ್ಚರಿಕೆಯಿರಬೇಕು. ಇಲ್ಲದಿದ್ದಲ್ಲಿ ಜಗದಲ್ಲಿ ಯಾವುದೇ ಒಳ್ಳೆಯ ಕೆ[illegible]
ನಡೆಯುವುದಿಲ್ಲ ಎಂಬ ವಿಚಾರ ನಮ್ಮ ಮನದಲ್ಲಿರಬೇಕು.

30–7–2017

* * * * * *

ಲೇಖನ – 38

# ಬ್ಯಾಕ್‌ಟು ಸ್ಕ್ವೇರ್ ಒನ್

ಅದೊಂದು ಹೊಸದಾಗಿ ಮದುವೆಯಾದ ಜೋಡಿ. ರೊಟ್ಟಿ ಹಳಸಿತ್ತು ನಾಯಿ ಹಸಿದಿತ್ತು ಎಂಬಂತೆ ಆ ಗಂಡಿಗೆ ಹೆಣ್ಣೇ ಸಿಕ್ಕುತ್ತಿರಲಿಲ್ಲ. ಕೊನೆಗೂ ಒಂದು ಹೆಣ್ಣು ಸಿಕ್ಕಿದಾಗ ಆತನಿಗೆ ಸ್ವರ್ಗಕ್ಕೆ ಮೂರೇ ಗೇಣು ಎಂಬಂತಾಗಿತ್ತು. ನೋಡಲಿಕ್ಕೆ ಇವನೇನೂ ಸ್ಫುರದ್ರೂಪಿಯಾಗಿರಲಿಲ್ಲ; ಪೀಚುಪೀಚು ದೇಹ, ಇದ್ದೂ ಇರದಂತಿದ್ದ ಮೀಸೆ, ವೇಷಭೂಷಣಗಳ ಬಗೆಗೆ ಉತ್ಸಾಹವೇ ಇರಲಿಲ್ಲ. ಉಬ್ಬು ಹಲ್ಲು, ಅವರಲ್ಲೂ ಒಂದು ಹಲ್ಲು ನಾನು ಬಾಯೊಳಗೆ ಇರೊಲ್ಲ ಎಂದು ಹೊರಕ್ಕೇ ಚಾಚಿ ಇಣುಕಿನೋಡುತ್ತಿತ್ತು. ಒಮ್ಮೆ ನೋಡಿದರೆ ಇನ್ನೊಮ್ಮೆ ನೋಡಬೇಕೆಂಬ ಆಸೆಯೇನೂ ಹುಟ್ಟಿಸುತ್ತಿರಲಿಲ್ಲ ಈತನ ಪರ್ಸನಾಲಿಟಿ. ಇಂತಹ ವ್ಯಕ್ತಿಗೂ ಒಂದು ಹೆಣ್ಣು ಸಿಕ್ಕಿದರೆ ಅದು ಈತನ ಹಿರಿಯರು ಮಾಡಿದ ಪುಣ್ಯಕಾರ್ಯವೇ ಇರಬೇಕು.

ಇನ್ನು, ಆ ಹೆಣ್ಣೋ ತನಗೆ ಮದುವೆಯೇ ಬೇಡ ಎಂದು ಬದುಕುತ್ತಿದ್ದವಳು. ಮಾನಸಿಕವಾಗಿ ಕುಗ್ಗಿಹೋಗಿದ್ದ ಪ್ರಾಣಿ. ಹಿಂದೆ ಯಾವಾಗಲೋ ಆರೋಗ್ಯದ ಸಮಸ್ಯೆ ಕಾರಣ ಬದುಕೇ ಬೇಡವೆಂಬ ಆಲೋಚನೆಗೆ ಬಂದಿದ್ದ ನೊಂದಜೀವಿ. ತಮ್ಮ ಹೊಣೆಗಾರಿಕೆಯಿಂದ ಮುಕ್ತವಾಗಲು ಆಕೆಯ ತಂದೆತಾಯಿ ಆಕೆಯನ್ನು ಯಾರಿಗಾದರೂ ದಾಟಿಸಿಬಿಡಬೇಕೆಂಬ ನಿರ್ಧಾರ ಕೈಗೊಂಡುದರ ಫಲವೇ ಈಕೆಗೆ ಮದುವೆ ಮಾಡಲು ಮಾಡಿದ ಪ್ರಯತ್ನ. ತಕ್ಕಮಟ್ಟಿಗೆ ಸುಂದರಿಯಾಗಿದ್ದರೂ ಆಕೆಗೆ ಮದುವೆ ಆಗಲು ಆಸಕ್ತಿಯೇ ಇರಲಿಲ್ಲವಾಗಿ ತಂದೆತಾಯಿಗಳು

ಸಾತ್ವಿಕ ಆಂಟೋನಿಯಾದರೆ ಇಲ್ಲಿ ಹೀರೋಗಳನ್ನು, ಅವರ ಕೆಲಸಗಳನ್ನು, ಬಿಂಬಿ ತಾವು ಉದಾತ್ತ ಕೆಲಸಮಾಡಿದೆವೆಂದು ಬೀಗುವ ಮಂದಿ ಇವರು. ಇಂತಹವ ಬಗೆಗೆ ಎಚ್ಚರಿಕೆಯಿರಬೇಕು. ಇಲ್ಲದಿದ್ದಲ್ಲಿ ಜಗದಲ್ಲಿ ಯಾವುದೇ ಒಳ್ಳೆಯ ಕೆಲ ನಡೆಯುವುದಿಲ್ಲ ಎಂಬ ವಿಚಾರ ನಮ್ಮ ಮನದಲ್ಲಿರಬೇಕು.

30–7–2017

* * * * * *

ಮೊದಮೊದಲಿಗೆ ಆ ಪ್ರಯತ್ನ ಮಾಡಿರಲಿಲ್ಲ. ತಮಗೂ ವಯಸ್ಸಾಗುತ್ತಿದೆ, ತಾವು ಗತಿಸಿದ ನಂತರದಲ್ಲಿ ಈ ಹುಡುಗಿಯ ಭವಿಷ್ಯದ ಬಗೆಗೆ ಆಲೋಚಿಸಿದ ತಂದೆತಾಯಿ ಈಕೆಗೂ ಒಂದು ಮದುವೆ ಎಂದು ಮಾಡಿಬಿಟ್ಟರೆ ತಮ್ಮ ನಂತರ ಈಕೆಯನ್ನು ನೋಡಿಕೊಳ್ಳುವ ಹೊಣೆಗಾರಿಕೆ ಆತನ ಹೆಗಲಿಗೆ ವರ್ಗವಾಗುತ್ತದೆಯಲ್ಲ ಎಂಬ ಕಾರಣಕ್ಕಾಗಿ ಆಕೆಗೆ ಒಂದು ಮದುವೆ ಎಂದು ಮಾಡಲು ಮುಂದಾಗಿದ್ದರು.

ನೋಡಿದವರು 'ಇಂತಾ ಜೋಡಿನಾ ಎಲ್ಲಾದರೂ ಕಂಡಿರಾ' ಎಂಬ ಚಲನಚಿತ್ರ ಹಾಡನ್ನು ಗುನುಗುನಿಸುತ್ತಾ ಮುಸಿಮುಸಿ ನಗುತ್ತಿದ್ದುದು ಅಪರೂಪವೇನಾಗಿರಲಿಲ್ಲ. ಅಂತಹ ಅನುರೂಪ ಜೋಡಿ ಅದು. ಪಾಲಿಗೆ ಬಂದುದೇ ಪಂಚಾಮೃತ ಎಂಬಂತೆ ಆ ಹೆಣ್ಣು ಈ "ಸುರೂಪಿ"ಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಮುಂಚೆ ಅದೆಷ್ಟು ಗಂಗಾಭವಾನಿಯನ್ನು ತುಂಬಿಸಿದ್ದಳೋ ನಾಕಾಣೆ. ಕೊನೆಗೂ ಆಕೆಯ ಮದುವೆ ಆತನೊಡನೆ ನಡೆದೇಹೋಯಿತು.

ಈ ದಂಪತಿಗಳು ಅವರದೇ ಒಂದು ಗೂಡನ್ನು ಕಟ್ಟಿಕೊಂಡು ಬದುಕಿಗೆ ಒಂದು ಉದ್ಯೋಗ ಹುಡುಕಿಕೊಂಡು ಅದ್ದೂರಿಯಾಗಿಲ್ಲದಿದ್ದರೂ, ತಕ್ಕಮಟ್ಟಿಗೆ ತಮ್ಮ ಜೀವನವನ್ನು ಸಾಗಿಸುತ್ತ ಇದ್ದುದರಲ್ಲೇ ಸುಖೀ ಜೀವನ ನಡೆಸಹತ್ತಿದ್ದರು. 'ನಾನು ನಿನಗೆ ನೀನು ನನಗೆ' ಎಂಬ ಪಾಲಿಸಿ ಅಳವಡಿಸಿಕೊಂಡರು ಆ ದಂಪತಿಗಳು. ಹೊರಗಿನ ಲೋಕ ಏನೇ ಅಂದುಕೊಳ್ಳಲಿ ನಾವದರ ಕಡೆಗೆ ತಲೆ ಕೆಡಿಸಿಕೊಳ್ಳಬಾರದು ಎಂಬ ನಿಲುವು ಹೊಂದಿ ಬದುಕು ಸಾಗಿಸುತ್ತಿದ್ದರು. ಅಕ್ಕಿ, ಸಕ್ಕರೆ, ಸೀಮೇಯೆಣ್ಣೆ ಮುಂತಾದ ಅವರ ಅವಶ್ಯಕತೆಗಳ ಪೂರೈಕೆಗೆ ರೇಷನ್ ಅಂಗಡಿಯೇ ಆಧಾರವಾಗಿತ್ತು. ಕ್ಯೂನಲ್ಲಿ ನಿಂತು ಸಕ್ಕರೆಯನ್ನೋ, ಸೀಮೆಣ್ಣೆಯನ್ನೋ ತಂದರೆ ಜೀವನ ಸಾರ್ಥಕ ಅನ್ನಿಸುವಂತಿತ್ತು ಅಂದಿನ ಅವರ ಜೀವನ. ಆ ದಂಪತಿಗಳಿಗೂ ಮಕ್ಕಳಾದವು ಒಂದು ಎರಡು ಮೂರು ಹೀಗೆ. ಆದರೆ ಒಂದನ್ನು ಬಿಟ್ಟು ಉಳಿದೆಲ್ಲವೂ ಬಲುಬೇಗ ಶಿವನ ಪಾದ ಸೇರಿದ್ದವು. ಇರುವ ಒಂದೇ ಮಗುವನ್ನು ಮುದ್ದಾಗಿ ಬೆಳೆಸುತ್ತಾ ತಮ್ಮದೇ ಲೋಕದಲ್ಲಿ ಸಂತೋಷದಿಂದ ಬದುಕು ಸಾಗಿಸುತ್ತಿದ್ದರು.

ಏನಾಗದಿದ್ದರೂ ಒಂದಂತೂ ಬದುಕಿನಲ್ಲಿ ಆಗುತ್ತದೆ, ಅದೇ ವಯಸ್ಸು. ಮೊದಲೇ ಲೇಟಾಗಿ ಮದುವೆ ಆಗಿದ್ದ ಜೋಡಿ, ಬೇಗಬೇಗನೇ ಅವರೂ ಮುದುಕರಾಗುತ್ತಾ ಬಂದರು. ದೇಹಕ್ಕೆ ಮುಪ್ಪಿನ ಜೊತೆಗೆ ಸಂಗಾತಿಯಾಗಿ ಸೇರಿತು ಅನಾರೋಗ್ಯ. ತಮ್ಮ ಕಾಲ ಮುಗಿಯುವ ಮುನ್ನ ಮಗಳಿಗೆ ಒಂದು

ದಡ ಸೇರಿಸಬಯಸಿ, ಗಂಡಿನ ಬೇಟೆಗೆ ತೊಡಗಿದರು. ಒಬ್ಬ ಸಾಕಷ್ಟು ಸುಂದರ ಒಳ್ಳೆಯ ಕೆಲಸದಲ್ಲಿದ್ದ ವರನನ್ನು ಹುಡುಕಿ ಮಗಳಿಗೆ ಮದುವೆ ಮಾಡಿಸಿದರು. ಎಷ್ಟಾದರೂ ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎನ್ನುವಂತೆ ಮದುವೆ ಆದನಂತರ ಮಗಳು ಅತ್ತೆಯ ಮನೆ ಸೇರಿಕೊಂಡಳು. ಮುದ್ದಾದ ಮಗುವೊಂದಕ್ಕೆ ಜನ್ಮ ನೀಡಿದಳು. ಆದರೂ ತಮ್ಮ ಜೊತೆಗೆ ಮಗಳನ್ನು ಉಳಿಸಿಕೊಳ್ಳುವಂತಿಲ್ಲವಲ್ಲ! ಹಿಂದೆಲ್ಲ ಮಗನಾದರೆ ನಮ್ಮ ವೃದ್ಧಾಪ್ಯದಲ್ಲಿ ನಮ್ಮನ್ನು ನೋಡಿಕೊಳ್ಳುತ್ತಾರೆ, ಮಗಳಾದರೆ ಅದು ಪರರ ಒಡವೆ ಎಂದುಕೊಳ್ಳುತ್ತಿದ್ದರು. ಈಗಿನ ದಿನಗಳಲ್ಲಿ ಮಗನಾಗಲೀ, ಮಗಳಾಗಲೀ ಕೊನೆಯ ತನಕ ಜೊತೆಯಾಗಿರುತ್ತಾರೆ, ನಮ್ಮನ್ನು ನಮ್ಮ ಜೀವಿತದ ಅಂತ್ಯಕಾಲದವರೆವಿಗೂ ನೋಡಿಕೊಳ್ಳುತ್ತಾರೆ ಎಂದು ಅಂದುಕೊಳ್ಳುವಂತಿಲ್ಲ. ಏಕೆಂದರೆ ಮಗ ಓದು ಮುಗಿಸಿದ ನಂತರ ಉದ್ಯೋಗಾನ್ವೇಷಣೆಯಲ್ಲಿ ಬೇರೆ ರಾಜ್ಯಕ್ಕೋ, ಬೇರೆ ದೇಶಕ್ಕೋ ಹೋಗಿ ಅಲ್ಲೇ ನೆಲೆಸಲೂಬಹುದು. ಹಲವಾರು ದಶಕಗಳ ಕಾಲ ಒಂದೇ ಊರಿನಲ್ಲಿ ವಾಸವಾಗಿ ಅಭ್ಯಾಸವಾಗಿರುವ ಮುದಿ ತಂದೆತಾಯಂದಿರಿಗೆ ತಮ್ಮ ವೃದ್ಧಾಪ್ಯದಲ್ಲಿ ಹೊಸ ಪ್ರದೇಶಕ್ಕೆ ಹೋಗಿ ಅಲ್ಲಿನ ಪರಿಸರಕ್ಕೆ ಹೊಂದಿಕೊಳ್ಳುವುದು ಕಷ್ಟಕರವಾದುದೆಂಬ ಭಾವನೆ ಮೂಡಿ ಮಕ್ಕಳೊಂದಿಗೆ ಹೊರದೇಶಗಳಲ್ಲಿ ಹೋಗಿ ನೆಲೆಸುವುದು ಅಪರೂಪ. ಹಾಗಾಗಿ ಮಗನಿದ್ದರೂ ಅವರು ಅನಾಥರೇ. ಇನ್ನು ಮಗಳನ್ನು ನೆಚ್ಚಿಕೊಂಡು ಬೀಗರೊಡನೆ ವಾಸಮಾಡಲು ಸಾಧ್ಯವೇ?

ಹೊಸದಾಗಿ ಸಂಸಾರ ಪ್ರಾರಂಭಿಸಿದ ಸಮಯದಲ್ಲಿ ನಾನು ನಿನಗೆ, ನೀನು ನನಗೆ ಎಂಬಂತಿದ್ದವರು ಈಗಲೂ ಜೀವಿತದ ಅಂತ್ಯಕಾಲದಲ್ಲೂ ಅದೇ ರೀತಿ ನಾನು ನಿನಗೆ, ನೀನು ನನಗೆ ಎಂಬಂತೆ ಬದುಕು ಸವೆಸಬೇಕಾಗುತ್ತದೆ. ಇದನ್ನೇ ಬ್ಯಾಕ್ ಟು ಸ್ಕ್ವೇರ್ ಒನ್ ಎಂದುದು.

1–8–2017

* * * * * * *

## ಲೇಖನ – 39

# ಒಂಟಿ ಬದುಕು

**ಬ್ಯಾ**ಡಪ್ಪಾ ಬ್ಯಾಡ, ಈ ಒಂಟಿ ಬದುಕು ಯಾರಿಗೂ ಬ್ಯಾಡ. ಅವರಿರೋ ತನಕ ನನಗೂ ಸಮಾಜದಲ್ಲಿ ಒಂದು ಮರ್ಯಾದೆ ಇತ್ತು. ಈಗ ನಾನು ಯಾರಿಗೂ ಬ್ಯಾಡದ ಒಂದು ಕಸವಾಗಿಬಿಟ್ಟಿದೀನಿ. ಇದು ಹೆಂಗಸಿಗಷ್ಟೇ ಗಂಡಸಿಗೂ ಅನ್ವಯಿಸುವ ಪರಿಸ್ಥಿತಿ. ಹೆಣ್ಣಿಗಾದರೆ ಗಂಡಿಲ್ಲದವಳೆಂದು, ಯಾವುದೇ ಶುಭ ಸಮಾರಂಭಗಳಲ್ಲಿ ಆಮಂತ್ರಣವಿರುವುದಿಲ್ಲ, ಆಕೆ ಸಮಾಜದಲ್ಲಿ ಅತಿ ಗಣ್ಯ ಸ್ಥಾನ ಹೊಂದಿದ್ದರೆ ಆ ಮಾತು ಬೇರೇ! ಅಂತೆಯೇ ಗಂಡಿಗೂ ಹೆಂಡತಿಯಿಲ್ಲದವನೆಂದು, ಯಾರೂ ಕೊಡಬೇಕಾದ ಗೌರವವನ್ನು ಕೊಡುವುದಿಲ್ಲ. ಮೊದಲೆಲ್ಲ ನಮ್ಮ ಹೆಗಲಮೇಲೆ ಯಾವುದೇ ಜವಾಬ್ದಾರಿಗಳಿರುವುದಿಲ್ಲ. ನಮ್ಮೆಲ್ಲ ಬೇಕು ಬೇಡಗಳಿಗೂ ಸ್ಪಂದಿಸುವುದಕ್ಕೆ ಇರುತ್ತಾರಲ್ಲ ತಂದೆತಾಯಿಗಳು. ನಾವೇ ಆ ಹಂತ ತಲುಪಿದಾಗ ಅಂದರೆ ನಮಗೂ ಮಕ್ಕಳಾದಾಗ ನಮ್ಮನ್ನು ನಮ್ಮ ಆ ಮಕ್ಕಳು ಹಣದ ಜೊತೆಗೆ ಇತರ ಸೌಲಭ್ಯಗಳಿಗಾಗಿ ಪೀಡಿಸತೊಡಗಿದಾಗ ನಮಗೇನನ್ನಿಸುತ್ತದೆ? ನಾವು ಮಕ್ಕಳಾಗಿದ್ದಾಗ ನಮ್ಮ ಆಸೆಗಳನ್ನು ಈಡೇರಿಸಲು ನಮ್ಮ ತಂದೆ ತಾಯಿಗಳು ಪಟ್ಟ ಕಷ್ಟಗಳೆಷ್ಟು ಎಂದು ಎಂದಾದರೂ ನಾವು ಯೋಚಿಸಿದ್ದೇವೆಯೆ?

ವಯಸ್ಸು ಎಲ್ಲರಿಗೂ ಆಗುತ್ತದೆ. ಯಾರೂ ಚಿರಂಜೀವಿಯಲ್ಲ. ಎಲ್ಲರೂ ಒಂದಲ್ಲ ಒಂದು ದಿನ ಸಾಯಲೇಬೇಕು. ಆದರೆ ಈ ಸರಳ ವಿಚಾರ ನಮಗೆ ವಯಸ್ಸಾಗಿ ನಮ್ಮ ಮಕ್ಕಳು ನಮ್ಮಿಂದ

## ಲೇಖನ – 39

# ಒಂಟಿ ಬದುಕು

ಬ್ಯಾಡಪ್ಪಾ ಬ್ಯಾಡ, ಈ ಒಂಟಿ ಬದುಕು ಯಾರಿಗೂ ಬ್ಯಾಡ. ಅವರಿರೋ ತನಕ ನನಗೂ ಸಮಾಜದಲ್ಲಿ ಒಂದು ಮರ್ಯಾದೆ ಇತ್ತು. ಈಗ ನಾನು ಯಾರಿಗೂ ಬ್ಯಾಡದ ಒಂದು ಕಸವಾಗಿಬಿಟ್ಟಿದ್ದೀನಿ. ಇದು ಹೆಂಗಸಿಗಷ್ಟೇ ಗಂಡಸಿಗೂ ಅನ್ವಯಿಸುವ ಪರಿಸ್ಥಿತಿ. ಹೆಣ್ಣಿಗಾದರೆ ಗಂಡಿಲ್ಲದವಳೆಂದು, ಯಾವುದೇ ಶುಭ ಸಮಾರಂಭಗಳಲ್ಲಿ ಆಮಂತ್ರಣವಿರುವುದಿಲ್ಲ, ಆಕೆ ಸಮಾಜದಲ್ಲಿ ಅತಿ ಗಣ್ಯ ಸ್ಥಾನ ಹೊಂದಿದ್ದರೆ ಆ ಮಾತು ಬೇರೇ! ಅಂತೆಯೇ ಗಂಡಿಗೂ ಹೆಂಡತಿಯಿಲ್ಲದವನೆಂದು, ಯಾರೂ ಕೊಡಬೇಕಾದ ಗೌರವವನ್ನು ಕೊಡುವುದಿಲ್ಲ. ಮೊದಲೆಲ್ಲ ನಮ್ಮ ಹೆಗಲಮೇಲೆ ಯಾವುದೇ ಜವಾಬ್ದಾರಿಗಳಿರುವುದಿಲ್ಲ. ನಮ್ಮೆಲ್ಲ ಬೇಕು ಬೇಡಗಳಿಗೂ ಸ್ಪಂದಿಸುವುದಕ್ಕೆ ಇರುತ್ತಾರಲ್ಲ ತಂದೆತಾಯಿಗಳು. ನಾವೇ ಆ ಹಂತ ತಲುಪಿದಾಗ ಅಂದರೆ ನಮಗೂ ಮಕ್ಕಳಾದಾಗ ನಮ್ಮನ್ನು ನಮ್ಮ ಆ ಮಕ್ಕಳು ಹಣದ ಜೊತೆಗೆ ಇತರ ಸೌಲಭ್ಯಗಳಿಗಾಗಿ ಪೀಡಿಸತೊಡಗಿದಾಗ ನಮಗೇನನ್ನಿಸುತ್ತದೆ? ನಾವು ಮಕ್ಕಳಾಗಿದ್ದಾಗ ನಮ್ಮ ಆಸೆಗಳನ್ನು ಈಡೇರಿಸಲು ನಮ್ಮ ತಂದೆ ತಾಯಿಗಳು ಪಟ್ಟ ಕಷ್ಟಗಳೆಷ್ಟು ಎಂದು ಎಂದಾದರೂ ನಾವು ಯೋಚಿಸಿದ್ದೇವೆಯೆ?

ವಯಸ್ಸು ಎಲ್ಲರಿಗೂ ಆಗುತ್ತದೆ. ಯಾರೂ ಚಿರಂಜೀವಿಯಲ್ಲ. ಎಲ್ಲರೂ ಒಂದಲ್ಲ ಒಂದು ದಿನ ಸಾಯಲೇಬೇಕು. ಆದರೆ ಈ ಸರಳ ವಿಚಾರ ನಮಗೆ ವಯಸ್ಸಾಗಿ ನಮ್ಮ ಮಕ್ಕಳು ನಮ್ಮಿಂದ

ದೂರವಾಗಿ, ದಂಪತಿಗಳಲ್ಲೊಬ್ಬರು ಮೃತರಾದನಂತರ ಒಬ್ಬಂಟಿಯಾಗಿ ಜೀವನ ಸಾಗಿಸಬೇಕಾದ ಸಂದರ್ಭದಲ್ಲಿ ನಮಗೆ ಅನ್ನಿಸುವುದು 'ಯಾರಿಗೂ ಈ ರೀತಿಯ ಒಂಟಿ ಬದುಕು ಬ್ಯಾಡ'.

ಇಬ್ಬರೂ ವಯಸ್ಸಾದರೂ ಜೊತೆಯಲ್ಲಿ ಬದುಕಿದ್ದಲ್ಲಿ ಒಬ್ಬರಿಗೊಬ್ಬರು ಪರಸ್ಪರ ಅವಲಂಬಿತರಾಗಿರುತ್ತಾರೆ. ಅಕಸ್ಮಾತ್ ಇಬ್ಬರಲ್ಲಿ ಒಬ್ಬರು ಅನಿವಾರ್ಯ ಕಾರಣಗಳಿಗಾಗಿ ಬೇರೊಂದು ಊರಿಗೆ ಹೋಗಬೇಕಾದ ಸಂದರ್ಭ ಬಂದರೂ, ಕೆಲಕಾಲಾನಂತರ ಅವರು ವಾಪಸು ಬರುವರೆಂಬ ಆಸೆಯಿಂದ ಕಷ್ಟಪಟ್ಟಾದರೂ ಹೇಗೋ ಕಳೆದುಬಿಡುತ್ತಾರೆ. ಆದರೆ ಆ ಮತ್ತೊಬ್ಬರು ಬರುವುದೇ ಇಲ್ಲ ಎಂಬಂತಹ ಪರಿಸ್ಥಿತಿಯಲ್ಲಿ ನಾವು ಬದುಕನ್ನು ನೋಡುವ ರೀತಿಯೇ ಭಿನ್ನವಾಗಿರುತ್ತದೆ. ಆ ಸಮಯದಲ್ಲೇ ಅವರಿಗೆ ಈ ಒಂಟಿತನ ಕಾಡಲು ಪ್ರಾರಂಭವಾಗುತ್ತದೆ.

ಈ ಹಿಂದೆ ಸಮಯಕ್ಕೆ ಸರಿಯಾಗಿ ಅವರ ಎಲ್ಲ ದೈನಂದಿನ ಅವಶ್ಯಕತೆಗಳನ್ನೂ ಪೂರೈಕೆಮಾಡುತ್ತಿದ್ದ ಧರ್ಮಪತ್ನಿ ಮಾಡುತ್ತಿದ್ದ ಸೇವೆಗೆ ಯಾವುದೇ ಪ್ರಾಮುಖ್ಯತೆಯನ್ನು ಗಂಡ ಎನ್ನುವ ಪ್ರಾಣಿ ನೀಡುತ್ತಿರುವುದಿಲ್ಲ. ಇವರು ಬೆಳಿಗ್ಗೆ ಎದ್ದೇಳುವ ವೇಳೆಗೆ ಬಿಸಿ ಬಿಸಿಯಾದ ಕಾಫಿ, ಸ್ನಾನ ಮಾಡಿ ಬರುವವೇಳೆಗೆ ತಿಂಡಿ, ಇವರು ಹೊರಗೆ ಹೋಗಿ ವಾಪಸಾಗುವವೇಳೆಗೆ ಮಧ್ಯಾಹ್ನ ಅಥವಾ ರಾತ್ರಿಯ ಊಟ, ಇವರಿಗೆ ಆರೋಗ್ಯ ಏರುಪೇರಾದರೆ ಅವರಿಗೆ ಶುಶ್ರೂಷೆ ಹೀಗೆ ಮದುವೆಯಾದಂದಿನಿಂದ ಆತ ಮರಣ ಹೊಂದುವವರೆವಿಗೂ ಅವನ ಸೇವೆಯೇ ತನ್ನ ಪೂಜ್ಯ ಕರ್ತವ್ಯವೆಂದು ಭಾವಿಸಿ ಬದುಕುವ ಹೆಣ್ಣಿನ ಜೀವನಕ್ಕೆ ನಾವೆಷ್ಟು ಬೆಲೆ ಪ್ರಾಮುಖ್ಯತೆ ಕೊಡುತ್ತಿದ್ದೇವೆ ಎಂಬುದು ಪ್ರಶ್ನಾರ್ಹ ವಿಚಾರ. ಪತ್ನಿ ಎನ್ನುವ ಒಂದೇ ಕಾರಣಕ್ಕೆ ಆಕೆ ನಮಗೆ ಸಲ್ಲಿಸುವ ಸೇವೆಗಳನ್ನು ಹಣಕೊಟ್ಟು ಪಡೆಯಬೇಕಾಗಿದ್ದಲ್ಲಿ ನಾವು ಈಗ ಏನು ದುಡಿಯುತ್ತಿದ್ದೇವೆಯೋ ಅದರ ಎರಡರಷ್ಟು ಸಂಪಾದನೆ ಮಾಡಬೇಕಾಗುತ್ತಿತ್ತು.

ಅದೇ ಇಂದಿನ ದಿನಗಳಲ್ಲಿ ಹೆಣ್ಣು ಆರ್ಥಿಕವಾಗಿ ಸಬಲಳಾಗಿರುವ ಕಾರಣದಿಂದ, ಎಷ್ಟೋ ಸಂದರ್ಭಗಳಲ್ಲಿ ಗಂಡನಿಗಿಂತ ಹೆಚ್ಚು ಸಂಪಾದನೆ ಇರುವ ಸಾಧ್ಯತೆಗಳೂ ಇರುವುದರಿಂದ ಆ ರೀತಿಯ ವರ್ತನೆ ಅಥವಾ ಶೋಷಣೆ ಸಾಧ್ಯವಿಲ್ಲ ಎನ್ನುವವರೂ ಇದ್ದಾರೆ. ಮದುವೆ ಆದರೆ ತಾನೇ ಈ ಬದ್ಧತೆ. ಅದಿಲ್ಲದಿದ್ದಲ್ಲಿ ಒಬ್ಬರನ್ನೊಬ್ಬರು ಶೋಷಣೆ ಮಾಡುವ ಪರಿಸ್ಥಿತಿಯೇ ಉದ್ಭವಿಸಲಾರದು. ಆದುದರಿಂದ ಈ ಲಿವಿಂಗ್ ಟುಗೆದರ್, ಮದುವೆಯಾದರೂ ಆದಷ್ಟು ಬೇಗನೇ ಡೈವರ್ಸ್ ಮುಂತಾದ ಸಂಕಷ್ಟಗಳು ಸಾಮಾನ್ಯ

ಸಂಗತಿಗಳಾಗುತ್ತಿವೆ. ಹಿಂದೆಲ್ಲ ಯಾವ ವಿಚಾರಗಳನ್ನು ಮಾತಾಡಲೂ ಜನ ಹಿಂಜರಿಯುತ್ತಿದ್ದರೋ ಅಂತಹ ವಿಚಾರಗಳನ್ನು ಇಂದು ಸಾರ್ವಜನಿಕವಾಗಿ ಮಾತನಾಡಲು ಗಂಡಾಗಲೀ, ಹೆಣ್ಣಾಗಲೀ ಹಿಂಜರಿಯುವುದಿಲ್ಲ.

ಈಗೆಲ್ಲ ವಿವಾಹವಾಗಿ ಕೆಲವು ವರ್ಷಗಳ ಕಾಲ ದಾಂಪತ್ಯ ಉಳಿಸಿಕೊಳ್ಳಲು ಸಫಲರಾದ ಕಾರಣಕ್ಕಾಗಿ ವಿಶೇಷ ಸಮಾರಂಭ ಏರ್ಪಡಿಸಿರುವ ಉದಾಹರಣೆಗಳು ಕಂಡುಬರುತ್ತಿವೆ. "ನಮ್ಮ ದಾಂಪತ್ಯಕ್ಕೆ ಐದು ಯಶಸ್ವೀ ವರ್ಷಗಳು ಸಂದಿವೆ" ಎಂದು ಬೀಗುವವರೂ ಇದ್ದಾರೆ. ಹಿಂದೆಲ್ಲ ಚಲನಚಿತ್ರಗಳು 100 ದಿನಗಳ ಪ್ರದರ್ಶನ ಕಂಡಾಗ ಶತ ದಿನೋತ್ಸವ ಆಚರಿಸಿದುದು ಕಂಡುಬರುತ್ತಿತ್ತು. ಇಂದು 'ನಮ್ಮ ಚಿತ್ರ 7 ದಿನಗಳನ್ನು ಪೂರೈಸಿತು; ನಮ್ಮ ಚಿತ್ರ 4 ವಾರಗಳ ಯಶಸ್ವೀ ಪ್ರದರ್ಶನ ಕಂಡಿತು' ಎಂಬ ಜಾಹಿರಾತುಗಳನ್ನು ಕಾಣುತ್ತಿದ್ದೇವೆ. ಅಂತೆಯೇ ಜೀವನ ಪರ್ಯಂತ ಬಾಳಬೇಕಾದ ದಾಂಪತ್ಯ ಎಷ್ಟು ವರ್ಷಗಳು ಮುರಿಯದೇ ಮುಂದುವರೆಯಿತು ಎನ್ನುವುದೇ ಮುಖ್ಯವಾಗುತ್ತಿದೆ.

ಅದೇನೇ ಇರಲಿ ಭಾರತೀಯ ಸಂಸ್ಕೃತಿ ಪ್ರಕಾರ ಮದುವೆ ಎನ್ನುವುದು ಜನುಮ ಜನುಮದ ಸಂಬಂಧ, ಅಥವಾ ನಮ್ಮ ನಂಟು ಸ್ವರ್ಗದಲ್ಲಿ ತೀರ್ಮಾನವಾಗಿರುತ್ತದೆ ಎಂಬ ನಂಬಿಕೆ ನಮ್ಮ ನರನಾಡಿಗಳಲ್ಲಿ ಹಾಸುಹೊಕ್ಕಂತಿರುತ್ತದೆ. ವಿದೇಶದಲ್ಲಿಯಷ್ಟು ಸಲೀಸಾಗಿ ನಮ್ಮಲ್ಲಿ ವಿವಾಹ ವಿಚ್ಛೇದನಗಳು ಆಗುತ್ತಿಲ್ಲ. ನಾನು ನಿನಗೆ ನೀನು ನನಗೆ ಎಂಬ ಅಲಿಖಿತ ಒಪ್ಪಂದ ದಂಪತಿಗಳ ನಡುವೆ ಇರುತ್ತದೆ. ಸ್ವಲ್ಪ ಮಟ್ಟಿಗೆ ಗಂಡು ಪ್ರಧಾನ ಪಾತ್ರ ವಹಿಸಿದ್ದರೂ, ಕೆಲ ಸಂದರ್ಭಗಳಲ್ಲಿ ದಬ್ಬಾಳಿಕೆ ನಡೆಸುತ್ತಿರುವ ಸಂಗತಿಗಳು ಅಲ್ಲಲ್ಲಿ ಕೇಳಿಬರುತ್ತಿದ್ದರೂ, ಪತ್ನಿ ಎಂಬ ಕಾರಣಕ್ಕೆ ಹೆಣ್ಣು ತಗ್ಗಿಬಗ್ಗಿ ನಡೆಯುತ್ತಿರುತ್ತಾಳೆ. ಹೀಗೆಂದು ಆಕೆ ದುರ್ಬಲಳು ಎಂದು ಭಾವಿಸಲಾಗದು. ವಿಪರೀತ ಪರಿಸ್ಥಿತಿಗಳಲ್ಲಿ ಆಕೆ ಸೆಟೆದು ನಿಂತರೆ 'ನಾರಿ ಮುನಿದರೆ ಮಾರಿ' ಎಂಬ ಹೇಳಿಕೆಯನ್ನು ಸತ್ಯವಾಡಿಬಿಡುತ್ತಾರೆ. ಈಗಿನ ಹೆಣ್ಣುಮಕ್ಕಳಲ್ಲಿ ಹಿಂದಿನವರಷ್ಟು ತಾಳ್ಮೆ ಇರುವುದಿಲ್ಲ. ಸ್ವಲ್ಪ ದಬ್ಬಾಳಿಕೆ ಕಂಡುಬಂದರೂ ಅವರು ಗಂಡನನ್ನೇ ತಿರಸ್ಕರಿಸುವಷ್ಟು ವಿಚಾರ ಮಾಡಿಬಿಡುತ್ತಾರೆ. ಮದುವೆ ಮಾಡಿಕೊಡುವ ಸಂದರ್ಭದಲ್ಲೇ ಅವರು ಗಂಡನ ಮನೆಗೆ ಹೋಗುವ ಮುನ್ನ ತಂದೆತಾಯಿಗಳಿಗೆ "ಏನಾದರೂ ಹೆಚ್ಚು ಕಮ್ಮಿಯಾದರೆ ನಾನು ಗಂಡನನ್ನು ತ್ಯಜಿಸಿ ವಾಪಸು ಬಂದುಬಿಡುತ್ತೇನೆ" ಎಂದು ಹೇಳಿಯೇ ಹೋಗಿರುವ ಸಾಧ್ಯತೆಗಳೂ ಇರುತ್ತವೆ. ಈ ಕಾರಣಗಳಿಂದ ಇಂದು "ಕೊಡು ಕೊಳ್ಳು ಪದ್ಧತಿ" ದಾಂಪತ್ಯದಲ್ಲೂ ಜಾರಿ

ಬಂದಿದೆ ಎಂದು ಹೇಳಬಹುದು. ಈಗಿನ ಕಾಲದಲ್ಲಿ ಪತಿ ಪತ್ನಿಯನ್ನು ಪೀಡಿಸುವ ಹಿಂಸಿಸುವ ಪ್ರವೃತ್ತಿ ಇಲ್ಲವಾಗುತ್ತ ಬರುತ್ತಿದೆ.

ಗಂಡ ಅಥವಾ ಹೆಂಡತಿ ಇಬ್ಬರಲ್ಲಿ ಒಬ್ಬರು ಮೃತರಾದ ಪಕ್ಷದಲ್ಲಿ ಮತ್ತೊಬ್ಬರು ಉಳಿದ ಜೀವನವನ್ನು ಏಕಾಂಗಿಯಾಗಿ ಕಳೆಯಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಅವರಿಗೆ ಮಕ್ಕಳೇ ಆಗಿರದಿದ್ದಲ್ಲಿ ಅವರ ಮುಂದಿರುವ ಮಾರ್ಗಗಳು; ಒಂದೋ ಯಾವುದಾದರೂ ವೃದ್ಧಾಶ್ರಮ ಹುಡುಕಿಹೋಗುವುದು ಇಲ್ಲ, ಆಶ್ರಯದಾತರ ಬಳಿ ಅವರು ಹೇಳಿದಂತೆ ಕೇಳಿಕೊಂಡು ತಮ್ಮೆಲ್ಲ ಚಟಗಳಿಗೂ ಕಡಿವಾಣ ಹಾಕಿಕೊಂಡು ಜೀವವಿರುವವರೆಗೆ ಮೂಕರಂತೆ ಬದುಕು ದೂಡುವುದು. ಹೆಂಗಸರಿಗೆ ಮನೆ ಗುಡಿಸುವುದು, ಒರಸುವುದು, ಅಡುಗೆ ಮಾಡುವುದು, ಮನೆ ಕಾಯುತ್ತ ಕುಳಿತಿರುವುದು ಇವೇ ಸರ್ವಸ್ವವಾದರೆ, ಗಂಡಸರಿಗೆ ಮಕ್ಕಳನ್ನು ಸ್ಕೂಲಿಗೆ ಬಿಟ್ಟುಬರುವುದು, ಲೈಟ್ ಬಿಲ್, ಟೆಲಿಫೋನ್ ಬಿಲ್ ಕಟ್ಟುವುದು, ಅಂಗಡಿಗೆ ಹೋಗಿ ರೇಷನ್ ತರುವುದು ಇವೇ ಪ್ರಮುಖ ಕೆಲಸಗಳಾಗುತ್ತವೆ. ಇವರಿಗೆ ನಿವೃತ್ತಿ ವೇತನವೋ ಆಸ್ತಿಯೋ ಇದ್ದಲ್ಲಿ ಅವರ ಮರಣಾನಂತರ ಆ ಹಣದ ಆಸೆಗಾಗಿ ಅವರಿಗೆ ಎರಡು ಹೊತ್ತು ಊಟ ನೀಡಲು ಯಾರಾದರೂ ಮುಂದೆ ಬರಲೂಬಹುದು. ಆ ಆಸ್ತಿ ಮೊತ್ತ ಅಗಾಧವಾಗಿದ್ದ ಪಕ್ಷದಲ್ಲಿ ಅವರನ್ನು ಕೊಂದು ಆ ಆಸ್ತಿಯನ್ನು ಹೊಡೆದುಕೊಳ್ಳಲು ಸಂಚು ಹೂಡಿದ ಉದಾಹರಣೆಗಳೂ ನಮ್ಮ ಮುಂದಿವೆ. ಒಟ್ಟಿನಲ್ಲಿ ಪತಿ ಪತ್ನಿಯರಲ್ಲಿ ಯಾರೊಬ್ಬರು ಇಲ್ಲವಾದರೂ ಮತ್ತೊಬ್ಬರ ಬದುಕು ಅಸಹನೀಯವಾಗುವುದರಲ್ಲಿ ಅನುಮಾನವೇ ಇಲ್ಲ. ಆತ್ಮಹತ್ಯೆ ಮಾಡಿಕೊಳ್ಳುವ ಧೈರ್ಯಸಾಲದವರು ಸಾಯುವವರೆಗೆ ಬದುಕಿರಲೇಬೇಕಲ್ಲವೇ?

7-8-2017

* * * * * * *

## ಲೇಖನ – 40

# ಕರುಣಾಮಯಿ

ಸಾಮಾನ್ಯವಾಗಿ ಹೆಂಗಸರು ಕರುಣಾಮಯಿಗಳು. ಇತರರಲ್ಲಿ ಈ ಗುಂಪಿಗೆ ಸೇರಿಸಬಹುದಾದವರು ಅಪರೂಪವೇ ಸರಿ. ತಮ್ಮ ಗಂಡ, ಮಕ್ಕಳ ಬಗೆಗಂತೂ ಸರ್ವ ತ್ಯಾಗಕ್ಕೂ ತಯಾರಾಗಿರುವವರು ಇವರು. ಅಷ್ಟೇ ಕಾಳಜಿ ಗಂಡಸರಲ್ಲಿ ತಮ್ಮ ಹೆಂಡತಿ ಮಕ್ಕಳ ಬಗೆಗೆ ಕಂಡುಬರುವುದು ಅಪರೂಪ. ಗಂಡಸಿಗೆ ದುಡಿಮೆಯೇ ಪ್ರಧಾನ, ಸಂಸಾರಕ್ಕೆ ಅವಶ್ಯಕವಾದ ಮೊತ್ತವನ್ನು ಒದಗಿಸಿಬಿಟ್ಟರೆ, ಉಳಿದಂತೆ ಎಲ್ಲವನ್ನೂ ಸಂಭಾಳಿಸಿಕೊಂಡು ಹೋಗುವ ಜವಾಬ್ದಾರಿ ಮನೆ ಹೆಂಗಸಿನದು ಎಂಬ ಭಾವನೆ ಅವನದು. ಮಕ್ಕಳನ್ನು ಬೆಳೆಸುವುದು, ಅವರಲ್ಲಿ ಸಂಸ್ಕಾರ, ಸಂಸ್ಕೃತಿ ಬಗೆಗೆ ವಿಚಾರ ಮೂಡಿಸುವುದು, ಅವರ ವಿದ್ಯಾಭ್ಯಾಸಕ್ಕೆ ಅನುಕೂಲಮಾಡಿಕೊಡುವುದು ಮುಂತಾದ ಎಲ್ಲ ಕಾರ್ಯಗಳೂ ಮನೆಯಾಕೆ ಪಾಲಿನದು. ಹೆಂಗಸರೂ ದುಡಿಯುವ ಈ ಕಾಲದಲ್ಲಿ ಕೆಲವು ಏರುಪೇರುಗಳು ಆಗಿರಲೂಬಹುದು.

ಇತರರ ಬಗೆಗೆ ಕನಿಕರದಿಂದ ವರ್ತಿಸುವುದರ ಜೊತೆಗೆ ನನ್ನ ಶ್ರೀಮತಿಗೆ ಪ್ರಾಣಿಪಕ್ಷಿಗಳ ಬಗೆಗೂ ಹೆಚ್ಚಿನ ಪ್ರೀತಿ. ಮರಗಳ ಮೇಲೆ ಓಡಾಡುವ ಅಳಿಲು, ಹಾರಾಡುವ ಗುಬ್ಬಚ್ಚಿ ರೀತಿಯ ಪಕ್ಷಿಗಳು ಇವುಗಳಿಗಾಗಿ ಬಿಸ್ಕತ್, ಹಣ್ಣು ಚೂರುಗಳು, ನೀರು ಮುಂತಾದವುಗಳನ್ನು ಕಾಂಪೌಂಡಿನ ಮೇಲೆ, ಮುಂಭಾಗದಲ್ಲಿ ಪ್ರತಿದಿನ ಹಾಕಿ ಅದು ಖಾಲಿಯಾದಾಗಲೆಲ್ಲ ಅದಕ್ಕೆ ಮತ್ತೆ ಹಾಕುವುದು ಇವರ ಹೆಚ್ಚುವರಿ ಕಾರ್ಯ.

## ಲೇಖನ - 40

# ಕರುಣಾಮಯಿ

**ಸಾ**ಮಾನ್ಯವಾಗಿ ಹೆಂಗಸರು ಕರುಣಾಮಯಿಗಳು, ಇತರರಲ್ಲಿ ಈ ಗುಂಪಿಗೆ ಸೇರಿಸಬಹುದಾದವರು ಅಪರೂಪವೇ ಸರಿ. ತಮ್ಮ ಗಂಡ, ಮಕ್ಕಳ ಬಗೆಗಂತೂ ಸರ್ವ ತ್ಯಾಗಕ್ಕೂ ತಯಾರಾಗಿರುವವರು ಇವರು. ಅಷ್ಟೇ ಕಾಳಜಿ ಗಂಡಸರಲ್ಲಿ ತಮ್ಮ ಹೆಂಡತಿ ಮಕ್ಕಳ ಬಗೆಗೆ ಕಂಡುಬರುವುದು ಅಪರೂಪ. ಗಂಡಸಿಗೆ ದುಡಿಮೆಯೇ ಪ್ರಧಾನ, ಸಂಸಾರಕ್ಕೆ ಅವಶ್ಯಕವಾದ ಮೊತ್ತವನ್ನು ಒದಗಿಸಿಬಿಟ್ಟರೆ. ಉಳಿದಂತೆ ಎಲ್ಲವನ್ನೂ ಸಂಭಾಳಿಸಿಕೊಂಡು ಹೋಗುವ ಜವಾಬ್ದಾರಿ ಮನೆ ಹೆಂಗಸಿನದು ಎಂಬ ಭಾವನೆ ಅವನದು. ಮಕ್ಕಳನ್ನು ಬೆಳೆಸುವುದು, ಅವರಲ್ಲಿ ಸಂಸ್ಕಾರ, ಸಂಸ್ಕೃತಿ ಬಗ್ಗೆ ವಿಚಾರ ಮಾಡಿಸುವುದು, ಅವರ ವಿದ್ಯಾಭ್ಯಾಸಕ್ಕೆ ಅನುಕೂಲಮಾಡಿಕೊಡುವುದು ಮುಂತಾದ ಎಲ್ಲ ಕಾರ್ಯಗಳು ಮನೆಯಾಕೆ ಪಾಲಿನದು. ಹೆಂಗಸರೂ ದುಡಿಯುವ ಈ ಕಾಲದಲ್ಲಿ ಕೆಲವು ವಿರುಪೇರುಗಳು ಆಗಿರಲೂಬಹುದು.

ಇತರರ ಬಗೆಗೆ ಕನಿಕರದಿಂದ ವರ್ತಿಸುವುದರ ಜೊತೆಗೆ ನನ್ನ ಶ್ರೀಮತಿಗೆ ಪ್ರಾಣಿಪಕ್ಷಿಗಳ ಬಗೆಗೂ ಹೆಚ್ಚಿನ ಪ್ರೀತಿ. ಮರಗಳ ಮೇಲೆ ಓಡಾಡುವ ಅಳಿಲು, ಹಾರಾಡುವ ಗುಬ್ಬಚ್ಚಿ ರೀತಿಯ ಪಕ್ಷಿಗಳು ಇವುಗಳಿಗಾಗಿ ಬಿಸ್ಕತ್, ಹಣ್ಣು ಚೂರುಗಳು, ನೀರು ಮುಂತಾದವುಗಳನ್ನು ಕಾಂಪೌಂಡಿನ ಮೇಲೆ, ಮುಂಭಾಗದಲ್ಲಿ ಪ್ರತಿದಿನ ಹಾಕಿ ಅದು ಖಾಲಿಯಾದಾಗಲೆಲ್ಲ ಅದಕ್ಕೆ ಮತ್ತೆ ಹಾಕುವುದು ಇವರ ಹೆಚ್ಚುವರಿ ಕಾರ್ಯ.

ಇವರು ಹಾಕಿದ ಆಹಾರವನ್ನು, ಇವರು ಬಯಸಿದ ಪ್ರಾಣಿಪಕ್ಷಿಗಳು ತಿನ್ನದೇ ಇನ್ಯಾವ್ಯಾವುದೋ ಹಕ್ಕಿಗಳು ತಿಂದುಹೋಗುವುದೇ ಹೆಚ್ಚು. ಆದರೂ ತಾವು ಬಯಸಿದ ಪ್ರಾಣಿಪಕ್ಷಿಗಳು ತಿಂದಾಗ ಅಥವಾ ತಿನ್ನುತ್ತಿದ್ದಾಗ ಇವರಿಗೆ ಆಗುವ ಆನಂದ ಅಷ್ಟಿಷ್ಟಲ್ಲ. ಅದರಲ್ಲೂ ಅಳಿಲು ಇವರು ಹಾಕಿದ ಬಿಸ್ಕತ್, ದೋಸೆ, ಇಡ್ಲಿ ಚೂರನ್ನು ಕೈಯಲ್ಲಿ ಹಿಡಿದುಕೊಂಡು ತಿನ್ನುವುದನ್ನು ನೋಡುವುದರಲ್ಲಿ ಆಕೆಯ ಖುಷಿಯನ್ನು ನೋಡುವುದೇ ಒಂದು ಸಂತಸದ ವಿಷಯ. ಒಮ್ಮೆಯಂತೂ ಈಕೆ ನಮಗೆ ಹೆಚ್ಚೆನಿಸಿದ ಕ್ಯಾರಟ್ ಹಲ್ವವನ್ನೇ ತನ್ನ ಅಳಿಲಿಗಾಗಿ ಕಾಂಪೌಂಡಿನ ಮೇಲೆ ಇರಿಸಿದ್ದುದೂ ಇದೆ. ಇದನ್ನೇ ಹೆಂಗರುಳು ಎನ್ನಬಹುದೇ?

ಮಕ್ಕಳು, ಪತಿ ಬರುವುದು ತಡವಾದರೂ ಹೊಟ್ಟೆ ಹಸಿಯುತ್ತಿದ್ದರೂ ಅವರ ಬರುವಿಕೆಗಾಗಿ ಕಾದು, ಅವರ ಹಸಿವು ನೀಗಿಸಿದನಂತರವಷ್ಟೇ ಉಳಿದುದನ್ನು ಉಂಡು ಸಾಕಷ್ಟು ನೀರು ಕುಡಿದು ತನ್ನ ಹಸಿವನ್ನು ನೀಗಿಸಿಕೊಳ್ಳುವ ನಿಮ್ಮ ಪತ್ನಿಯರ ತ್ಯಾಗಕ್ಕೆ ತಾಳ್ಮೆಗೆ ಸರಿಸಾಟಿಯಾಗುವರೇ ಇಂದಿನ ಮಹಿಳೆಯರು? ಯಾರು ಯಾವಾಗ ಬಂದರೇನಂತೆ ಎಂದು ಯಾರಿಗೂ ಕಾಯದೆ, ತನ್ನ ಹಸಿವು ತೀರಿದರೆ ಸಾಕೆಂದು ಮನೆಯಲ್ಲೋ ಹೊರಗೋ ಹೊಟ್ಟೆತುಂಬ ಉಂಡು, ಬಂದವರಿಗೆ ಉಳಿದದ್ದನ್ನೇ ಬಡಿಸಿ, ಸಾಲದಿದ್ದಲ್ಲಿ ಹೊರಗಿನಿಂದ ತಂದು ತಿನ್ನಲು ಆದೇಶಿಸಿ ಬದುಕುತ್ತಿರುವವರೂ ಇದ್ದಾರೆ ಇವತ್ತು ಎಂದರೆ ನಿಮಗೆ ಆಶ್ಚರ್ಯ ಆಗಬಹುದು. ಇನ್ನು ಕೆಲವೊಮ್ಮೆ ಎಲ್ಲರೂ ಹೊರಗೇ ತಿಂದು ಕಾಲತಳ್ಳುತ್ತಿರುವ ಮನೆಯಾಕೆಯರ ಬಗೆಗೆ ನೀವೇನನ್ನುತ್ತೀರಿ?

ಅದೃಷ್ಟಶಾಲಿಗಳು ನಾವೇ ಇಂತಹ ಪತ್ನಿಯನ್ನು ಹೊಂದಿದವರು, ಕಾಲಕಾಲಕ್ಕೆ ನಮ್ಮ ಅವಶ್ಯಕತೆಗಳನ್ನು ಪೂರೈಸುತ್ತಿರುವವರು. ತಮ್ಮ ನೋವನ್ನೆಲ್ಲ ಅದುಮಿಟ್ಟುಕೊಂಡು ನಮ್ಮ ಆರೋಗ್ಯದ ಬಗೆಗೆ ಹೆಚ್ಚೆಚ್ಚು ಕಾಳಜಿ ತೋರುತ್ತಿರುವವರು, ನಿಜ ಅರ್ಥದಲ್ಲಿ ಆಗಿರುವರು ಅವರು ನಮ್ಮ ಮಾತೆಯರು ॥

8–8–2017

* * * * * *

ಲೇಖನ – 41

# ನಾನೇನೂ ಯಾರಿಗೂ ಕಡಿಮೆಯಿಲ್ಲ

**ಮೋ**ದಿ ಮೂರು ವರ್ಷದಿಂದ ಮನ್ ಕೀ ಬಾತ್ ಮಾಡಿದರೆ ನಾವು ಈಗ ವಾಂಗೀಬಾತ್ ಮಾಡುತ್ತಿದ್ದೀವಿ. ಇದು ನನ್ನ ಮಾತಲ್ಲ, ನಮ್ಮ ಕರುನಾಡ ದೊರೆ ಸಿದ್ರಾಮಣ್ಣನವರು ರಾಹುಲ್ ಗಾಂಧಿ ಹಾಜರಿಯಲ್ಲಿ ಕೊಟ್ಟ ಹೇಳಿಕೆ. ಅದೇನೋ ಸರಿ ಯಾರಿಗೆ ಯಾವುದು ಸಾಧ್ಯವೋ ಅದನ್ನೇ ಅವರು ಮಾಡಬೇಕು. ನಮ್ಮ ಸಿದ್ದರಾಮಣ್ಣಾನೂ ಆ ಪ್ರಯತ್ನಮಾಡಿ ಸೋತಿದ್ದೂ ಇದೆ. ಚಾಯ್‌ವಾಲಾ ಆಗಿದ್ದವ ಇಂದು ಬುದ್ಧಿವಂತನಾಗಿ ಜನರಿಗೆ ಮನದ ಮಾತು ಆಡತೊಡಗಿದ್ದರೆ, ಕಾನೂನು ಪದವೀಧರನಾದ ನಮ್ಮ ಸಿದ್ದರಾಮಣ್ಣ ಇಂದು ವಾಂಗೀಬಾತ್ ಮಾಡುವ ಮಟ್ಟಕ್ಕೆ ಏರಿದ್ದಾರೆ! ಎನ್ನಬಹುದೇ? ಅವರು ಜನರ ಮಿದುಳನ್ನು ತಿನ್ನುತ್ತಿದ್ದರೆ ನಾವು ಜನರ ಹೊಟ್ಟೆ ಹಸಿವನ್ನು ಇಂಗಿಸುತ್ತಿದ್ದೇವೆ! ಹಿಂದೊಮ್ಮೆ ಆಸ್ಟ್ರೇಲಿಯದ ಶೇನ್ ವಾರ್ನ್ ನಮ್ಮ ಹರಭಜನ್ ಸಿಂಗ್ ಆಡಿದ 'ಮಾಂಕಿ' ಅನ್ನುವ ಪದವನ್ನು 'ಮಂಕಿ' ಅಂದ ಅಂತ ದೊಡ್ಡ ರಾದ್ಧಾಂತ ಮಾಡಿದ್ದನ್ನು ನೀವು ನೆನಪಿನಲ್ಲಿಟ್ಟರಬಹುದು, ಅಂತೆಯೇ ನಮ್ಮ ಸಿದ್ರಾಮಣ್ಣ ಮೋದಿಯ 'ಮನ್ ಕೀ ಬಾತ್' ಅನ್ನು 'ಮಂಕಿ ಬಾತ್' ಅಂತ ಅರ್ಥಮಾಡಿಕೊಂಡು ಆಡಿಕೊಂಡಿದ್ದನ್ನೂ ಮರೆತಿರಲಾರಿರಿ ಅನ್ನಿಸುತ್ತೆ.

ತಮಿಳುನಾಡಿನಲ್ಲಿ ಜಯಲಲಿತಾ 'ಅಮ್ಮ' ಕ್ಯಾಂಟೀನ್ ತೆರೆದು ಯಶಸ್ವಿಯಾದುದ ಕಂಡು ನಮ್ಮ ಮುದ್ದೇಗೌಡರ ಸಿಸ್ಯ ಸರವಣ

'ಅಪ್ಪ' ಕ್ಯಾಂಟೀನ್ ಸುರುಮಾಡಿಯೇಬಿಟ್ಟರು. ನಮ್ ಸಿದ್ರಾಮಣ್ಣ ನಾವೂ ತೆಗೀತೀವಿ ಅನ್ನುತ್ತಲೇ ಇದ್ದವರು ಇಂದು ರಾಹುಲ್ ಗಾಂಧಿ ಸಮ್ಮುಖದಲ್ಲಿ 109 ಕಡೆ 'ಇಂದಿರಾ' ಕ್ಯಾಂಟೀನ್ ಸುರುಮಾಡಿದ್ದಾರೆ. ಒಂದು ಬಾತಿಗೆ 5 ರೂ, ಮೊಸರನ್ನಕ್ಕೆ 5 ರೂ. ದರ ನಿಗಧಿಮಾಡಿದ್ದಾರಂತೆ. ಅದನ್ನು ತಿನ್ನಲು ಜೇಬು ತಡಕಾಡಿದ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಕೊನೆಗೆ ಪರಮೇಶ್ವರ್ ಜೇಬಿನಿಂದ ಹತ್ತು ರೂಪಾಯಿ ಇಸ್ಕೊಂಡು ವಾಂಗಿಬಾತ್ ಮೊಸರನ್ನದ ರುಚಿ ನೋಡಿದರಂತೆ! ಇದು ನಾನು ಹೇಳ್ತಾ ಇರೋದಲ್ಲ ಕಣಪ್ಪ, ಮತ್ತೆ ಚಾನಲ್‌ಗಳಲ್ಲಿ ಬಂದ ವಾರ್ತೆ.

ಒಟ್ನಲ್ಲಿ ನಮ್ಮ ಸಿದ್ರಾಮಣ್ಣ ಮನದಲ್ಲಿ ತಾನು ಆ ಮೋದಿಗೇನೂ ಕಡಿಮೆಯಿಲ್ಲ ಎಂದುಕೊಂಡಿರುವಂತೆ ಇದೆ. ಮಾತು ಮಾತಿಗೂ ನಾನು ಮೋದಿಗಿಂತ ಹೆಚ್ಚಿನ ಸಾಧನೆಗಳನ್ನು ಈ ನಾಲ್ಕು ವರ್ಷಗಳಲ್ಲಿ ಮಾಡಿದ್ದೇನೆ, ಕೊಟ್ಟಿದ್ದ 165 ಭರವಸೆಗಳಲ್ಲಿ 155 ಭರವಸೆಗಳನ್ನು ಈಡೇರಿಸಿದ್ದೇನೆ ನಿಮ್ಮ ಮೋದಿ ಎಷ್ಟು ಮಟ್ಟಿಗೆ ಸಾಧನೆ ಮಾಡಿದ್ದಾನೆ ಎಂಬ ಬಗೆಗೆ ಬಹಿರಂಗ ಚರ್ಚೆಗೆ ಬರಲಿ ಎಂಬ ಸವಾಲನ್ನೂ ಎಸೆದಿದ್ದಾರೆ. ಇವರ ಸವಾಲು ಸ್ವೀಕರಿಸಲು ಮೋದಿಗೆ ಪುರುಸೊತ್ತೇ ಇಲ್ಲವೇನೋ, ಅಥವಾ ಅವನ ಪಕ್ಷದವರಿಗೆ ಅಂದರೆ ಸ್ಥಳೀಯ ಬಿಜೆಪಿಯ ನಾಯಕರಿಗೆ ಉತ್ತರ ನೀಡಲು ದಮ್ಮೇ ಇಲ್ಲವೇನೋ ಅನ್ನಿಸುತ್ತದೆ ಎಂಬ ಅಭಿಪ್ರಾಯ ಮೂಡುತ್ತಿದೆ.

ಮೋದಿ ಅದು ಕೊಟ್ಟಿಲ್ಲ ಇದು ಕೊಟ್ಟಿಲ್ಲ ಅನ್ನುತ್ತಿರುವ ಸಿದ್ರಾಮಣ್ಣ ಪ್ರಜೆಗಳಿಗೆ ಕೊಟ್ಟಿರುವ ಭಾಗ್ಯಗಳಿಗೇನು ಕಮ್ಮಿಯಿಲ್ಲ. ಆ ಭಾಗ್ಯ ಈ ಭಾಗ್ಯ ಎಂದು ಕೊಡುತ್ತಿರುವ ಭಾಗ್ಯಗಳೆಲ್ಲ ಸೇರಬೇಕಾದವರ ಕೈ ಸೇರುವ ಬದಲು ಇನ್ಯಾರ್ಯಾರಿಗೋ ಸೋರಿಹೋಗುತ್ತಿರುವುದು ಕಾಕತಾಳೀಯವೇ ಇರಬೇಕು. ಇನ್ನೊಂದು ಕಡೆ ಮೋದಿ ನುಂಗಣ್ಣಾರುಗಳಿಗೆ ಆದಷ್ಟು ತೊಂದರೆಕೊಟ್ಟು ಸೋರಿಹೋಗುತ್ತಿದ್ದ ಆದಾಯವನ್ನು ಸರ್ಕಾರದ ಬೊಕ್ಕಸಕ್ಕೆ ಸೇರಿಸಲು ಪ್ರಯತ್ನಿಸುವ ಸಂದರ್ಭದಲ್ಲಿ ನಮ್ಮ ರಾಜ್ಯ ನಾಯಕರು ಮಾಡುತ್ತಿರುವ ಅಭಿವೃದ್ಧಿ ಕಾರ್ಯಗಳು ಎಷ್ಟರ ಮಟ್ಟಿಗೆ ಜನೋಪಕಾರಿ ಎನ್ನುವುದು ಜನರ ತಿಳುವಳಿಕೆಗೇ ಬಿಡಬೇಕಾದ ವಿಚಾರ. ಉಕ್ಕಿನ ಸೇತುವೆ ನಿರ್ಮಾಣದ ತರಾತುರಿ, ರಸ್ತೆ ಅಗಲೀಕರಣ, ಕೆರೆಬತ್ತಿಸಿ ಹೊಸಹೊಸ ನಿವೇಶನಗಳ ನಿರ್ಮಾಣ, ಮೋಡಬಿತ್ತನೆ, ಹೊಸ ರಾಜಕಾಲುವೆ ನಿರ್ಮಾಣ, ಲೋಕಾಯುಕ್ತದ ಹಲ್ಲುಕಿತ್ತು ಏಸೀಬೀ ರಚಿಸಿ ಬೇಕಾದವರ ರಕ್ಷಣೆ ಅಥವಾ ಆಗದವರ ಮೇಲೆ ಛೂಬಿಡುವುದು ಹೀಗೆ ಇರುವ ಇನ್ನೊಂದು

ವರ್ಷದಲ್ಲಿ ಜನರ ಬೆಂಬಲ ಪಡೆಯುವ ಬದಲಿಗೆ ಜನರಿಂದ ದೂರಸರಿಯುವ ಪ್ರಯತ್ನ ನಿರಂತರವಾಗಿ ಸಾಗಿಹುದೇನೋ ಎಂಬ ಸಂಶಯ ಮನದಲ್ಲಿ ತಲೆದೋರತೊಡಗಿದೆ.

ಇರುವ ಉಳಿಕೆ ಅವಧಿಯಲ್ಲಿ ಆದಷ್ಟು ಧನಸಂಗ್ರಹ ಮಾಡಿಕೊಂಡು ಮುಂದೆ ಯಾರಿಗೆ ಏನಾದರೆ ತನಗೇನು ಎನ್ನುವ ಮನದಾಳದ ಇಂಗಿತವೇನಾದರೂ ಇದೆಯೋ ಎಂಬುದು ತಿಳಿಯುತ್ತಿಲ್ಲ. ಕಾಂಗ್ರೆಸ್ಸಿಗೆ ಇತರರು ಕೊನೇ ಮೊಳೆ ಹೊಡೆಯಲು ಬಿಡದೆ ತಾವೇ ಹೊಡೆಯಬಯಸಿಹರೇನೋ ಎಂದೂ ಅನ್ನಿಸತೊಡಗಿದೆ.

16–8–2017

* * * * * *

ವರ್ಷದಲ್ಲಿ ಜನರ ಬೆಂಬಲ ಪಡೆಯುವ ಬದಲಿಗೆ ಜನರಿಂದ ದೂರಸರಿಯುವ ಪ್ರಯತ್ನ ನಿರಂತರವಾಗಿ ಸಾಗಿಹುದೇನೋ ಎಂಬ ಸಂಶಯ ಮನದಲ್ಲಿ ತಲೆದೋರತೊಡಗಿದೆ.

ಇರುವ ಉಳಿಕೆ ಅವಧಿಯಲ್ಲಿ ಆದಷ್ಟು ಧನಸಂಗ್ರಹ ಮಾಡಿಕೊಂಡು ಮುಂದೆ ಯಾರಿಗೆ ಏನಾದರೆ ತನಗೇನು ಎನ್ನುವ ಮನದಾಳದ ಇಂಗಿತವೇನಾದರೂ ಇದೆಯೋ ಎಂಬುದು ತಿಳಿಯುತ್ತಿಲ್ಲ. ಕಾಂಗ್ರೆಸ್ಸಿಗೆ ಇತರರು ಕೊನೇ ಮೊಳೆ ಹೊಡೆಯಲು ಬಿಡದೆ ತಾವೇ ಹೊಡೆಯಬಯಸಿಹರೇನೋ ಎಂದು ಅನ್ನಿಸತೊಡಗಿದೆ.

16–8–2017

* * * * * *

## ಲೇಖನ - 42

# ಬಾಲ್ಯದ ನಂಬಿಕೆಗಳು

ಎಷ್ಟೋ ಸಲ ನಿಮಗೂ ಅನ್ನಿಸಿರಬಹುದು, ನಾವು ಪುನಃ ಚಿಕ್ಕವರಾಗಲು ಸಾಧ್ಯವಾಗಿದ್ದಲ್ಲಿ ಬದುಕು ಎಷ್ಟು ಸೊಗಸಾಗಿರುತ್ತಿತ್ತು. ಆದರೆ ಅದು ನಮ್ಮಗಳ ಅನ್ನಿಸಿಕೆಯೇ ಹೊರತು ಸಾಧ್ಯವಾಗುವುದಲ್ಲ ಎಂದೂ ನಮಗೆ ತಿಳಿದಿದೆ. ತಿಳಿದವರು ಹೇಳುವಂತೆ ಅರವತ್ತರ ನಂತರ ಅರುಳು ಮರುಳು ಉಂಟಾಗಿ ನಮ್ಮ ಬುದ್ಧಿಯೂ ಚಿಕ್ಕ ಮಕ್ಕಳ ಬುದ್ಧಿಯಂತೆ ಆಗಿಬಿಟ್ಟಿರುತ್ತದೆ ಎನ್ನುವ ವಿಚಾರವನ್ನೂ ನಾವು ಪರಿಗಣನೆಗೆ ತೆಗೆದುಕೊಳ್ಳಬೇಕು. ವಯ್ಯಸ್ಸಾದಂತೆ ನಮ್ಮ ಗ್ರಹಣ ಶಕ್ತಿ ತನ್ನ ಸ್ಥಿಮಿತ ಕಳೆದುಕೊಳ್ಳುತ್ತದೆ, ಇನ್ನೂ ಮುಂದುವರೆದು ಹಲ್ಲುಗಳು ಉದುರಿ ಬಾಯಿ ಬೊಚ್ಚುಬಾಯಿ ಆಗುತ್ತದೆ, ತಲೆಕೂದಲುಗಳು ಉದುರಿ ಬೋಳುಮಂಡೆ ಆಗಿ ನಾವು ಹುಟ್ಟಿದಾಗ ಇದ್ದ ಲಕ್ಷಣಗಳನ್ನೇ ಮತ್ತೆ ಪಡೆಯುತ್ತೇವೆ, ಅಂದಮೇಲೆ ನಾವು ಚಿಕ್ಕಮಕ್ಕಳಾದಂತಾಗಲಿಲ್ಲವೇ!

ನಾನು ಹೇಳಹೊರಟಿರುವುದು ಅದಲ್ಲ. ನಾವು ಚಿಕ್ಕವರಾಗಿದ್ದಾಗ ಎಷ್ಟೊಂದು ನಂಬಿಕೆಗಳನ್ನು, ಅದು ಮೂಢನಂಬಿಕೆಗಳೇ ಅನ್ನಿಸಬಹುದು ಹೊಂದಿರುತ್ತಿದ್ದೆವು. ಪರೀಕ್ಷಾ ಸಮಯ ಹತ್ತಿರವಾಗುತ್ತಿದ್ದಂತೆ ಗಣೇಶನ ಗುಡಿಗೆ ಪದೇಪದೇ ಭೇಟಿಕೊಟ್ಟು ಆ ಗಣೇಶನ ಮೇಲೆ ನಮ್ಮ ಪಾಸು ನಪಾಸು ಜವಾಬುದಾರಿಯನ್ನು ಹೊರಿಸಿಬಿಡುವುದು; ವರ್ಷದ ಯಾವುದೇ ಕಾಲದಲ್ಲಿ ದೇವನಲ್ಲಿ ನಂಬಿಕೆಯಿಡದಿದ್ದರೂ ಪರೀಕ್ಷಾ ಸಮಯದಲ್ಲಿ ಮಾತ್ರ ಪಾಸು ಮಾಡಿಸಲೆಂದು ತರಹಾವರಿ ಹರಕೆ ಹೊತ್ತದ್ದೇ

ಹೊತ್ತಿದ್ದು, ಕೆಲವರು ದೇವರಿಗೆ ವಿಧವಿಧವಾದ ಆಮಿಷಗಳನ್ನು ಲಂಚದ ರೂಪದಲ್ಲಿ ಒಡ್ಡುತ್ತಿದ್ದುದೂ ನೆನಪಿಗೆ ಬರುತ್ತಿರಬಹುದು.

ಬೀದಿಯಲ್ಲಿ ಹೋಗುತ್ತಿರುವಾಗ ಯಾವುದಾದರೂ ಹೂವು/ಎಲೆ ಉದುರುವ ಮರದ ಕೆಳಗೆ ನಿಂತು ಉದುರುತ್ತಿರುವ ಹೂವನ್ನು/ಎಲೆಯನ್ನು ಕ್ಯಾಚ್ ಹಿಡಿದರೆ ನಮಗೆ ಪ್ಯಾಸು ಗ್ಯಾರಂಟಿ ಎಂದುಕೊಳ್ಳುವುದು; ಅಂತೆಯೇ ದೇವನಿಗೆ ಮುಡಿಸಿದ ಹೂವಿನಲ್ಲಿ ಯಾವುದಾದರೂ ಕಾರಣದಿಂದ ಬಲಗಡೆ ಹೂ ಉದುರಿದರೆ ನಮ್ಮ ಕೆಲಸ ಆದಂತೆ, ಅದಕ್ಕೆ ಬದಲಿಗೆ ಎಡಗಡೆ ಹೂ ಉದುರಿದಲ್ಲಿ ನಮ್ಮ ಕೆಲಸ ಆಗುವುದಿಲ್ಲ ಎಂಬ ನಂಬಿಕೆ ಬರೀ ಮಕ್ಕಳಲ್ಲೇ ಏಕೆ ದೊಡ್ಡವರಲ್ಲೂ ಇಂದಿಗೂ ಮನೆಮಾಡಿರುವುದು ಬಹಿರಂಗವಾಗಿ ಹೇಳಿಕೊಳ್ಳದಿದ್ದರೂ, ಬಹಳಷ್ಟು ಆಸ್ತಿಕರಲ್ಲಿ ಮನೆಮಾಡಿರುವ ನಂಬಿಕೆ. ಈ ನಂಬಿಕೆ ಸುಳ್ಳಾಗಿರುವ ಸಹಸ್ರಾರು ಉದಾಹರಣೆಗಳೂ ನಮ್ಮ ಮುಂದಿವೆ. ಅಂತಹ ಉದಾಹರಣೆಗಳನ್ನೇ ಮುಂದಿಟ್ಟುಕೊಂಡು ಇವೆಲ್ಲ ಕಾಕತಾಳೀಯ ಎಂದು ಹೇಳಿನೋಡಿ, ಅದನ್ನು ಆ ಆಸ್ತೀಕರು ಅಲ್ಲಗಳೆಯುವುದು ಬಹುತೇಕ ಖಚಿತ.

ಪುಸ್ತಕಗಳಲ್ಲಿ ನವಿಲುಗರಿ, ಗಿಣಿಪುಕ್ಕ, ಯಾವುದಾದರೂ ಹಕ್ಕಿಯ ಪುಕ್ಕ ಇಟ್ಟುಕೊಂಡು ಅದು ಹಾಗೇ ಬೆಳೆಯುತ್ತಾಹೋಗುವುದೆಂದು ನಂಬಿ ಕೆಲದಿನಗಳನಂತರ ತೆಗೆದುನೋಡುವುದು. ಅಲ್ಲ ಜೀವವಿರುವ ಪ್ರಾಣಿಪಕ್ಷಿಗಳ ಅಂಗಗಳು ಯಾವುದಾದರೂ ಕಾರಣಕ್ಕೆ ಭಂಗವಾದಲ್ಲಿ, ಅವು ತಂತಾನೆ ಮೊದಲಿನ ಸ್ಥಿತಿಗೆ ಬರುತ್ತವೆ, ಉದುರಿದ ಪುಕ್ಕಗಳು ಮತ್ತೆ ಹುಟ್ಟುತ್ತವೆ ಎನ್ನುವುದು ವೈಜ್ಞಾನಿಕ ಸತ್ಯ; ಆದರೆ ದೇಹದಿಂದ ಬೇರೆಯಾದ ನಿರ್ಜೀವ ಪುಕ್ಕಗಳು ಬೆಳೆಯುವವೇ ಎಂಬುದು ಪ್ರಶ್ನಾರ್ಹ ವಿಚಾರ. ಹೀಗೆ ನಮ್ಮ ನಂಬಿಕೆಗಳು ಒಂದೇ ಎರಡೇ. ಹಲವಾರು ಇರುತ್ತಿದ್ದವು, ಮತ್ತು ಅವು ನಿಜವಾಗುವುದೆಂಬ ನಂಬಿಕೆಯೂ ನಮ್ಮದಾಗಿರುತ್ತಿತ್ತು.

ಅಂತೆಯೇ ನಮ್ಮ ಕೆಲವು ನಂಬಿಕೆಗಳಿಗೆ ಹಿರಿಯರ ಒತ್ತಾಸೆಗಳೂ ಇರುತ್ತಿದ್ದವು ಎನ್ನುವುದಕ್ಕೆ ನಾವು ಓಡುವಾಗಲೋ, ನಡೆಯುವಾಗಲೋ ಅಕಸ್ಮಾತ್ ಬಿದ್ದು ಮಂಡಿಯೋ, ಮೊಣಕೈಯೋ ತರಚಿ ಗಾಯವಾದರೆ ತಕ್ಷಣವೇ ಜೊತೆಗಿದ್ದ ಹಿರಿಯರು ಹೇಳುತ್ತಿದ್ದುದು 'ಥೂ ಮಾಡು, ಆ ಜಾಗಕ್ಕೆ ಥೂ ಮಾಡಿಬಿಡು, ನೋವು ಹೊರಟುಹೋಗುತ್ತದೆ, ಗಾಯ ವಾಸಿಯಾಗುತ್ತದೆ' ಎಂಬುದು. ಇದು ಎಷ್ಟರಮಟ್ಟಿಗೆ ಪರಿಣಾಮಕಾರಿ, ನಮಗೆ ಕೇಡುಮಾಡಿದ ಜಾಗಕ್ಕೆ ಉಗುಳುವುದರಿಂದ ಗಾಯ ವಾಸಿಯಾಗುವುದೇ, ಅದಕ್ಕೆ ಬದಲಾಗಿ

ಗಾಯವಾಗಿರುವ ಜಾಗಕ್ಕೆ ನಿಮ್ಮ ಉಗುಳನ್ನು ಸವರಿಕೊಳ್ಳುವುದೋ, ಸ್ವಲ್ಪ ಮಣ್ಣನ್ನು ತೆಗೆದು ಸವರುವುದೋ ಮಾಡಿದಲ್ಲಿ ಉರಿತಗ್ಗಿದಂತಾಗುತ್ತಿತ್ತು. ಬಹುಶಃ ಮಕ್ಕಳ ಮನಸ್ಸನ್ನು ಬೇರೆ ಬೇರೆ ಕಡೆ ತಿರುಗಿಸುವುದರಿಂದ ನೋವು ಮರೆಯಬಹುದು ಎಂದೂ ಇರಬಹುದು ಎನಿಸುತ್ತಿದೆ.

ಸ್ವಭಾವತಃ ಚಿಕ್ಕಮಕ್ಕಳು ನಿರ್ಭಯರು. ಅವರಲ್ಲಿ ಭಯವೆಂಬ 'ಗುಮ್ಮ'ವನ್ನು ಹುಟ್ಟುಹಾಕುವವರೇ ಹಿರಿಯರು. ತಮ್ಮ ಕೆಲಸ ಹಗುರಮಾಡಿಕೊಳ್ಳಲು ಅಂದರೆ ಊಟ ತಿಂಡಿಮಾಡಲು ಗಲಾಟೆಮಾಡುವ ಮಗುವನ್ನು ಬೇಗಬೇಗ ತಿನ್ನುವಂತೆಮಾಡಲು ನಾವು ಹಿರಿಯರು ಈ 'ಗುಮ್ಮ'ನನ್ನು ಹುಟ್ಟುಹಾಕುತ್ತೇವೆ. ಬೇಗ ಮಲಗಿ ನಿದ್ದೆಮಾಡು ಇಲ್ಲದಿದ್ದರೆ ಗುಮ್ಮ ಬಂದು ಹಿಡಿದುಕೊಳ್ಳುತ್ತಾನೆ ಎಂದು ಮಕ್ಕಳನ್ನು ಹೆದರಿಸುತ್ತೇವೆ. ಈ 'ಗುಮ್ಮ' ಭಾವನೆ ಆ ಚಿಕ್ಕಮಗುವಿನ ಮನದಲ್ಲಿ ಆಳವಾಗಿ ಬೇರೂರಿ, ಅದು ಕತ್ತಲೆಯನ್ನು ಕಂಡರೆ, ಒಂಟಿಯಾಗಿ ಓಡಾಡಬೇಕಾದರೆ ಹೆದರಿಕೊಳ್ಳಲು ಆರಂಭಿಸುತ್ತದೆ. ಅದೇ ಮಕ್ಕಳಿಗೆ ಈ 'ಗುಮ್ಮ'ನ ಬಗೆಗೆ ತಿಳಿಸದೇ ಇದ್ದಲ್ಲಿ ಅವು ಎಲ್ಲ ಕಡೆಯೂ ಯಾವ ಕಾಲದಲ್ಲಿಯೇ ಆಗಲಿ ನಿರ್ಭಯರಾಗಿ ಓಡಾಡಿಕೊಂಡಿರುತ್ತವೆ. ಹೀಗಾಗಿ ಮಕ್ಕಳಲ್ಲಿ ಶಿಸ್ತುಮೂಡಿಸುವ ಸಲುವಾಗಿಯೋ ಮತ್ತೆ ಇನ್ನಾವುದಾದರೂ ಕಾರಣಕ್ಕೆ ಈ ಗುಮ್ಮನನ್ನು ನಿಮ್ಮ ಅಸ್ತ್ರವನ್ನಾಗಿ ಬಳಸುವುದನ್ನು ಕೈಬಿಡಿ ಎನ್ನುವುದು ನಮ್ಮ ಕೋರಿಕೆ.

1-9-2017

* * * * * *

## ಲೇಖನ - 43

# ಕ್ರೌರ್ಯ

ಶ್ರೀ ಕೃಷ್ಣ ಆಲನಹಳ್ಳಿಯವರ ಹೆಸರು ನೆನಪಿರಬಹುದು. ಅವರು ಬರೆದ 'ಕಾಡು' ಕೃತಿ ಚಲನಚಿತ್ರವಾಗಿ ಯಶಸ್ವಿ ಪ್ರದರ್ಶನ ಕಂಡಿತ್ತು. ಆ ಕೃತಿಗೆ 'ಕಾಡು' ಎಂದು ಹೆಸರಿಡುವ ಮೊದಲು ಅವರು ಇಡಬಯಸಿದ್ದ ಮತ್ತೊಂದು ಹೆಸರು 'ಕ್ರೌರ್ಯ'. ಅದಕ್ಕೆ ಕಾರಣ ಅದರಲ್ಲಿ ತುಂಬಿದ್ದ ಕ್ರೌರ್ಯ. ಈ ವಿಚಾರವಾಗಿ ಅವರನ್ನು ಪ್ರಶ್ನಿಸಿದಾಗ ಅವರು ಹೇಳಿದ್ದು " ನಮ್ಮ ಗ್ರಾಮೀಣ ಪಾತ್ರಗಳು ಪ್ರಕೃತಿಗೆ ಅತಿ ಹತ್ತಿರವಾದವು. ಸಾಧಕ ಬಾಧಕಗಳನ್ನು ಪರಿಗಣಿಸದೇ, ಪರಿಸ್ಥಿತಿಗೆ ಅನುಗುಣವಾಗಿ ಅವು ತತ್ ಕ್ಷಣದ ಪ್ರತಿಕ್ರಿಯೆ ನೀಡುತ್ತವೆ." ಆದರೆ ನಮ್ಮ ವಿದ್ಯಾವಂತ ನಗರವಾಸಿಗಳು "ಎಂತಹ ವಿಷಮ ಪರಿಸ್ಥಿತಿಯಲ್ಲೂ ತತ್ ಕ್ಷಣದ ಪ್ರತಿಕ್ರಿಯೆ ನೀಡುವುದಿಲ್ಲ." ಆ ವಿಚಾರವಾಗಿ ಎಲ್ಲ ಮುಖಗಳನ್ನೂ ವಿಶ್ಲೇಷಿಸಿ ಕ್ರಮ ಕೈಗೊಳ್ಳುವ ವೇಳೆಗೆ ಎಲ್ಲ ತಣ್ಣಗಾಗಿರುತ್ತವೆ; ಇಲ್ಲವೇ ಕ್ರಮ ಕೈಗೊಂಡರೆ ಉಂಟಾಗುವ ಪ್ರತಿಕ್ರಿಯೆಗಳನ್ನು ಊಹಿಸಿಕೊಂಡೇ ತಾವು ಕೈಗೊಳ್ಳಬೇಕೆಂದಿದ್ದ ಕ್ರಮಗಳನ್ನು ಕೈಬಿಟ್ಟೋ ಮುಂದೂಡಿಯೋ ಕಾಲಹರಣಮಾಡಿಬಿಡುತ್ತಾರೆ. ಈ ನೀತಿರೀತಿ ಇಂದಿನ ರಾಜಕೀಯ ನಾಯಕರುಗಳಿಗೂ ಅನ್ವಯಿಸುತ್ತದೆ.

ಎರಡು ಉದಾಹರಣೆಗಳು:

1. ಕಳ್ಳತನ ಮಾಡಲು ಬಂದ ಕಳ್ಳನೊಬ್ಬ, ಸಿಕ್ಕಿಹಾಕಿಕೊಂಡಾಗ, ಗುಂಪಿನ ಹಲ್ಲೆಗೆ ಒಳಗಾಗಿ ಹಣ್ಣುಗಾಯಿ ನೀರುಗಾಯಿ ಆದಾಗ, ಪೋಲೀಸ್ ಸ್ಟೇಷನ್ನಿನಲ್ಲಿ ಹಲ್ಲೆಮಾಡಿದವರ ಮೇಲೇ ದೂರುನೀಡುತ್ತಾನೆ. ಇದೇ ವಿಷಯವನ್ನು ಆಧಾರವಾಗಿಟ್ಟುಕೊಂಡು ರಚಿತವಾಗಿರುವ ನಾಟಕವೇ ದ.ರಾ.ಬೇಂದ್ರೆಯವರ 'ಸಾಯೋ ಆಟ'.

2. ವಿದೇಶಿ ವಿದ್ಯಾರ್ಥಿಗಳು ಕುಡಿದ ಅಮಲಿನಲ್ಲಿ ಅಡ್ಡಾದಿಡ್ಡಿ ಕಾರು ಚಲಾಯಿಸಿ ಒಬ್ಬ ಮಹಿಳೆಯ ಸಾವಿಗೆ ಕಾರಣರಾದಾಗ, ಕ್ರೋಧಗೊಂಡ ಗುಂಪು ಅವರ ಮೇಲೆ ಹಲ್ಲೆನಡೆಸಿ, ಅವರ ಕಾರನ್ನು ಸುಟ್ಟುಹಾಕಿದುದಕ್ಕೆ, ಆ ಗುಂಪಿನವರನ್ನು ಹುಡುಕಿ ಬಂಧಿಸಿದ ಪೋಲೀಸರು, ಮಹಿಳೆಯನ್ನು ಕೊಂದುದಕ್ಕೆ ಆ ವಿದೇಶಿ ವಿದ್ಯಾರ್ಥಿಗಳ ಮೇಲೆ ಏನು ಕ್ರಮ ಜರುಗಿಸಿತು ಎನ್ನುವುದು ಚಿದಂಬರ ರಹಸ್ಯ. ಈ ರೀತಿ ವಿದೇಶೀಯರ ಮೇಲೆ ಕಾನೂನು ಕ್ರಮ ಜರುಗಿಸುವುದಕ್ಕೆ ಮುಂದಾದಾಗ ಅಡ್ಡ ಬರುವುದು ವಿದೇಶಿ ವ್ಯವಹಾರ ಅಥವಾ ಅಂತರರಾಷ್ಟ್ರೀಯ ಕಾನೂನು! ಮತ್ತೊಂದು ದೇಶದೊಂದಿಗೆ ಪರಸ್ಪರ ಸೌಹಾರ್ದಯುತ ಸಂಬಂಧ ಕಾಯ್ದುಕೊಳ್ಳುವ ಸಲುವಾಗಿ ಆ ವಿದೇಶಿ ವಿದ್ಯಾರ್ಥಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳದೆ ಮೃದು ಧೋರಣೆ ತೋರಿಸುವ ನಮ್ಮ ಸರ್ಕಾರಗಳು.

ಎಲ್ಲಿ ಅಪರಾಧ ಜಗತ್ತಿನಲ್ಲಿ ರಾಜಕೀಯ ಪ್ರವೇಶಮಾಡುತ್ತದೆಯೋ ಅಂತಹ ಘಟನೆಗಳಲ್ಲಿ ನ್ಯಾಯದಾನದಲ್ಲಿ ಏರುಪೇರು ಉಂಟಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಅಪರಾಧಿ ತಮ್ಮ ಕಡೆಯವನೆಂದು ತಿಳಿಯುತ್ತಲೇ ರಾಜಕಾರಣಿ ತನ್ನೆಲ್ಲ ಶಕ್ತಿ ಯುಕ್ತಿಗಳನ್ನು ಉಪಯೋಗಿಸಿ ಆ ಅಪರಾಧಿಯ ಮೇಲಿನ ಆಪಾದನೆಯನ್ನು ಇಲ್ಲವಾಗಿಸುವ, ದೂರುದಾರರ ಮೇಲೆ ಒತ್ತಡ ತಂದು ಅವರನ್ನೇ ಅಪರಾಧಿಯಾಗಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖನಾಗುವ ಸಂಭವಗಳೇ ಹೆಚ್ಚಾಗಿರುತ್ತವೆ.

ಸೆರೆಮನೆಗಳಲ್ಲಿ ಬಂಧನದಲ್ಲಿರುವವರ ವಿವರಗಳನ್ನು ಪರಿಶೀಲಿಸಿನೋಡಿದಾಗ ಅಪರಾಧ ಸಾಬೀತಾಗಿ ಶಿಕ್ಷೆ ಅನುಭವಿಸುತ್ತಿರುವವರಿಗಿಂತ, ಸಂಶಯ ಮತ್ತು ಆಪಾದನೆಮೇಲೆ ವಿಚಾರಣಾಧೀನ ಕೈದಿಗಳಾಗಿ ಜೈಲಿನಲ್ಲಿ ಕೊಳೆಯುತ್ತಿರುವವರ ಸಂಖ್ಯೆಯೇ ಹೆಚ್ಚಾಗಿರುತ್ತವೆ. ಎಷ್ಟೋ ಮಂದಿಗೆ ಅವರು ನಿರಪರಾಧಿಗಳೆಂದು ಸಾಬೀತಾಗಿ ಸೆರೆಮನೆಯಿಂದ ಬಿಡುಗಡೆಯ ಭಾಗ್ಯ ಬರುವವೇಳೆಗೆ ಮುಕ್ಕಾಲುಪಾಲು

ಜೀವನವನ್ನೇ ಸೆರೆಮನೆಯಲ್ಲಿ ಕಳೆದಿರುವ ಉದಾಹರಣೆಗಳೂ ಇಲ್ಲದಿಲ್ಲ. ಮಾತೆತ್ತಿದರೆ ನೂರು ಮಂದಿ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಂಡರೂ ಪರವಾಗಿಲ್ಲ, ಒಬ್ಬನೇ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂದು ನುಡಿಯುತ್ತಲೇ ನೂರು ಮಂದಿ ಅಪರಾಧಿಗಳನ್ನು ಬಿಟ್ಟು ಸಾವಿರಾರು ಮಂದಿ ನಿರಪರಾಧಿಗಳನ್ನು ಜೈಲಿನ ಕಟಕಟೆಯ ಹಿಂದೆ ದೂಡುವ ನಮ್ಮ ಕಾನೂನಿಗೆ ಏನೆನ್ನಬೇಕೋ ತಿಳಿಯುತ್ತಿಲ್ಲ.

5–9–2017

* * * * * *

ಲೇಖನ – 44

# ಕಣ್ಣಮುಂದೆ ಸಾವು ಕುಣಿಯುತ್ತಿರುವಾಗ

ಆತ ತುಂಬು ಉತ್ಸಾಹಿ ಯುವಕ. ಜೀವನದ ಎಲ್ಲ ಆಸೆಗಳನ್ನೂ ತುಂಬಿಕೊಂಡು ಒಂದೊಂದೇ ಆಸೆಗಳನ್ನು ಈಡೇರಿಸಿಕೊಳ್ಳಲು ಹೆಣಗುತ್ತಿದ್ದವ. ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು ಅನಾಥಪ್ರಜ್ಞೆ ಕಾಡುತ್ತಿದ್ದರೂ ಕಷ್ಟಪಟ್ಟು ತನ್ನ ವಿದ್ಯಾಭ್ಯಾಸ ಮುಂದುವರೆಸಿ ತಾನೂ ಒಬ್ಬ ಪದವೀಧರ ಎನಿಸಿಕೊಂಡವ. ಬದುಕಿಗೆ ದಾರಿ ಕಂಡುಕೊಳ್ಳಲು ಒದ್ದಾಡುತ್ತಿರುವಾಗ ದೂರದಲ್ಲೆಲ್ಲೋ ಕಾಣಿಸಿದ ಬೆಳಕು ಸಂಗೀತಲೋಕ. ಚಿಕ್ಕಂದಿನಿಂದಲೇ ತಕ್ಕಮಟ್ಟಿಗೆ ಶಾಸ್ತ್ರೀಯ ಸಂಗೀತದ ಅಭ್ಯಾಸವನ್ನು ಸೋದರತ್ತೆಯವರಿಂದ ಪಡೆದು, ಅಲ್ಲಲ್ಲಿ ನಡೆಯುತ್ತಿದ್ದ ಗೀತಸ್ಪರ್ಧೆಗಳಲ್ಲಿ ಭಾಗವಹಿಸುತ್ತಾ, ಬಹುಮಾನಗಳನ್ನು ಗಳಿಸುತ್ತಾ ಒಳ್ಳೆ ಗಾಯಕನಾಗುವ ಎಲ್ಲ ಲಕ್ಷಣಗಳನ್ನೂ ಪ್ರದರ್ಶಿಸುತ್ತಿದ್ದ ಆ ಯುವಕನ ಗುಪ್ತಗುರಿ ಹಿನ್ನೆಲೆಗಾಯಕನಾಗುವ ಕನಸು.

ಚಲನಚಿತ್ರ ಕ್ಷೇತ್ರವೆಂಬುದು ಬಹಳ ಜನರಪಾಲಿಗೆ ಒಂದು ಮರೀಚಿಕೆ. ಅಲ್ಲಿ ಗಾಡ್ ಫಾದರ್‌ಗಳಿಲ್ಲದಿದ್ದಲ್ಲಿ ಒಳಕ್ಕೆ ಪ್ರವೇಶವೇ ಸಿಗುವುದಿಲ್ಲ. ಅಂತ ಕ್ಷೇತ್ರದಲ್ಲಿ ನಾನೂ ಈಜುತ್ತೇನೆ ಎಂಬ ಛಲದೊಡನೆ ಪ್ರಯತ್ನಮಾಡಿದವ ಈ ಯುವಕ. ಯಾರಯಾರದೋ ಸಹಾಯದಿಂದ ಪ್ರಖ್ಯಾತ ನಟರ, ನಿರ್ದೇಶಕರ ಮುಂದೆಲ್ಲ ಹೋಗಿ ತನ್ನ ಗಾನಮಾಧುರ್ಯವನ್ನು ಪ್ರದರ್ಶಿಸಿದರೂ ಯಾವುದೇ

ಪ್ರಯೋಜನವಾಗಿರಲಿಲ್ಲ. ಅಜ್ಞಾತ ಗಾಯಕನಾಗಿಯೇ ತನ್ನ ಕೆಲಸ ಪ್ರಾರಂಭಮಾಡಲು ಯಾರೋ ಪುಣ್ಯಾತ್ಮ ಸಹಾಯಮಾಡಿದಾಗ ಈತ ಚಲನಚಿತ್ರ ಸಂಗೀತ ಕ್ಷೇತ್ರಕ್ಕೆ ಪ್ರವೇಶಪಡೆಯಲು ಸಹಾಯವಾಯಿತು. ಮುಖ್ಯ ಹಿನ್ನೆಲೆ ಗಾಯಕ ತನ್ನ ಧ್ವನಿಕೂಡಿಸುವ ಮುನ್ನ ಆ ಗೀತೆಯನ್ನು ಹಾಡುವ ಕೆಲಸ ಈ ಟ್ರ್ಯಾಕ್ ಸಿಂಗರ್‌ನದು. ಎಲ್ಲ ವಾದ್ಯಪರಿಕರಗಳೊಡನೆ ಈತ ಹಾಡಿಮುಗಿಸಿದ ಗೀತೆಯನ್ನು ಈತನ ಕಂಠವನ್ನು ಅಳಿಸಿ ತನ್ನ ಧ್ವನಿಯನ್ನು ಕೂಡಿಸುವ ಮುಖ್ಯಗಾಯಕ ಕೇಳುಗರಿಗೆ ತಾನೇ ನಾಯಕನ ಧ್ವನಿಯಾಗಿರುವನು. ಈ ಟ್ರ್ಯಾಕ್ ಸಿಂಗರ್ ಅಗೋಚರನಾಗಿ ಹಿನ್ನೆಲೆಯಲ್ಲಿಯೇ ಅಂದರೆ ನೇಪಥ್ಯದಲ್ಲಿಯೇ ಉಳಿದುಹೋಗುವನು. ಇಂತಹ ಅದೆಷ್ಟೋ ಗಾನಕುಸುಮಗಳು ಚಲನಚಿತ್ರ ಸಂಗೀತಕ್ಷೇತ್ರದಲ್ಲಿ ಇಂದಿಗೂ ನರಳಿನರಳಿ ಸಾಯುತ್ತಿರುವುವೋ ಯಾರುಬಲ್ಲರು?

ಅದೊಂದು ದಿನ ಮುಖ್ಯ ಗಾಯಕನ ಆರೋಗ್ಯದಲ್ಲಿ ಏರುಪೇರಾಗಿ, ಆತ ಈ ಟ್ರ್ಯಾಕ್ ಸಿಂಗರ್‌ನ ಹಾಡುಕೇಳಿಸಿಕೊಂಡ ಕ್ಷಣದಲ್ಲಿ ತನ್ನ ಅಂದಿನ ತೊಂದರೆ ಜೊತೆಜೊತೆಗೇ ಈ ಅಗೋಚರ ಗಾಯಕನ ಹಾಡಿದ ಗಾನದ ಮೋಡಿಯಿಂದ ಉಲ್ಲಸಿತನಾಗಿ ಸಂಗೀತ ನಿರ್ದೇಶಕನಿಗೆ ಈ ಗಾಯಕನ ಧ್ವನಿಯೇ ಗೀತೆಯಲ್ಲಿ ಉಳಿದುಕೊಳ್ಳಲಿ ಎಂಬ ಉದಾರತೆಯನ್ನು ತೋರಿದಾಗಲಷ್ಟೇ ಹೊಸಗಾಯಕರ ಉದಯವಾಗುವುದು. ಅಂತಹ ಒಂದು ಅಪರೂಪದ ಕ್ಷಣದಲ್ಲೇ ಉದಯವಾದ ಆ ಗಾಯಕ ಒಮ್ಮೆ ಮೊರೆಕಳಚಿ ಮೈಕೊಡವಿ ಹೊರಜಗಕೆ ಪರಿಚಿತನಾದನಂತರ ಆತ ಹಿಂತಿರುಗಿನೋಡಿದ ದಿನವೇ ಇಲ್ಲ. ಒಂದರ ಹಿಂದೆ ಒಂದು ಗೀತೆಗಳನ್ನು ಹಾಡುತ್ತಾ ಜನಪ್ರಿಯನಾಗತೊಡಗಿದ. ತನ್ನಂತೆಯೇ ಸಂಗೀತದಲ್ಲಿ ಆಸಕ್ತಿಯನ್ನು ಹೊಂದಿದ್ದ ಗಾಯಕಿಯನ್ನು ವರಿಸಿ ಹಾಲು ಜೇನಿನಂತೆ ತಮ್ಮ ಖಾಸಗೀ ಮತ್ತು ಗಾಯನದ ಬದುಕನ್ನು ಕಟ್ಟಿಕೊಳ್ಳತೊಡಗಿದರು ಈ ದಂಪತಿ.

ಕೆಲಕಾಲಾನಂತರ ಗಾಯನದ ಜೊತೆಜೊತೆಗೆ ಸಂಗೀತ ನಿರ್ದೇಶನದ ಕ್ಷೇತ್ರಕ್ಕೂ ಪ್ರವೇಶಿಸಿ ಸೈ ಎನಿಸಿಕೊಳ್ಳತೊಡಗಿದ ಈ ಯುವಗಾಯಕ. ತಾನು ಹಾಡಿದ ಒಂದು ಹಾಡಿಗೆ ರಾಜ್ಯಪ್ರಶಸ್ತಿಯನ್ನೂ ಮುಡಿಗೇರಿಸಿಕೊಂಡು ಸ್ಟಾರ್ ಸಿಂಗರ್ ಪಟ್ಟವನ್ನಲಂಕರಿಸಿದ. ಹಲವಾರು ರಿಯಾಲಿಟಿ ಶೋಗಳಲ್ಲಿ ತೀರ್ಪುಗಾರನಾಗಿ ಸುಮಾರು 25 ಚಿತ್ರಗಳಿಗೆ ಸಂಗೀತ ನಿರ್ದೇಶಕನಾಗಿ ಯಶಸ್ವಿಯಾದ ಶಾಸ್ತ್ರಿ ತನ್ನ ಆರೋಗ್ಯದ ಕಡೆಗೆ ಕೊಡಬೇಕಾದ ಗಮನ ಹರಿಸಲಿಲ್ಲವೆಂದು ಕಾಣುತ್ತದೆ. ತನ್ನ ಯಶಸ್ಸಿನಿಂದ ಊದಿಕೊಂಡಿದ್ದ ದೇಹ, ಗೊತ್ತಿಲ್ಲದ ಕಾರಣಕ್ಕೆ ಕೃಶವಾಗತೊಡಗಿದ್ದು ಈತನ ಮನೆಯವರ ಗಮನಕ್ಕೆ ಬಾರದೇಹೋಯಿತು.

ನಿರಂತರ ಕೆಲಸಗಳ ದಣಿವಿನಿಂದ ಈ ರೀತಿ ಸಣ್ಣಾಗುತ್ತಿರಬೇಕೆಂದು, ತೆಳ್ಳಗಿರುವುದು ಒಳ್ಳೆಯದೇ ಎಂದೂ ಭಾವಿಸಿದ ಮನೆಯವರು ಈತನ ಆರೋಗ್ಯ ತಪಾಸಣೆಮಾಡಿಸದೇಹೋದರು.

ವಿಧಿಗೆ ಈತನ ಉನ್ನತಿ ಸಹಿಸಲಾರದಾಯಿತೋ ಏನೋ. ಈಚೆಗೆ ನಾಲ್ಕು ತಿಂಗಳ ಕೆಳಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಈತನಿಗೆ ಕರುಳು ಕ್ಯಾನ್ಸರ್ ಇರುವುದು ಸಾಬೀತಾಯಿತು. ಈ ರೋಗವೇ ಹಾಗೆ. ಉಲ್ಬಣಗೊಳ್ಳುವವರೆಗೂ ಗೋಚರಿಸುವುದೇ ಇಲ್ಲವಂತೆ. ಗೋಚರಿಸುವವೇಳೆಗೆ ಚಿಕಿತ್ಸೆಯ ಹಂತ ಮೀರಿರುತ್ತದೆಯಂತೆ, ಎಂಬುದು ಬಹುಪಾಲು ರೋಗಿಗಳ ಸಂಬಂಧೀಕರ ಅನ್ನಿಸಿಕೆ. ನಮ್ಮ ಯುವಗಾಯಕ, ಸಂಗೀತ ನಿರ್ದೇಶಕ ಶಾಸ್ತ್ರಿ ಈ ಭಯಾನಕ ಕಾಯಿಲೆಗೆ ಶಿಕಾರಿಯಾಗಿದ್ದುದು ಒಂದು ದುರಂತವೇ ಸರಿ. ಚಿಕಿತ್ಸೆ ಇಲ್ಲದ, ಮಾಡಿದರೂ ಶೇ.100 ರ ಗುಣವಾಗುವ ಬಗೆಗೆ ಖಾತ್ರಿದೊರೆಯದ ಪರಿಸ್ಥಿತಿಯಲ್ಲಿ ಇರುವ ಒಂದೇ ದಾರಿ 'ಸಾವು'. ಇರುವವರೆವಿಗೂ ಪ್ರತಿಕ್ಷಣ ಸಾವನ್ನು ಎದುರುನೋಡುತ್ತಾ ಬದುಕುದೂಡುವ ಸಂಕಟ ಎಂತಹುದೆಂಬುದು ಅನುಭವಿಸುವವರಿಗಷ್ಟೇ ತಿಳಿಯುವುದು.

ಬಹು ಅಂಗಾಂಗ ವೈಫಲ್ಯದ ಪರಿಣಾಮವಾಗಿ ದೇಹದ ತುಂಬ ನೀರು ತುಂಬಿಕೊಂಡು ಓಡಾಡುವುದು, ಊಟಮಾಡುವುದು, ಉಸಿರಾಡುವುದು ಎಲ್ಲ ಕ್ರಿಯೆಗಳ ಮೇಲೆ ತನ್ನ ಪರಿಣಾಮ ತೋರತೊಡಗಿದಾಗ ಆ ಮನುಷ್ಯನ ಮನದಲ್ಲಾಗುವ ತಲ್ಲಣ ನೋವು ದುಃಖ ಹತಾಶೆ ಬಣ್ಣಿಸಲು ಹೇಗೆ ಸಾಧ್ಯ? ನಿಧಾನವಾಗಿ ತನ್ನನ್ನೇ ಕಬಳಿಸುತ್ತಿರುವ ವಿಧಿಯನ್ನು ಎದುರಿಸಲು ಎಂತಹ ಮಾನಸಿಕ ಸಿದ್ಧತೆ ಮಾಡಿಕೊಳ್ಳಬೇಕಾಗುವುದು? ಕಣ್ಣಮುಂದೆ ಸಾವು ಕುಣಿಯುತ್ತಿರುವಾಗ ತನ್ನನ್ನು ನಂಬಿದವರನ್ನು ಬಿಟ್ಟುಹೋಗಬೇಕೆಂಬ ಸಂಕಟ, ಅವರ ಮುಂದಿನ ಭವಿಷ್ಯಕ್ಕಾಗಿ ಮಾಡಿರುವ ಮಾಡಬೇಕೆಂದಿದ್ದ ಕಾರ್ಯಗಳು ಎಷ್ಟರಮಟ್ಟಿಗೆ ಈಡೇರಿವೆ ಎಂಬ ಬಗೆಗೆ ಚಿಂತೆ ಎಲ್ಲ ಸೇರಿ ಮನುಷ್ಯನನ್ನು ಇನ್ನಷ್ಟು ಕುಗ್ಗಿಸಿಬಿಡುತ್ತದೆಯಲ್ಲವೇ? ಅಸಹಾಯಕತೆ, ದುಃಖ, ಇವು ಆತನಲ್ಲಿ ಕ್ರೋಧದ ರೂಪದಲ್ಲಿ ವ್ಯಕ್ತವಾಗುವುದು ಸಹಜ. ಯಾರನ್ನೂ ಭೇಟಿಯಾಗಲು, ಮಾತನಾಡಿಸಲೂ ಆತ ಇಷ್ಟಪಡದೆ ಏಕಾಂಗಿಯಾಗಿ ತನ್ನ ನೋವನ್ನು ಅನುಭವಿಸಲು ನಿರ್ಧರಿಸಿಬಿಡುತ್ತಾನೆ. ಈತನಿಗೆ ಯಾರೂ ಬೇಕು ಎನ್ನಿಸುವುದಿಲ್ಲ. ಹಾಗಾಗಿ ಈತ ಯಾರೊಂದಿಗೂ ಬೆರೆತು ಮಾತನಾಡಿಸಲು ಆಸಕ್ತಿ ತೋರುವುದಿಲ್ಲ. ಇದರ ಜೊತೆಗೆ ಅಂತರ್ಯದಲ್ಲಿ ಆಗುತ್ತಿರುವ ನೋವು ಈತನನ್ನು ಇತರರೊಂದಿಗೆ ಇರುವುದಕ್ಕೂ ಬಿಡುವುದಿಲ್ಲ.

ಈತನನ್ನು ಬದುಕಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ಅರಿತ ಮನೆಯವರ ಸಂಕಟದಸ್ಥಿತಿ ಕಲ್ಪನೆಗೂ ಮೀರಿದ್ದು. ಹಾಗೆಂದು ಏನೂ ಮಾಡದೇ ಬಿಟ್ಟುಬಿಡಲು ಸಾಧ್ಯವೇ? ಕೊಡಿಸುವ ಚಿಕಿತ್ಸೆಗಳೆಲ್ಲವನ್ನೂ ಕೊಡಿಸಲೇಬೇಕು, ಹೇಗಾದರೂ, ಯಾವ ಪದ್ಧತಿಯಿಂದ ಆದರೂ ಉಳಿಸಿಕೊಳ್ಳಲು ಸಾಧ್ಯವೇ ಎಂದು ಪ್ರಯತ್ನಪಡುವುದು ಸರ್ವೇಸಾಮಾನ್ಯ ಒಂದು ಕಡೆ ಮನೆಯವರು ಉಳಿಸಿಕೊಳ್ಳಲು ಮಾಡುವ ಪ್ರಯತ್ನವಾದರೆ, ಆ ನೋವುಗಳನ್ನು ಸಹಿಸಿಕೊಳ್ಳಲಾಗದ ರೋಗಿ ಯಾವತ್ತಪ್ಪಾ ಈ ಎಲ್ಲ ನೋವಿಗೂ ಕೊನೆ ಎಂಬ ಮನೋಭಾವ! ಈ ವಿಪರೀತ ಪರಿಸ್ಥಿತಿಗಳ ನಡುವೆ ದೈವದ ಬಗೆಗೆ ತಾತ್ಸಾರ ಬರುವುದು ಸಹಜವಲ್ಲವೇ? ಒಂದು ಕಡೆ ಎಲ್ಲ ದುರಾಚಾರಗಳನ್ನೂ ಮೈಗೂಡಿಸಿಕೊಂಡು ನಿರಾತಂಕವಾಗಿ ಬದುಕುಸಾಗಿಸುತ್ತಿರುವವರು ಹಲವರು, ಎಲ್ಲ ಸದಾಚಾರಗಳನ್ನೂ ಅಳವಡಿಸಿಕೊಂಡು ಬದುಕಿನ ಯಾವ ಸುಖವನ್ನೂ ಅನುಭವಿಸದೇ ಎಲ್ಲ ಕಷ್ಟಗಳಿಗೆ ಈಡಾಗಿರುವವರು ಕೆಲವರು; ಇವರುಗಳನ್ನು ನೋಡಿದಾಗ 'ದೈವ ಕುರುಡಾಗಿದೆ' ಅನ್ನಿಸುವುದು ಸಹಜವಲ್ಲವೇ?

7-9-2017

* * * * * *

## ಲೇಖನ – 45

# ವೃತ್ತಿ ಬಾಂಧವರು

ಏಯ್ ಆಟೋ ಕಮಾನ್, ಏಯ್ ಕಸ ಬಾ ತೆಗೆದುಕೋ, ಏಯ್ ತರಕಾರಿ, ಸೊಪ್ಪು ತಗೊಂಬಾ ಈ ರೀತಿ ಕರೆಗಳು ಸಾಮಾನ್ಯವಾಗಿ ಕೇಳಿಬರುತ್ತವೆ. ಅಂದರೆ ಯಾವುದೋ ವೃತ್ತಿ ಮಾಡುತ್ತಿರುವವರನ್ನು ನಾವು ಗುರುತಿಸುವ ಬಗೆ ಇದು. ಆ ವ್ಯಕ್ತಿಗಳಿಗೆ, ಅವರ ವೃತ್ತಿಗೆ ನಾವು ಕೊಡುವ ಗೌರವ ಇದೇ ಏನು? ಈ ವೃತ್ತಿಗಳಲ್ಲಿ ತೊಡಗಿರುವವರು ಎಲ್ಲಾ ಅವಿದ್ಯಾವಂತರೇ ಇರುವುದಿಲ್ಲ ಅಲ್ಲವೇ? ಕೆಲವರು ಡಬ್ಬಲ್ ಗ್ರಾಜ್ಯುಯೇಟುಗಳೂ ಅನಿವಾರ್ಯ ಸಂದರ್ಭಗಳಲ್ಲಿ ಈ ವೃತ್ತಿ ಹಿಡಿದಿರಲೂಬಹುದು. ಅಂತಹವರನ್ನು, ಗೌರವಯುತವಾಗಿ ಕಾಣಬೇಕಾದುದು ನಾಗರೀಕರೆಂದು ಕರೆದುಕೊಳ್ಳುವ ನಮ್ಮ ಹೊಣೆಗಾರಿಕೆಯಲ್ಲವೇ? ಹಾಗಿದ್ದಲ್ಲಿ ಇಂತಹವರನ್ನು, ಯಾವ ರೀತಿಯಲ್ಲಿ ಸಂಬೋಧಿಸಬಹುದು, ಯೋಚಿಸಬೇಕಾದ ವಿಚಾರವೇ! ಮೊದಲಿಗೆ ಆಟೋದವರನ್ನು ಹೊರತುಪಡಿಸಿ ಉಳಿದ ಮನೆಗೆಲಸದವರು, ತರಕಾರಿ ಸೊಪ್ಪು ಮಾರುವವರು, ಕಸ ಸಾಗಿಸುವವರು, ಅಂಚೆ ಬಟವಾಡೆ ಮಾಡುವವರು, ಪ್ರತಿನಿತ್ಯ ನಮ್ಮೊಂದಿಗೆ ವ್ಯವಹರಿಸುವವರೇ ಆಗಿರುವುದರಿಂದ ಅವರ ಹೆಸರನ್ನು ಕೇಳಿತಿಳಿದುಕೊಳ್ಳುವುದು ಕಷ್ಟವೇನಲ್ಲ. ಯಾವುದೇ ವ್ಯಕ್ತಿ ಅತಿಯಾಗಿ ಪ್ರೀತಿಸುವುದು ತನ್ನನ್ನೇ, ತನ್ನ ಹೆಸರನ್ನೇ ಎಂದು ಮಾನವ ಸಂಬಂಧಗಳ ಮೊದಲ ಪಾಠ ತಿಳಿಸುತ್ತದೆ. ನಾವೂ ಸಹಾ ಆ

ದೈನಂದಿನ ವ್ಯಕ್ತಿಗಳನ್ನು ನಮ್ಮ ಮಿತ್ರರಂತೆ ಪರಿಗಣಿಸಿ, ಅವರವರ ಹೆಸರಿನಿಂದಲೇ ಅವರನ್ನು ಸಂಬೋಧಿಸಿದಾಗ ಅವರಿಗಾಗುವ ಆನಂದವನ್ನು ಊಹಿಸಿಕೊಳ್ಳಬಲ್ಲಿರಾ? ಇನ್ನು ಆಟೋ ಟ್ಯಾಕ್ಸಿ ಮುಂತಾದವರನ್ನು 'ಆಟೋ' ಟ್ಯಾಕ್ಸಿ ಎಂದು ಕೂಗುವಬದಲು, ಕೆಲವು ನಿಮಿಷ ಕಾದರೆ, ಒಬ್ಬರಲ್ಲ ಒಬ್ಬರು ನಮ್ಮ ದಾರಿಯಲ್ಲೇ ಬರುವ ಸಾಧ್ಯತೆಯಿರುತ್ತದೆ. ಕೈ ಅಡ್ಡ ಹಿಡಿದಾಗ ಅವರಿಗೂ ಇವರ ಅವಶ್ಯಕತೆ ತಿಳಿಯುತ್ತದೆ. ಅವರೇ ನಿಲ್ಲಿಸಿ ನೀವು ಹೋಗಬೇಕಾಗಿರುವ ಸ್ಥಳ ತಿಳಿದು, ತಮಗೆ ಅನುಕೂಲಕರವಾಗಿದ್ದಲ್ಲಿ ನಿಮ್ಮನ್ನು ಕರೆದುಕೊಂಡು ಹೋಗುತ್ತಾರೆ. ಎಲ್ಲದರಲ್ಲೂ ನಾಗರೀಕತೆ ತೋರಲು ಬಯಸುವ ನಾವುಗಳು ಈ ವಿಚಾರದಲ್ಲೂ ನಾಗರೀಕತೆ ಬೆಳೆಸಿಕೊಳ್ಳುವುದು ಒಳ್ಳೆಯ ಬೆಳವಣಿಗೆ ಎನಿಸುತ್ತಿದೆ. ನಿಮಗೇನನ್ನಿಸುತ್ತಿದೆ?

2-4-2017

* * * * * *

ಲೇಖನ – 46

## ಬಳಗದ ನಂಟು – ನಾಟಕದ ಅಂಟು

ಕೆಲಸಕ್ಕೆ ಸೇರಿ ಒಂದು ಹತ್ತು ವರ್ಷಗಳಾಗುವವೇಳೆಗೆ ಕಾಲೇಜಿನ ಅಧ್ಯಾಪಕರ ಸಂಖ್ಯೆ ಸುಮಾರು ಇಪ್ಪತ್ತಾಗಿತ್ತು. ಅವರಲ್ಲಿ ಕೆಲವರಿಗೆ ಹೊಸ ಅಲೆಯ ನಾಟಕನೋಡುವ ಹುಚ್ಚೂಇತ್ತು. ಸಾಯಂಕಾಲ ಬೆಂಗಳೂರಿನ ರವೀಂದ್ರಕಲಾಕ್ಷೇತ್ರದಲ್ಲಿ ನಾಟಕನೋಡಲುಹೋಗಿ, ರಾತ್ರಿ ಬೆಂಗಳೂರಿನಿಂದ ಹೊರಡುವ ಪ್ಯಾಸೆಂಜರ್ ರೈಲಿನಲ್ಲಿ ವಾಪಸುಬಂದದ್ದೂ ಆಗಿದೆ. ಶಂಕರನಾಗ್ ನಟಿಸಿ ನಿರ್ದೇಶಿಸಿದ 'ಅಂಜು ಮಲ್ಲಿಗೆ', ಸುಂದರಕೃಷ್ಣ ಅರಸ್ ಅಭಿನಯಿಸಿದ್ದ 'ಹುತ್ತವ ಬಡಿದರೆ', ಸುಂದರ ರಾಜ್,ವೈಶಾಲಿ ಕಾಸರವಳ್ಳಿ ಅಭಿನಯದ 'ಹಯವದನ', ವೈಜಯಂತಿಕಾಶಿ, ವಿಜಯಕಾಶಿ, ಸುಂದರ ರಾಜ್ ಅಭಿನಯದ ಸಂಗ್ಯಾ–ಬಾಳ್ಯಾ, ಉಮಾಶ್ರೀ ಅಭಿನಯದ 'ಒಡಲಾಳ', ಅಶೋಕ್ ಬಾದರದಿನ್ನಿ ನಿರ್ದೇಶನದ 'ಸಿಂಗಾರೆವ್ವ ಮತ್ತು ಅರಮನೆ', ನಾವು ನೋಡಿದ ನೆನಪಿನಲ್ಲಿ ಉಳಿದಿರುವ ಕೆಲವು ನಾಟಕಗಳು. ಆಗೆಲ್ಲಾ, ನಾವು ನೋಡುವ ನಾಟಕಗಳನ್ನು ನಮ್ಮ ಮಂಡ್ಯ ಮಂದಿಗೂ ಯಾಕೆ ತೋರಿಸಬಾರದು ಅನ್ನುವ ಯೋಚನೆ ನಮ್ಮ ತಲೆಗೆ ಹತ್ತಿದ್ದೂ ಇದೆ. ಇಂತಹ ಆಲೋಚನೆಯ ಫಲವೇ 1979–80 ರಲ್ಲಿ ರೂಪುಗೊಂಡ 'ಗೆಳೆಯರ ಬಳಗ' ಕಲಾತಂಡ. ನಾನು, ಲೈಬ್ರರಿ ಶಿವರಾಮು, ವೀರಪ್ಪ, ಜಯಪ್ರಕಾಶ ಗೌಡ, ಚಂದ್ರಶೇಖರ ಕೆ.ಎಸ್, ಶಿವಣ್ಣ, ಶಿವಾನಂದ, ಮುರಳೀಧರ, ಎಂಜಿನಿಯರಿಂಗ್ ಕಾಲೇಜಿನ ಪದ್ಮನಾಭ, ಚಂದ್ರಶೇಖರ, ಸುರೇಶಚಂದ್ರ, ರವಿಶಂಕರ್

ಮುಂತಾದವರು ಒಂದೆಡೆ ಸೇರಿ ಇದನ್ನು ಯಾವ ರೀತಿ ಕಾರ್ಯರೂಪಕ್ಕೆ ತರುವುದು ಎಂಬ ಬಗ್ಗೆ ತಲೆ ಕೆಡಿಸಿಕೊಂಡೆವು. ಕೊನೆಗೆ ಬೆಂಗಳೂರಿನ ತಂಡಗಳನ್ನು ಮಂಡ್ಯಕ್ಕೆ ಕರೆತಂದು ನಾಟಕಗಳನ್ನು ಏರ್ಪಡಿಸಿದೆವು. ಮೊದಲ ನಾಟಕ 'ಕುರಿ' ಪ್ರದರ್ಶನವಾದುದು ಇದ್ದ ಒಂದೇ ರಂಗಮಂದಿರ ಲಕ್ಷ್ಮೀಜನಾರ್ಧನ ರಂಗಮಂದಿರದಲ್ಲಿ. ಆಯಿತು ಪ್ರದರ್ಶನ ಯಶಸ್ವೀ, ಅದುವರೆಗೆ ಮಂಡ್ಯಜನತೆಗೆ ಪರಿಚಯವಾಗಿದ್ದುದು ಹಿರಣ್ಣಯ್ಯನವರ ಲಂಚಾವತಾರ, ಭ್ರಷ್ಟಾಚಾರ, ದೇವದಾಸಿ, ಪಶ್ಚಾತ್ತಾಪ ಮುಂತಾದ ನಾಟಕಗಳು, ಶಂಕರಗೌಡರು ನಟಿಸಿ ನಿರ್ದೇಶಿಸುತ್ತಿದ್ದ 'ಪಾದುಕಾ ಕಿರೀಟ' ಮುಂತಾದ ಪೌರಾಣಿಕ ನಾಟಕಗಳು, ನಂತರದ ದಿನಗಳಲ್ಲಿ ಗುಬ್ಬಿವೀರಣ್ಣನವರ ಮೊಮ್ಮಗ ಕೃಷ್ಣ ಅಲಿಯಾಸ್ ಇಂದಿನ ಹಿರಿಯ ನಟಿ 'ಶೃತಿ' ಯ ಅಪ್ಪ ಆಡುತ್ತಿದ್ದ ಪೋಲಿಜೋಕುಗಳ ನಾಟಕಗಳು. 'ಮುದುಕನ ಮದುವೆ' 'ವರನೋಡಿ ಹೆಣ್ಣುಕೊಡು' ಕೆಲವು ಪ್ರಖ್ಯಾತ ನಾಟಕಗಳು. ಚಿಂದೋಡಿ ಲೀಲಾ ರವರ 'ಪೋಲೀಸನ ಮಗಳು' ಮುಂತಾದ ಕಂಪನಿ ನಾಟಕಗಳೂ ಆಗಾಗ ನಡೆಯುತ್ತಿದ್ದವು. ಕೃಷ್ಣನಂತೂ ಈ ವರನೋಡಿ ಹೆಣ್ಣುಕೊಡು ನಾಟಕ ಕಲೆಕ್ಷನ್ನಿನಿಂದ ನಮ್ಮೂರಿನ ಡಾಕ್ಟರೊಬ್ಬರ ಕಾರನ್ನೇ ಕೊಂಡು ಹೋದುದು ನೆನಪಿದೆ. ಮಂಡ್ಯದಲ್ಲಿ ಹೊಸ ಪ್ರೇಕ್ಷಕ ಬಳಗವನ್ನು ಕಟ್ಟಿದ ಹಿರಿಮೆ ನಮ್ಮ ಗೆಳೆಯರ ಬಳಗದವರದು ಎಂದು ಹೇಳಿಕೊಳ್ಳಲಿಕ್ಕೆ ಹೆಮ್ಮೆ ಆಗುತ್ತದೆ. ನಾವು ಕರೆಸಿ ಆಡಿಸಿದ ನಾಟಕಗಳೆಲ್ಲವುಗಳಿಗೂ ಕಿಕ್ಕಿರಿದ ಪ್ರೇಕ್ಷಕ ಸಮೂಹ ಇರುತ್ತಿತ್ತು. ಕುರಿ ನಂತರ ಒಟ್ಟಿಗೆ ಎರಡು ನಾಟಕಗಳು 'ಮಾರೀಚನ ಬಂಧುಗಳು' ಮತ್ತು 'ಕತ್ತಲ ದಾರಿದೂರ'; ನಂತರದ ದಿನಗಳಲ್ಲಿ ನಮ್ಮ ಕಾಲೇಜಿನ ಅಂಗಳದವೇದಿಕೆಯಲ್ಲಿ ನಡೆಸಿದ ನಾಟಕೋತ್ಸವ. 'ಕದಡಿದನೀರು' 'ಸಂಗ್ಯಾ-ಬಾಳ್ಯಾ' ಮುಂತಾದ ನಾಟಕಗಳು. ವರ್ಷಕೊಮ್ಮೆ ನೀನಾಸಂ ತಂಡದವರ ನಾಟಕಗಳು. ಕೆಲವು ವರ್ಷಗಳು ಹೀಗೆ ಬೇರೆ ಬೇರೆ ಬೆಂಗಳೂರಿನ ಹವ್ಯಾಸಿ ತಂಡಗಳಿಂದ ನಾಟಕಗಳನ್ನು ಆಡಿಸಿ ಪ್ರೇಕ್ಷಕರನ್ನು ತಣಿಸಿದ ಮೇಲೆ, ಅವರುಗಳಿಗೆ ಕೊಡುತ್ತಿದ್ದ ಸಂಭಾವನೆ ಮತ್ತು ಇತರ ಖರ್ಚುಗಳನ್ನು ಉಳಿಸುವ ಸಲುವಾಗಿ ನಾವೇ ಯಾಕೆ ನಾಟಕಗಳನ್ನು ಕಲಿತು ಆಡಬಾರದು ಎನಿಸಿದುದರ ಫಲ ನಮ್ಮ ಹಾಗೂ ನೆರೆಯ ಕಾಲೇಜು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರನ್ನು ಕೂಡಿಸಿಕೊಂಡು ಮಂಡ್ಯ ಇತಿಹಾಸದಲ್ಲಿಯೇ ಮೊತ್ತ ಮೊದಲ ಸಲ ನಡೆಸಿದ ಹತ್ತು ದಿನಗಳ ನಾಟಕ ಕಾರ್ಯಾಗಾರ. ಇದರ ನಿರ್ದೇಶಕರು ಅಂದಿನ ಪ್ರಖ್ಯಾತ ರಂಗ ನಿರ್ದೇಶಕ, ದೆಹಲಿ ನಾಟಕ ಶಾಲೆಯ ಪದವೀಧರ ಅಶೋಕ ಬಾದರದಿನ್ನಿ. ಒಂದು ಆಹ್ವಾನಪತ್ರಿಕೆಯಲ್ಲಿ ಅವರ ಹೆಸರು ಅಶೋಕ ಬಾರದದಿನ್ನಿ

ಎಂದು ಅಚ್ಚಾಗಿದ್ದುದು ನೆನಪಿಗೆ ಬರುತ್ತಿದೆ. ಭಾಗವಹಿಸಿದವರೆಲ್ಲರಿಗೂ ಒಂದು ವಿನೂತನ ಅದ್ಭುತ ಅನುಭವ. ಇಂದು ಚಲನಚಿತ್ರ ಜಗತ್ತಿನಲ್ಲಿ ಮಿಂಚುತ್ತಿರುವ ಹಲವಾರು ಪ್ರತಿಭೆಗಳು ಅದರಲ್ಲೂ ಮಂಡ್ಯ ರಮೇಶ್, ಸಂಗೀತ ನಿರ್ದೇಶಕ, ಗಾಯಕ ಲಕ್ಷ್ಮೀನರಸಿಂಹ ಶಾಸ್ತ್ರಿ, ಯಾಚೇನ ಹಳ್ಳಿ ಅಶ್ವಥ್ ಈ ಕಾರ್ಯಾಗಾರದ ಕೊಡುಗೆ ಎನ್ನಬಹುದು. ಈ ಕಾರ್ಯಾಗಾರದಲ್ಲಿ ನಮಗೆ ರಂಗಭೂಮಿಯ ಎ.ಬಿ.ಸಿ ಯಿಂದ ಆರಂಭಿಸಿ, ಧ್ವನಿ ವ್ಯತ್ಯಾಸ, ಯೋಗ, ರಂಗಪರಿಕರಗಳು, ನಟನೆ, ಲೈಟಿಂಗ್ ಮುಂತಾದ ಸಕಲ ವಿಷಯಗಳಲ್ಲಿ ತರಬೇತಿ ನೀಡಲಾಯಿತು. ಕಾರ್ಯಾಗಾರದ ಪ್ರಯೋಗಗಳಾಗಿ ಪಿ.ಲಂಕೇಶರ 'ಸಂಕ್ರಾಂತಿ' ಮತ್ತು ಎ.ಎಸ್. ಮೂರ್ತಿ ಯವರ 'ದನಿಯಿಲ್ಲದವರು' ನಾಟಕಗಳನ್ನು ಅಭ್ಯಸಿಸಲಾಯಿತು. ಇವುಗಳಲ್ಲಿ ಸಂಕ್ರಾಂತಿ ಗಂಭೀರ ನಾಟಕ. ದಲಿತರ ಬದುಕನ್ನು ಹಸನುಗೊಳಿಸಲು ಬಸವಣ್ಣ ಪಟ್ಟಪಾಡು, ಅದಕ್ಕೆ ಎದುರಾದ ತೊಡಕುಗಳು ಈ ನಾಟಕದ ಕಥಾವಸ್ತು, ಆದರೆ ನಾಟಕ ಭವ್ಯವಾಗಿ ತೋರುತ್ತಿತ್ತು, ನಟನೆಮಾಡುತ್ತಿದ್ದ ನಮಗೇ ಇದರ ಸಂಕೀರ್ಣತೆ ಅರ್ಥವಾಗಿರಲಿಲ್ಲ. ಆದರೆ 'ದನಿಯಿಲ್ಲದವರು' ಬಹಳ ಸರಳನಾಟಕ. ಮನರಂಜನೆಯೇ ಪ್ರಧಾನ ಉದ್ದೇಶ. ಪ್ರೇಕ್ಷಕರನ್ನು ನಗಿಸಿ ಹುಚ್ಚೆಬ್ಬಿಸುತ್ತಿತ್ತು. ದನಿಯಿಲ್ಲದವರು ನಾಟಕ ಕೇವಲ ಮನರಂಜನೆಗೆಂದೇ ಬರೆದ ನಾಟಕವಾದುದರಿಂದ ಪ್ರೇಕ್ಷಕರಲ್ಲಿ ನಗೆಉಕ್ಕಿಸಲೆಂದೇ ರಚನಕಾರರೇ ಕೆಲವು ವ್ಯಾಕರಣ ತಪ್ಪುಗಳನ್ನು ಮಾಡಿದ್ದರು. ಅದರ ಜೊತೆಗೆ ನಮ್ಮ ಕಲಾವಿದರು ಕೆಲವು ತಪ್ಪುಗಳನ್ನು ತಮಗೇ ಗೊತ್ತಿಲ್ಲದೆ ಜೋಡಿಸಿ ನಗುವನ್ನು ಇಮ್ಮಡಿಗೊಳಿಸುತ್ತಿದ್ದರು. ಕುರಿದೊಡ್ಡಿ ಕುರುಕ್ಷೇತ್ರ ಹಳ್ಳಿಯೊಂದರಲ್ಲಿ 'ಕುರುಕ್ಷೇತ್ರ ನಾಟಕ' ಕಲಿಯಬೇಕೆಂಬ ಹಂಬಲದಿಂದ ಪಟೇಲ, ಛೇರ್ಮನ್ ಸೇರಿ ನಡೆಸುವ ನಾಟಕ ಪ್ರಾಕ್ಟೀಸ್. ನಾಟಕದಲ್ಲಿನ ಪಾತ್ರ ಹಂಚಿಕೆ ಅವರವರ ಅಂತಸ್ತಿಗೆ ತಕ್ಕಂತೆ ಇರಬೇಕೆಂಬುದು ಅವರ ಹಠ; ಅದರಲ್ಲೂ ಹೆಣ್ಣುಪಾತ್ರದೊಂದಿಗೆ ಸರಸವಾಡುವ ಪಾತ್ರಕ್ಕೆ ಇವರ ಹೋರಾಟ. ಇನ್ನು ಅವರ ಬಾಯಿಂದ ಬರುವ ಉಚ್ಚಾರಣೆಯನ್ನು ಸರಿಪಡಿಸಿ, ಸರಿಯಾದ ಡಯಲಾಗ್ ಹೊರಡಿಸುವ ಸಾಹಸ ಮಾಸ್ಟರ್‌ನದು. ಈ ಮಾಸ್ಟರ್ ಪಾತ್ರಧಾರಿಯೇ ತಪ್ಪು ಡಯಲಾಗ್ ಹೇಳಿಕೊಟ್ಟರೆ! ದ್ರೌಪತಿ ಎನ್ನುವುದನ್ನು ಕಲಾವಿದ ದೌಪತ್ರಿ ಅನ್ನುತ್ತಿದ್ದ; ಅದನ್ನು ಸರಿಪಡಿಸುವ ಮಾಸ್ಟರ್ ಅದು ದೌಪತ್ರಿ ಅಲ್ಲ ಕಣೋ, ದ್ರೌಪ್ರತಿ ಅಂದಾಗ ಜನ ನಗದೇ ಇನ್ನೇನು ಮಾಡಿಯಾರು? ಅತುಲ್ ತಿವಾರಿ ನಿರ್ದೇಶಿಸಿದ ಜೂಲಿಯಸ್ ಸೀಸರ್ ನಾಟಕದ ಯುದ್ಧಭೂಮಿ ದೃಶ್ಯದಲ್ಲಿ ಕಾದಾಟ ನಡೆಸಿ ಸಾಯುವಾಗ ಕೆಳಗೆ ಬಿದ್ದವರು

ಬಟ್ಟೆ ಸರಿಪಡಿಸಿಕೊಂಡು ಸಾಯುವುದು ಜನರಲ್ಲಿ ನಗೆ ಉಕ್ಕಿಸುವುದಿಲ್ಲವೇ? ನಮ್ಮ ನಿರ್ದೇಶಕರು ಅಲ್ರಯ್ಯಾ, ಸಾಯುವವನಿಗೆ ಮಾನದ ಅರಿವು ಎಲ್ಲಿರುತ್ತದೆ. ಪರದೆ ಬೀಳುವವರೆಗಾದರೂ ಹೇಗೆ ಬಿದ್ದಿರೋ ಹಾಗೆ ಸಾಯಿರಯ್ಯಾ ಅಂತ ಗದರಿದ್ದು ಮನದಲ್ಲಿ ಹಸಿರಾಗಿದೆ. ಈ ನಾಟಕಗಳಿಂದ ಇಂಗ್ಲೀಷ್ ಅಧ್ಯಾಪಕ ಮೋಹನರಾಜ್, ವಿದ್ಯಾರ್ಥಿಗಳಾದ ರವಿಶಂಕರ್, ರಾಮಕೃಷ್ಣ, ಬಾಲಕೃಷ್ಣ, ಲಿಂಗಣ್ಣ ಬಂದುಕಾರ್, ಮಂಡ್ಯ ರಮೇಶ್ ಹೆಸರು ಮಾಡಿದರು. ಪ್ರದರ್ಶಿಸಿದ ನಾಟಕಗಳಂತೂ ಹಿಟ್. ನಮಗೆಲ್ಲರಿಗೂ ಖುಷಿಯೋ ಖುಷಿ. ನಾಲ್ಕಾರು ಭಾರಿ ಪ್ರದರ್ಶಿಸಿದಾಗಲೂ ಹೌಸ್‌ಫುಲ್; ನಿಜಸ್ಥಿತಿ ಗೊತ್ತಿದ್ದುದು ಇಬ್ಬರಿಗೆ ಮಾತ್ರ. ಲೈಬ್ರರಿ ಶಿವರಾಮು ಮತ್ತು ಜಯಪ್ರಕಾಶಗೌಡ. ಅವನನ್ನು ಸಲಿಗೆಯಿಂದ ಜಯಪ್ರಕಾಶ ಅಂತ ಕರೆದರೆ 'ಗೌಡ ಸೇರಿಸು' ಅನ್ನುತ್ತಿದ್ದ. ಥಿಯೇಟರ್ ಹೌಸ್‌ಫುಲ್ ಆದರೂ ಕಲೆಕ್ಷನ್ ಕಡಿಮೆ. ಪ್ರಯೋಗ ಯಶಸ್ವಿ ಆದರೂ ಕೈ ಕಚ್ಚಿತ್ತು. ಇಸ್ಪೀಟು ಹುಚ್ಚಿದ್ದವರು ಸಾಮಾನ್ಯವಾಗಿ ಹೇಳುವಂತೆ, 'ಕಳಕೊಂಡತಾವೇ ಹುಡುಕಬೇಕು' ಅನ್ನುವಂತೆ ನಾಟಕದ ಖರ್ಚು ಎತ್ತಬೇಕೆಂದರೆ ಮತ್ತೆಮತ್ತೆ ಪ್ರದರ್ಶನ ಏರ್ಪಡಿಸಬೇಕು. ಇದು ಮಾಡದೇ ಅದು ಸಾಧ್ಯವಿಲ್ಲ. ನಮ್ಮ 'ಬಳಗ'ಎಡವಿದ್ದು ಇಲ್ಲಿಯೇ. ಅಂತೂ ಬೆಂಗಳೂರು, ಹುಣಸೂರು, ಅಂತ ಕೆಲವು ಪ್ರದರ್ಶನ ಕಂಡಿತು ಈ ಮೇಲಿನ ನಾಟಕಗಳು. ನನಗೂ ಸಣ್ಣಪುಟ್ಟ ಪಾತ್ರಗಳು ಸಿಕ್ಕಿತ್ತು ಈ ನಾಟಕಗಳ ಖರ್ಚುಲೆಕ್ಕ ಹಾಕುವ ಕೆಲಸ ಅರ್ಥಾತ್ ಖಜಾಂಚಿ ಕೆಲಸ ಮೊದಲು ವೀರಪ್ಪ ನಿರ್ವಹಿಸುತ್ತಿದ್ದು,ನಂತರ ಕಾಮರ್ಸ್ ಅಧ್ಯಾಪಕನಾದುದರಿಂದ ನನ್ನ ಹೆಗಲಿಗೆ ವರ್ಗಾಯಿಸಲ್ಪಟ್ಟಿತ್ತು. ಲೆಕ್ಕ ಮಾಡುತ್ತಿದ್ದೆ; ಕಲೆಕ್ಷನ್‌ಗಿಂತ ಖರ್ಚು ಹೆಚ್ಚಿರುತ್ತಿತ್ತು. ಆದರೂ ಅದಮ್ಯ ಉತ್ಸಾಹ. ಮುಂದೆ ಸರಿಹೋಗಬಹುದೆಂಬ ನಂಬಿಕೆ.ಮತ್ತೊಂದು ಪ್ರಯೋಗ 'ಕುರಿದೊಡ್ಡಿಕುರುಕ್ಷೇತ್ರ' ಅದರಲ್ಲಿ ನನಗೆ ಹಿರಿಯ ರಂಗಜ್ಜನ ಪಾತ್ರ. ಆ ಪಾತ್ರದ ಒಂದೆರಡು ಸಂಭಾಷಣೆಗಳು ನಮ್ಮ ಶಂಕರಗೌಡರ ಮಗ ಸಚ್ಚಿದಾನಂದನಿಗೆ ಬಲುಪ್ರಿಯವಾದವು. ನನ್ನನ್ನು ಎಲ್ಲೇ ನೋಡಲಿ 'ವಾಯ್ದೆ ನೀರು ಬಂದದೆ,ಗದ್ದೇಗೋಗಿ ನೀರ್ಕಟ್ ಓಗ್ರೋಲೇ'ಎಂದು ತಮಾಷೆ ಮಾಡುತ್ತಿದ್ದರು. ಇದರದೂ ಒಂದೆರಡು ಪ್ರದರ್ಶನ ಮಾತ್ರ. ಬೃಹತ್ ಬಜೆಟ್ ನಾಟಕ ಅತುಲ್‌ತಿವಾರಿ ನಿರ್ದೇಶನದ ಇಂಟಿಮೇಟ್ ಥಿಯೇಟರ್ ಟೈಪಿನ 'ಜೂಲಿಯಸ್ ಸೀಸರ್' ಅದರಲ್ಲಿ ಕ್ಯಾಸ್ಕ ಪಾತ್ರ ನನ್ನದು. ದ.ರಾ.ಬೇಂದ್ರೆಯವರ ಎರಡು ನಾಟಕಗಳ ಸಂಗಮ 'ಸಾಯೋಜಾತ್ರೆ'ಯಲ್ಲಿ ನನ್ನದು ಡಾಕ್ಟರ್ ಪಾತ್ರ. ಶೂದ್ರಕನ ಮೃಚ್ಛಕಟಿಕ ನಾಟಕದಲ್ಲಿ ಸೂತ್ರಧಾರ & ಕಳ್ಳ ಶರ್ವಿಳಕನ ಪಾತ್ರ. ಯಾವುದೇ ನಾಟಕ ಕಲಿಯಲು ಆರಂಭಿಸಿದ ದಿನದಿಂದ ಅದು ಪ್ರದರ್ಶನ ಕಾಣುವವರೆಗೆ

ನಮ್ಮೊಡನೆ ಪ್ರತಿದಿನ ಹಾಜರಿರುತ್ತಿದ್ದುದು ಸಚ್ಚಿದಾನಂದ. ಅವರೇ ಪ್ರಧಾನ ಪೋಷಕರು. ಅವರ ನಿಧನಾನಂತರ ಈಗ ಶಾಸಕ ಎಂ.ಶ್ರೀನಿವಾಸ್ ಆ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಬಿಜಾಪುರದ ಅಶೋಕ ಬಾದರದಿನ್ನಿ ಎಲ್ಲ ನಾಟಕಗಳ ನಿರ್ದೇಶಕರು, ಹಾಗಾಗಿ ಅವರು ಮಂಡ್ಯದ ಬಾದರದಿನ್ನಿಯೇ ಆಗಿಹೋಗಿದ್ದರು. ನಾಟಕಗಳನ್ನು ಆಡುವುದರ ಜೊತೆಗೆ ನಮಗೆ ಈ ಕಾರ್ಯಾಗಾರ ಕಲಿಸಿದ್ದು ಸಮಾನತೆ. ಅಧ್ಯಾಪಕ ವಿದ್ಯಾರ್ಥಿ ಎನ್ನುವ ಬೇಧವಿಲ್ಲದೆ ಎಲ್ಲರೂ ಒಟ್ಟಿಗೆ ಸೇರಿ ಸಿದ್ಧತೆಯಲ್ಲಿ ತೊಡಗುತ್ತಿದ್ದ ರೀತಿ. ಸ್ಟೇಜ್ ಕಟ್ಟುವುದು, ಪೋಸ್ಟರ್ ಹಚ್ಚುವುದು, ಸಾಮಾನು ಖರೀದಿಸುವುದು, ಬಣ್ಣ ಹಚ್ಚಿ,ನಟನೆಮಾಡುವುದು, ಹೆಣ್ಣುಮಕ್ಕಳನ್ನು ಕೆಲಸಲ ಮನೆಗಳಿಂದ ಕರೆತಂದು, ತಾಲೀಮು ಮುಗಿದನಂತರ ಅವರವರ ಮನೆಗಳಿಗೆ ಬಿಟ್ಟುಬರುವುದು, ಇದರಿಂದಾಗಿ ಮನೆಯವರಿಂದ ಉಗಿಸಿಕೊಳ್ಳುವುದು ಎಲ್ಲ ಕರಗತ. ಅದರಲ್ಲೂ ನಾನು ಆಗತಾನೆ ಮದುವೆ ಆಗಿದ್ದವನು. ನನ್ನ ಪರಿಸ್ಥಿತಿ ನಿಮಗೆ ಅರ್ಥವಾಗಿರಬೇಕಲ್ಲ; ಈವತ್ತಿಗೂ ನನ್ನ ಹೆಂಡತಿ ಈ ವಿಷಯವಾಗಿ ನನ್ನನ್ನು ದೂಷಿಸುತ್ತಾಳೆ.

ಈ ಬಾದರದಿನ್ನಿ ಬಂದಾಗ ನಾನು, ಶಿವರಾಮು, ಶಿವಾನಂದ ಮತ್ತು ಕೆಲವು ಆಪ್ತ ವಿದ್ಯಾರ್ಥಿಗಳಾದ ಮಂಡ್ಯ ರಮೇಶ, ರಾಮಕೃಷ್ಣ, ಬಾಲಕೃಷ್ಣ ಹೆಚ್ಚು ಸಮಯ ಅವರೊಡನೆ ಕಳೆಯುತ್ತಿದ್ದೆವು. ಅವರಿಗೆ ಪ್ರವಾಸಿ ಬಂಗಲೆಯಲ್ಲಿ ವಾಸ್ತವ್ಯ ಕಲ್ಪಿಸುತ್ತಿದ್ದೆವು. ಒಮ್ಮೆ ಕಲ್ಲಹಳ್ಳಿಯ ಮನೆಯೊಂದರಲ್ಲಿ ಉಳಿಸಿದ್ದೆವು.ಬೆಳಿಗ್ಗೆ ತಿಂಡಿಕಾಫಿಮುಗಿಸಿ ಒಂದು ಕಡೆಗೇ ವಾಲಿಕೊಂಡು ನಡೆದುಬರುತ್ತಿದ್ದ ಬಾದರದಿನ್ನಿಯವರನ್ನು 'ಏನು ತೊಂದರೆ ಆಗಿದೆ ಸಾರ್' ಅಂದರೆ, 'ಅಯ್ಯೋ ಈ ರೂಮಿನ ಬೀಗದ ಕೈಗೊಂಚಲು ಅಷ್ಟು ಭಾರವಾಗಿ, ನನ್ನ ದೇಹವನ್ನೆ ಚಾಸಿಬೆಂಡ್ ಆಗುವಂತೆಮಾಡಿದೆ' ಎಂದು ತಮಾಷೆ ಮಾಡುತ್ತಿದ್ದರು. ಬೆಳಿಗ್ಗೆ ಏಳರಿಂದ ಎಂಟು ಘಂಟೆವರೆಗೆ ಕಾರ್ಯಾಗಾರ; ಸಂಜೆ 6 ರ ನಂತರ ರಂಗತಾಲೀಮು. ಕಾಲೇಜಿನ ಕೊಠಡಿಯೊಂದನ್ನು ಬಳಸುತ್ತಿದ್ದೆವು. ನಿಗದಿತ ಸಮಯಕ್ಕೆ ಎಲ್ಲರೂ ಶಿಸ್ತಿನಿಂದ ಕೊಠಡಿಯಲ್ಲಿ ಹಾಜರಿರಬೇಕೆನ್ನುವುದು ಬಾದರದಿನ್ನಿಯವರ ನಿಯಮ. ತಡವಾಗಿ ಬರುವವರನ್ನು ಅವರು ಯಾರು,ಯಾವ ಹುದ್ದೆಯಲ್ಲಿದ್ದಾರೆ ಎನ್ನುವುದನ್ನೂ ಲೆಕ್ಕಿಸದೆ ವಾಚಾಮಗೋಚರವಾಗಿ ಬಯ್ಯುತ್ತಿದ್ದರು. ಈ ಬೈಗಳನ್ನು ತಪ್ಪಿಸಿಕೊಳ್ಳಲೆಂದು ಎಲ್ಲರೂ ಸರಿಯಾದ ಸಮಯಕ್ಕೆ ಹಾಜರಿರುತ್ತಿದ್ದರು. ಅವರು ಹುದ್ದೆ ನೋಡಿ ಪಾತ್ರನೀಡುತ್ತಿರಲಿಲ್ಲ ಬದಲಿಗೆ ಅವರಿಗೆ ಯಾವ ಪಾತ್ರಮಾಡುವ ಸಾಮರ್ಥ್ಯ ಇದೆಯೋ ಅವರಿಗೆ ಅಂತಹ

ಪಾತ್ರ ನೀಡುತ್ತಿದ್ದರು. ಹೀಗಾಗಿ ನನಗೆ ಸಣ್ಣಪುಟ್ಟ ಪಾತ್ರಗಳನ್ನು ನೀಡಿದರೆ, ನಮ್ಮ ವಿದ್ಯಾರ್ಥಿಗಳು ಹಲವರಿಗೆ ಮುಖ್ಯ ಪಾತ್ರ ನೀಡುತ್ತಿದ್ದರು. ಆದರೆ ಅವರು ಎಲ್ಲರನ್ನೂ ಪ್ರೀತಿಸುತ್ತಿದ್ದರು. ಸಂಕ್ರಾಂತಿಯಲ್ಲಿ ನನಗೆ ಮರದ ಪಾತ್ರ. ನನ್ನೊಬ್ಬನಿಗೇ ಅಲ್ಲ, ಹತ್ತಾರು ಜನಕ್ಕೆ ಅಂಥಹ ಪಾತ್ರ ನೀಡಿದ್ದರು. ದನಿಯಿಲ್ಲದವರು ನಾಟಕದಲ್ಲಿ ಗುಂಪಿನಲ್ಲೊಬ್ಬ. ಆಗ ಅವರು ಹೇಳುತ್ತಿದ್ದುದು ನೀವು ಮರಗಳಂತೆ ನಿಲ್ಲದಿದ್ದರೆ, ಗುಂಪು ಸರಿಯಾಗಿ ಚಲಿಸದಿದ್ದರೆ ನಾಟಕ ಸತ್ತುಹೋಗುತ್ತದೆ. ಮಧ್ಯೆ ಸದಸ್ಯರಲ್ಲಿ ಉಂಟಾದ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿಂದ ಬಳಗದ ಒಡನಾಟ ಕಡಿಮೆಮಾಡಿದ್ದೆ. ಗೆಳೆಯರುಬದಲಾದರೂ ಗೆಳೆಯರಬಳಗ ಮುಂದುವರೆದಿತ್ತು. ಹಲವಾರು ನಾಟಕಗಳನ್ನು ಕಲಿತು ಪ್ರದರ್ಶಿಸಿತು. 'ಕರಿಯ ದೇವರ ಹುಡುಕಿ' 'ಅಂಧಯುಗ' 'ಹೂ ಹುಡುಗಿ' 'ಧನಿಯರ ಸತ್ಯ ನಾರಾಯಣ' ಈ ಅವಧಿಯಲ್ಲಿ ಪ್ರದರ್ಶನಗೊಂಡ ನಾಟಕಗಳು. 'ಜೂಲಿಯಸ್ ಸೀಸರ್' ನಾನು ಮರು ಎಂಟ್ರಿ ಕೊಟ್ಟ ನಾಟಕ. ಪ್ರಾಂಶುಪಾಲನಾದಮೇಲೆ ನಾನು ಕಳೆದ ವರ್ಷ ಕಾಲೇಜಿನ ಅಧ್ಯಾಪಕ ಮತ್ತು ವಿದ್ಯಾರ್ಥಿಗಳೊಡಗೂಡಿ ಆಡಿದ ನಾಟಕ 'ರಕ್ತಾಕ್ಷಿ', ಅದರಲ್ಲಿ ಮೊದಲಿಗೆ ಹೈದರನ ಪಾತ್ರ ನೀಡಲಾಗಿತ್ತು; ನಂತರ ಲಿಂಗಣ್ಣ ಮಂತ್ರಿಗಳ ಪಾತ್ರದಾರಿಯ ಬಗ್ಗೆ ಅಸಮಧಾನ ಮೂಡಿದಾಗ ನಿರ್ದೇಶಕ ನೀನಾಸಂ ಅಶ್ವತ್ ಆ ಪಾತ್ರವನ್ನು ನನಗೆ ನೀಡಿದರು.ಇತ್ತೀಚೆಗೆ 'ತುಘಲಕ್'ಮತ್ತೊಂದು ನಾಟಕ. 'ತುಘಲಕ್' ನಾನು ಪ್ರಾಂಶುಪಾಲನಾದಮೇಲೆ 'ಬಳಗ'ದಿಂದ ಆಡಿದ 'ಮೊದಲ ಮತ್ತು ಕೊನೆಯ ನಾಟಕ. ಅದರಲ್ಲಿ ನನ್ನದು ಬರನಿಯ ಪಾತ್ರ, ಶಿವಮೊಗ್ಗದಲ್ಲಿ ಈ ನಾಟಕ ಪ್ರದರ್ಶನಗೊಳ್ಳುವ ಮೊದಲು ಬಾದರದಿನ್ನಿ 'ಇದು ಈ ಕುಮಾರ್, ಶಿವರಾಮು, ಮೋಹನ್ ಇವರುಗಳು ಪಾಲ್ಗೊಳ್ಳುವ ಕೊನೆಯ ನಾಟಕವಾಗಬಹುದೇನೋ' ಅನ್ನುವ ಸಂಶಯವ್ಯಕ್ತಪಡಿಸಿದ್ದರು. ಅದು ನಿಜವಾಗಿದೆ. ನನಗೆ ನಿಲ್ಲಲು ಕೂರಲು ಆಗುತ್ತಿಲ್ಲ. ಮೋಹನ್‌ರಾಜ್ ನಂತರ ಶಿವರಾಮು ಈಚೆಗೆ ತೀರಿಕೊಂಡಿದ್ದಾರೆ. ಅಂದಮೇಲೆ ಅಶೋಕಬಾದರದಿನ್ನಿ ಭವಿಷ್ಯ ಸುಳ್ಳಾಗುವುದಾದರೂ ಹೇಗೆ? ಬಳಗದ ಅಸ್ತಿತ್ವಕ್ಕೇ ಸಂಚಕಾರ ಉಂಟಾದಂತಾಗಿದೆ. ಏಕೆಂದರೆ ಬಳಗ ನಡೆಸುತ್ತಿದ್ದುದೇ ಈ ಶಿವರಾಮು.

ಈ ಬಾದರದಿನ್ನಿ ವಿಚಿತ್ರ ಮನುಷ್ಯ. ಯಾವಾಗ ಜಾಲಿ ಮೂಡಿನಲ್ಲಿರುತ್ತಾನೆ, ಯಾವಾಗ ಕೆಟ್ಟ ಮೂಡಿನಲ್ಲಿರುತ್ತಾನೋ ಹೇಳಲಿಕ್ಕೇ ಬರುವುದಿಲ್ಲ. ಆದರೆ

ಅವರು ಎಲ್ಲರನ್ನೂ ಪ್ರೀತಿಸುತ್ತಿದ್ದರು. ಅದರಲ್ಲೂ ಹೆಣ್ಣುಮಕ್ಕಳನ್ನು ಕೊಂಚ ಹೆಚ್ಚುಹಚ್ಚಿಕೊಂಡು ಬಿಡುತ್ತಿದ್ದರು. ನಾಟಕಕಾರ್ಯಾಗಾರ ಮುಗಿಸಿ ವಾಪಸು ಹೊರಡುವ ದಿನ ಆ ಹೆಣ್ಣು ಮಕ್ಕಳ ಕಣ್ಣಂಚಿನ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ನಮಗೂ ಒಂದಿಷ್ಟು ಬೇಸರವಾದರೂ ನಾವು ತೋರ್ಪಡಿಸುತ್ತಿರಲಿಲ್ಲ. ಅವರನ್ನು ಸಮಾಧಾನಗೊಳಿಸುವುದು ಸಾಕುಸಾಕಾಗುತ್ತತ್ತು. ಒಮ್ಮೆಯಂತೂ ಈ ಬಾದರದಿನ್ನಿ ಅವರನ್ನು ತಬ್ಬಿಕೊಂಡು ಸಂತೈಸುತ್ತಿದ್ದುದು ಕೆಲವರ ಕೆಂಗಣ್ಣಿಗೆ ಗುರಿಯಾಗಿದ್ದೂ ಇದೆ.

ಆತನಿಗೆ ಶಂಕರಗೌಡರು ಮತ್ತು ಸಚ್ಚಿದಾನಂದ ಎಂದರೆ ಬಲು ಭಕ್ತಿ. ಎಲ್ಲೇ ಯಾವ ಕಾರ್ಯಾಗಾರ ನಡೆಸುತ್ತಿರಲಿ, ಮಂಡ್ಯದಿಂದ ಬುಲಾವ್ ಬಂತೆಂದರೆ, ಕೂಡಲೆ ಹಾಜರ್. ಒಮ್ಮೆ ನಮ್ಮ ವಿದ್ಯಾರ್ಥಿಗಳಲ್ಲಿ ಯಾವುದೋ ಕಾರಣಕ್ಕೆ ಮನಸ್ತಾಪಉಂಟಾಗಿ ಷೋ ದಿವಸ ಕೆಲವರು ಕೈ ಕೊಟ್ಟರು. ಬಾದರದಿನ್ನಿ ಷೋಗೆ ಉಳಿದಿರುವ ಸಮಯದಲ್ಲೇ ನಾಟಕದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ, ತಾನೂ ಒಂದು ಪಾತ್ರ ನಿರ್ವಹಿಸಿ, ನಿಭಾಯಿಸಿಬಿಟ್ಟರು. ಅವರ ಕಾರ್ಯಾಗಾರದಿಂದ ನಮಗೆ ಸಿನಿಮಾಗಳಲ್ಲಿ ಪಾತ್ರ ದೊರಕದಿದ್ದರೂ, ಕೆಲವು ರಂಗ ವಿಷಯಗಳ ಪರಿಚಯ ಚೆನ್ನಾಗಾಯಿತು. ಧ್ವನಿ ಮಾರ್ಪಾಡು, ಆಂಗಿಕ ಅಭಿನಯ, ಸ್ಟೇಜ್ ಸೆಟ್ಟಿಂಗ್, ಲೈಟಿಂಗ್ ಮುಂತಾದ ವಿಷಯಗಳು ತಿಳಿಯಲು ಸಾಧ್ಯವಾಯಿತು. ಅದಕ್ಕಾಗಿ ನಾವು ಬಾದರದಿನ್ನಿಗೆ ಥ್ಯಾಂಕ್ಸ್ ಹೇಳಲೇಬೇಕು. ಇತರೆ ನಿರ್ದೇಶಕರೊಡನೆ ಕೆಲಸ ಮಾಡಿ ಮಾಡಿದ್ದೇವೆ. ಸಿದ್ದಲಿಂಗಯ್ಯ, ಅತುಲ್ ತಿವಾರಿ, ಇವರಿಗೆ ಹೋಲಿಸಿದರೆ, ತನ್ನೆಲ್ಲ ತಿಕ್ಕಲುತನಗಳೊಡನೆ ಅಶೋಕ ಬಾದರದಿನ್ನಿ ಈಸ್ ರಿಯಲಿ ಗ್ರೇಟ್!

ಈಚೆಗೇ ಅವರೂ ತೀರಿಕೊಂಡ ವಿಚಾರ ತಿಳಿದು ಬೇಸರವಾಯಿತು.

* * * * * *

**ಲೇಖನ – 47**

# ಸರಸ್ವತಿ ಸಾಗರ

ಅದೊಂದು ಸಾಗರ, ಪುಸ್ತಕದ ಸಾಗರ. ಕಣ್ಣಾಡಿಸಿದಲ್ಲೆಲ್ಲಾ, ತಲು ತಾವಿಲ್ಲದಂತೆ ಪುಸ್ತಕಗಳ ರಾಶಿರಾಶಿ! ಎಲ್ಲೆಂದು ನಿಮಗೆ ಆಶ್ಚರ್ಯವಾಗುತ್ತಿದೆಯಾ? ಅದೇ ಶ್ರೀರಂಗಪಟ್ಟಣದ ಕಡೆಯಿಂದ ನಾಗಮಂಗಲ ರಸ್ತೆಯಲ್ಲಿ ಪಾಂಡವಪುರಕ್ಕೆ ಪ್ರವೇಶವಾಗುತ್ತಿದ್ದಂತೆಯೇ ಕಾಣುತ್ತದೆ ಆ ಫಲಕ "ಅಂಕೇಗೌಡ ಜ್ಞಾನ ಪ್ರತಿಷ್ಠಾನ(ರಿ) ಪುಸ್ತಕಮನೆ". ಅರ್ಥವಾಯಿತಲ್ಲ, ಅದು ಶ್ರೀ ಅಂಕೇಗೌಡ ಎನ್ನುವ ಏಕವ್ಯಕ್ತಿ ಸಂಗ್ರಹಿಸಿರುವ ಪುಸ್ತಕಗಳ ಸಮುದ್ರ, ಹತ್ತಿರ ಹತ್ತಿರ ಹತ್ತು ಲಕ್ಷ ಪುಸ್ತಕಗಳನ್ನು, ತನ್ನ ಸ್ವಂತ ಶ್ರಮದಿಂದ ಸಂಪಾದನೆಯಿಂದ ಸಂಗ್ರಹಿಸಿರುವ ಬಹುಶಃ ದೇಶದಲ್ಲೇ ಏಕೈಕ ಸಂಸ್ಥೆ ಈ "ಅಂಕೇಗೌಡ ಜ್ಞಾನ ಪ್ರತಿಷ್ಠಾನ". ಪಾಂಡವಪುರದ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಟೈಮ್ ಆಫೀಸರ್ ಆಗಿ 32ವರ್ಷಗಳ ಸೇವೆ ಸಲ್ಲಿಸುವಾಗಲೇ ಪುಸ್ತಕ ಸಂಗ್ರಹ ಕಾರ್ಯದಲ್ಲಿ ತೊಡಗಿರುವ ಶ್ರೀ ಅಂಕೇಗೌಡರವರು ಮದ್ರಾಸು, ಮುಂಬೈಗೆಲ್ಲ ಪುಸ್ತಕಗಳ ತಲಾಷಿಗೆ ಹೋಗಿ ಅಪರೂಪದ ಅಪೂರ್ವ ಪುಸ್ತಕಗಳನ್ನು ಸಾವಿರಾರು ರೂಪಾಯಿಗಳನ್ನು ತೆತ್ತು ಸಂಗ್ರಹಿಸಿದ್ದಾರೆ. ಅವರ ಸಂಗ್ರಹದಲ್ಲಿ ಏನಿದೆ ಅನ್ನುವುದಕ್ಕಿಂತ ಏನಿಲ್ಲ ಎನ್ನುವುದೇ ಸರಿಯಾದ ಮಾತು. ಅದು ಪುರಾಣಗಳಾದರೂ ಸರಿ, ಭಾಷಾ ಇತಿಹಾಸವಾದರೂ ಸರಿ, ಚಿತ್ರಕಲೆಯಾದರೂ ಸರಿ, ರಾಜ್ಯರಾಷ್ಟ್ರಗಳ ಇತಿಹಾಸವಾದರೂ ಸರಿ ಹೀಗೆ ನೀವು ಯಾವುದೇ ವಿಷಯದ ಬಗೆಗಿನ ಕನ್ನಡ, ಇಂಗ್ಲೀಷ್, ಚೈನೀಸ್, ಹಿಂದಿ, ತಮಿಳು, ತೆಲುಗು ಕೃತಿಗಳನ್ನಾದರೂ ಬೇಡಿದರೆ ಅದು ಅಲ್ಲಿರುತ್ತದೆ. ಅಲ್ಲಿ ಸಂಗ್ರಹವಾಗಿರುವ ಹತ್ತು

# ಸರಸ್ವತಿ ಸಾಗರ

ಇದೊಂದು ಸಾಗರ, ಪುಸ್ತಕದ ಸಾಗರ. ಕಣ್ಣಾಡಿಸಿದಲ್ಲೆಲ್ಲಾ, ಡಲು ತಾವಿಲ್ಲದಂತೆ ಪುಸ್ತಕಗಳ ರಾಶಿರಾಶಿ! ಎಲ್ಲೆಂದು ನಿಮಗೆ ಆಶ್ಚರ್ಯವಾಗುತ್ತಿದೆಯಾ? ಅದೇ ಶ್ರೀರಂಗಪಟ್ಟಣದ ಕಡೆಯಿಂದ ನಾಗಮಂಗಲ ರಸ್ತೆಯಲ್ಲಿ ಪಾಂಡವಪುರಕ್ಕೆ ಪ್ರವೇಶವಾಗುತ್ತಿದ್ದಂತೆಯೇ ಕಾಣುತ್ತದೆ ಆ ಫಲಕ "ಅಂಕೇಗೌಡ ಜ್ಞಾನ ಪ್ರತಿಷ್ಠಾನ(ರಿ) ಪುಸ್ತಕಮನೆ". ಅರ್ಥವಾಯಿತಲ್ಲ, ಅದು ಶ್ರೀ ಅಂಕೇಗೌಡ ಎನ್ನುವ ಏಕವ್ಯಕ್ತಿ ಸಂಗ್ರಹಿಸಿರುವ ಪುಸ್ತಕಗಳ ಸಮುದ್ರ, ಹತ್ತಿರ ಹತ್ತಿರ ಹತ್ತು ಲಕ್ಷ ಪುಸ್ತಕಗಳನ್ನು ತನ್ನ ಸ್ವಂತ ಶ್ರಮದಿಂದ ಸಂಪಾದನೆಯಿಂದ ಸಂಗ್ರಹಿಸಿರುವ ಬಹುಶಃ ದೇಶದಲ್ಲೇ ಏಕೈಕ ಸಂಸ್ಥೆ ಈ "ಅಂಕೇಗೌಡ ಜ್ಞಾನ ಪ್ರತಿಷ್ಠಾನ". ಪಾಂಡವಪುರದ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಟೈಮ್ ಆಫೀಸರ್ ಆಗಿ 32ವರ್ಷಗಳ ಸೇವೆ ಸಲ್ಲಿಸುವಾಗಲೇ ಪುಸ್ತಕ ಸಂಗ್ರಹ ಕಾರ್ಯದಲ್ಲಿ ತೊಡಗಿರುವ ಶ್ರೀ ಅಂಕೇಗೌಡರವರು ಮದ್ರಾಸು, ಮುಂಬೈಗೆಲ್ಲ ಪುಸ್ತಕಗಳ ತಲಾಷಿಗೆ ಹೋಗಿ ಅಪರೂಪದ ಅಪೂರ್ವ ಪುಸ್ತಕಗಳನ್ನು ಸಾವಿರಾರು ರೂಪಾಯಿಗಳನ್ನು ತೆತ್ತು ಸಂಗ್ರಹಿಸಿದ್ದಾರೆ. ಅವರ ಸಂಗ್ರಹದಲ್ಲಿ ಏನಿದೆ ಅನ್ನುವುದಕ್ಕಿಂತ ಏನಿಲ್ಲ ಎನ್ನುವುದೇ ಸರಿಯಾದ ಮಾತು. ಅದು ಪುರಾಣಗಳಾದರೂ ಸರಿ, ಭಾಷಾ ಇತಿಹಾಸವಾದರೂ ಸರಿ, ಚಿತ್ರಕಲೆಯಾದರೂ ಸರಿ, ರಾಜ್ಯರಾಷ್ಟ್ರಗಳ ಇತಿಹಾಸವಾದರೂ ಸರಿ ಹೀಗೆ ನೀವು ಯಾವುದೇ ವಿಷಯದ ಬಗೆಗಿನ ಕನ್ನಡ, ಇಂಗ್ಲೀಷ್, ಚೈನೀಸ್, ಹಿಂದಿ, ತಮಿಳು, ತೆಲುಗು ಕೃತಿಗಳನ್ನಾದರೂ ಬೇಡಿದರೆ ಅದು ಅಲ್ಲಿರುತ್ತದೆ. ಅಲ್ಲಿ ಸಂಗ್ರಹವಾಗಿರುವ ಹತ್ತು

ಲಕ್ಷ ಪುಸ್ತಕಗಳ ಬಗೆಗೂ ತಿಳುವಳಿಕೆ ಹೊಂದಿದವರಾಗಿರುತ್ತಾರೆ. ನೀವು ಹೆಸರು ಹೇಳಿದ ತಕ್ಷಣ ಆ ಪುಸ್ತಕ ಇರುವ ಜಾಗಕ್ಕೆ ನಿಮ್ಮನ್ನು ಕರೆದುಕೊಂಡುಹೋಗಿ ಕೃತಿಯನ್ನು ನಿಮ್ಮ ಮುಂದೆ ಹಾಜರುಪಡಿಸುತ್ತಾರೆ ಶ್ರೀ ಅಂಕೇಗೌಡ. ನೋಡಿದವರಿಗೆ ಅಡ್ಡಾದಿಡ್ಡಿ ರಾಶಿ ಹಾಕಿರುವ ಪುಸ್ತಕಗಳನ್ನು ನೋಡಿದರೆ ಯಾವ ಗುಡ್ಡೆಯಲ್ಲಿ ಯಾವ ಪುಸ್ತಕಗಳಿವೆಯೋ ತಲೆಬುಡ ಅರ್ಥವಾಗುವುದಿಲ್ಲವಾದರೂ ಅದರಲ್ಲೂ ಒಂದು ಶಿಸ್ತು ಇದೆ ಎನ್ನುತ್ತಾರೆ ಶ್ರೀ ಅಂಕೇಗೌಡರು. ಅವರ ಈ ಸರಸ್ವತಿ ಸಂಪತ್ತಿಗಾಗಿ ಅವರಿಗೆ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಅಸಮಾನ್ಯ ಕನ್ನಡಿಗ ಪ್ರಶಸ್ತಿ, ಹೊಯ್ಸಳ ಪ್ರಶಸ್ತಿ, ಭಾರತ ವಿಕಾಸ ರತ್ನ ರಾಷ್ಟ್ರೀಯ ಪ್ರಶಸ್ತಿ, ರಾಜ್ಯ ಗ್ರಂಥಾಲಯ ಪ್ರಶಸ್ತಿ ಕೊಡಮಾಡಲಾಗಿದೆ. ಎಲ್ಲಕ್ಕೂ ಮಿಗಿಲಾಗಿ ಅವರ ಪುಸ್ತಕ ಸಂಗ್ರಹಕ್ಕೆ ಲಿಮ್ಕಾ ಬುಕ್ ಆಫ್ ರೆಕಾರ್ಡ್‌ನಲ್ಲಿ ರಾಷ್ಟ್ರೀಯ ದಾಖಲೆ ಪುರಸ್ಕಾರವೂ ದೊರಕಿದೆ. ಪುಸ್ತಕ ಸಂಗ್ರಹದ ಬಗೆಗೆ ಆಸಕ್ತಿಹೊಂದಿದ್ದ ಅಂಕೇಗೌಡರಿಗೆ ಹರಿಕೋಡೆ ನೆರವಿನಿಂದ ಪುಸ್ತಕ ಸಂಗ್ರಹಕ್ಕಾಗಿ ಒಂದು ದೊಡ್ಡ ಕಟ್ಟಡ ನಿರ್ಮಾಣಗೊಂಡಿದೆ. ಆದರೆ ಆ ಪುಸ್ತಕಗಳ ಸಂಖ್ಯೆ ಕಟ್ಟಡದ ನಾಲ್ಕು ಗೋಡೆಗಳ ಮಧ್ಯೆ ಅಡಗಿಸಿಡಲಾಗಿದೆಯೇ ಹೊರತಾಗಿ ಅದಕ್ಕೆ ಅವಶ್ಯವಿರುವ ಕಪಾಟುಗಳಲ್ಲಲ್ಲ! ಹೆಚ್ಚೂಕಮ್ಮಿ ಎರಡು ಲಾರಿಲೋಡುಗಳಷ್ಟು ಪುಸ್ತಕಗಳು ಪ್ರವೇಶದ್ವಾರವನ್ನಲಂಕರಿಸಿವೆ. ಹಾಲಿ ಐದು ನೂರರಷ್ಟು ಕಪಾಟುಗಳಿವೆಯಾದರೂ ಪುಸ್ತಕಗಳ ಮಹಾಪೂರದಿಂದಾಗಿ ಕಪಾಟುಗಳ ಅವಶ್ಯಕತೆ ಜರೂರಾಗಿ ಆಗಬೇಕಾಗಿದೆ. ಒಮ್ಮೆ ಭೇಟಿನೀಡಿದರೆ ಮಾತ್ರ ಆ ಪುಸ್ತಕಗಳ ಮೌಲ್ಯ ನಿಮ್ಮ ಅರಿವಿಗೆ ಬರುತ್ತದೆ. ಅಲ್ಲಿರುವ ಸರಸ್ವತಿ ಭಂಡಾರವನ್ನು ಕೂಲಂಕಷವಾಗಿ ಪರಿಶೀಲಿಸಬೇಕೆಂದರೆ ನಿಮಗೆ ತಿಂಗಳುಗಳೇ ಬೇಕಾಗಬಹುದು. ಕೆಲವು ಘಂಟೆಗಳನ್ನಾದರೂ ಆ ಸರಸ್ವತಿ ಸಾನಿಧ್ಯದಲ್ಲಿ ಕಳೆದಿರಾದರೆ ನಿಮ್ಮ ಜೀವನ ಧನ್ಯ!

ಪುಸ್ತಕಗಳನ್ನಿಡಲು ಕಪಾಟುಗಳ ಕೊರತೆಯಿಂದ ಹಾಗೆ ಪುಸ್ತಕಗಳನ್ನು ರಾಶಿ ಹಾಕಿರುವ ವಿಚಾರ ಅವರ ಮನಸ್ಸಿಗೆ ಬೇಸರವಾಗುತ್ತಿರುವುದು ಗುಟ್ಟಿನ ಸಂಗತಿಯೇನಲ್ಲ. ಹತ್ತು ಲಕ್ಷ ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸಿಡಲು ಎಷ್ಟು ಕಪಾಟುಗಳು ಬೇಕು ಎಂದು ಲೆಕ್ಕ ಹಾಕುತ್ತಾ ಹೋದರೆ ತಲೆ ತಿರುಗುತ್ತದೆ. ಒಂದು ಕಪಾಟಿನಲ್ಲಿ ಸಣ್ಣಸಣ್ಣ 500 ಪುಸ್ತಕಗಳನ್ನು ಜೋಡಿಸಿಡಬಹುದೆಂದು ಅಂದುಕೊಂಡರೂ, ಒಂದು ಲಕ್ಷ ಪುಸ್ತಕಗಳಿಗೆ ಅವಶ್ಯಕವಿರುವ ಕಪಾಟುಗಳ ಸಂಖ್ಯೆ 200! ಹತ್ತು ಲಕ್ಷ ಪುಸ್ತಕಗಳೂ ಇದೇ ಸೈಜಿನವೆಂದುಕೊಂಡರೂ ಹತ್ತಿರ

ಹತ್ತಿರ 2000 ಕಪಾಟುಗಳು ಬೇಕಾಗುತ್ತವೆ. ಆದರೆ ಅವರ ಪುಸ್ತಕಗಳಲ್ಲಿ ದೊಡ್ಡ, ಅತಿದೊಡ್ಡ, ಮಧ್ಯಮ ಗಾತ್ರದ ಪುಸ್ತಕಗಳೂ ಸೇರಿವೆ. ಒಂದು ಕಪಾಟಿನಲ್ಲಿ ಕೇವಲ ನಲ್ವತ್ತು ಐವತ್ತು ಪುಸ್ತಕಗಳು ಮಾತ್ರ ಹಿಡಿಸಲು ವಿಶೇಷವಾದ ಕಪಾಟುಗಳು ಅವಶ್ಯಕವಾಗಿರುತ್ತದೆ. ಕಷ್ಟಪಟ್ಟು ಸಂಗ್ರಹಿಸಿರುವ ಪುಸ್ತಕಗಳನ್ನು ಮುಂದಿನ ಪೀಳಿಗೆಗೆ ಸಂಗ್ರಹಿಸಿಡಬೇಕಾದ ಹೊಣೆಗಾರಿಕೆ ಪ್ರತಿಯೊಬ್ಬ ಕನ್ನಡಿಗನದೂ ಆಗಿದೆ. ಅದಕ್ಕಾಗಿ ತುರ್ತಾಗಿ ಕಪಾಟುಗಳನ್ನು ಹೊಂದಿಸಿಕೊಡಬೇಕಾಗಿದೆ. ಸಾಹಿತ್ಯಪ್ರೇಮಿಗಳು ಈ ಕಾರ್ಯದಲ್ಲಿ ಕೈಜೋಡಿಸುವರೆಂದು ನಂಬೋಣವೇ?

ಸಾಮಾನ್ಯವಾಗಿ ಅದು ನೋಡಿ, ಇದು ನೋಡಿ ಜೀವಮಾನದಲ್ಲೊಮ್ಮೆ ನೋಡಿ ಜೋಗದ ಗುಂಡಿ ಎಂಬ ಚಲನಚಿತ್ರದ ಹಾಡು ಎಲ್ಲರ ನಾಲಗೆ ಮೇಲೆ ನಲಿದಾಡುತ್ತಿರುವ ವಿಚಾರ ತಮಗೆಲ್ಲ ತಿಳಿದಿರಬಹುದು. ಸಾಯುವ ಮುನ್ನ ಒಮ್ಮೆ ನೋಡಿ 'ತಾಜ್ ಮಹಲ್' ಎನ್ನುವವರೂ ಇದ್ದಾರೆ. ಆದರೆ ನಾನು ಹೇಳುವುದು: ಜೀವಮಾನದಲ್ಲೊಮ್ಮೆಯಾದರೂ ಎಲ್ಲ ಕನಡಿಗರೂ ಭೇಟಿಕೊಡಲೇಬೇಕಾದ ತಾಣ "ಅಂಕೇಗೌಡ ಜ್ಞಾನ ಪ್ರತಿಷ್ಠಾನ(ರಿ) ಪುಸ್ತಕದಮನೆ" ಹರಳಹಳ್ಳಿ, ಪಾಂಡವಪುರ. ನಿಮ್ಮ ಭೇಟಿ ನಿಮಗೆ ನಿರಾಶೆಯನ್ನೆಂದೂ ತರದು. ಅದರಲ್ಲೂ ಸಾಹಿತ್ಯಪ್ರೇಮಿಗಳಿಗೆ ಇದು ಒಂದು ಅಪರೂಪದ ಸಾಹಿತ್ಯಾಗರ, ಬತ್ತಲಾರದ ಜ್ಞಾನ ಗಂಗೆ, ಅದರಲ್ಲಿ ಒಮ್ಮೆಯಾದರೂ ಮಿಂದು ಬನ್ನಿ. ಪುಸ್ತಕ ಸಂರಕ್ಷಣೆ ಕಾರ್ಯದಲ್ಲಿ ನಿಮ್ಮ ಅಳಿಲುಸೇವೆ ಸಲ್ಲಿಸಿ.

14–11–2017 (ಸವಿಗನ್ನಡ ವಿಶೇಷ ಸಂಚಿಕೆ ಡಿಸೆಂಬರ್ 2017)

* * * * * *

# ಈಜು –ನನ್ನ ಪ್ರಥಮ ಹಾಗೂ ಅಂತಿಮ ಸಾಹಸ

**ಈ**ಜುವ ಕಲೆ' ಮನುಷ್ಯನಿಗೆ ಜೀವ ಉಳಿಸುವ ಕಲೆಯೇನೋ ಹೌದು. ನೀರಿಗೆ ಬಿದ್ದ ಮನುಷ್ಯ ಕೈಗಳಿಂದ ಹಾಗೂ ಕಾಲುಗಳಿಂದ ನೀರನ್ನು ತಳ್ಳುತ್ತಿದ್ದರೆ ತಾನೇತಾನಾಗಿ ಈಜುಬರುತ್ತದೆ ಎನ್ನುತ್ತಾರೆ ಈಜು ಕಲಿತವರು. ಆದರೆ ಪ್ರಥಮ. ಪ್ರಯತ್ನೇ ದಂತಭಗ್ನಂ ಎಂಬಂತಾದರೆ? ಮನದಲ್ಲಿ ನೀರಿನ ಬಗೆಗೇ ಖಾಯಂ ಆಗಿ ಅಂಜಿಕೆ ಉಳಿದುಬಿಟ್ಟರೆ ಏನಾಗಬಹುದು ಎಂಬುದೇ ಕೆಳಗಿನ ಲೇಖನದ ಸಾರ.

ಆಗಿನ್ನೂ ಪ್ರೌಢಶಾಲೆ ವಿದ್ಯಾರ್ಥಿ. ಬೇಸಿಗೆ ರಜೆಯಲ್ಲೊಮ್ಮೆ ನನ್ನ ಚಿಕ್ಕಮ್ಮ ಉರುಫ್ ಮಲತಾಯಿಯ ಊರಿಗೆ ಹೋಗಿದ್ದೆ. ಮೂರನೇ ದಿನ ಬೆಳಿಗ್ಗೆ ಮಲತಾಯಿಯ ತಮ್ಮಂದಿರಿಬ್ಬರೊಂದಿಗೆ ತೋಟದ ಪಕ್ಕದಲ್ಲಿದ್ದ ಕೆರೆಕಡೆಗೆ ಹೊರಟೆ, ಅಂದರೆ ಕರೆದುಕೊಂಡು ಹೋದರು ಅನ್ನಿ. ಅಲ್ಲಿದ್ದ ಬೆಂಡು (ಜೋಳದ ಕಡ್ಡಿ) ಗಳನ್ನು ಬಾಳೇನಾರಿನಲ್ಲಿ ಕಟ್ಟಿ ಅದನ್ನು ನನ್ನ ಬೆನ್ನಿಗೆಕಟ್ಟಿದರು. ನಂತರ ಆ ಕೆರೆಯಲ್ಲಿ ಒಂದು ದಡದಿಂದ ಇನ್ನೊಂದು ದಡಕ್ಕೆ ಈಜಲು ತಮ್ಮ ಜೊತೆ ಕರೆದುಕೊಂಡರು.

ಅವರಿಗಾದರೋ ಹಲವಾರು ವರ್ಷಗಳಿಂದ ಆ ಕೆರೆಯಲ್ಲಿ ಈಜಿ ಅಭ್ಯಾಸ. ನನಗೋ ಅದೇ ಮೊತ್ತಮೊದಲ ಅನುಭವ. ನೀರಿಗಿಳಿದೇ ಗೊತ್ತಿಲ್ಲ! ನೀರಿಗಿಳಿದರೆ ಈಜು ತಾನೇತಾನಾಗಿ

ಬರುವುದೇ? ಎಂದೆ. ಅವರು ನೀರಿಗಿಳಿದಮೇಲೆ ಹೀಗೆ ಹೀಗೆ ಕೈಗಳಿಂದ ನೀರು ಬಗೆದು, ಕಾಲಿನಿಂದ ತಳ್ಳಿದರೆ, ಈಜು ಬಂದಂತೆಯೇ ಎಂದರು. ನೀರಿನಲ್ಲಿ ಮುಳುಗಿದರೆ ಎಂಬ ನನ್ನ ಪ್ರಶ್ನೆಗೆ, ಅದಕ್ಕೇ ಈ ಬೆಂಡು ಬೆನ್ನಿಗೆ ಕಟ್ಟುತ್ತಿರುವುದು ಎಂದು ಧೈರ್ಯ ತುಂಬಿದರು. ನಿಧಾನವಾಗಿ ನೀರಿಗಿಳಿದು ದಡದಲ್ಲೇ ಕಾಲು ಮೇಲಕ್ಕೆತ್ತಿದ್ದೇ ತಡಾ ಅನಾಮತ್ತು ಅಡ್ಡಡ್ಡವಾಗಿಬಿಟ್ಟೆ. ಇಡೀ ಶರೀರವನ್ನು ನೀರು ಮೇಲಕ್ಕೆತ್ತಿತ್ತು. ನೀರಿನಲ್ಲಿ ಮುಳುಗಲಿಲ್ಲ. ಸಮಾಧಾನವಾಯಿತು. ಅಲ್ಲೇ ಕೆಲಹೊತ್ತು ಕೈಕಾಲು ಬಡಿದುನೋಡಿದೆ. ಸ್ವಲ್ಪ ಧೈರ್ಯಬಂತು.

ಪ್ರಾರಂಭವಾಯಿತು ನನ್ನ ಈಜುವ ಪ್ರಥಮ ಸಾಹಸ! ನನ್ನನ್ನು ಮಧ್ಯೆ ಬಿಟ್ಟುಕೊಂಡು ಅಕ್ಕಪಕ್ಕದಲ್ಲೇ ಅವರೂ ಈಜತೊಡಗಿದರು. ಸಾಗಿದ್ದೆವು ಅರ್ಧದೂರ. ಸರಕ್ಕಂತ ನನ್ನ ಬೆನ್ನಿಗೆ ಕಟ್ಟಿದ್ದ ಬೆಂಡು ನಾರು ಅಳಕವಾಗಿ ಜಾರಿತು. ನಾನು ಮುಳುಗತೊಡಗಿದೆ. ನೀರಿನೊಳಗಿಳಿಯುತ್ತಿದ್ದಂತೇ ಕಣ್ಣುತೆರೆದುನೋಡಿದರೆ, ಪೂರಾ ಹಸಿರುನೀರು, ಬುಳುಬುಳು ನೀರಿನ ಗುಳ್ಳೆಗಳೇಳುತ್ತಿದ್ದವು ಕಣ್ಣಮುಂದೆ. ಬಾಯಿತೆರೆದರೆ ಬಾಯೊಳಗೆ ನೀರುನುಗ್ಗುತ್ತಿತ್ತು. ಮುಗಿಯಿತು ಇಂದಿಗೆ ನನ್ನ ಕಥೆ ಅಂದುಕೊಂಡೆ. ಕೈ ಮೇಲಕ್ಕೆತ್ತಲು ಪ್ರಯತ್ನಿಸಿದೆ, ದೇಹ ಕೆಳಕ್ಕೆಳೆಯುತ್ತಿತ್ತು. ಆದರೂ ಪ್ರಕೃತಿ ಅಷ್ಟು ಕಠೋರವಲ್ಲ. ಮುಳುಗುವವನಿಗೂ ಬದುಕಲು ಮೂರು ಅವಕಾಶ ಕೊಡುತ್ತದೆ ಅನ್ನುತ್ತಾರೆ, ತಿಳಿದವರು. ನನಗೂ ಹಾಗೇ ಆಯಿತು. ನನ್ನನ್ನು ಮೇಲಕ್ಕೆತ್ತುತ್ತಲಿತ್ತು ಅದ್ಯಾವುದೋ ಶಕ್ತಿ. ಮೇಲೆಬಂದಾಗ ಅಲ್ಲಿ ತೇಲುತ್ತಿದ್ದ ಬೆಂಡು ಕಾಣಿಸಿತು, ಆದರೆ ಹಿಡಿದುಕೊಳ್ಳುವಷ್ಟರಲ್ಲಿ ನಾನು ಅಸಫಲನಾಗಿದ್ದೆ. ಹೀಗೆ ಎರಡು ಸಲ ಆಗುವಷ್ಟರಲ್ಲಿ ಪಕ್ಕದಲ್ಲಿದ್ದ ಇಬ್ಬರಲ್ಲೊಬ್ಬ ಬೆಂಡನ್ನು ನನ್ನ ಕೈ ಅಳತೆಗೆ ತಳ್ಳಿದ, ಅದರ ದಾರ ಕೈಗೆ ಸಿಕ್ಕಿಕೊಂಡಿತು. ಬದುಕಿತು ಬಡಜೀವ! ಅದನ್ನು ಗಟ್ಟಿಯಾಗಿ ಹಿಡಿದುಕೊಂಡು, ಅವರಿಬ್ಬರ ಸಹಾಯದೊಂದಿಗೆ ವಾಪಸು ದಡಸೇರಿದೆ. ಅಂದು ಹಾಗಾಗದಿದ್ದಲ್ಲಿ, ಇಂದು ಈ ಕಥೆ ನಿಮ್ಮ ಮುಂದಿಡಲು ನಾನೇ ಇರುತ್ತಿರಲಿಲ್ಲ. ಅಂದೇ ಕೊನೆ, ಆ ಕ್ಷಣದಿಂದ ಈ ಕ್ಷಣದವರೆಗೂ ಈಜಲು ನಾನು ನೀರಿಗಿಳಿದಿಲ್ಲ.

* * * * * *

## ಲೇಖನ – 49

# ಸಿಂಗಪೂರಿನಲ್ಲಿ ನನ್ನ ಅನ್ವೇಷಣೆಗಳು

ಅಳಿಯ ಮಗಳ ಆಹ್ವಾನದ ಮೇಲೆ ಹದಿನೈದು ದಿನಗಳ ಮಟ್ಟಿಗೆ ಸಿಂಗಪೂರಿಗೆ ಹೋಗುವ ಭಾಗ್ಯ ನಮ್ಮದಾಗಿತ್ತು. ನಮಗೆ ಇದೇ ಮೊದಲ ವಿದೇಶ ಪ್ರಯಾಣ, ಬಹುಶಃ ಇದುವೇ ಅಂತಿಮವೂ ಹೌದೇನೋ ಗೊತ್ತಿಲ್ಲ! ಯಾರೇ ವಿದೇಶಗಳಿಗೆ ಹೋದರೂ ವಾರಾಂತ್ಯದವರೆವಿಗೆ ಏನೂ ಕೆಲಸವಿರುವುದಿಲ್ಲ. ಕರೆಸಿಕೊಂಡವರಿಗೆ ಬಿಡುವಾಗಬೇಕಲ್ಲ, ನಮ್ಮನ್ನು ಸುತ್ತಾಡಿಸಲಿಕ್ಕೆ. ನಾನು ಮಾತ್ರ ಆ ಸಮಯವನ್ನೂ ಉಪಯೋಗಮಾಡಿಕೊಳ್ಳಲು ನಿರ್ಧರಿಸಿದ್ದೆ. ಬಂದ ದಿವಸ ಮತ್ತು ಮಾರನೇ ದಿನಪೂರ್ತಿ ಒಂದು ತರಹ ಸೋಮಾರಿತನ ಆವರಿಸಿತ್ತು. ಸಮಯ ಹೊಂದಾಣಿಕೆ ಆಗಬೇಕಿತ್ತು. ಭಾರತಕ್ಕೂ ಇಲ್ಲಿಗೂ ಎರಡೂವರೆ ಘಂಟೆ ವ್ಯತ್ಯಾಸ. ಅಲ್ಲಿಗಿಂತ ಮುಂದು. ಅಲ್ಲಿ 7 ಘಂಟೆ ಆಗಿದ್ದರೆ ಇಲ್ಲಿ 9.30 ಘಂಟೆ. ನಾವು ಸಿಂಗಪೂರಿಗೆ ಬಂದಿಳಿದಾಗ ಸಂಜೆ 5 ಘಂಟೆ. ನಮ್ಮ ಗಡಿಯಾರ ಮೊಬೈಲಿನಲ್ಲಿ ಇನ್ನೂ 2.30 ಘಂಟೆ ಮಾತ್ರ! ಊಟ ಮಾಡುವಾಗ ನಮ್ಮ ಗಡಿಯಾರ 8 ಘಂಟೆ ತೋರಿಸುತ್ತಿತ್ತು. ನಂತರ ಅದನ್ನು ಇಲ್ಲಿಯ ಸಮಯಕ್ಕೆ ಸರಿಹೊಂದಿಸಿ–ಕೊಂಡಿದ್ದಾಯಿತು.

ಮಾರನೇದಿನ ಸಂಜೆ ನಗರ ಪರಿಚಯ ಮಾಡಿಕೊಳ್ಳಲು ಹೊರಟೆ. ಇವರ 'ಬರ್ಕಿಂಗ್‌ಹ್ಯಾಮ್ ಅಪಾರ್ಟ್‌ಮೆಂಟ್' ನಲ್ಲಿರುವುದು 12 ಅಂತಸ್ತುಗಳು. ಇದುವೇ ಒಂದು ಚಿಕ್ಕ ಅಪಾರ್ಟ್‌ಮೆಂಟು. ಅಕ್ಕಪಕ್ಕದ ಅಪಾರ್ಟ್‌ಮೆಂಟುಗಳು ಕನಿಷ್ಠ ಅಂದರೂ 18 ರಿಂದ

20 ಅಂತಸ್ತುಗಳನ್ನು ಹೊಂದಿರುವಂತಹವು. ತಲೆ ಎತ್ತಿನೋಡುತ್ತಿದ್ದರೆ ತಲೆತಿರುಗುಬರುತ್ತದೆ. ಹೊರಗೆ ಹೋದರೆ ಒಳಗೆ ಬರುವುದು ಹೇಗೆ ಎಂದು ಮಗಳನ್ನು ಕೇಳಿಕೊಂಡೆ. ಎಲ್ಲವೂ ಎಲೆಕ್ಟ್ರಾನಿಕಲಿ ಕಂಟ್ರೋಲ್ಡ್. ಲಿಫ್ಟ್‌ನಿಂದ ಕೆಳಗಿಳಿದು ಹೋದರೆ ಗಾಜಿನ ಬಾಗಿಲು ಹಾಕಿರುತ್ತದೆ. ಅದನ್ನು ತೆಗೆಯಲು ಪಕ್ಕದ ಗೋಡೆಯಲ್ಲಿರುವ ಬಟನ್ ಒತ್ತಬೇಕು. ಆಗ ಮಾತ್ರ ಬಾಗಿಲು ತೆರೆಯಲು ಸಾಧ್ಯವಾಗುತ್ತದೆ. ಅಂತೆಯೇ ವಾಪಸುಬಂದಾಗ ಗಾಜಿನಬಾಗಿಲಹೊರಗೆ ಒಂದು ಸಂಖ್ಯಾಫಲಕ ಇದೆ. ಅದರಲ್ಲಿ ಇವರ ಫ್ಲಾಟಿನ ಅಂತಸ್ತು & ಮನೆಸಂಖ್ಯೆ ಒತ್ತಬೇಕು. ಆಗ ಮನೆಯಲ್ಲಿನ ಬೆಲ್ ಹೊಡೆದುಕೊಳ್ಳುತ್ತದೆ. ನಂತರ ಇವರ ಮನೆ ಒಳಗಿರುವ ಪುಟ್ಟ ವಿಡಿಯೋ ಪರದೆಯನ್ನು ಆನ್ ಮಾಡಿದರೆ, ಕೆಳಗೆ ಪ್ರವೇಶ ಗಾಜಿನಬಾಗಿಲಿನಲ್ಲಿ ನಿಂತವರ ಚಿತ್ರ ಮೂಡುತ್ತದೆ. ಅದನ್ನು ಝೂಮ್ ಮಾಡಿನೋಡಿ, ಪರಿಚಿತರಾದಲ್ಲಿ ಒಳಗೆ ಬರಲು ಅನುಮತಿ ಬಟನ್ ಒತ್ತುತ್ತಾರೆ. ಆಗ ಮಾತ್ರ ಆಗಂತುಕ ನೆಲಮಹಡಿ ಪ್ರವೇಶಿಸಬಹುದು. ನಂತರ ಲಿಫ್ಟ್ ಏರಿ ಮನೆಸೇರಬಹುದು. ಮೊದಲ ಸಲ ಹೊರಹೋದಾಗ ನನಗೆ ಸಂಖ್ಯಾಫಲಕದಲ್ಲಿನ ' # ' ಚಿನ್ಹೆ ನಂತರ ಅಂತಸ್ತು & ಮನೆ ಸಂಖ್ಯೆ ಒತ್ತಿದೆ. 'ಪ್ರವೇಶ ನಿರಾಕರಿಸಲಾಗಿದೆ' ಎಂಬ ಸಂದೇಶ ಮೂಡಿಬಂತು. ಚಿನ್ಹೆ ಕೈಬಿಟ್ಟು ಬರೀ ಸಂಖ್ಯೆಗಳನ್ನು ಒತ್ತಿದೆ. ಮಗಳಿಂದ 'ಒಳಗೆ ಬಾ' ಅನ್ನುವ ಧ್ವನಿ ಕೇಳಿಬಂತು. ಗಾಜಿನಬಾಗಿಲನ್ನು ದೂಡಿಕೊಂಡು ಒಳಗೆಬಂದು ಲಿಫ್ಟ್ ಏರಿದೆ.

ನಾವಿದ್ದ ಅಪಾರ್ಟ್‌ಮೆಂಟಿನ ಎದುರೇ 'ಯುನೈಟೆಡ್ ಸ್ಕ್ವೈರ್" ಎನ್ನುವ ವ್ಯಾಪಾರ ಮಳಿಗೆ ಅಥವಾ ಮಾಲ್ ಇದೆ. ಮನೆ ಮುಂದಿನ ರಸ್ತೆ 'ಥಾಂಸನ್ ರೋಡ್' ಆ ರಸ್ತೆಯ ಬಲಕ್ಕೆ 'ಮೌಲ್‌ಮಿನ್ ರಸ್ತೆ' ಎಡಕ್ಕೆ 'ಕೆಂಗ್‌ಲೀ ರಸ್ತೆ'. ಮೊದಲ ದಿನ ಅಪಾರ್ಟ್‌ಮೆಂಟನ್ನು ಸುತ್ತುವರಿದ ರಸ್ತೆಗಳಲ್ಲಿ ವಾಕ್‌ಮಾಡುತ್ತಾ ಅಪಾರ್ಟ್‌ಮೆಂಟನ್ನು ಒಂದು ಸುತ್ತುಹೊಡೆದೆ. ಮಾರನೇ ಸಂಜೆ ಎಡ ಪಕ್ಕದ ರಸ್ತೆಯಲ್ಲಿ ಸುಮಾರು ಒಂದು ಕಿಲೋಮೀಟರ್ ನಡೆದು 'ಕೆಕೆ ಮಹಿಳೆಯರ & ಮಕ್ಕಳ ಆಸ್ಪತ್ರೆ ನೋಡಿಬಂದೆ. ಮೊದಲಿಗೆ ಆ ಕಟ್ಟಡ ಒಂದು ಹಡಗಿನಂತೆ ಕಾಣುತ್ತಿತ್ತು, ಕುತೂಹಲದಿಂದ ಕಟ್ಟಡದ ಮುಂಬಾಗಕ್ಕೆ ಹೋಗಿನೋಡಿದಾಗಲೇ ಅದು ಒಂದು ಆಸ್ಪತ್ರೆ ಎಂದು ತಿಳಿದುದು. ನಾವಿದ್ದ ಅಪಾರ್ಟ್‌ಮೆಂಟನಿಂದ ಎದುರುಗಡೆ ಮಾಲ್‌ಗೆ ಹೋಗಲು ಒಂದು ಮೇಲ್ಸೇತುವೆ ದಾಟಬೇಕು. ಎರಡನೇ ಸಂಜೆ ನಾನು ಆ ಸೇತುವೆದಾಟಿ ಬರುತ್ತಿದ್ದಾಗ ಒಬ್ಬ ದಾರಿಹೋಕ ನನ್ನನ್ನು ಕುತೂಹಲದಿಂದ ನೋಡುತ್ತಾ ಇಂಗ್ಲೀಷಿನಲ್ಲಿ 'ಡೂ ಯು ಡೂ ದಿಸ್ ಎವೆರಿಡೆ.

ಐ ಹೇವ್ ನೆವರ್ ಸೀನ್ ಎನಿಬಡಿ ಲೈಕ್ ಯು ಡೂಯಿಂಗ್ ದಿಸ್' ಅಂದ. ಅದಕ್ಕೆ ನಾನೂ ಇಂಗ್ಲೀಷಿನಲ್ಲಿ 'ನಾನು ಎದುರುಗಡೆ ಅಪಾರ್ಟ್‌ಮೆಂಟಿನಲ್ಲೇ ನಿನ್ನೆಯಿಂದ ಇದ್ದೇನೆ' ಎಂದೆ.

ಎರಡು ದಿನಗಳು ರಜಾದಿನಗಳಲ್ಲಿ ತಿರುಗಾಡಿಸಲು ಅಳಿಯ-ಮಗಳು ಇರುತ್ತಾರಾದರೂ, ವಾರದ ಮತ್ತೈದು ದಿನಗಳು ನನ್ನವೇ ಆಗಿರುತ್ತವೆ. ಸೋಮವಾರ ಏನೂ ಮಾಡದೇ, ಎಲ್ಲಿಗೂ ಹೋಗದೇ ಕಳೆದುದಾಯಿತು. ಆದರೆ ಮಂಗಳವಾರ ಸಂಜೆ ಮತ್ತೆ ನನ್ನ ಅನ್ವೇಷಣೆ ಆರಂಭ. ಸಂಜೆ 5 ಘಂಟೆಗೆ ಮನೆಬಿಟ್ಟವನು ಎಲ್ಲರ ಬಾಯಲ್ಲೂ ಸಾಮಾನ್ಯವಾಗಿ ಕೇಳಿಬರುತ್ತಿದ್ದ 'ಎಂಆರ್‌ಟಿ' ಪತ್ತೆಹಚ್ಚಲು ಹೊರಟೆ. ಇಲ್ಲೇ ಹತ್ತಿರದಲ್ಲೇ ಇದೆ ಎಂದು ಹೇಳುತ್ತಿದ್ದರಾದರೂ, ಎಲ್ಲೂ ಅದರ ಸೂಚನಾಫಲಕ ಕಂಡುಬಂದಿರಲಿಲ್ಲ. ಸುಮಾರು 1 ಕಿ.ಮೀ ಹೋಗಿ ಅಲ್ಲಿ 'ಎಂಆರ್‌ಟಿ' ಬಗೆಗೆ ವಿಚಾರಿಸಿದಾಗ ನಾನು ಹೊರಟಿದ್ದ ಸ್ಥಳಕ್ಕೇ ನಿರ್ದೇಶಿಸಿದರು. ಸುಮ್ಮನಾಗದೇ 'ಎಂಆರ್‌ಟಿ' ವಿಸ್ತೃತ ರೂಪವೇನು? ಅಲ್ಲೇ ನಿಂತಿದ್ದ ಯುವಕನೊಬ್ಬನನ್ನು ಕೇಳಿದೆ. ಆ ಮಹಾಶಯ ನನಗೆ ಅದನ್ನು ಹೇಳಿಕೊಟ್ಟಿಲ್ಲ ಅನ್ನುವುದೇ? ವಾಪಸಾಗುವಾಗ ನಮ್ಮ ಅಪಾರ್ಟ್‌ಮೆಂಟಿನ ಮೂಲೆಯ ಸರ್ಕಲ್‌ನಲ್ಲಿ ಒಂದು ಕಡೆ ಒಳಸುರಂಗಮಾರ್ಗದ ಮುಂದೆ 'ನೊವಿನೋ & ಎಂಆರ್‌ಟಿ' ಎಂದು ಬರೆದಿತ್ತು. ಕೊನೆಗೂ ಎಂಆರ್‌ಟಿ ರಹಸ್ಯ ಪತ್ತೆಹಚ್ಚಲು ಶುರುಮಾಡಿದೆ. ಒಳಹೋದರೆ ನಮ್ಮ 'ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ರೈಲ್ವೆನಿಲ್ದಾಣದಿಂದ ಬಸ್‌ಸ್ಟೇಷನ್ನಿಗೆ ಇರುವ ಒಳಸುರಂಗಮಾರ್ಗ' ದಂತೆ ಇನ್ನೂ ದೂರ ಕ್ರಮಿಸುತ್ತಿತ್ತು. ಮಧ್ಯೆ ಎರಡು ಎಸ್ಕಲೇಟರುಗಳು ಇಳಿಯಬೇಕು. ಕೊನೆಗೂ ಒಳಗೆ ಹೋಗಿನೋಡಿದರೆ ಅದೊಂದು ಟ್ಯೂಬ್ ರೇಲುವೆನಿಲ್ದಾಣ. ಸುತ್ತಮುತ್ತಲೂ ಎಲ್ಲೂ ಎಂಆರ್‌ಟಿ ಎಂಬ ಫಲಕ ಕಾಣಲಿಲ್ಲ. ಕೊನೆಗೆ ಅಲ್ಲೊಂದು ಚಾರ್ಟ್, ಇಲ್ಲಿಂದ ಎಲ್ಲಿಗೆಲ್ಲಿಗೆ ರೈಲುಗಳು ಚಲಿಸುತ್ತವೆ ಎಂಬ ವಿವರ ಅಲ್ಲಿತ್ತು. ಆ ಚಾರ್ಟಿನ ಕೊನೆಯಲ್ಲಿ ಸಣ್ಣಕ್ಷರಗಳಲ್ಲಿ "ಮಾಸ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಂ" ಎಂದಿತ್ತು. ಅದೇ 'ಎಂಆರ್‌ಟಿ' ಗುಟ್ಟು. ಗುಟ್ಟು ಪತ್ತೆಹಚ್ಚಿದ ಸಂತೋಷದಲ್ಲಿ ಮನೆಗೆ ಹಿಂತಿರುಗಿದೆ. ಸಿಂಗಪೂರಿನಲ್ಲಿನ ನನ್ನ 7ನೇ ದಿನ ಕೊನೆಗೊಂಡಿತ್ತು.

ಸಿಂಗಪೂರಿನಲ್ಲಿನ ಈ 7 ದಿನಗಳಲ್ಲಿ ನಾನು ಗಮನಿಸಿದ 2 ಉತ್ತಮ ಅಂಶಗಳು ಅಂದರೆ ಇಲ್ಲಿನ ಫುಟ್‌ಪಾತುಗಳು, ನಿಜ ಅರ್ಥದಲ್ಲೇ ಜನ ಓಡಾಡಲು ಬಳಕೆಯಾಗುತ್ತಿವೆ. ಕಡ್ಡಾಯವಾಗಿ ಎಲ್ಲ ರಸ್ತೆಗಳ ಎರಡೂ ಕಡೆ ಕನಿಷ್ಠ 3-4 ಅಡಿಗಳಷ್ಟಾದರೂ ಫುಟ್‌ಪಾತ್ ಪಾದಚಾರಿಗಳ ಉಪಯೋಗಕ್ಕಾಗಿ ಬಿಟ್ಟಿರುತ್ತಾರೆ.

2ನೆಯ ಉತ್ತಮ ಅಂಶ, ಇಲ್ಲಿನ ವಾಹನ ಚಾಲಕರಲ್ಲಿ ಶೇ.99 ಮಂದಿ 'ನೋ ಸಿಗ್ನಲ್ ಪೆಡೆಸ್ಟ್ರಿಯನ್ ಕ್ರಾಸಿಂಗಿ'ನಲ್ಲಿ ಪಾದಚಾರಿಗಳು ರಸ್ತೆದಾಟಲು ಮೊದಲ ಪ್ರಾಶಸ್ತ್ಯ ಕೊಟ್ಟು, ವಾಹನವನ್ನುನಿಲ್ಲಿಸಿ, ಅವರು ದಾಟಿದಮೇಲೆ ಮುಂದೆಸಾಗುತ್ತಾರೆ. ಇಂದು ಬುಧವಾರ ಸಂಜೆ ನಾರ್‌ಫೋಕ್ ರಸ್ತೆಯಲ್ಲಿ ಹೊರಟರೆ ಅಲ್ಲಿ ಒಂದುಕಡೆ ಮಾತ್ರ ಪಾದಚಾರಿಗಳ ನಡಿಗೆಗೆ ಅವಕಾಶ. ನಾನಾದರೋ ರಾಂಗ್ ಸೈಡಿನಲ್ಲಿ ನಡೆಯತೊಡಗಿದ್ದೆ. ಆದಷ್ಟೂ ರಸ್ತೆಯ ಎಡತುದಿಗೇ ನಡೆದುಹೋಗುತ್ತಿದ್ದೆ. ಒಂದು ಕಡೆ ರಿಕ್ವೆಸ್ಟ್ ಪೆಡೆಸ್ಟ್ರಿಯನ್ ಕ್ರಾಸಿಂಗ್ ಇತ್ತು. ಅಲ್ಲಿ ರಸ್ತೆಬದಿಯಲ್ಲಿ ಒಂದು ಅಲಾರಂ ಸ್ವಿಚ್ ಇತ್ತು. ಇಬ್ಬರು ಹೆಂಗಸರು ಆ ಸ್ವಿಚ್ ಒತ್ತಿನಿಂತರು. ಸ್ವಲ್ಪ ಸಮಯದ ನಂತರ ಹಸಿರು ದೀಪ ಮಿನುಗಿ ಸಂಚಾರ ನಿಲ್ಲಿಸಲಾಯಿತು. ಇವರು ರಸ್ತೆದಾಟಿದ ನಂತರ ಮತ್ತೆ ಸಂಚಾರ ಪ್ರಾರಂಭವಾಯಿತು. ನಾನು ಮೊದಲಿನ ಕಡೆಯಲ್ಲೇ ಹೋಗುತ್ತಿದ್ದೆ. ಮುಂದೊಂದು ಕಡೆ ಅನಿವಾರ್ಯವಾಗಿ ವಾಹನ ಸಂಚಾರ ಕಡಿಮೆಯಿದ್ದ ಕಡೆ ರಸ್ತೆದಾಟಿಬಿಟ್ಟೆ. ನಂತರ ಅರ್ಧ ಕಿ.ಮೀ ದಾಟಿದಮೇಲೆ ಓವರ್ ಬ್ರಿಡ್ಜ್ ಸಹಾಯದಿಂದ ರಸ್ತೆಯ ಮತ್ತೊಂದು ಬದಿಗೆ ಆರಾಮವಾಗಿ ದಾಟಿಬಂದೆ. ನಾನು ದಾಟಿಬಂದ ರಸ್ತೆಯ ಮೇಲೆ ಎರಡೂಬದಿಯಿಂದ ನಾನ್‌ಸ್ಟಾಪ್ ಸಿಗ್ನಲ್ ಫ್ರೀ ಟ್ರಾಫಿಕ್ ಇತ್ತು. ಮದ್ರಾಸಿನ ಮೌಂಟ್ ರೋಡ್, ಮುಂಬಯಿಯ ಮರೀನ್‌ಡ್ರೈವ್, ಬೆಂಗಳೂರಿನ ಎಂ.ಜಿರಸ್ತೆಯಂತಹ ಟ್ರಾಫಿಕ್! ನಾನು ಸುತ್ತಿಬಳಸಿ ಮೌಲ್‌ಮಿನ್ ರಸ್ತೆಗೆ ಬಂದಿದ್ದೆ. ಆ ರಸ್ತೆಯಲ್ಲಿ ಮೌಂಟ್ ಎಲಿಜಬೆತ್ ಆಸ್ಪತ್ರೆಯ ನೊವಿನೋ ಶಾಖೆ ಇದೆ. ಅಲ್ಲಿಂದ ಮುಂದೆ ಒಂದು ಸಾಯಿಬಾಬ (ಪುಟ್‌ಪರ್ತಿ) ಮಂದಿರ, ಒಂದು ಚೀನಿಯರ ಬೌದ್ಧಮಂದಿರ ನೋಡಿದೆ. ಥಾಂಸನ್ ರಸ್ತೆಮೂಲಕ ನಮ್ಮ ಅಪಾರ್ಟ್‌ಮೆಂಟ್ ಸೇರಿದೆ. ವಾಪಸು ಬರುವಾಗ ಒಂದು ಕಡೆ ಇದ್ದ ಸೂಚನಾಫಲಕ ನನ್ನ ಗಮನ ಸೆಳೆದಿತ್ತು. ಅನಧಿಕೃತ ಪಾರ್ಕಿಂಗ್‌ಮಾಡಿದರೆ ವ್ಹೀಲ್ ಕ್ಲ್ಯಾಂಪಿಂಗ್ ಮಾಡಲಾಗುತ್ತದೆ. ಅದನ್ನು ತೆಗೆಸಲು ತೆರಬೇಕಾದ ದಂಡ 250 ಸಿಂಗಪೂರ್ ಡಾಲರ್ಸ್ ಅಂದರೆ 12,500 ಭಾರತೀಯ ರೂಪಾಯಿಗಳು. ಈ ರೀತಿಯ ದಂಡ ತೆರಬೇಕಾದ ಭೀತಿಯೇ, ಇಲ್ಲಿನ ಚಾಲಕರಲ್ಲಿ ಬಹುಶಃ ಶಿಸ್ತು ಮೂಡಿಸಿರಬಹುದೇನೋ

ಎಲ್ಲೆಲ್ಲೋ ಸುತ್ತಾಡುವ ಬದಲು ಇಂದು ಸಂಜೆ ಅಪಾರ್ಟ್‌ಮೆಂಟ್ ಎದುರುಗಡೆ ಇರುವ 'ಯುನೈಟೆಡ್ ಸ್ಕ್ವೈರ್ ಮಾಲ್‌ಗೆ ಹೋಗಿಬಂದೆ. ಹಣ್ಣು ತರಕಾರಿಗಳನ್ನು ಇಡಿಯಾಗಿ, ಅಥವಾ ಹೋಳು ಮಾಡಿ ಅದನ್ನು ಪ್ಲಾಸ್ಟಿಕ್ ಹಾಳೆಯಲ್ಲಿ ಪ್ಯಾಕ್‌ಮಾಡಿ ಕೋಲ್ಡ್‌ಸ್ಟೋರೇಜ್ ಮಳಿಗೆಗಳಲ್ಲಿ ಮಾರಲಾಗುತ್ತದೆ. ಮೈಸೂರು ಬೆಂಗಳೂರುಗಳಲ್ಲಿ

ಸಿಗುವ ಕ್ಯಾಡ್‌ಬರೀಸ್ ಕ್ರಂಚ್ ಚಿಕ್ಕಬಾರಿಗೆ ಕೇವಲ 2 ಡಾಲರ್! ಅಂದರೆ ನಮ್ಮ ದೇಶದ 100 ರೂ.ಗಳು; ಇಲ್ಲಿಯವರಿಗೆ ಅದು ಬರೀ 2 ರೂ. ಗಳಂತೆ. ಉಳಿದಂತೆ ರೆಡಿಮೇಡ್ ಬಟ್ಟೆಗಳು, ಪಾದರಕ್ಷೆಗಳು, ಕಾಸ್ಮೆಟಿಕ್ಸ್, ಕೈ ಗಡಿಯಾರಗಳು, ತಿಂಡಿ ತಿನಿಸುಗಳು, ಔಷಧಿಗಳು, ವಿವಿಧ ರೀತಿಯ ಮಾದಕ ಪಾನೀಯಗಳು ಮಾರಾಟಕ್ಕಿವೆ. ಸುಮಾರು ಒಂದು ಘಂಟೆಕಾಲ ಒಳಗೆಲ್ಲಾ ಸುತ್ತಾಡಿ ಮನೆಕಡೆ ವಾಪಸಾದೆ. ಶುಕ್ರವಾರ ಸಂಜೆ ಯುನೈಟೆಡ್ ಸ್ಕ್ವೈರ್‌ನಿಂದ ಹೊರಟು ನ್ಯೂಟನ್ ಸರ್ಕಸ್(ಸರ್ಕಲ್) ವರೆಗೆ ಹೋಗಿ ಅಲ್ಲಿಂದ ಕೆಂಗ್ಲೀ ಒನ್‌ವೇ ರೋಡ್ ಮೂಲಕ ಥಾಂಸನ್ ರೋಡಿಗೆ ತಿರುಗಿ ಅಪಾರ್ಟ್‌ಮೆಂಟಿಗೆ ವಾಪಸಾದೆ. ನ್ಯೂಟನ್ ರಸ್ತೆಯಲ್ಲಿ ಒಂದು ದೊಡ್ಡ ರಾಯಲ್ ಹೋಟಲ್, ಹಲವಾರು ಪ್ರೀ ಸ್ಕೂಲ್‌ಗಳು ಇದ್ದವು. ಒಂದು ಕಡೆ 'ರಿಕ್ವೆಸ್ಟ್ ಪೆಡೆಸ್ಟ್ರಿಯನ್ ಕ್ರಾಸಿಂಗ್' ಇತ್ತು. ಇಲ್ಲಿ ಪಾದಚಾರಿಗಳು ತಮ್ಮಷ್ಟಕ್ಕೆ ತಾವೇ ರಸ್ತೆಬದಿ ನಿಂತು ಸ್ವಿಚ್ ಒತ್ತುತ್ತಾರೆ. ಕೆಲ ನಿಮಿಷಗಳ ಬಳಿಕ ವಾಹನಗಳಿಗೆ ಕೆಂಪುದೀಪ, ಪಾದಚಾರಿಗಳಿಗೆ ಹಸಿರುದೀಪ 30 ಸೆಕೆಂಡುಗಳ ಕಾಲ ಬೆಳಗುತ್ತದೆ. ನಂತರ ವಾಹನಗಳು ಚಲಿಸತೊಡಗುತ್ತವೆ. ಬಹುಶಃ ಪಾದಚಾರಿಗಳಿಗೆ ಇಷ್ಟು ಪ್ರಾಮುಖ್ಯತೆ ಭಾರತದಲ್ಲಿ ನಾನೆಲ್ಲೂ ನೋಡಿಲ್ಲ.

ಇಂದು ಸಿಂಗಪೂರಿನಲ್ಲಿ ನಮ್ಮ ಕೊನೆ ಬುಧವಾರ. ಸಂಜೆ ಇಲ್ಲಿನ ಬಟಾನಿಕಲ್ ಗಾರ್ಡನ್‌ಗೆ ಹೋಗಿಬಂದೆವು. ಸಂಪರ್ಕ ಕೊರತೆಯಿಂದಾಗಿ ಅಲ್ಲಿಗೆ ಹೋಗುವವೇಳೆಗೆ 'ಆರ್ಕಿಡ್ ಗಾರ್ಡನ್' ಬಾಗಿಲುಮುಚ್ಚಿತ್ತು. ಕಟ್ಟಡದ ಮುಂದಿನ ಫಲಕದ ಎದುರಿಗೆ ನಿಂತು ಫೋಟೋ ತೆಗೆಸಿಕೊಂಡು ಬಂದುದಾಯಿತು. ಬಲು ದೊಡ್ಡ ಪ್ರದೇಶದಲ್ಲಿ 'ಸ್ಮೋಕ್ ಫ್ರೀ ಗಾರ್ಡನ್' ಆಗಿ ಅಭಿವೃದ್ಧಿಪಡಿಸಿದ್ದಾರೆ. 'ಔಷಧ ವನ' 'ಶುಂಠಿ ವನ' 'ಆರ್ಕಿಡ್ ವನ' 'ಮಳೆ ಕಾಡು' 'ಮಕ್ಕಳ ವನ' ಮುಂತಾದ ಹೆಸರುಗಳಿಂದ ವಿವಿಧ ಭಾಗಗಳನ್ನು ಗುರುತಿಸುತ್ತಾರೆ. ನಮ್ಮಲ್ಲಿ ಕಾಣುವ ಕಾಪಿ ಕಣಗಲೆ, ಬೋಗನ್ ವಿಲ್ಲ, ಗುಬ್ಬಿ ಸಾಲು ಮುಂತಾದ ಗಿಡಗಳೇ ಇಲ್ಲಿ ಬೃಹಧಾಕಾರದಲ್ಲಿ ಬೆಳೆದಿವೆ. ಇಲ್ಲಿಂದ ಟ್ಯಾಕ್ಸಿಹಿಡಿದು 'ಪ್ಲಾಜಾ ಸಿಂಗಪೂರ್' ಮಾಲ್‌ಗೆ ಹೋದೆವು. ಅಲ್ಲಿನ 'ಡೈಸೋ' ಜಪಾನಿ ಚೈನ್‌ನಲ್ಲಿ ಯಾವುದೇ ವಸ್ತು ಖರೀದಿಸಿದರೂ 'ಕೇವಲ 2 ಡಾಲರ್‌ಗಳು' ನನ್ನ ಶ್ರೀಮತಿ ಮತ್ತು ಮಗಳು ಸಂಜೆ 9 ರವರೆಗೆ ಅಲ್ಲಿ ವಿವಿಧ ವಸ್ತುಗಳನ್ನು ಖರೀದಿಮಾಡಿ ಮುಗಿಸಿದವೇಳೆ. ಮತ್ತೆ ಟ್ಯಾಕ್ಸಿಹಿಡಿದು ಮನೆಗೆ ಮರಳಿದೆವು.

25-10-2015

* * * * * *

## ಲೇಖನ – 50

# ಶ್ರೀಮತಿಯ ಮೊದಲ ವಿದೇಶ ಪ್ರಯಾಣ

**ಅಂ**ತೂ ಇಂತೂ ಆ ದಿನ ಬಂದೇಬಿಟ್ಟಿತು. ರಾತ್ರಿ ಮಲಗಿ ಬೆಳಿಗ್ಗೆ ಕಣ್ಣುಬಿಟ್ಟರೆ ವಿಮಾನವೇರಬೇಕು. ಮನೆಗೆಲಸದವಳು ಮುಂದಿನ ತಿಂಗಳ ಸಂಬಳ ಇಂದೇ ಕೊಟ್ಟುಬಿಡಿ ಎಂದು ಕೇಳಿಪಡೆದುಕೊಂಡಳು. ಅವಳಿಗೆ ನಾವಿಲ್ಲದಿದ್ದರೂ, ಪ್ರತಿದಿನ ಬಂದು ಮನೆಮುಂದೆ ನೀರುಹಾಕಿ ರಂಗೋಲಿಬಿಡುವಂತೆ, ಎರಡು ದಿನಕ್ಕೊಮ್ಮೆ ಸುತ್ತಲಿನ ಗಿಡಮರಗಳಿಗೆ ನೀರುಣಿಸಲು ಆದೇಶನೀಡಲಾಯಿತು. ಹಿಂದಿನ ದಿನವೇ ನಾದಿನಿಮನೆಗೆ ಹೋಗಿ ಮಾರನೇ ದಿನ ವಿಮಾನ ಹತ್ತಲು ಯೋಚಿಸಿ, ನಮ್ಮ ಕಾರನ್ನು ಭಾವಮೈದನ ಮನೆಯಲ್ಲಿ ಬಿಟ್ಟು, ಟ್ಯಾಕ್ಸಿಮಾಡಿಕೊಂಡು ನಾದಿನಿ ಮನೆ ಸೇರಿದೆವು. ನಮ್ಮಲ್ಲಿ ದೊಡ್ಡ ಸೂಟ್‌ಕೇಸುಗಳಿಲ್ಲದುದರಿಂದ, ನಾದಿನಿ ಮಗನ 2 ಸೂಟ್‌ಕೇಸುಗಳನ್ನು ಪಡೆದು, ನಾವು ತಂದಿದ್ದ ಸಣ್ಣ ಸೂಟ್‌ಕೇಸಿನಲ್ಲಿದ್ದ ವಸ್ತುಗಳನ್ನು ಆ ಸೂಟ್‌ಕೇಸುಗಳಲ್ಲಿಡಲಾಯಿತು. ಪ್ರತಿ ಸೂಟ್‌ಕೇಸುಗಳಲ್ಲಿ ಅರ್ಧಭಾಗದಷ್ಟು ಮಾತ್ರ ತುಂಬಿತು. ನಾವು ಹೋಗಬೇಕಾದ ಸಿಂಗಪೂರಿಗೆ ಕೇವಲ ನಾಲ್ಕೂವರೆ ಘಂಟೆ ಪ್ರಯಾಣ. ಹೌದು ಪ್ರಯಾಣದ ಅವಧಿ ಆಕಾಶದಲ್ಲಿ ನಾಲ್ಕೂವರೆ ಘಂಟೆ ಮಾತ್ರ! ಆದರೆ ಒಟ್ಟು ಅವಧಿ ಎಷ್ಟು ಗೊತ್ತಾ? ಅದು ಹತ್ತು ಹನ್ನೊಂದು ಘಂಟೆಗಳ ಕಾಲ! ಕುಕ್ಕರಿನ ಅಡುಗೆ ತರಹಾ. ವಿಮಾನನಿಲ್ದಾಣಕ್ಕೆ ಹೋಗಲು ಒಂದೂವರೆ ಘಂಟೆಕಾಲ, ಇಲ್ಲಿನ ವಿಮಾನ

ನಿಲ್ದಾಣದಲ್ಲಿನತಪಾಸಣೆಗಳಿಗೆ ಮೂರು ಘಂಟೆಗಳ ಕಾಲ, ಆ ದೇಶದ ನಿಲ್ದಾಣದಲ್ಲಿನ ತಪಾಸಣೆಗೆ ಮತ್ತೊಂದು ಘಂಟೆಕಾಲ ಮತ್ತು ಇನ್ನೊಂದು ದೇಶ ತಲುಪಿದ ನಂತರ, ಅಲ್ಲಿನ ವಿಮಾನನಿಲ್ದಾಣದಿಂದ ಮನೆಗೆ ಹೋಗಲು ಮತ್ತೊಂದು ಘಂಟೆಕಾಲ. ಹೀಗೆ ಲೆಕ್ಕಹಾಕಿದರೆ ಒಟ್ಟು ಹನ್ನೊಂದು ಘಂಟೆಗಳು! ಕಡಿಮೆ ಅವಧಿಯ ಈ ಪ್ರಯಾಣಕ್ಕೇ ಇಷ್ಟು ಸಮಯ ಹಿಡಿಸಿದರೆ, ಇನ್ನೂ ಹನ್ನೆರಡು, ಹದಿನೆಂಟು ಘಂಟೆಗಳ ವಿಮಾನ ಪ್ರಯಾಣ ಇದ್ದಲ್ಲಿ ಒಟ್ಟು ಎಷ್ಟು ಅವಧಿ ಆಗುತ್ತದೆ ನೀವೇ ಲೆಕ್ಕಹಾಕಿ ! ಮಾರನೇ ಬೆಳಿಗಿನಜಾವ 5–30ಕ್ಕೆ ಟ್ಯಾಕ್ಸಿಯವನಿಗೆ ಬರಹೇಳಿದ್ದೆವು.. ರಾತ್ರಿ 11 ಘಂಟೆಯಾದರೂ ನಿದ್ದೆ ಬಂದಿರಲಿಲ್ಲ. ಹಾಗೂಹೀಗೂ ಕಣ್ಣುಮುಚ್ಚಿ ಮಧ್ಯೆ ಎದ್ದುನೋಡಿದರೆ 3–45. ಆಗಲೇ ಎದ್ದು ಗೀಜ಼ರ್ ಸ್ವಿಚ್ ಹಾಕಿ ಮತ್ತೆ ಹಾಸಿಗೆಮೇಲೆ ಹೊರಳಾಡುವಷ್ಟರಲ್ಲಿ 5 ಘಂಟೆ ಆಗಿಯೇಹೋಗಿದೆ. ದಢಬಡನೆ ಎದ್ದು ಪ್ರಾತರ್ವಿಧಿಗಳನ್ನು ಮುಗಿಸುವವೇಳೆಗೆ, ಮನೆಮುಂದೆ ಟ್ಯಾಕ್ಸಿ ಹಾಜರ್. ಟ್ಯಾಕ್ಸಿಯವನೂ ಕೇವಲ 45 ನಿಮಿಷಗಳಲ್ಲೇ ವಿಮಾನ ನಿಲ್ದಾಣ ತಲುಪಿಸಿದ. ಅಲ್ಲಿಂದ ನೇರವಾಗಿ 'ಸಿಂಗಪೂರ್ ಏರ್‌ಲೈನ್ಸ್' ಕೌಂಟರಿಗೆ ಹೋದರೆ, ಕೌಂಟರ್ ತೆರೆಯಲು ಇನ್ನೂ ಹದಿನೈದು ನಿಮಿಷ ಕಾಯುತ್ತಿರಿ ಎಂದಳು ಅಲ್ಲಿನ ಲಲನಾಮಣಿ. ವಿಮಾನ ನಿಲ್ದಾಣಕ್ಕೆ ಕಾಲಿಟ್ಟವೆಂದರೆ ಕನ್ನಡ ಮಾತನಾಡುವವರು, ಮಾತನಾಡಿಸುವವರು ಇಲ್ಲವೇ ಇಲ್ಲ. 'ಬಿ ಎ ರೋಮನ್ ಇನ ರೋಮ್' ಎನ್ನುವಂತೆ, ನಾನು ಇಂಗ್ಲೀಷ್ ಶುರುಹಚ್ಚಿಕೊಂಡೆ ಅನ್ನಿ, ಬೇರೆ ದಾರಿಯಿಲ್ಲವಲ್ಲ. ವ್ಹೀಲ್ ಛೇರ್ ಬುಕ್ ಮಾಡಿದ್ದುದರಿಂದ ವ್ಹೀಲರ್‌ಗಳು ನಾವು ಕಾಯುತ್ತಾ ಕುಳಿತ್ತಿದ್ದ ಜಾಗಕ್ಕೇ ಬಂದು ನಾವಿಬ್ಬರೂ ಕುಳಿತನಂತರ, ಕ್ಯೂ ತಪ್ಪಿಸಿ ನೇರವಾಗಿ ಮೊದಲಿಗರಂತೆ ಕೌಂಟರಿಗೆ ಕರೆದೊಯ್ದರು. ಸ್ವಾಗತಕಾರಿಣಿಯೂ, ನಮ್ಮನ್ನು ಹೆಚ್ಚುಕಾಲ ಕಾಯಿಸದೇ ಬ್ಯಾಗೇಜ್ ಚೆಕಿನ್ ಮಾಡಿಸಿಕೊಂಡು, ಬೋರ್ಡಿಂಗ್ ಪಾಸ್ ನೀಡಿದಳು. ಎಲ್ಲ ಐದು ಹತ್ತು ನಿಮಿಷಗಳಲ್ಲಿ ಮುಗಿದುಹೋಯಿತು. ಮತ್ತೆ ಮುಂದೇನು? ಅಷ್ಟರಲ್ಲಿ ನಮ್ಮನ್ನು ವ್ಹೀಲ್‌ಮಾಡಿದ್ದವರು ಕೈಕೈಹೊಸಕಿಕೊಳ್ಳುತ್ತಾ, 'ಸಾರ್, ನಮ್ಮ ಶಿಫ್ಟ್ ಮುಗಿಯಿತು, ಮತ್ತೊಬ್ಬರು ಬಂದು ನಿಮ್ಮನ್ನು ಮೇಲೆ ಕರೆದೊಯ್ಯುತ್ತಾರೆ' ಅಂದರು. ಇವರ ಮುಖ ನೋಡಿದರೆ ಮೃಗಗಳರಂತೆ ಕಾಣುತ್ತಿದ್ದಾರೆ, ಏನೋ ಎಕ್ಸ್‌ಪೆಕ್ಟ್ ಮಾಡುತ್ತಿದ್ದಾರೆ. ಈಗಲೇ ಟಿಪ್ಸ್‌ಕೊಟ್ಟರೆ, ಕೈಕೊಡುವುದು ಗ್ಯಾರಂಟಿ ಅನ್ನಿಸಿತು. ಆ ಇನ್ನಿಬ್ಬರು ಬರಲಿ ಎಂದು ಕಾದುಕುಳಿತೆವು. ಇವರಾದರೋ ಯಾರ್‍ಯಾರನ್ನೋ

ಕರೆಯುತ್ತಿದ್ದರೂ ಸಹಾ ಅವರುಗಳು ಇನ್ಯಾವುದೋ ಇನ್ಯಾರದೋ ಕಡೆ ಕೈತೋರಿಸಿ, ಹಾಗೇ ಹೋಗಿಬಿಡುತ್ತಿದ್ದರು. ಮೊದಲೇ ನಮ್ಮ ಅಳಿಯ, ಏನೇನು ಮಾಡಬೇಕಾಗಿದೆ ಎಂದು ಒಂದು ಪತ್ರ ಮೇಲ್ ಮಾಡಿದ್ದುದರಿಂದ, ನೆಕ್ಸ್ಟ್ 'ಇಮಿಗ್ರೇಶನ್' ನಂತರ 'ಸೆಕ್ಯೂರಿಟಿ' ಎಂದು ಗೊತ್ತಾಗಿತ್ತು. ಕೊನೆಗೂ ಇಬ್ಬರನ್ನು ಹೊಂದಿಸಿಕೊಟ್ಟ ಮೊದಲವ್ಹೀಲರುಗಳು, 100 ರೂ. ಕಾಣಿಕೆಪಡೆದು ಮಾಯವಾದರು. ಎರಡನೇ ತಂಡದ ವ್ಹೀಲಿಯಗಳು ನಮ್ಮನ್ನು ಲಿಫ್ಟ್ ಮೂಲಕ ಮೊದಲ ಮಹಡಿಯ ಇಮಿಗ್ರೇಶನ್ ಕೌಂಟರಿಗೆ ಕರೆತಂದರು. ಅಲ್ಲಿ ನಮ್ಮಲ್ಲಿದ್ದ ಕೈ ಬ್ಯಾಗು, ಕೈ ಕೋಲು, ಜೇಬಿನಲ್ಲಿದ್ದ ಪರ್ಸು, ಕೀ ಬಂಚು, ಲ್ಯಾಪ್‌ಟಾಪ್, ವ್ಯಾನಿಟಿ ಬ್ಯಾಗ್ ಎಲ್ಲವನ್ನೂ ಸ್ಕ್ಯಾನ್ ಮಾಡಲಾಯಿತು. ನಮ್ಮನ್ನೂ ಅಲಾರಂ ಕೀ ಮೂಲಕ ಮೈದಡವಿ ನಮ್ಮ ಪಾಸ್‌ಪೋರ್ಟ್ ಮೇಲೆ ಮುದ್ರೆ ಒತ್ತಿ ಹೋಗಲು ಅನುಮತಿಸಲಾಯಿತು. ಅಲ್ಲಿಂದ ಮುಂದೆ ಒಂದು ಇಮಿಗ್ರೇಶನ್ ಫಾರಂ ತುಂಬಿಸಿ ಅದನ್ನು ಅಲ್ಲಿನ ಅಧಿಕಾರಿಗೆ ಸಲ್ಲಿಸಿದ ನಂತರ ವಿಮಾನಹತ್ತುವ ಲಾಂಜಿಗೆ ನಮ್ಮನ್ನು ತಂದುಬಿಡಲಾಯಿತು. ವಿಮಾನ ಏರಲು ಇನ್ನೂ ಬರೋಬ್ಬರಿ ಎರಡು ಘಂಟೆಗಳು ಕಾಯಬೇಕು. ಮನದಲ್ಲೇ ಸುಖಾಸುಮ್ಮನೇ ಎರಡು ಘಂಟೆಗಳ ಮೊದಲೇ ಕರೆತಂದವರೆಲ್ಲರನ್ನೂ ಶಪಿಸುತ್ತಾ, ಹಿಂದಿನ ರಾತ್ರಿ ತಂದುಕೊಟ್ಟಿದ್ದ ಬನ್‌ರೊಟ್ಟಿ ತಿಂದು ನೀರುಕುಡಿದೆವು. ಕಾಲು ಘಂಟೆ ತಡವಾಗಿ ವಿಮಾನ 'ಬೇ' ಅಂದರೆ ನಿಲುಗಡೆತಾಣಕ್ಕೆ ಬಂದು ನಿಂತಿತು. ಪ್ರಯಾಣಿಕರೆಲ್ಲರನ್ನೂ ಇಳಿಸಿದಮೇಲೆ, ನಮ್ಮನ್ನು ವಿಮಾನದ ಬಾಗಿಲಬಳಿಗೇ ತಳ್ಳಿಕೊಂಡು ಬಂದುಬಿಟ್ಟರು. ನಾವು ಇಳಿಯುವ ಮುನ್ನವೇ ವಿಮಾನದ ಪರಿಚಾರಿಕೆ ನಮ್ಮ ಬೋರ್ಡಿಂಗ್ ಪಾಸ್ ಕೌಂಟರ್ ಫಾಯಿಲ್‌ನಿಂದ ಸೀಟ್ ನಂಬರು ನೋಡಿ, ನಮ್ಮನ್ನು ವಿಮಾನದ ಒಳಕ್ಕೆ ನಮ್ಮ ಸೀಟಿಗೆ ಕರೆದುಕೊಂಡು ಹೋಗೇಬಿಟ್ಟಳು. ಪಾಪ ನಮ್ಮನ್ನು ಮಹಡಿಮೇಲಕ್ಕೆ, ವಿಮಾನ ಬಾಗಿಲಿನವರೆಗೆ ತಲುಪಿಸಿದವರಿಗೆ ಏನೂ ಕೊಡಲಾಗಲಿಲ್ಲವಲ್ಲಾ ಅನ್ನುವ ಕೊರಗು ನನ್ನದಾಯಿತು. ಮೊದಲಿನ ತಂಡದವರಂತಲ್ಲಾ ಈ. ಎರಡನೆಯ ತಂಡದ ಹುಡುಗರು. ವಾಪಸು ಮತ್ತೆ ಬಂದಾಗ ಕಂಡರೆ ಅವರ ಪಾಲು ಅವರಿಗೆ ತಲುಪಿಸೋಣ ಅಂದು ಸಮಾಧಾನಮಾಡಿಕೊಂಡೆ.

ವಿಮಾನದಲ್ಲಿನ ಅನುಭವಗಳು: ಒಂಬತ್ತೂಮುಕ್ಕಾಲಿಗೆ ಹೊರಡಬೇಕಾಗಿದ್ದ ವಿಮಾನ 'ತಾಂತ್ರಿಕ ಕಾರಣಗಳಿಗಾಗಿ' ಹದಿನೈದು ನಿಮಿಷ ತಡವಾಗಿ ಅಂದರೆ

ಹತ್ತುಘಂಟೆಗೆ ಹೊರಡುವುದು ಎಂದು ವಿಮಾನದ ಕ್ಯಾಪ್ಟನ್ ಧ್ವನಿವರ್ಧಕದಲ್ಲಿ ಹೇಳಿದ್ದೇ ತಡಾ ನನ್ನ ಮನಸ್ಸಿನಲ್ಲಿ ಹಿಂದೆ ಎಂದೋ ಕೇಳಿದ್ದ ಜೋಕೊಂದು ಹಾದುಹೋಯಿತು.. ಎಲ್ಲ ಕಂಪ್ಯೂಟರೀಕರಿಸಿದ ವಿಮಾನ. ಪ್ರತಿಯೊಂದು ಚಲನವಲನ, ಸೂಚನೆ ಕಂಪ್ಯೂಟರ್ ನೀಡುತ್ತಿತ್ತು. ಇನ್ನೇನು ಗುರಿ ತಲುಪಬೇಕು, ಅಷ್ಟರಲ್ಲಿ ಸೂಚನೆ, 'ನಾವು ಇನ್ನು ಕಲವೇ ನಿಮಿಷಗಳಲ್ಲಿ ಕಪ್ಪುಸಮುದ್ರದ ಮೇಲೆ ಹಾದು,ಹಾದು,.. ಹಾದು, ಹಾದು' ಅನ್ನುತ್ತಲೇ ಸಮುದ್ರದೊಳಕ್ಕೆ ಬಿದ್ದುಹೋಯಿತು. ಮತ್ತೊಂದು ಜೋಕು: ವಿಮಾನ ಪರಿಚಾರಕಿ ಆಗಾಗ ಏನಾದರೂ ಅನೌನ್ಸ್‌ಮೆಂಟ್ ಮಾಡುತ್ತಿರುತ್ತಾಳೆ. ಹೊರಡುವ ಮುನ್ನ, ಪ್ರಯಾಣದ ಮಧ್ಯಸಮಯದಲ್ಲಿ, ಪ್ರಯಾಣದ ಅಂತ್ಯದಲ್ಲಿ ಏನಾದರೂ ಅವಘಡ ಸಂಬವಿಸಿದರೆ ಏನು ಮುಂಜಾಗರೂಕತೆ ತೆಗೆದುಕೊಳ್ಳಬೇಕು ಮುಂತಾದವು. ಮಾತು ಮುಗಿಸುವಮುನ್ನ, ಪ್ರತಿಭಾರಿಯೂ 'ದೇವರು ನಿಮ್ಮನ್ನು ಕಾಪಾಡಲಿ' ಎಂದು ಮಾತು ಮುಗಿಸುತ್ತಿದ್ದಳು. ಒಂದು ಭಾರಿ ಕ್ಯಾಬಿನ್ನಿನಿಂದ ಓಡಿಬಂದವಳೇ ಈ ಭಾರಿ 'ಕಂಡಿತ ದೇವರೇ ನಿಮ್ಮನ್ನು ಕಾಪಾಡಬೇಕು, ಎಲ್ಲರೂ ಬದುಕಲು ಅವನನ್ನೇ ಪ್ರಾರ್ಥಿಸಿ' ಎನ್ನುತ್ತಾ ಪ್ಯಾರಾಚೂಟ್ ಹಿಡಿದು ಹೊರಹಾರಿದಳಂತೆ! ದರಿದ್ರ, ಈ ಜೋಕುಗಳೆಲ್ಲ ಈಗಲೇ ನೆನಪಿಗೆ ಬರಬೇಕೇ? ಪಕ್ಕದಲ್ಲಿದ್ದ ಮಡದಿಗೆ ಈ ಜೋಕುಗಳನ್ನು ಹೇಳಲಿಲ್ಲ. ನನಗೆ ಇದು ಎರಡನೆಯದೋ, ಮೂರನೆಯದೋ ವಿಮಾನಪ್ರಯಾಣ, ಆದರೆ ಸ್ವದೇಶದಲ್ಲಿ ! ನನ್ನ ಮಡದಿಗೆ ಇದುವೇ ಮೊದಲನೆಯ ಅನುಭವ. ನಿಧಾನವಾಗಿ ರನ್‌ವೇ ತುದಿವರೆಗೆ ಚಲಿಸಿದ ವಿಮಾನ ಒಂದು ತಿರುವು ತಿರುಗಿದನಂತರ ಶರವೇಗಪಡೆದುಕೊಂಡಿತು. ಜಗ್ಗನೆ ನಭಕ್ಕೆ ಚಿಮ್ಮಿತು. ಹಲವಾರು ಭಾರಿ ಹೋಗಿದ್ದರೂ ಹೊಟ್ಟೆಯಲ್ಲಿ ಏನೋ ತೊಳಸಿದಂತೆ, ಜಯಂಟ್ ವ್ಹೀಲಿನಲ್ಲಿ ಮೇಲಿನಿಂದ ಕೆಳಕ್ಕೆ ಬರುವಾಗ ಆಗುವ ಅನುಭವ ಆಯಿತು. ಆನಂತರ ಗಾಳೀಪಟ ಮೇಲೇರುವಂತೆ ತೇಲುತ್ತಾತೇಲುತ್ತಾ, ಮುಗಿಲಿಗಿಂತ ಮೇಲೆ ಹೋಗತೊಡಗಿತು. ಕೆಳಗೆ ಬರೀ ಮೋಡದ ಗುಂಪು, ಹತ್ತಿಯ ಹಂಜೆಯಂತೆ. ಧ್ವನಿವರ್ಧಕದ ಮೂಲಕ ಕ್ಯಾಪ್ಟನ್ ಘೋಷಣೆ; 'ನಾವು ಭೂಮಿಯಿಂದ 35000 ಅಡಿಗಳ ಮೇಲಿದ್ದೇವೆ, ಕೆಳಗಿದೆ ಬಂಗಾಳಕೊಲ್ಲಿ'. ಕಿಟಕಿ ಪಕ್ಕದ ಸೀಟಿನಲ್ಲಿದ್ದ ನನ್ನ ಹೆಂಡತಿ ಕೆಳಗೆನೋಡಿದಳು, ಪಕ್ಕದ ರೆಕ್ಕೆನೋಡಿದಳು, ಚಲನವೇ ಇಲ್ಲ! 'ಇದೇನ್ರೀ, ಇದು ಮುಂದೆ ಹೋಗುತ್ತಲೇ ಇಲ್ಲ, ಆಕಾಶದಲ್ಲೇ ಸಮುದ್ರದ ನೇರಕ್ಕೇ ನಿಂತುಬಿಟ್ಟಿದೆ ಕೆಳಗ ಜೀಕೋದೊಂದೇ ಬಾಕಿ' ಅಂದಳು. ನೋಡಿದರೆ

ನನಗೂ ಮೊದಲಿಗೆ ಹಾಗೇ ಅನ್ನಿಸಿತು. ಕೊನೆಗೊಮ್ಮೆ ಮೈಕೊಡವಿಕೊಂಡು, ಮೆಲ್ಲಗೆ ಚಲನೆ ಪ್ರಾರಂಭಗೊಂಡಿತು. ಅಷ್ಟು ವೇಗದಲ್ಲಿ ಮೇಲೇರಿದ ವಿಮಾನ, ಈಗ ಅಮೆಯಷ್ಟು ಅಲ್ಲ ಇರುವೆಗಿಂತ ಕಡಿಮೆ ವೇಗದಲ್ಲಿ ಚಲಿಸುತ್ತಿದೆ. ಎಂಜಿನ್ನಿನ ಶಬ್ದವೂ ಕೇಳಿಸುತ್ತಿಲ್ಲ.ನನ್ನ ಶ್ರೀಮತಿ ಕಡೆಗೆ ತಿರುಗಿ 'ಹೌದು ನೀನಂದದ್ದು ಸರಿ, ಈ ವಿಮಾನ ಗುರಿ ತಲುಪುತ್ತದೋ ಇಲ್ಲವೋ, ನಾ ಕಾಣೆ, ಕಣ್ಣುಮುಚ್ಚಿ ನಿದ್ರೆಮಾಡಿಬಿಡು, ಏನಾದರಾಗಲೀ' ಅಂದೆ. ಆದರೆ ನಾನು ಹೇಳಿದುದು ನನಗೇ ಕೇಳಿಸಲಿಲ್ಲ. ಕಾರಣ ನನ್ನ ಕಿವಿಗಳು ಮುಚ್ಚಿಕೊಂಡಿದ್ದವು. ಆಗ ನನಗೆ ನೆನಪಿಗೆ ಬಂತು ನನ್ನ ನಾದಿನಿ ಹೊರಡುವಮುನ್ನ ಹೇಳಿದ್ದ ಕಿವಿಮಾತು: 'ಕೆಲವುಸಲ ಆ ರೀತಿ ಕಿವಿಮುಚ್ಚಿಕೊಂಡಾಗ ಮೂಗುಮುಚ್ಚಿಕೊಂಡು ಜೋರಾಗಿ ಉಸಿರುಹೊರಹಾಕಿದರೆ ಪಟ್ ಅನ್ನುವ ಶಬ್ದದೊಂದಿಗೆ ಕಿವಿಬಿಡುತ್ತದೆ''ನಾನೂ ಹಾಗೇಮಾಡಿದೆ. ಮತ್ತೆಜೋರಾಗಿ ಎಂಜಿನ್ ಶಬ್ದ ಕೇಳತೊಡಗಿತು. 'ಸಾಯಲೆಂದೇ ಕಾಶಿಗೆ ಹೋದವರು, ಪ್ರವಾಹದಲ್ಲಿ ಸಿಲುಕಿದಾಗ, ನಮ್ಮನ್ನು ಬದುಕಿಸಿರೋ' ಎಂದು ಬಾಯಿಬಡಿದುಕೊಳ್ಳುವಂತೆ ನಾವಾಗಬಾರದು, 'ಹೋದರೆಹೋಗೋಣ ಬಿಡು' ಎಂದು ಭಂಡಧೈರ್ಯತುಂಬಿದೆ. ವಿಮಾನ ಒಮ್ಮೊಮ್ಮೆ ಎಡಕ್ಕೆ ತಿರುಗಿದಾಗಲೂ ಅದರ ರೆಕ್ಕೆ ಮೇಲೇರತೊಡಗುತ್ತದೆ. ಅದನ್ನು ನೋಡಿದವಳೇ, 'ರೀ ಇದೇನು ಬಿದ್ದುಹೋಗುತ್ತಿದೆಯೇನೋ ಕಣ್ರೀ' ಅಂದು ಗಾಬರಿಯಾಗುತ್ತಿದ್ದಳು. ಮತ್ತೊಮ್ಮೊಮ್ಮೆ ಅದರ ರೆಕ್ಕೆಗಳು ಗಡಗಡಾ ಸದ್ದುಮಾಡುತ್ತಿದ್ದವು. ಆಗಲೂ ಗಾಬರಿ ಆಗಿ ನನ್ನಲ್ಲೂ ಹೆದರಿಕೆ ಹುಟ್ಟಿಸುತ್ತಿದ್ದಳು. ಅಷ್ಟುಹೊತ್ತಿಗೆ ಗಗನಸಖಿಯೊಬ್ಬಳು ಎಲ್ಲರಿಗೂ ಅದೇನೋ ನೀಲಿ ಪ್ಯಾಕೆಟ್ಟುಗಳನ್ನು ಕೊಡುತ್ತಾ ಬಂದಳು. ನಾನು ನನ್ನ ಹೆಂಡತಿಗೆ, 'ಅಗೋ ಚಾಕಲೇಟ್ ಕೊಡುತ್ತಿದ್ದಾರೆ. ಒಂದೆರಡು ಹೆಚ್ಚಿಗೇ ತೆಗೆದುಕೊಳ್ಳೋಣ' ಅಂದೆ. ಹತ್ತಿರ ಬಂದವಳು ಕೊಟ್ಟಿದ್ದು ಮಾತ್ರ 'ವೆಟ್ ಟಿಶ್ಯೂ ಪೇಪರ್ ಪ್ಯಾಕೆಟ್' ಥೂ ಇವರ ಮನೆ .. .. ಬೈದುಕೊಂಡು ಸುಮ್ಮನಾದೆ. ಮತ್ತೆ ಕೆಲವು ನಿಮಿಷದ ತರುವಾಯ ಮತ್ತೊಮ್ಮೆ ಅದನ್ನೇ ಕೊಡಲು ಮುಂದಾದರು. ನಂತರ ಬಂದಿದ್ದು ನೀರು, ಬೀರು, ಜ್ಯೂಸು. ಒಂದು ಲೋಟ ಜ್ಯೂಸು ಕುಡಿದೆವು, ಗಟ್ಟುಗಬ್ಬಾಗಿತ್ತು. ಏನು ಕೊಟ್ಟರೂ ಕುಡಿಯಲು ತಯಾರಾಗಿದ್ದೆವು.ಹೊಟ್ಟೆಗೆ ಸರಿಯಾಗಿ ಹಾಕಿರಲಿಲ್ಲವಲ್ಲಾ.ನಾನೂ ಊಟದ ಸಮಯದವರೆಗೂ ಕಾದೆ; ಚಾಕ್ಲೆಟ್ ಬರಲಿಲ್ಲ. ಕೊನೆಗೂ ಬಂತು ಊಟ. ಒಂದು ಚೂರು ಪರಾಟ, ಒಂದು ಪ್ಯಾಕೆಟ್ಟಿನಲ್ಲಿ, ಅರ್ಧಭಾಗ ಪಲಾವ್, ಉಳಿದ

ಭಾಗದಲ್ಲಿ ಪಾಲಕ್ ಪನ್ನೀರ್, ನಾಲ್ಕು ಒಂದು ರೂಪಾಯಿ ಗಾತ್ರದ ಒಣಕಲು ಹಪ್ಪಳ, ಒಂದು ಮುಚ್ಚಿದ ಬ್ರಿಟಾನಿಯಾ ಕಂಪನಿಯ ಮೊಸರು. ಮೊದಲು ನಾನು ಅದನ್ನು ಐಸ್‌ಕ್ರೀಂ ಇರಬೇಕೆಂದುಕೊಂಡಿದ್ದೆ. ಸ್ವೀಟ್ ಎಂದು ಎರಡು ಗೋಲಿಗಾತ್ರದ ಜಾಮೂನು. ಜೊತೆಗೆ ಒಂದು ಹಲ್ಲುಚುಚ್ಚು ಕಡ್ಡಿ, ಅರ್ಧಚಮಚ ಸಕ್ಕರೆ, ಅರ್ಧ ಚಮಚ ಹಾಲಿನಪುಡಿ. ಇದು ಮಧ್ಯಾನ್ಹದ ಏಷ್ಯನ್ ವೆಜಿಟೇರಿಯನ್ ಜೈನ್ ಮೀಲ್! ನಾವು ವಿಮಾನ ಟಿಕೆಟ್ ಬುಕ್ ಮಾಡಿಸುವಾಗಲೇ ನಮ್ಮ ಊಟದ ಬಗೆಗೆ ಮಾಹಿತಿ ನೀಡಿರದಿದ್ದಲ್ಲಿ ಅವರಿಗೆ ಇಷ್ಟವಾದ, ಉಳಿದುಹೋಗಿರುವ ಐಟಮ್ಮು, ಅದು ಸಸ್ಯಾಹಾರವೇ ಆಗಿರಬೇಕೆಂಬ ನಿಯಮವಿಲ್ಲ ಎಂದೆಲ್ಲಾ ಸಲಹೆ ಸೂಚನೆಗಳನ್ನು ದಯಪಾಲಿಸಿದ್ದ ಕಾರಣ, ಆಗಲೇ ನಾವು 'ಜೈನ್ ಮೀಲ್'ಎಂದು ದಾಖಲಿಸಿದ್ದೆವು. ಜೈನ್ ಮೀಲ್ ಎಂದರೆ ಅದರಲ್ಲಿ ಈರುಳ್ಳಿ, ಬೆಳ್ಳುಳ್ಳಿಯೂ ಇಲ್ಲದ ಮೀಲ್! ವೆಜಿಟೇರಿಯನ್ ಅಂದರೂ ಕೆಲವೊಮ್ಮೆ ಮೊಟ್ಟೆಕೊಟ್ಟುಬಿಡುವ ಸಾಧ್ಯತೆ ಇರುತ್ತದಂತೆ. ಊಟಮುಗಿಸಿ ಕುಳಿತೆವು.ಊಟವಾದ ಸ್ವಲ್ಪ ಸಮಯದ ನಂತರ ಕಾಫಿ ಡಿಕಾಕ್ಷನ್ ಕೊಟ್ಟರು. ಹಾಲಿನಪುಡಿ & ಸಕ್ಕರೆ ಮತ್ತೆಕೊಟ್ಟರು.. ಊಟದಲ್ಲಿ ಕೊಟ್ಟಿದ್ದ ಹಾಲಿನಪುಡಿ ಮತ್ತು ಸಕ್ಕರೆಯನ್ನೂ ಸೇರಿಸಿದುದಕ್ಕೆ ಸುಮಾರಾದ ಕಾಫಿ ರೆಡಿಯಾಯಿತು. ಇನ್ನೇನು ಇಳಿಯುವ ಸಮಯವೂ ಸಮೀಪಿಸುತ್ತಾಬಂತು.ಕೊನೆಗೂ ಚಾಕಲೇಟ್ ಬರಲೇ ಇಲ್ಲ. ಕೇಳಿಯೂಬಿಟ್ಟೆ. ಇಲ್ಲವೆಂಬಂತೆ ಕೈ ಆಡಿಸಿದಳು. ಇದೆಂತಾ ತರಕಲಾಂಟ ಏರ್‌ಲೈನ್ಸ್ ಅಂದುಕೊಂಡೆ.

ಕೆಳಗೆ ನೋಡಿದರೂ ನೀಲಿ, ಮೇಲೆ ನೋಡಿದರೂ ನೀಲಿ; ಕೆಳಗೆ ಸಮುದ್ರ, ಮೇಲೆ ಆಕಾಶ, ಎರಡಕ್ಕೂ ಬಣ್ಣದಲ್ಲಿ ಏನೂ ವ್ಯತ್ಯಾಸವೇ ಇಲ್ಲ. ಅದು ಸಮುದ್ರವೋ, ಅಥವಾ ಅದೂ ಆಕಾಶವೋ ಅನ್ನುವ ಅನುಮಾನ ಕಾಡತೊಡಗಿತು. ಅನಂತ ನೀಲಿ. ವಿಮಾನ ಪ್ರಯಾಣ ಅಂದರೆ ಶೇ.100 ರಿಸ್ಕ್. ಇನ್ನೇನು ಊರುಸೇರಿದೆವು ಎಂದಿದ್ದ ಮಂದಿ ಮಂಗಳೂರಿನಲ್ಲಿ ಮಸಣಸೇರಿದ್ದು ನೆನಪಿಗೆ ಬಂದಿತು. ಸುರಕ್ಷಿತವಾಗಿ ನೆಲಕ್ಕೆ ಇಳಿಸಿದರೆ ಆ ಕ್ಯಾಪ್ಟನ್ನಿಗೆ ಥ್ಯಾಂಕ್ಸ್ ಹೇಳಬೇಕೆಂದುಕೊಂಡೆ. ಧ್ವನಿವರ್ಧಕ ಮತ್ತೆ ಮೊಳಗಿತು, ಇನ್ನೇನು ಕೆಲನಿಮಿಷಗಳಲ್ಲಿ ಕೆಳಗಿಳಿಯುತ್ತಿದ್ದೇವೆ ಅನ್ನುತ್ತಿದ್ದಂತೆ ವಿಮಾನ ವೇಗಪಡೆಯುತ್ತಾ ಕೆಳಗಿಳಿಯತೊಡಗಿತು. ನಮ್ಮೂರಿನ ರೈಲುಗಳ ಹಾಗೆ! ಸ್ಟೇಷನ್ ಹತ್ತಿರವಾಗುತ್ತಿದ್ದಂತೆ ವೇಗವಾಗಿ ಚಲಿಸತೊಡಗುತ್ತವೆಯಲ್ಲಾ ಹಾಗೆ. ಕೆಳಗೆ ಚಿಮಣಿಗಳು, ಟ್ಯಾಂಕುಗಳು,

ಕೆಂಪುಹೆಂಚು ಹೊದಿಸಿದಂತ ಮನೆಗಳು ಕಾಣತೊಡಗಿದವು. ನಾನಂದುಕೊಂಡು-ದಕ್ಕಿಂತ ಮೆಲ್ಲಗೆ ನೆಲಕ್ಕೆ ಕುಕ್ಕಿದ ಟೈರುಗಳಲ್ಲಿ, ಓಡಿದ ವೇಗದಲ್ಲೇ ಓಡಲಾರಭಿಸಿತು. ರನ್‌ವೇ ತುದಿವರಗೆ ಅದೇ ವೇಗದಲ್ಲಿ ಚಲಿಸಿದ ವಿಮಾನ ನಂತರ ತಿರುಗಿಕೊಂಡು ನಿಧಾನವಾಗಿ ಬಂದು ತನ್ನ 'ಬೇ'ಯಲ್ಲಿ ಬಂದು ನಿಂತಿತು. ನಾವು ಸೇರಿದ್ದವು ಸುರಕ್ಷಿತವಾಗಿ ಸಿಂಗಪೂರಿಗೆ. ಎಲ್ಲರೂ ಇಳಿದನಂತರ, ಬಾಗಿಲಿನ ಬಳಿ ನಿಂತಿದ್ದ ಕ್ಯಾಪ್ಟನ್ನಿಗೆ ಧನ್ಯವಾದ ತಿಳಿಸಿ ಹೊರಬಂದಾಗ ಆ ಕಾಣದ ದೇವನಿಗೆ ಧನ್ಯವಾದ ತಿಳಿಸಿದಳು ನನ್ನ ಶ್ರೀಮತಿ.

25-10-2015

* * * * * *